" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ: 18ನೇ ಫೆಬ್ರವರಿ 2020
ಮಂಗಳವಾರ

## ವಿಷಯಾನುಕ್ರಮಣಿಕೆ

1. **ನೂತನ ಸದಸ್ಯರ ಪ್ರಮಾಣ ವಚನ**
2. **ನೂತನ ಸಚಿವರುಗಳ ಪರಿಚಯ**
3. **ಸಭೆಯ ಮುಂದಿಡಲಾದ ಕಾಗದ ಪತ್ರಗಳು**
4. **ಕಾರ್ಯದರ್ಶಿಯವರ ವರದಿ**
5. **ನಿಯಮ 330–ಎ ಅಡಿಯಲ್ಲಿ ವಿಶೇಷ ಪ್ರಸ್ತಾವನೆ**

**ಅ) ಹುಬ್ಬಳ್ಳಿ ಕೆ.ಎಲ್.ಇ. ಇಂಜಿನಿಯರಿಂಗ್ ವಿದ್ಯಾರ್ಥಿಗಳು ಪಾಕಿಸ್ತಾನದ ಪರ ಘೋಷಣೆ ಕೂಗಿದ ಬಗ್ಗೆ.**

- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಐವನ್ ಡಿ'ಸೋಜಾ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಹಾಗೂ ಖಾಸಗಿ ಅನುದಾನಿತ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿಗಳಿಗೆ ಕಳೆದ ಕೆಲವು ತಿಂಗಳುಗಳಿಂದ ವೇತನ ಆಗದಿರುವ ಬಗ್ಗೆ.**

- ಶ್ರೀ ಎಸ್.ವ್ಹಿ.ಸಂಕನೂರ
- ಡಾ: ಸಿ.ಎನ್. ಅಶ್ವಥ್ ನಾರಾಯಣ (ಉಪ ಮುಖ್ಯಮಂತ್ರಿ)

**ಇ) ರೈತರು ಬೆಳೆದ ತೊಗರಿ ಬೆಳೆಯನ್ನು 10 ಕ್ವಿಂಟಾಲ್‌ನಿಂದ 20 ಕ್ವಿಂಟಾಲ್‌ನವರೆಗೆ ಸರ್ಕಾರ ಖರೀದಿಸುವ ಬಗ್ಗೆ.**

- ಶ್ರೀ ವಿಜಯಸಿಂಗ್
- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

6. **ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ**

**ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ ಚರ್ಚೆ**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

– ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯರು)
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
– ಶ್ರೀ ಸಿ.ಎಂ.ಇಬ್ರಾಹಿಂ

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

7. **ಉಭಯ ಸದನಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ ಹಾಗೂ ಅನುಮೋದನೆ**
   – ಆಯನೂರು ಮಂಜುನಾಥ್
   – ಶ್ರೀ ವೈ.ಎ.ನಾರಾಯಣಸ್ವಾಮಿ

8. **ಉಭಯ ಸದನಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ**
   – ಆಯನೂರು ಮಂಜುನಾಥ್
   – ಶ್ರೀ ಸಿ.ಎಂ.ಇಬ್ರಾಹಿಂ
   – ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿ)
   – ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
   – ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು)
   – ಶ್ರೀ ಎಸ್.ಎಲ್.ಭೋಜೇಗೌಡ

9. **ಪ್ರಕಟಣೆ**

10. **ಉಭಯ ಸದನಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ**
    – ಶ್ರೀ ಲೆಹರ್‌ಸಿಂಗ್ ಸಿರೋಯಾ

11. **<u>ನಿಯಮ 68 ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆ</u>**

    **ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ**

    – ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
    – ಶ್ರೀ ಎನ್.ರವಿಕುಮಾರ್
    – ಶ್ರೀ ಎಸ್.ಆರ್.ಬಸವರಾಜ ಬೊಮ್ಮಾಯಿ (ಗೃಹ ಸಚಿವರು)
    – ಶ್ರೀ ಎಸ್.ಸುರೇಶ್ ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
    – ಶ್ರೀ ಐವನ್ ಡಿ'ಸೋಜಾ
    – ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
    – ಶ್ರೀ ಕೆ.ಟಿ.ಶ್ರೀಕಂಠೇಗೌಡ
    – ಶ್ರಿ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು)
    – ಶ್ರೀ ಸಿ.ಎಂ.ಇಬ್ರಾಹಿಂ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**12. ನೂತನ ಸಚಿವರ ಪರಿಚಯ**

**13. ನಿಯಮ 68 ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ**

**ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ**

– ಶ್ರೀ ಸಿ.ಎಂ.ಇಬ್ರಾಹಿಂ
– ಶ್ರೀ ಐವನ್ ಡಿ'ಸೋಜಾ
– ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರಿ ಮುಖ್ಯ ಸಚೇತಕರು)
– ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯ ಮಂತ್ರಿ)

~~~~~~

(8) 18–02–2020/10–50/ಕೆಹೆಚ್–ಜಿಆರ್

**ಕರ್ನಾಟಕ ವಿಧಾನ ಪರಿಷತ್ತು**

***ಮಂಗಳವಾರ, 18ನೇ ಫೆಬ್ರವರಿ 2020***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 56 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

~~~~~

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**1. ನೂತನ ಸದಸ್ಯರ ಪ್ರಮಾಣ ವಚನ**

**ಸಭಾಪತಿಯವರು:–** ಈಗ ನೂತನ ಸದಸ್ಯರ ಪ್ರಮಾಣ ವಚನ

**ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿ):–**

ಮಾನ್ಯ ಸಭಾಪತಿಯವರೇ, ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ ಎಂಬ ಹೆಸರಿನವನಾದ ನಾನು ವಿಧಾನ ಪರಿಷತ್ತಿನ ಸದಸ್ಯನಾಗಿ ನಿರ್ವಾಚನಾ ಹೊಂದಿದವನಾಗಿ, ವಿಧಿದ್ವಾರ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ, ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ, ನಾನು ಈಗ ಕೈಗೊಳ್ಳುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ ಭಗವಂತನ ಹೆಸರಿನ ಮೇಲೆ ಪ್ರಮಾಣ ಮಾಡುತ್ತೇನೆ ಮತ್ತು ಸತ್ಯ ನಿಷ್ಠೆಯಿಂದ ಪ್ರತಿಜ್ಞೆ ಮಾಡುತ್ತೇನೆ.

**2. ನೂತನ ಸಚಿವರುಗಳ ಪರಿಚಯ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನೂತನ ಸಚಿವರಾಗಿ ಆಯ್ಕೆಯಾಗಿ ಬಂದಿರುವಂತಹ ಶ್ರೀ ವಿ.ಸೋಮಣ್ಣ, ವಸತಿ ಸಚಿವರು; ಶ್ರೀ ಕೆ.ಗೋಪಾಲಯ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು; ಶ್ರೀ ಎಸ್.ಟಿ. ಸೋಮಶೇಖರ್, ಸಹಕಾರ ಸಚಿವರು; ಶ್ರೀ ಸಿ.ಸಿ.ಪಾಟೀಲ, ಗಣಿ ಮತ್ತು ಭೂ ವಿಜ್ಞಾನ ಸಚಿವರು; ಶ್ರೀ ಆನಂದ್ ಸಿಂಗ್, ಅರಣ್ಯ, ಜೀವಿ ಪರಿಸ್ಥಿತಿ ಹಾಗೂ ಪರಿಸರ ಸಚಿವರು ಮತ್ತು ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಹಾಗೂ ಈಗಾಗಲೇ ಪ್ರಮಾಣ ವಚನವನ್ನು ಸ್ವೀಕರಿಸಿರುವಂತಹ ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ, ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಸಾರಿಗೆ ಸಚಿವರು, ಈ ಎಲ್ಲಾ ಸಚಿವರುಗಳನ್ನು ಸದನಕ್ಕೆ ಪರಿಚಯ ಮಾಡಿಕೊಡುತ್ತೇನೆ.

**(9) 18/02/2020/11:00/ಎಸ್‌ಪಿಆರ್/ಜಿಆರ್**

**3. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

(ಮೊದಲನೇ ಪಟ್ಟಿ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**I. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**ಭಾರತ ಸಂವಿಧಾನದ 213ರ ಅನುಚ್ಛೇದದ 1ನೇ ಖಂಡದ ಮೇರೆಗೆ:**

1. ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ 1961ಕ್ಕೆ ತಿದ್ದುಪಡಿಗೊಳಿಸಿ ದಿನಾಂಕ: 20/11/2019 ರಂದು ಹೊರಡಿಸಲಾಗಿರುವ 2019ರ ಅಧ್ಯಾದೇಶ ಸಂಖ್ಯೆ:3.

2. ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ಅಧ್ಯಾದೇಶ 2020ನ್ನು ರಚಿಸಿ ದಿನಾಂಕ 17/01/2020 ರಂದು ಹೊರಡಿಸಲಾಗಿರುವ 2020ರ ಅಧ್ಯಾದೇಶ ಸಂಖ್ಯೆ: 01.

**II. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ,

**1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ ಪ್ರಕರಣ 8(3) ರ ಮೇರೆಗೆ:–**

1. 2012ರ ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳ ನಿಯಮ 2 ಮತ್ತು 3ಕ್ಕೆ ತಿದ್ದುಪಡಿಗೊಳಿಸಿ ದಿನಾಂಕ 27/04/2015ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 154 ಸೇವನೆ 2014.

2. 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ಅನುಸೂಚಿ II ಮತ್ತು III ಕ್ಕೆ ತಿದ್ದುಪಡಿಗೊಳಿಸಿ ದಿನಾಂಕ 30/05/2019ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 06 ಎಸ್‌ಡಿಇ 2012.

3. 1978 ರ ಕರ್ನಾಟಕ ನಾಗರೀಕ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳ ನಿಯಮ 6 ಕ್ಕೆ ಮತ್ತು ಅನುಬಂಧಕ್ಕೆ ತಿದ್ದುಪಡಿಗೊಳಿಸಿ ದಿನಾಂಕ 23/05/2015 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 147 ಸೇವನೆ 2014.

4. 1997 ರ ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇಮಕಾತಿ) ನಿಯಮಗಳ ಅನುಸೂಚಿ–II ಕ್ಕೆ ತಿದ್ದುಪಡಿ ಮಾಡಿ ದಿನಾಂಕ 17/01/2020 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 23 ಎಸ್‌ಇಆರ್–7 2019.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**III. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ):–**
ಮಾನ್ಯ ಸಭಾಪತಿಯವರೇ,

**1983ರ ಕರ್ನಾಟಕ ಶಿಕ್ಷಣ ಅಧಿನಿಯಮ145(3) ಮತ್ತು (4)ರ ಪ್ರಕರಣದ ಮೇರೆಗೆ:**

1999ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕೆಲವು ಶುಲ್ಕಗಳ ಮತ್ತು ದೇಣಿಗೆಗಳ ನಿಯಂತ್ರಣ) ನಿಯಮಗಳ ನಿಯಮ 4(1) ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, 2019–20 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಪಡೆಯುವ ಶುಲ್ಕಗಳ ಸ್ವರೂಪವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಬಗ್ಗೆ ದಿನಾಂಕ: 24/07/2019 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಇಡಿ 31 ಪಿಜಿಸಿ 2019.

**IV. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಅಬಕಾರಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**1965ರ ಕರ್ನಾಟಕ ಅಬಕಾರಿ ಅಧಿನಿಯಮದ ಪ್ರಕರಣ 71(4)ರ ಮೇರೆಗೆ:**

1967 ಕರ್ನಾಟಕ ಅಬಕಾರಿ (ಬ್ರೀವರಿ) ನಿಯಮಗಳ ನಿಯಮ 2ಕ್ಕೆ ಹಾಗೂ ನಮೂನೆ 6, 7 ಕ್ಕೆ ತಿದ್ದುಪಡಿಗೊಳಿಸಿ ಮತ್ತು ನಮೂನೆ 8 ನ್ನು ಪ್ರತಿಸ್ಥಾಪನೆಗೊಳಿಸಿ, ದಿನಾಂಕ 05/12/2018 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಫ್‌ಡಿ 11 ಪಿಇಎಸ್ 2018.

(ಎರಡನೇ ಪಟ್ಟಿ)

I. **ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):–**
ಮಾನ್ಯ ಸಭಾಪತಿಯವರೇ,

(1) **ಕಂಪನಿ ಕಾಯ್ದೆ 2013ರ ಕಲಂ 395(1)(ಬಿ)ರನ್ವಯ**

- ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ 2018–19ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ.

(2) **ಭಾರತ ಸಂವಿಧಾನದ ಅನುಚ್ಛೇದ 323(2)ರಂತೆ**

ಕರ್ನಾಟಕ ಲೋಕಸೇವಾ ಆಯೋಗದ 2017–18ನೇ ಸಾಲಿನ ವಾರ್ಷಿಕ ವರದಿ.

(3) **ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976ರ ಕಲಂ 47(ಎ)ರನ್ವಯ**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 2018–19ನೇ ಸಾಲಿನ ವಾರ್ಷಿಕ ವರದಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(4) **ಕಂಪನಿ ಅಧಿನಿಯಮ,2013ರ ಸೆಕ್ಷನ್ 394(2)ರನ್ವಯ**
ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ 2018-19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

(5) **ಕಂಪನಿ ಕಾಯ್ದೆ,2013ರ ಸೆಕ್ಷನ್ 395(1)ರನ್ವಯ**

1. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ 2017-18ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ 2018-19ನೇ ಸಾಲಿನ ವಾರ್ಷಿಕ ವರದಿ
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ 2018-19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
3. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2018-19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
4. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ 2018-19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
5. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2018-19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
6. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 2018-19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
7. ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತದ 2018-19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
8. ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್‌ನ 2018-19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

(6) **ಕಂಪನಿ ಕಾಯ್ದೆ 1956 ಅನುಚ್ಛೇದ 619(ಎ)(2) ಪ್ರಕಾರ**
ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತದ 2017-18ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**II. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಉಪಮುಖ್ಯಮಂತ್ರಿ, ಲೋಕೋಪಯೋಗಿ, ಮತ್ತು ಸಮಾಜ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) **ಕಂಪನಿ ಕಾಯ್ದೆ 2013ರ ಕಲಂ 394 ಮತ್ತು 395(2)ರನ್ವಯ**

1. ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ 2013-14ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು.
2. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ 2018-19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

(2) **ಕಂಪನಿ ಕಾಯ್ದೆ2013ರ ನಿಯಮ 395(1)ರನ್ವಯ**
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ 2017-18ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(3) ಅಧ್ಯಾಯ–III ಪ್ರಕರಣ 9 ಮತ್ತು ಅಧ್ಯಾಯ–IV ಪ್ರಕರಣ 12(7)ರನ್ವಯ**

ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ 2018–19ನೇ ಸಾಲಿನ ವಾರ್ಷಿಕ ವರದಿ.

**III. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**

**(ಉಪಮುಖ್ಯಮಂತ್ರಿ, ಉನ್ನತ ಶಿಕ್ಷಣ ಮತ್ತು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ):– ಮಾನ್ಯ ಸಭಾಪತಿಯವರೇ,)**

**(1) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 2000 ಪ್ರಕರಣ 47(4) ಮತ್ತು 50(2) ರನ್ವಯ**

1. ತುಮಕೂರು ವಿಶ್ವವಿದ್ಯಾಲಯದ 2015–16ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನ ವರದಿ ಹಾಗೂ 2018–19ನೇ ಸಾಲಿನ ವಾರ್ಷಿಕ ವರದಿ.
2. ದಾವಣಗೆರೆ ವಿಶ್ವವಿದ್ಯಾಲಯದ 2018–19ನೇ ಸಾಲಿನ ವಾರ್ಷಿಕ ವರದಿ.
3. ಕರ್ನಾಟಕ ವಿಶ್ವವಿದ್ಯಾಲಯದ ಧಾರವಾಡ 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಮತ್ತು ವಾರ್ಷಿಕ ಲೆಕ್ಕಪರಿಶೋಧನೆಯ ಅನುಸಾರಣಾ ವರದಿ.
4. ಬೆಂಗಳೂರು ವಿಶ್ವವಿದ್ಯಾಲಯದ 2018–19ನೇ ಸಾಲಿನ ವಾರ್ಷಿಕ ವರದಿ.
5. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2017–18ನೇ ಸಾಲಿನ ವಾರ್ಷಿಕ ವರದಿ.
6. ಮೈಸೂರು ವಿಶ್ವವಿದ್ಯಾಲಯದ 2018–19ನೇ ಸಾಲಿನ ವಾರ್ಷಿಕ ವರದಿ.

**(2) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅಧಿನಿಯಮ1992 ಪ್ರಕರಣ 26(3)ರನ್ವಯ**

ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ 2018–19ನೇ ಸಾಲಿನ ವಾರ್ಷಿಕ ವರದಿ.

**(3) ಭಾರತೀಯ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ ಕಾಯ್ದೆಯ ಅನುಸೂಚಿ 26(ಕರ್ನಾಟಕ ಕಾಯ್ದೆ 1986 ಪ್ರಕರಣ 22)ರನ್ವಯ**

ನ್ಯಾಷನಾಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ 2017–18ನೇ ಸಾಲಿನ ಆರ್ಥಿಕ ವರ್ಷದ ವರದಿ, ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ.

**(4) ಕಂಪನಿ ಕಾಯ್ದೆ 2013ರ ಪರಿಚ್ಛೇದ 395ರ ಅನುಸಾರ**

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್)2018–19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**IV. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993(1994 ಕೇಂದ್ರ ಅಧಿನಿಯಮ 10)28(2)ನೇ ಪ್ರಕರಣ**

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ 2017–18ನೇ ಸಾಲಿನ ವಾರ್ಷಿಕ ವರದಿ.

**V. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ):–**
ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ2013ರ ಸೆಕ್ಷನ್ 395(1)(ಬಿ)ಪ್ರಕಾರ**

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ 2017–18ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ವರದಿ.

**VI. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ1993ರ ಪ್ರಕರಣ 262(3) ಮತ್ತು 300ರ ಉಪ ಪ್ರಕರಣ(5)ರನ್ವಯ**

1. ಕೊಡಗು ಜಿಲ್ಲಾ ಪಂಚಾಯತ್‌ನ 2016–17ನೇ ಸಾಲಿನ ವಾರ್ಷಿಕ ಲೆಕ್ಕ ತ:ಖ್ತೆಗಳು ಮತ್ತು 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
2. ಕಲಬುರಗಿ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
3. ಧಾರವಾಡ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
4. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 2016–17ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳ ಮೇಲಿನ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿ.
5. ಯಾದಗಿರಿ ಜಿಲ್ಲಾ ಪಂಚಾಯತ್‌ನ 2014–15ನೇ ಸಾಲಿನ ವಾರ್ಷಿಕ ಲೆಕ್ಕ ಮತ್ತು ಮಾದರಿ ಲೆಕ್ಕಪತ್ರ ಪದ್ಧತಿ ಹಾಗೂ ಲೆಕ್ಕ ಪರಿಶೋಧನಾ ವರದಿ
6. ವಿಜಯಪುರ ಜಿಲ್ಲಾ ಪಂಚಾಯತ್‌ನ 2015–16ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
7. ದಾವಣಗೆರೆ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
8. ಚಾಮರಾಜ ನಗರ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
9. ಬೆಳಗಾವಿ ಜಿಲ್ಲಾ ಪಂಚಾಯತ್‌ನ 2015–16ನೇ ಸಾಲಿನ ಪ್ರಮಾಣಿಕೃತ ವಾರ್ಷಿಕ ಲೆಕ್ಕಪತ್ರ ಹಾಗೂ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿ ಮತ್ತು 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
10. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ 2015–16ನೇ ಸಾಲಿನ ಲೆಕ್ಕಗಳ ತಪಾಸಣಾ ವರದಿ ಮತ್ತು 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
11. ಬೀದರ್ ಜಿಲ್ಲಾ ಪಂಚಾಯತ್‌ನ 2017–18 ಮತ್ತು 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿಗಳು.
12. ಗದಗ ಜಿಲ್ಲಾ ಪಂಚಾಯತ್‌ನ 2015–16ನೇ ಸಾಲಿನ ಪರಿಷ್ಕೃತ ವಾರ್ಷಿಕ ಲೆಕ್ಕಪತ್ರಗಳು.
13. ಕೋಲಾರ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
14. ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಮತ್ತು 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
15. ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
16. ಉಡುಪಿ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
17. ಹಾಸನ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

18. ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
19. ಮಂಡ್ಯ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
20. ಉತ್ತರ ಕನ್ನಡ ಜಿಲ್ಲಾ ಪಂಚಾಯತ್ ಕಾರವಾರ ಇದರ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
21. ಕೊಪ್ಪಳ ಜಿಲ್ಲಾ ಪಂಚಾಯತ್‌ನ 2017–18 ಮತ್ತು 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
22. ರಾಮನಗರ ಜಿಲ್ಲಾ ಪಂಚಾಯತ್‌ನ 2017–18 ಮತ್ತು 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
23. ಮೈಸೂರು ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
24. ರಾಯಚೂರು ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
25. ತುಮಕೂರು ಜಿಲ್ಲಾ ಪಂಚಾಯತ್‌ನ 2016–17 ಮತ್ತು 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
26. ಹಾವೇರಿ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.
27. ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 2018–19ನೇ ಸಾಲಿನ ವಾರ್ಷಿಕ ಆಡಳಿತ ವರದಿ.

**VII. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಅಧಿನಿಯಮ1966 ಕಲಂ 25(3)ರನ್ವಯ**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ 2018–19ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

**VIII. ಶ್ರೀ ವಿ.ಸೋಮಣ್ಣ(ವಸತಿ ಸಚಿವರು):–** ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ 1956 ಸೆಕ್ಷನ್ 619ಎ(3)ರನ್ವಯ**

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ 2018–19ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧಕರ ವರದಿ.

**IX. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ 1956ರ ಪರಿಚ್ಛೇಧ 619 (ಎ)ರ ಅನುಸಾರ**

ಕರ್ನಾಟಕ ಮೀನುಗಾರಿಕ ಅಭಿವೃದ್ಧಿ ನಿಗಮ ನಿಯಮಿತದ 2018–19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**X. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಜಲಸಂಪನ್ಮೂಲ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(1) ಕಾಡಾ ಅಧಿನಿಯಮ 1980ರ ಕಲಂ 24(2) ಮತ್ತು (25)ರನ್ವಯ**

1. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಬೆಳಗಾವಿ ಇದರ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಕಾಡಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕೃಷ್ಣಾ ಮೇಲ್ದಂಡೆ ಯೋಜನೆ ಭೀಮರಾಯನ ಗುಡಿ ಇದರ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು 2018–19ನೇ ಸಾಲಿನ ವಾರ್ಷಿಕ ವರದಿ.
3. ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ 2018–19ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು.

**(2) ಕಂಪನಿ ಕಾಯ್ದೆ1956ರ ಪರಿಚ್ಛೇದ 619(ಎ)(3)ರ ಉಪಬಂಧಗಳನ್ವಯ**

ಕಾವೇರಿ ನೀರಾವರಿ ನಿಗಮ ನಿಯಮಿತದ 2017–18ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**(3) ಕಂಪನಿ ಕಾಯ್ದೆ 2013 ಸೆಕ್ಷನ್ 394/395 ರನ್ವಯ**

1. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ 2018–19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ಕರ್ನಾಟಕ ನೀರಾವರಿ ನಿಗಮ ನಿಯಮಿತದ 2018–19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**XI. ಶ್ರೀ ಆನಂದ್ ಸಿಂಗ್ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):–**
ಮಾನ್ಯ ಸಭಾಪತಿಯವರೇ:–

**(1) ಕಂಪನಿ ಕಾಯ್ದೆ 2013ರ ಕಲಂ 395 (1) (ಬಿ)**

ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದ 2018–19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**(2) ಕರ್ನಾಟಕ ಜೀವ ವೈವಿಧ್ಯ ನಿಯಮಗಳು 2005ರ ನಿಯಮ 19(4)ರನ್ವಯ**

ಕರ್ನಾಟಕ ಜೀವ ವೈವಿಧ್ಯ ಮಂಡಳಿಯ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ 2018–19ನೇ ಸಾಲಿನ ವಾರ್ಷಿಕ ವರದಿಗಳು.

**XII. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ನಗರಾಭಿವೃದ್ಧಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**(1) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ ಕಲಂ 68ಡಿ(2)(ಸಿ)ರನ್ವಯ**

1. ಕನಕಪುರ ಯೋಜನಾ ಪ್ರಾಧಿಕಾರದ 2017–18ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ ಮತ್ತು 2018–19ನೇ ಸಾಲಿನ ವಾರ್ಷಿಕ ವರದಿ.
2. ಉಪನಗರ ವರ್ತೂಲ ರಸ್ತೆ (STRR)ಯೋಜನಾ ಪ್ರಾಧಿಕಾರ 2016–17, 2017–18 ಮತ್ತು 2018–19ನೇ ಸಾಲಿನ ವಾರ್ಷಿಕ ವರದಿಗಳು.
3. ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

2016–17, 2017–18 ಮತ್ತು 2018–19ನೇ ಸಾಲಿನ ವಾರ್ಷಿಕ ವರದಿಗಳು.

4.ನೆಲಮಂಗಲ ಯೋಜನಾ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

5.ಚನ್ನಪಟ್ಟಣ ಯೋಜನಾ ಪ್ರಾಧಿಕಾರದ 2017–18ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ ಮತ್ತು 2018–19ನೇ ಸಾಲಿನ ವಾರ್ಷಿಕ ವರದಿ.

6.ಕುಣಿಗಲ್ ಯೋಜನಾ ಪ್ರಾಧಿಕಾರದ 2015–16, 2016–17ನೇ ಸಾಲಿನ ವಾರ್ಷಿಕ ವರದಿಗಳು ಮತ್ತು 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಅನುಷ್ಠಾನ, ಕಾಂಪ್ಲೈನ್ಸ್ ವರದಿ.

7. ತಿಪಟೂರು ಯೋಜನಾ ಪ್ರಾಧಿಕಾರದ 2018–19ನೇ ಸಾಲಿನ ವಾರ್ಷಿಕ ವರದಿ.

8. ಶಿರಾ ಯೋಜನಾ ಪ್ರಾಧಿಕಾರದ 2018–19ನೇ ಸಾಲಿನ ವಾರ್ಷಿಕ ವರದಿ.

9. ಗೌರಿಬಿದನೂರು ಯೋಜನಾ ಪ್ರಾಧಿಕಾರದ 2018–19ನೇ ಸಾಲಿನ ವಾರ್ಷಿಕ ವರದಿ.

10. ಹೊಸಕೋಟೆ ಯೋಜನಾ ಪ್ರಾಧಿಕಾರದ 2018–19ನೇ ಸಾಲಿನ ವಾರ್ಷಿಕ ವರದಿ.

11. ವಾಡಿ–ಶಹಬಾದ್ ಯೋಜನಾ ಪ್ರಾಧಿಕಾರದ 2018–19ನೇ ಸಾಲಿನ ವಾರ್ಷಿಕ ವರದಿ.

12. ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶಾ ಯೋಜನಾ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ 2018–19ನೇ ಸಾಲಿನ ವಾರ್ಷಿಕ ವರದಿ.

**(2) <u>ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 48(5) ಮತ್ತು 49ರನ್ವಯ</u>**

**1**. ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ 2015–16ನೇ ಸಾಲಿನ ವಾರ್ಷಿಕ ವರದಿ.

**2**. ಗದಗ–ಬೇಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ 2018–19ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕತನಿಖಾ ವರದಿ.

**3**. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು 2018–19ನೇ ಸಾಲಿನ ವಾರ್ಷಿಕ ವರದಿ.

**4**. ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**5**. ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು 2018–19ನೇ ಸಾಲಿನ ವಾರ್ಷಿಕ ವರದಿ.

**6**. ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ 2018–19ನೇ ಸಾಲಿನ ವಾರ್ಷಿಕ ವರದಿ.

**7**. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ 2018–19ನೇ ಸಾಲಿನ ವಾರ್ಷಿಕ ವರದಿ.

**8**. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2018–19ನೇ ಸಾಲಿನ ವಾರ್ಷಿಕ ವರದಿ.

**9**. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ 2018–19ನೇ ಸಾಲಿನ ವಾರ್ಷಿಕ ವರದಿ.

**10**.ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2018–19ನೇ ಸಾಲಿನ ವಾರ್ಷಿಕ ವರದಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**11.**ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**12.**ವಿಜಯ ನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ತೋರಣಗಲ್ಲು ಇದರ 2018–19ನೇ ಸಾಲಿನ ವಾರ್ಷಿಕ ವರದಿ.

**13.**ರಾಮನಗರ–ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ 2012–13ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**14.**ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2017–18 ಮತ್ತು 2018–19ನೇ ಸಾಲಿನ ವಾರ್ಷಿಕ ವರದಿಗಳು.

(3) **ಕಂಪನಿ ಅಧಿನಿಯಮ,2013ರ ಸೆಕ್ಷನ್ 394(2)ರನ್ವಯ**

1. ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ 2018–19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**XIII.ಶ್ರೀ ಎಸ್. ಟಿ. ಸೋಮಶೇಖರ್(ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ,

**ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 29(ಡಿ)ರನ್ವಯ**

1. ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಂಘಗಳ ಮಹಾಮಂಡಳಿ ನಿಯಮಿತದ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಹಣಕಾಸಿನ ತಖ್ತೆ:ಗಳು ಹಾಗೂ ಧೃಢೀಕರಣಗಳು.
2. ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ನಿಯಮಿತದ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
3. ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತದ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
4. ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳಿ ನಿಯಮಿತ ಮೈಸೂರು ಇದರ 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**XIV. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಕೃಷಿ ಸಚಿವರ ಪರವಾಗಿ):–**

ಮಾನ್ಯ ಸಭಾಪತಿಯವರೇ,

**(1) ಕಂಪನಿ ಕಾಯ್ದೆ,2013ರ ಸೆಕ್ಷನ್ 394(2)ರನ್ವಯ**

1. ಆಹಾರ ಕರ್ನಾಟಕ ನಿಯಮಿತದ 2017–18ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 2018–19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
3. ದಿ. ಮೈಸೂರು ಟೊಬ್ಯಾಕೋ ಕಂಪನಿ ಲಿಮಿಟೆಡ್‌ನ 2018–19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
4. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯ 2018–19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(2) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ 2000 ಕಲಂ 40(3)ರನ್ವಯ**

ಕೃಷಿ ವಿಶ್ವವಿದ್ಯಾಲಯ ಧಾರವಾಡದ 2015–16 ಮತ್ತು 2016–17ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಗಳು.

**XV. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**(1) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯ ಅಧಿನಿಯಮ 2009,ಅಧ್ಯಾಯ IX, ನಿಯಮ 57ರನ್ವಯ**

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯ 2018–19ನೇ ಸಾಲಿನ ವಾರ್ಷಿಕ ವರದಿ.

**(2) ಕಂಪನಿ ಕಾಯ್ದೆ 1956 ಸೆಕ್ಷನ್ 619(ಎ)(2)ರನ್ವಯ,**

1. ಕರ್ನಾಟಕ ರೇಷ್ಮೆ ಮಾರಟ ಮಂಡಳಿಯ 2018–19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ 2018–19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**XVI. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**(1)ಕಂಪನಿ ಕಾಯ್ದೆ 2013ರ ಕಲಂ 394 ಮತ್ತು 395 (1) (ಬಿ) ಮತ್ತು (2) ಪ್ರಕಾರ**

1. ದಿ. ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್‌ನ 2018–19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ದಿ. ಮೈಸೂರು ಲ್ಯಾಂಪ್ಸ್ ವರ್ಕ್ಸ್ ಲಿಮಿಟೆಡ್‌ನ 2018–19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
3. ಕರ್ನಾಟಕ ಸಾಬೂನು ಮಾರ್ಜಕ ನಿಯಮಿತದ 2018–19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
4. ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ 2018–19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
5. ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಶನ್ ಲಿಮಿಟೆಡ್‌ನ 2018–19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)
6. ಮೈಸೂರು ಪೇಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್‌ನ 2018–19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
7. ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ 2018–19ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)
8. ಕರ್ನಾಟಕ ಟ್ರಸ್ಪೀ ಕಂಪನಿ ಲಿಮಿಟೆಡ್‌ನ 2018–19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
9. ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ನ 2018–19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

10. ಕರ್ನಾಟಕ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ ಪ್ರೈವೇಟ್ ಲಿಮಿಟೆಡ್‌ನ 2018–19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

(3) **ಕಂಪನಿ ಕಾಯ್ದೆ1956 ಕಲಂ619(ಎ) ಮತ್ತು 26 ನಿಯಮ 1957 (9) (1) ರನ್ವಯ**

1. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ 2017–18ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ 2017–18ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

(4) **ಕೆ.ಐ.ಎ.ಡಿ.ಬಿ ಕಾಯ್ದೆ1966 ಕಲಂ 24(4)ರೀತ್ಯಾ**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ 2017–18ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

**XVII. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಕಾರ್ಮಿಕ ಹಾಗೂ ಸಕ್ಕರೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮ 1968ರ ನಿಯಮ 28ರನುಸಾರ**

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ 2018–19ನೇ ಸಾಲಿನ ವಾರ್ಷಿಕ ವರದಿ.

**4.ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕ.ವಿ.ಪ:–** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ಕೆಳಕಂಡ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 1. | ಬೆಂಗಳೂರು ಡಾ॥ ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ವಿಧೇಯಕ, 2018<br>The Bengaluru Dr. B.R.Ambedkar School of Economics University Bill, 2018 | 21/09/2019<br>13/01/2019 | ರಾಷ್ಟ್ರಪತಿಯವರು<br>ರಾಜ್ಯಪಾಲರು |
| 2. | ಕರ್ನಾಟಕ ಧನವಿನಿಯೋಗ (ಸಂಖ್ಯೆ.4) ವಿಧೇಯಕ, 2019 | 21/10/2019 | |

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

| | | | |
|---|---|---|---|
| | The Karnataka Appropriation (No.4) Bill, 2019 | | ರಾಜ್ಯಪಾಲರು |
| 3. | ಕರ್ನಾಟಕ ಧನವಿನಿಯೋಗ (ಸಂಖ್ಯೆ.3) ವಿಧೇಯಕ, 2019<br>The Karnataka Appropriation (No.3) Bill, 2019 | 21/10/2019 | ರಾಜ್ಯಪಾಲರು |
| 4. | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2019<br>The Karnataka Goods and Services Tax (Amendment) Bill, 2019 | 21/10/2019 | ರಾಜ್ಯಪಾಲರು |

**ಸಭಾಪತಿಯವರು:–** ಮಂಡಿಸಲಾಯಿತು.

**5. <u>ನಿಯಮ 330–ಎ ಅಡಿಯಲ್ಲಿ ವಿಶೇಷ ಪ್ರಸ್ತಾವನೆ</u>**

**ಅ) ವಿಷಯ:–ಹುಬ್ಬಳ್ಳಿಯ ಕೆ.ಎಲ್.ಇ. ಇಂಜಿನಿಯರಿಂಗ್ ವಿದ್ಯಾರ್ಥಿಗಳು ಪಾಕ್ ಪರ ಘೋಷಣೆ ಕೂಗಿದ ಬಗ್ಗೆ**

* * *

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಷಯವು ಸಾರ್ವಜನಿಕ ಅತ್ಯಂತ ಮಹತ್ವದ ಮತ್ತು ಬಹಳ ಗಂಭೀರ ವಿಷಯವಾಗಿರುವುದರಿಂದ ನಿಯಮ 330 ಎ ರಡಿ ಪ್ರಸ್ತಾಪಿಸಲು ಅನುಮತಿ ನೀಡಿರುವುದಕ್ಕೆ ಕೃತಜ್ಞತೆಗಳು.

ಹುಬ್ಬಳ್ಳಿಯ ಕೆ.ಎಲ್.ಇ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೂರು ವಿದ್ಯಾರ್ಥಿಗಳು ಪಾಕ್ ಪರ ಘೋಷಣೆ ಕೂಗಿದ ಆರೋಪದ ಮೇಲೆ ಬಂಧನಕ್ಕೆ ಒಳಗಾಗಿದ್ದು ಕಾಶ್ಮೀರ ಮೂಲದ ಮೂರು ವಿದ್ಯಾರ್ಥಿಗಳನ್ನು ಸಾಕ್ಷ್ಯಾಧಾರ ಕೊರತೆ ಹಿನ್ನೆಲೆಯಲ್ಲಿ ಮಹಾನಗರದ ಪೊಲೀಸರು ಸಿ.ಆರ್.ಪಿ. ನಿಯಮ 169 ರಡಿ ಇದನ್ನು ಪೊಲೀಸ್ ವ್ಯವಸ್ಥೆಯ ಗಲಿಬಿಲಿ ಎನ್ನಬೇಕು, ಉದ್ದೇಶಪೂರ್ವಕವಾಗಿ ಮಾಧ್ಯಮಗಳನ್ನು ಸರ್ಕಾರ ಕತ್ತಲಲ್ಲಿಟ್ಟಿದೆಯೋ ಎಂಬ ಸಂಶಯ ಸಾರ್ವಜನಿಕರಲ್ಲಿ ಮೂಡುತ್ತದೆ. ದೇಶದ್ರೋಹದ ಪ್ರಕರಣ ಠಾಣಾ ಜಾಮೀನು ವ್ಯಾಪ್ತಿಗೆ ಹೇಗೆ ಬರುತ್ತದೆ. ಯಾವ ಅರ್ಥದಲ್ಲಿ ಹುಬ್ಬಳ್ಳಿ ಪೊಲೀಸ್ ಆಯುಕ್ತರು, ಭಾನುವಾರ ಈ ರೀತಿಯ ಹೇಳಿಕೆ ನೀಡಿದರು ಎನ್ನುವುದು ಯಕ್ಷ ಪ್ರಶ್ನೆಯಾಗಿದೆ. ದಿನಾಂಕ 16/02/2020 ರಂದು ಬಿಡುಗಡೆ ಮಾಡಿ ನಂತರ ರಾಜ್ಯದ ತುಂಬಾ ಪ್ರತಿಭಟನೆ ಪ್ರಾರಂಭವಾದ್ದರಿಂದ ದಿನಾಂಕ 17/02/2020 ರಂದು ಮತ್ತೆ ಅವರನ್ನು ಬಂಧನಕ್ಕೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ. ನ್ಯಾಯಾಲಯದ ಆವರಣದಲ್ಲಿಯೇ ಗಲಾಟೆಗಳಾಗಿ ಸಾಕಷ್ಟು ಪ್ರತಿಭಟನೆಗಳಾಗಿ ವಾತಾವರಣ ಸಂಪೂರ್ಣ ಹದಗೆಟ್ಟಿರುವುದರಿಂದ ಮುಂದೆ ಆಗಬಹುದಾದಂತಹ ಅನಾಹುತಗಳನ್ನು ತಪ್ಪಿಸಲು ಪಾಕಿಸ್ತಾನ ಪರ ಘೋಷಣೆ ಕೂಗಿದ ವಿದ್ಯಾರ್ಥಿಗಳನ್ನು ಬಿಡುಗಡೆ ಮಾಡಿರುವ ಪೊಲೀಸರ ಹಾಗೂ ಸರ್ಕಾರದ ಈ ನಡೆ ಸಂಶಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುವಂತೆ ಮಾಡಿದೆ. ಅಂತಹ ದೇಶದ್ರೋಹಿಗಳನ್ನು ಈ ರೀತಿ ಗಂಭೀರವಾಗಿ ಪರಿಗಣಿಸದೆ ಪೊಲೀಸ್ ಇಲಾಖೆಯು ತಮ್ಮ ಕರ್ತವ್ಯ ಲೋಪವೆಸಗಿದೆ ಎನ್ನುವುದು ಸಾರ್ವಜನಿಕರ ಅಭಿಪ್ರಾಯವಾಗಿದೆ. ಈ ಮೂವರು ವಿದ್ಯಾರ್ಥಿಗಳು ಪಾಕ್ ಸೇನೆಯ ಹಾಡಿಗೆ ದನಿಗೂಡಿಸುತ್ತಾ ಪಾಕಿಸ್ತಾನ ಜಿಂದಾಬಾದ್ ಮತ್ತು ಪಾಕಿಸ್ತಾನ ಆಜಾದಿ ಎಂದು ಘೋಷಣೆ ಕೂಗಿ ದೇಶದ್ರೋಹ ಮಾಡಿದಂತಹ ಇಂತಹವರಿಗೆ ಇಷ್ಟೊಂದು ಮೃದು ಧೋರಣೆ ತಾಳಿದ್ದು ಸಾರ್ವಜನಿಕರಲ್ಲಿ ಸಂಶಯ ಮೂಡುವ ವಾತಾವರಣ ನಿರ್ಮಾಣವಾಗಿದ್ದರಿಂದ ಇದನ್ನು ಗಂಭೀರವಾಗಿ ಪರಿಗಣಿಸಿ ಇಡೀ ಪ್ರಕರಣ ಗೊಂದಲದಲ್ಲಿರುವುದು, ಹುಬ್ಬಳ್ಳಿ ಪೊಲೀಸ್ ಆಯುಕ್ತರು ಒತ್ತಡಕ್ಕೆ ಒಳಗಾಗಿರುವುದು ಹಾಗೂ ಜನರೆಲ್ಲರೂ ಪಾಕ್ ಪರ ಘೋಷಣೆ ಕೂಗಿದವರ ಬಗ್ಗೆ ವ್ಯವಸ್ಥೆ ಏಕೋ ಮೃದುವಾಗಿ ವರ್ತಿಸುತ್ತಿದೆ ಎಂದು ಕೊಳ್ಳುವಂತಾಗಿರುವುದು ಈಗಿನ ವಾಸ್ತವ. ಜನರು ಈ ವಾಸ್ತವ ನಡುವಿನ ಸತ್ಯವೇನೆಂಬುದನ್ನು ಸರ್ಕಾರ ಸ್ಪಷ್ಟವಾಗಿ ಹೇಳಲೇಬೇಕಾಗುತ್ತದೆ. ಇಲ್ಲವಾದರೆ ಇದು ಸರ್ಕಾರ ಮೃದು ಧೋರಣೆ ತಳೆದಿದೆ ಎಂಬುದು ಜನರಲ್ಲಿ ಸಂಶಯ ಮೂಡುತ್ತದೆ. ಏಕೆಂದರೆ ನ್ಯಾಯಾಲಯದ ಆವರಣದಲ್ಲಿಯೇ ಈ ರೀತಿಯ ದಾಳಿಗಳು ನಡೆದರೆ ನ್ಯಾಯಾಲಯಗಳ ಪರಿಸ್ಥಿತಿ ಏನೆಂಬುದು ಹೇಳಲು ಅಸಾಧ್ಯ. ಆದ್ದರಿಂದ ತಕ್ಷಣ ಕಟ್ಟುನಿಟ್ಟಾದ ಕ್ರಮ ತೆಗೆದುಕೊಂಡು ಮತ್ತು ತಪ್ಪು ಎಸಗಿದವರ ಮೇಲೆ ಕ್ರಮ ಕೈಗೊಳ್ಳಲು ಈ ಮೂಲಕ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಸಭಾಪತಿಯವರು:–** ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಐವನ್ ಡಿ'ಸೋಜಾರವರೂ ಸಹ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈ ದೇಶದ ಐಕ್ಯತೆ, ಸಮಗ್ರತೆ, ಸಾರ್ವಭೌಮತ್ವ ಹಾಗೂ ಅಖಂಡತೆಯನ್ನು ಪ್ರಶ್ನೆ ಮಾಡಿ ಪಾಕ್ ಪರ ಘೋಷಣೆಗಳನ್ನು ಕೂಗುವ ದೇಶದ್ರೋಹಿ ಕೃತ್ಯಗಳನ್ನು ಅಷ್ಟು . . . .

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, . ..

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರೂ ಸಹ ಇದೇ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ದೇಶದ ಐಕ್ಯತೆ, ಭದ್ರತೆ, ಅಖಂಡತೆ ಮತ್ತು ಸಾರ್ವಭೌಮತಕ್ಕೆ ಸವಾಲು ಹಾಕುವಂತಹ ಘೋಷಣೆಗಳನ್ನು ಕೂಗಿದವರಿಗೆ ಪೋಲೀಸ್ ಅಧಿಕಾರಿಗಳು ಏಕೆ ಮೃದು ಧೋರಣೆ ತೋರುತ್ತಿದ್ದಾರೆ. ಅವರಿಗೆ ಏನಾಗಿದೆ? They would have taken action. They would have registered a case for sedition. It is an offence against the State. ಯಾವುದೋ ಕೆಲಸಗಳಿಗೆ ಏನೇನೋ ಮಾಡುತ್ತಾರೆ, ಆದರೆ ದೇಶದ್ರೋಹದಂತ ಕೃತ್ಯಕ್ಕೆ ಇಷ್ಟು ಬಹಿರಂಗವಾಗಿ ಒಂದು ಪ್ರತಿಷ್ಠಿತ ವಿದ್ಯಾಸಂಸ್ಥೆಯಲ್ಲಿ ಮೂರು ವಿದ್ಯಾರ್ಥಿಗಳು ಈ ಪವಿತ್ರ ನೆಲದಲ್ಲಿ ಪಾಕ್ ಪರ ಘೋಷಣೆಗಳನ್ನು ಕೂಗುತ್ತಾರೆ. ಈ ಹಿಂದೆ ಶ್ರೀಮತಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಂದಿರಾಗಾಂಧಿರವರು ಇದ್ದಾಗ we have chopped off a wing of Pakistan. We have liberated Bangladesh. ನಾವು ಅಷ್ಟೊಂದು ಕಠಿಣ ಧೋರಣೆಗಳನ್ನು ಕೈಗೊಳ್ಳುವಂತಹ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳ ಮೇಲೆ ಮೃದು ಧೋರಣೆ ತಾಳುವಂತಹ ಏನಾದರೂ ಒತ್ತಡವಿರಬೇಕು. ಅಂತಹ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಮಾನ್ಯ ಸಭಾನಾಯಕರು ಕುಳಿತುಕೊಂಡು ನನ್ನ ಮಾತುಗಳನ್ನು ಕೇಳಬೇಕು. ಅವರಿಗೆ ಬಹಳ ಅವಸರವಿದೆಯಂತೆ ಕಾಣುತ್ತಿದೆ. ಮಾನ್ಯ ಸಭಾನಾಯಕರ ಮುಖಾಂತರ ನಾನು ಸರ್ಕಾರಕ್ಕೆ ಹೇಳಲಿಚ್ಛಿಸುತ್ತೇನೆ. ಇಷ್ಟೆಲ್ಲಾ ರೀತಿಯಾಗಿ ಹುಬ್ಬಳ್ಳಿಯ ನಾಗರೀಕರು ದೇಶಪ್ರೇಮಿಗಳು. ಈ ಪ್ರಸಂಗದಲ್ಲಿ ಆದಂತಹ ಅನ್ಯಾಯದ ವಿರುದ್ಧ ಅಂದರೆ, ಆರೋಪಿತರುಗಳ ವಿರುದ್ಧ ಪೊಲೀಸರು ಮೃದು ಧೋರಣೆಯನ್ನು ತಾಳಿದರ ಬಗ್ಗೆ ಆಕ್ರೋಶಗೊಂಡು agitation ಪ್ರಾರಂಭವಾದ ಮೇಲೆ ಪೊಲೀಸರು ಎಚ್ಚೆತ್ತುಕೊಂಡರು. ಬಹುತರವಾಗಿ ಮೃದು ಧೋರಣೆಯನ್ನು ತಾಳುವಂತೆ ಸರ್ಕಾರದ ಪರವಾಗಿ ಯಾರಾದರೂ ಹೇಳಿರಬಹುದು. ಪೊಲೀಸರು ಆರೋಪಿತರುಗಳನ್ನು ಸಿ.ಆರ್.ಪಿ.ಸಿ. ಯ ಕಲಂ 69 ರಡಿ ದಸ್ತಗಿರಿ ಮಾಡಿದ್ದಾರೆ. It is a non-punishable offence. They have registered a case under Section 60, Cr.P.C., ನಾನು ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ, this is a serious offence. Immediately they would have registered a case for sedition. The accused would have been arrested and remanded to the judicial custody. ಇಷ್ಟೆಲ್ಲಾ ಸಾರ್ವಜನಿಕರು ಎಚ್ಚೆತ್ತುಕೊಂಡು ತಮ್ಮ ದೇಶಪ್ರೇಮವನ್ನು ವ್ಯಕ್ತಪಡಿಸಿದ್ದಾರೆ. ದೇಶಕ್ಕೆ ದ್ರೋಹವನ್ನು ಮಾಡುವಂತಹ ಅನ್ಯಾಯವನ್ನು ಮಾಡಿದ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡಿದಾಗ ಪೊಲೀಸರು ಎಚ್ಚೆತ್ತುಕೊಂಡಿದ್ದಾರೆ. ಪೊಲೀಸರು ಆರೋಪಿತರುಗಳಿಗೆ ಮೃದು ಧೋರಣೆ ತೋರುವುದಕ್ಕೆ ಏನು ಕಾರಣವಿದೆ? ಅಂತಹ ಅಧಿಕಾರಿಯ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. You keep him under suspension immediately. You don’t take it lightly. It is a serious offence. Slogan is in favour of Pakistan and it is against India.

**ಶ್ರೀ ಐವನ್ ಡಿ’ಸೋಜಾ:–** ಮಾನ್ಯ ಸಭಾಪತಿಯವರೇ, ಅಲ್ಲಿನ ಕಮೀಷನರ್‌ರನ್ನು ಸಸ್ಪೆಂಡ್ ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ನೆಲದ ಅನ್ನವನ್ನು ಊಟ ಮಾಡಿ, ನೀರನ್ನು ಕುಡಿದು ಹಾಗೂ ಈ ನೆಲದ ಗಾಳಿಯನ್ನು ಸೇವನೆ ಮಾಡಿದ ಆರೋಪಿತರುಗಳು ಇವತ್ತಿನ ದಿವಸ ಪಾಕಿಸ್ತಾನ ದೇಶದ ಪರ ಘೋಷಣೆಗಳನ್ನು ಕೂಗುತ್ತಿದ್ದಾರೆ. ಹೀಗಾಗಿ ಇಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕಾಗಿದೆ. The Commissionerate of Police would have taken immediate action. Why you are soft peddling with such an accused? What is the reason behind it?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Who has told the concerned Police Officer to take a soft step? ಇದು ಬಹಳ ಮಹತ್ವದ ವಿಚಾರವಾಗಿದೆ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಿಯಮ 330 ಎ ರಡಿ ವಿಶೇಷ ಪ್ರಸ್ತಾವಗಳನ್ನು ಪ್ರಸ್ತಾಪಿಸಲು ಅನುಮತಿ ನೀಡಿರುವುದಕ್ಕೆ ಧನ್ಯವಾದಗಳು. ದೇಶದ ಅನ್ನ ತಿಂದು ಪಾಕ್‌ಗೆ ಜೈಕಾರ್, ದೇಶದ್ರೋಹಿಗಳ ಮೇಲೆ ತೀವ್ರ ಪ್ರತಿಭಟನೆ "ಪೊಲೀಸರ ಮೇಲೆ ಆಕ್ರೋಶ"

ಪೊಲೀಸ್ ಅಧಿಕಾರಿಗಳು ದೇಶದ್ರೋಹಿ ಪ್ರಕರಣವನ್ನು ದಾಖಲಿಸದೇ, ಸರ್ಕಾರದ ಪ್ರಭಾವಕ್ಕೆ ಒಳಪಟ್ಟು ಆರೋಪಿಗಳನ್ನು ಸಾಕ್ಷ್ಯಾಧಾರದ ಕೊರತೆ ಇದೆ ಎಂಬ ಹಿನ್ನೆಲೆಯಲ್ಲಿ ಸಿ.ಆರ್.ಪಿ.ಸಿ., ಯ 169 ಕಾಯ್ದೆಯಡಿ ಆರೋಪಿಗಳಿಂದ ಮುಚ್ಚಳಿಕೆ ಬರೆಸಿಕೊಂಡು ಬಿಡುಗಡೆ ಮಾಡಿದ ಘಟನೆ ಹುಬ್ಬಳ್ಳಿಯಲ್ಲಿ ನಡೆದಿದೆ. ಪೊಲೀಸರ ಕ್ರಮವನ್ನು ತಿಳಿದು ಜಾತಿ, ಮತ ಭೇದವಿಲ್ಲದೆ ದೇಶ ಪ್ರೇಮಿಗಳು ಒಟ್ಟು ಸೇರಿ ಆಕ್ರೋಶವನ್ನು ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದ ನಂತರ ಎಚ್ಚೆತ್ತ ಪೊಲೀಸ್ ಅಧಿಕಾರಿಗಳು ಮತ್ತೆ ಮೂರು ವಿದ್ಯಾರ್ಥಿಗಳನ್ನು ಬಂಧಿಸಿ, ಸೋಮವಾರ ಬೆಳಿಗ್ಗೆ ನ್ಯಾಯಾಲಯಕ್ಕೆ ಹಾಜರು ಪಡಿಸಿ ನ್ಯಾಯಾಲಯವು ನ್ಯಾಯಾಂಗ ಬಂಧನವನ್ನು ವಿಧಿಸಿದೆ. ಹುಬ್ಬಳ್ಳಿ ಪೊಲೀಸರು ದೇಶದ್ರೋಹದಂತಹ ಗಂಭೀರ ಪ್ರಕರಣಗಳಲ್ಲಿ ಕಾನೂನನ್ನು ಗಾಳಿಗೆ ತೂರಿ, ದೇಶದ್ರೋಹಿಗಳಿಗೆ ಬೆಂಬಲಿಸುತ್ತಿರುವುದು ಇತ್ತೀಚಿನ ದಿನಗಳಲ್ಲಿ ಅನೇಕ ಪ್ರಕರಣಗಳು ಸಾರ್ವಜನಿಕರಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ಇತ್ತೀಚೆಗೆ ರಾಜ್ಯದ ಉಚ್ಚನ್ಯಾಯಾಲಯವು ಪೊಲೀಸರು ಇಬ್ಬಗೆಯ ನೀತಿಯ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂತಹುದೇ ದೇಶದ್ರೋಹ ಪ್ರಕರಣ ಕಲ್ಲಡ್ಕದ ಶಾಲೆಯಲ್ಲಿ ಪೊಲೀಸರ ಎದುರೇ ನಡೆದಿದ್ದರೂ ಸಹ ಪೊಲೀಸರು ಯಾವುದೇ ಕ್ರಮಕೈಗೊಳ್ಳದೇ ಅದನ್ನು ಸಮರ್ಥಿಸಿರುವುದು ಪೊಲೀಸರೇ ದೇಶದ್ರೋಹಿಗಳಿಗೆ ಬೆಂಬಲಿಸುವುದು ಸ್ಪಷ್ಟವಾಗಿದೆ. ಆದ್ದರಿಂದ ಹುಬ್ಬಳ್ಳಿ ಪೊಲೀಸ್ ಆಯುಕ್ತರನ್ನು ಕೂಡಲೇ ಅಮಾನತ್ತು ಮಾಡಬೇಕು ಮತ್ತು ಪ್ರಕರಣ ಕೈಬಿಟ್ಟ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳಬೇಕು. ರಾಜ್ಯದಲ್ಲಿ ಪೊಲೀಸರು ದೇಶದ್ರೋಹಿ ಜೊತೆ ಶಾಮೀಲಾಗಿಲ್ಲ ಎಂಬ ಸಂದೇಶವನ್ನು ರಾಜ್ಯ ಸರ್ಕಾರ ನೀಡುವುದು ಈ ದಿನದ ಅವಶ್ಯಕತೆ ಇದೆ. ಇದೊಂದು ಸಾರ್ವಜನಿಕರಿಗೆ ಮಹತ್ವವುಳ್ಳ ವಿಚಾರವೆಂದು ಪರಿಗಣಿಸಿ ತಕ್ಷಣ ಗೃಹ ಇಲಾಖೆ ಕ್ರಮಕೈಗೊಳ್ಳಬೇಕೆಂದು ಈ ಸದನದ ಮೂಲಕ ಕೋರುತ್ತೇನೆ.

**(010)/18–2–2020/11–10/ಎಲ್‌ಎಂ/ಎಂಡಿ**

**ಶ್ರೀ ಐವನ್ ಡಿ'ಸೋಜಾ(ಮುಂದು):–** ಈ ಪ್ರಕರಣದಲ್ಲಿ ತಕ್ಷಣ ಪೊಲೀಸ್ ಕಮೀಶನರ್‌ರವರನ್ನು ಸಸ್ಪೆಂಡ್ ಮಾಡಬೇಕು ಮತ್ತು ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಇದು ಸುಲಭದ ಪ್ರಕರಣವಲ್ಲ, ಇರುವುದನ್ನು ಹೇಳಿದರೆ ದೇಶದ್ರೋಹಿಗಳು ಎನ್ನುತ್ತಾರೆ. ಇಲ್ಲಿ ದೇಶದ್ರೋಹಿಗಳಿಗೆ ಪೊಲೀಸ್‌ನವರ ಮುಖಾಂತರ ರಕ್ಷಣೆ ಕೊಡಲಾಗುತ್ತಿದೆ. ಇಂತಹ ಅನೇಕ ಪ್ರಕರಣಗಳು ನಮ್ಮ ಜಿಲ್ಲೆಯಲ್ಲಿ ನಡೆದಿವೆ. ರಾಮಜನ್ಮ ಭೂಮಿ ಮತ್ತು ಬಾಬ್ರಿಮಸೀದಿ ವಿಚಾರದಲ್ಲಿ ಗೊಂದಲಗಳು ಉಂಟಾದಾಗಲೂ ಸಹ ಪೊಲೀಸರು ಏನು ಕ್ರಮ ತೆಗೆದುಕೊಳ್ಳಲಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇದಕ್ಕೆ ಏನು ಅರ್ಥ? ಮಂಗಳೂರಿನಲ್ಲಿ ಮಾನ್ಯ ಮಾಜಿ ಸಚಿವರಾದ ಯು.ಟಿ.ಖಾದರ್‌ರವರ ಮೇಲೆ ಕೇಸ್ ದಾಖಲು ಮಾಡುತ್ತಾರೆ. ಮೈಸೂರಿನಲ್ಲಿಯೂ ಸಹ ಕೇಸ್‌ನ್ನು ದಾಖಲು ಮಾಡುತ್ತಾರೆ. ಆದರೆ ಈಗ ನಡೆದಿರುವ ಪ್ರಕರಣದಲ್ಲಿ ಪೊಲೀಸ್‌ನವರು ದೇಶದ್ರೋಹಿಗಳಿಗೆ ರಕ್ಷಣೆಯನ್ನು ಕೊಟ್ಟಿದ್ದಾರೆ. ಆದರೂ ಪೊಲೀಸ್‌ನವರ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ ಏಕೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ನಿಯಮ 330ರ ಅಡಿಯಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರು, ಮಾನ್ಯ ಐವಾನ ಡಿಸೋಜಾರವರು ಮತ್ತು ಪೂರಕವಾಗಿ ಮಾನ್ಯ ಎಸ್.ಆರ್.ಪಾಟೀಲ್‌ರವರು "ಹುಬ್ಬಳ್ಳಿಯಲ್ಲಿ ಕೆ.ಎಲ್.ಇ ಇಂಜನಿಯರಿಂಗ್ ವಿದ್ಯಾರ್ಥಿಗಳು ಪಾಕ್ ಪರ ಘೋಷಣೆ ಕೂಗಿರುವ ಬಗ್ಗೆ" ಪ್ರಸ್ತಾಪ ಮಾಡಿ ಸಂಬಂಧಪಟ್ಟವರ ಮೇಲೆ ಅತ್ಯಂತ ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಆಗ್ರಹ ಮಾಡಿದ್ದಾರೆ. ನನಗೆ ಅತ್ಯಂತ ಸಂತೋಷದ ವಿಚಾರ ಎಂದರೆ, ದೇಶದ ವಿರುದ್ಧ, ಪಾಕ್ ಪರವಾಗಿ ಘೋಷಣೆ ಕೂಗುವವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಂಡು ಅಂತಹವರನ್ನು ಮಟ್ಟ ಹಾಕಲು ಸರ್ಕಾರ ಬದ್ಧವಾಗಿದೆ ಎನ್ನುವ ವಿಚಾರವನ್ನು ಸದಸ್ಯರ ಗಮನಕ್ಕೆ ತರುತ್ತೇನೆ.

**ಶ್ರೀ ಐವನ್ ಡಿಸೋಜಾ:-** ಮೊದಲು Police Commissioner ರವರನ್ನು suspend ಮಾಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ನಮಗಾಗಿರುವಂಥ ಸಂತೋಷವೇನೆಂದರೆ, ದೇಶದ್ರೋಹಿಗಳನ್ನು ಮಟ್ಟ ಹಾಕಬೇಕು ಎಂದು ನಾವು ವಿರೋಧ ಪಕ್ಷದಲ್ಲಿದ್ದಾಗಲೂ ಹೇಳುತ್ತಾ ಬಂದಿದ್ದೇವೆ. ಈಗ ಪ್ರಥಮ ಬಾರಿಗೆ ವಿರೋಧ ಪಕ್ಷದವರು ನಮಗೆ ಬೆಂಬಲ ಕೊಡುತ್ತಿರುವುದರಿಂದ ನಮಗೆ ತುಂಬಾ ಸಂತೋಷವಾಗಿದೆ. (ಗೊಂದಲ) ಈ ವಿಚಾರವಾಗಿ ಮಾನ್ಯ ಗೃಹ ಸಚಿವರಿಂದ ಸಮರ್ಪಕವಾದ ಉತ್ತರವನ್ನು ಕೊಡಿಸಲಾಗುತ್ತದೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಆಡಳಿತ ಪಕ್ಷದವರು ಸ್ವಲ್ಪ ಸಯಂಮದಿಂದ ನಡೆದುಕೊಳ್ಳಬೇಕು. ನಾವು ಹೇಳುವುದನ್ನು ಕೇಳಬೇಕು. ನಂತರ ಉತ್ತರ ಹೇಳಲಿ. ಅವರು ವಿರೋಧ ಪಕ್ಷದ ನಾಯಕರ ರೀತಿಯಲ್ಲಿ ವರ್ತಿಸುತ್ತಿದ್ದಾರೆ.

(ಗೊಂದಲ)

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಾದ ಮಾನ್ಯ ಐವನ್ ಡಿ'ಸೋಜಾರವರು ಸದನದ ಬಾವಿಗೆ ಬಂದು ಧರಣಿ ನಿಂತು ಪುನಃ ತಮ್ಮ ಸ್ಥಾನಕ್ಕೆ ಹಿಂದಿರುಗಿದರು)**

**ಶ್ರೀ ಎಸ್.ವ್ಹಿ..ಸಂಕನೂರ:-** ವಿರೋಧ ಪಕ್ಷದವರು ನಡೆದುಕೊಳ್ಳುತ್ತಿರುವ ರೀತಿ ಸರಿಯಲ್ಲ. ಶೂನ್ಯವೇಳೆಯಲ್ಲಿ ಧರಣಿ ಮಾಡಲು, ಚರ್ಚೆ ಮಾಡಲು ಅವಕಾಶವಿರುವುದಿಲ್ಲ. ನನ್ನನು ಮಾನ್ಯ ಸಭಾಪತಿಯವರು ಕರೆದಿದ್ದಾರೆ. ಮಾನ್ಯ ಹೊರಟ್ಟಿಯವರು, ಮಾನ್ಯ ಎಸ್.ಆರ್.ಪಾಟೀಲ್‌ರವರು ವಿಷಯಕ್ಕೆ ಸಂಬಂಧಪಟ್ಟ ಹಾಗೆ ಏನು ಹೇಳಬೇಕು ಅದನ್ನು ಹೇಳಿದ್ದಾರೆ. ಚರ್ಚೆ ಮಾಡಲು ಅವಕಾಶವಿಲ್ಲ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ನಿಯಮ 330ಎ ಮತ್ತು ಶೂನ್ಯ ವೇಳೆಯಲ್ಲಿ ಕೇವಲ ವಿಷಯವನ್ನು ಮಂಡಿಸಲಿಕ್ಕೆ ಮಾತ್ರ ಅಧಿಕಾರವಿದೆ.

**(ಗೊಂದಲ)**

**ಸಭಾಪತಿಯವರು:–** ಯಾರು ಮಾತನಾಡಿದರೂ ಕಡತಕ್ಕೆ ಹೋಗುವುದಿಲ್ಲ. ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಇದು ಮಹತ್ವವಾದ ವಿಚಾರ. ಇದರ ಬಗ್ಗೆ ಸ್ಪಷ್ಟವಾದ ತೀರ್ಮಾನವನ್ನು ಸರ್ಕಾರ ಹೇಳಬೇಕು. ದೇಶದ ವಿರುದ್ಧ ಘೋಷಣೆ ಕೂಗಿದವರನ್ನು ಒಂದು ಸಾರಿ arrest ಮಾಡಿದ್ದಾರೆ, ನಂತರ ಅವರನ್ನು ಬಿಡುಗಡೆಗೊಳಿಸಿದ್ದಾರೆ. ನಂತರ ಮತ್ತೊಂದು ಸಾರಿ ಅವರನ್ನು arrest ಮಾಡಿದ್ದಾರೆ. ಕೆಎಲ್ಇ ಸಂಸ್ಥೆ ಪ್ರತಿಷ್ಠಿತವಾದ, ಇಡೀ ದೇಶಕ್ಕೆ ಮಾದರಿಯಾದಂತಹ ವಿದ್ಯಾಸಂಸ್ಥೆ. ಇದಕ್ಕೆ ಕಪ್ಪುಚುಕ್ಕೆ ಬರಬಾರದು. ಪ್ರಾಂಶುಪಾಲರು ಕ್ರಮವನ್ನು ತೆಗೆದುಕೊಂಡಿದ್ದಾರೆ. ಆದರೆ ಪೊಲೀಸ್‌ನವರು arrest ಮಾಡಿ ಮತ್ತೆ ಬಿಡುಗಡೆಗೊಳಿಸಿದ್ದಾರೆ. ಇದರಲ್ಲಿ ಯಾರು ತಪ್ಪು ಮಾಡಿದ್ದಾರೆ ಎನ್ನುವುದನ್ನು ಸರ್ಕಾರ ತಿಳಿದುಕೊಂಡು ತಪ್ಪು ಮಾಡಿದವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕು ಮತ್ತು ಕೆಎಲ್.ಇ ವಿದ್ಯಾಸಂಸ್ಥೆ ಬಗ್ಗೆ ತಪ್ಪು ಮಾಹಿತಿ ಹೋಗಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರು ಹೇಳಿರುವ ವಿಚಾರಕ್ಕೆ ಸರ್ಕಾರ ಬದ್ಧವಾಗಿದೆ. ಮತ್ತು ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಬೀದರ್‌ನಲ್ಲಿ ನಡೆದ ಘಟನೆ ವಿಚಾರದಲ್ಲಿ ಕ್ರಮ ತೆಗೆದುಕೊಂಡಿದ್ದಾರೆ. ಈ ಪ್ರಕರಣದಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎನ್ನುವುದನ್ನು ಹೇಳಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಉತ್ತರವನ್ನು ಯಾವಾಗ ಕೊಡಿಸಲಾಗುತ್ತದೆ ಎನ್ನುವುದನ್ನು ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಇವತ್ತು ಅಥವಾ ನಾಳೆ ಉತ್ತರವನ್ನು ಕೊಡಿಸಲಾಗುತ್ತದೆ. ನಿಯಮ 330ಎರಲ್ಲಿ ಪ್ರಸ್ತಾಪ ಮಾಡಿ ಗಂಟೆಗಟ್ಟಲೆ ಚರ್ಚೆ ಮಾಡಲು ಅವಕಾಶವಿಲ್ಲ.

**ಶ್ರೀಎಸ್.ಆರ್.ಪಾಟೀಲ್:–** ಇದು ಬಹಳ ಗಂಭೀರವಾದ ವಿಚಾರ ಇವತ್ತು ಸಂಜೆಯೊಳಗೆ ಉತ್ತರವನ್ನು ಕೊಡಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರು ಕೇಳಿರುವ ಎಲ್ಲ ವಿಚಾರಗಳ ಬಗ್ಗೆ ಗೃಹ ಸಚಿವರಿಂದ ಉತ್ತರ ಕೊಡಿಸಲು ಸರ್ಕಾರ ಬದ್ಧವಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಆ) ವಿಷಯ:– ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್ ಹಾಗೂ ಖಾಸಗಿ ಅನುದಾನಿತ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿಗೆ ಕಳೆದ ಹಲವು ತಿಂಗಳಿಂದ ವೇತನ ಆಗದಿರುವ ಬಗ್ಗೆ**

**––––––––**

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ನಿಯಮ 330ಎ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಹಾಗೂ ಖಾಸಗಿ ಅನುದಾನಿತ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿಗಳಿಗೆ ಕಳೆದ ಹಲವಾರು ತಿಂಗಳುಗಳಿಂದ ವೇತನ ಬಿಡುಗಡೆಯಾಗದೇ ಆರ್ಥಿಕ ತೊಂದರೆ ಆಗಿರುವ ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ರಾಜ್ಯದ ನೂರಾರು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಾವಿರಾರು ಅರೆಕಾಲಿಕ ಉಪನ್ಯಾಸಕರ ವೇತನವು ಕಳೆದ ಒಂದು ವರ್ಷದಿಂದ ಬಿಡುಗಡೆಯಾಗದೇ ಬಹಳಷ್ಟು ಆರ್ಥಿಕ ತೊಂದರೆಗೆ ಒಳಗಾಗಿದ್ದಾರೆ. ರಜ್ಯದ ಬುತೇಕ ಪಾಲಿಟಿಕ್ನಿಕ್ ಕಾಲೇಜುಗಳು ಅರೆಕಾಲಿಕ ಉಪನ್ಯಾಸಕರಿಂದ ನಡೆಯುತ್ತಿದ್ದು, ಅವರಿಗೆ ನಿಗದಿತ ಸಮಯಕ್ಕೆ ಸರಿಯಾಗಿ ವೇತನ ಬಿಡುಗಡೆ ಮಾಡದೇ ಇರುವುದರಿಂದ ಮಾನಸಿಕ ಹಿಂಸೆಗೆ ಒಳಗಾಗಿ ಪರಿಣಾಮಕಾರಿ ಬೋಧನೆ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ತಕ್ಷಣವೇ ವೇತನ ಬಿಡುಗಡೆ ಮಾಡುವಂತೆ ಕ್ರಮ ಜರುಗಿಸಲು ಉನ್ನತ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ. ಅಲ್ಲದೇ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಡಿ–ದರ್ಜೆ ನೌಕರರು ಕೂಡ ಇದೇ ಸಂಕಷ್ಟ ಎದುರಿಸುತ್ತಿದ್ದಾರೆ. ಆದ್ದರಿಂದ ಅವರ ವೇತನವನ್ನು ಕೂಡ ಬಿಡುಗಡೆ ಮಾಡಲು ಕ್ರಮ ಜರುಗಿಸಲು ಒತ್ತಾಯಿಸುತ್ತೇನೆ. ಅದೇ ರೀತಿ ರಾಜ್ಯದಲ್ಲಿರುವ 23 ಚಿತ್ರಕಲಾ ಮಹಾವಿದ್ಯಾಲಯಗಳ ನೂರಾರು ಸಿಬ್ಬಂದಿಗಳು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿ ಅವರ ಕುಟುಂಬದವರು ಬೀದಿಗೆ ಬರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಚಿತ್ರಕಲಾ ಮಹಾವಿದ್ಯಾಲಯಗಳ ಉಪನ್ಯಾಸಕರ ವೇತನವನ್ನು ತಕ್ಷಣವೇ ಬಿಡುಗಡೆ ಮಾಡುವಂತೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುತ್ತೇನೆ.

**ಶ್ರೀ ರಘು ಆಚಾರ್:–** ಮಾನ್ಯ ಸಭಾಪತಿಯವರೆ, ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿಗಳಿಗೆ ಸಂಬಳ ಬಿಡುಗಡೆ ಮಾಡದೆ ಇರುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಕ್ಕಾಗಿ ಮಾನ್ಯ ಸಂಕನೂರರವರಿಗೆ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಉನ್ನತ ಶಿಕ್ಷಣ ಸಚಿವರು ಸದನದಲ್ಲಿದ್ದಾರೆ ಅವರೇ ಉತ್ತರ ಕೊಡಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರವನ್ನು ತಯಾರು ಮಾಡಿ ಕೊಡುತ್ತಾರೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ಸಿ.ಎನ್. ಅಶ್ವಥ್ ನಾರಾಯಣ (ಉಪಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಇಲಾಖೆ):–** ಮಾನ್ಯ ಸಭಾಪತಿಗಳೆ, ಡಿಪ್ಲೋಮಾ ಮತ್ತು ಚಿತ್ರಕಲಾ ವಿಶ್ವವಿದ್ಯಾಲಯದ ಕಾಲೇಜುಗಳಿಗೆ ತಾಂತ್ರಿಕ ಕಾರಣಗಳಿಂದ ಕೆಲವು ತಿಂಗಳುಗಳಿಂದ ಸಂಬಳವನ್ನು ಬಿಡುಗಡೆ ಮಾಡಿರುವುದಿಲ್ಲ.

**011/18–02–2020/11–20/ಬಿಎಸ್‌ಡಿ–ಎಂಡಿ(ವಿಕೆ)**

(ಗೊಂದಲ)

**ಡಾ॥ ಸಿ.ಎನ್. ಅಶ್ವಥ್ ನಾರಾಯಣ (ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಇಲಾಖೆ):–** ಸಂಬಳವನ್ನು ಕೊಡಲು ತಕ್ಷಣ ಕ್ರಮ ವಹಿಸುತ್ತೇನೆ.

**ಇ) ವಿಷಯಃ ರೈತರು ಬೆಳೆದ ತೊಗರಿ ಬೆಳೆಯನ್ನು 10 ಕ್ವಿಂಟಾಲ್‌ನಿಂದ 20 ಕ್ವಿಂಟಾಲ್ ನವರೆಗೆ ಸರ್ಕಾರ ಖರೀದಿಸುವ ಬಗ್ಗೆ.**

**ಶ್ರೀ ವಿಜಯಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, " ದಿನಾಂಕ 15–02–2020ರಂದು ವಿಜಯವಾಣಿ ಪತ್ರಿಕೆಯಲ್ಲಿ ಪ್ರಕಟಣೆಗೊಂಡಿರುವಂತೆ, ತೊಗರಿ ಖರೀದಿ 10 ಕ್ವಿಂಟಾಲ್‌ನಿಂದ 20 ಕ್ವಿಂಟಾಲ್‌ಗೆ ಹೆಚ್ಚಿಸುವುದಾಗಿ ಸಿ.ಎಂ ಘೋಷಣೆ ಮಾಡಿ ಒಂದು ವಾರವಾದರೂ, ಘೋಷಣೆಗೆ ಮಾತ್ರ ಸೀಮಿತವಾಗಿದೆ. ತೊಗರಿ ಖರೀದಿ ಮಿತಿ 20 ಕ್ವಿಂಟಾಲ್‌ಗೆ ಹೆಚ್ಚಾಗಿಲ್ಲ. ಆದ್ದರಿಂದ ರೈತರು ಕಂಗಾಲಾಗಿದ್ದಾರೆ. ಆದಷ್ಟು ಬೇಗ ತೊಗರಿ ಖರೀದಿಯನ್ನು 10 ಕ್ವಿಂಟಾಲ್‌ನಿಂದ 20 ಕ್ವಿಂಟಾಲಿಗೆ ಹೆಚ್ಚಿಸಿ ತಕ್ಷಣದಲ್ಲಿ ಕಾರ್ಯರೂಪಕ್ಕೆ ತಂದು ಕಲ್ಯಾಣ ಕರ್ನಾಟಕ ಭಾಗದ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರುತ್ತೇನೆ.

ಹಾಗೆಯೇ ಬೀದರ್ ಜಿಲ್ಲೆಯಲ್ಲಿ 11 ಪಿ.ಕೆ.ಪಿ.ಎಸ್. ಗಳಲ್ಲಿ ತೊಗರಿ ಕೇಂದ್ರ ಸ್ಥಾಪನೆಗೆ ಆದೇಶ ಪ್ರತಿ ನೀಡಿದ್ದರೂ ನೋಂದಣಿ ಮಾಡುವ ಪ್ರಕ್ರಿಯೆ ಇನ್ನೂ ಚಲನೆಯಾಗಿಲ್ಲ. ಆದ್ದರಿಂದ ರೈತರು ತೊಗರಿ ಖರೀದಿ ನೋಂದಣಿಯಾಗದೇ ಸಂಕಷ್ಟ ಅನುಭವಿಸುತ್ತಿದ್ದಾರೆ. ಆದ್ದರಿಂದ ಈ ಭಾಗದ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು" ಸದನದ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ವಿಜಯಸಿಂಗ್‌ರವರು 10 ಕ್ವಿಂಟಾಲ್‌ನಿಂದ 20 ಕ್ವಿಂಟಾಲ್‌ವರೆಗೆ ತೊಗರಿಯನ್ನು ಖರೀದಿಸಬೇಕೆಂದು ಪ್ರಸ್ತಾಪವನ್ನು ಮಂಡಿಸಿದ್ದಾರೆ. ಇದರ ಬಗ್ಗೆ ಮುಖ್ಯಮಂತ್ರಿಯವರಿಂದ ಉತ್ತರವನ್ನು ಪಡೆದು ಮಂಡಿಸಲಾಗುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ವಿಜಯಸಿಂಗ್ ರವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಕ್ಕಾಗಿ ಅವರಿಗೆ ಧನ್ಯವಾದಗಳು. ಏಕೆಂದರೆ ಕಳೆದ ಎರಡು ತಿಂಗಳುಗಳಿಂದ ನೋಂದಣಿ ಮಾಡಬೇಕೆಂದು ಕೇವಲ ನೋಂದಣಿ ಮಾಡಿಕೊಳ್ಳುತ್ತಿದ್ದಾರೆ. ಮೊನ್ನೆ ರೈತರು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಮನವಿ ಮಾಡಿದಾಗ 10 ಕ್ವಿಂಟಾಲ್‌ನಿಂದ 20 ಕ್ವಿಂಟಾಲ್‌ವರೆಗೂ ತೊಗರಿ ಖರೀದಿ ಮಾಡುತ್ತೇವೆಂದು ಬೀದರ್‌ನಲ್ಲಿ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಆದರೆ ಇಷ್ಟು ದಿವಸ ಆದರೂ ಯಾವುದೇ ಆದೇಶ ಹೊರಬಿದ್ದಿಲ್ಲ. ಖರೀದಿ ಕೇಂದ್ರಗಳಲ್ಲಿ ಖಾಲಿ ಚೀಲಗಳು ಬಂದು ಒಂದು ತಿಂಗಳು ಕಳೆದಿದೆ. ತೊಗರಿ ಬೆಳೆ ಬಂದು ಎರಡೂವರೆ ತಿಂಗಳು ಕಳೆದಿದ್ದು, ರೈತರು ಗೊಬ್ಬರ, ಕ್ರಿಮಿನಾಶಕಗಳನ್ನು ಅಂಗಡಿಯಿಂದ ಸಾಲ ತಂದಿರುವುದರಿಂದ, ಅವರಿಗೆ ಹಣ ಕೊಡಬೇಕಾಗಿರುವುದರಿಂದ ಬೇರೆಯವರಿಗೆ ತೊಗರಿ ಬೆಳೆಯನ್ನು ಮಾರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸುಮ್ಮನೆ ಖರೀದಿಸುತ್ತೇವೆ ಎಂದು ಹೇಳುವ ಬದಲು ಖರೀದಿಸಲು ಸಾಧ್ಯವಾಗದಿದ್ದರೆ ಮುಂದಿನ ಮಾರ್ಚ್‌ನಲ್ಲಿ ಖರೀದಿಸುತ್ತೇವೆ ಎಂದು ಹೇಳಲಿ. ಈಗ ಬೆಳೆ ಬಂದು ಮೂರು ತಿಂಗಳು ಕಳೆದಿದೆ. ಇದು ಬಹಳ ಗಂಭೀರವಾದ ವಿಚಾರವಾಗಿದೆ.

**ಶ್ರೀ ಎನ್.ಎಸ್. ಬೋಸರಾಜು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಖರೀದಿ ಮಾಡುತ್ತಾರೋ ಅಥವಾ ಇಲ್ಲವೋ ಎಂದು ಸ್ಪಷ್ಟವಾಗಿ ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ತೊಗರಿ ಖರೀದಿ ವಿಚಾರವಾಗಿ ಮಾನ್ಯ ಸದಸ್ಯರಿಗೆ ಸಮಾಧಾನವಾಗುವ ರೀತಿಯಲ್ಲಿ ಸರ್ಕಾರದ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ನಾಳೆಯೇ ಖರೀದಿ ಕೇಂದ್ರಗಳನ್ನು ತೆರೆಯಲಿ.

**ಶ್ರೀ ಎಸ್.ಆರ್. ಪಾಟೀಲ್:–** ಸರ್ಕಾರದಿಂದ ಸಮಾಧಾನಕರವಾದ ಉತ್ತರ ಬರಬೇಕು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ವಿಲೇಜ್ ಅಕೌಂಟೆಂಟ್ ಹೊಲಕ್ಕೆ ಹೋಗಿ ದೃಢೀಕರಣ ಮಾಡಿಕೊಡಬೇಕು. ಇವರು ಖರೀದಿ ಮಾಡುತ್ತಾರೋ, ಇಲ್ಲವೋ ಎಂದು ಹೇಳಲಿ. ದಿನ ಒಂದೊಂದು ಕಾನೂನು ಬೇಡ. ಮೂರು ತಿಂಗಳು ಆಗಿದೆ. ಯಾವುದಾದರೊಂದನ್ನು ಹೇಳಬೇಕು. ಸಂಬಳ ಕೊಡಲು ಹಣವಿಲ್ಲ. ತೊಗರಿ ಖರೀದಿಸಲು ಹಣವಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಭಾಷಣ ಮಾಡುತ್ತಿದ್ದಾರೆ. ಈಗಾಗಲೇ ಸಮಾಧಾನಕರ ಉತ್ತರ ಕೊಡುವ ಬಗ್ಗೆ ನಾನು ಹೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**6. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ**

**ವಿಷಯಃ– ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ ಚರ್ಚೆ**

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 59ರಡಿಯಲ್ಲಿ ನಾನೊಂದು ನಿಲುವಳಿ ಸೂಚನೆಯನ್ನು ನೀಡಿದ್ದೇನೆ. ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿದ್ದು, ಇದರಿಂದ ರಾಜ್ಯದ ಅಭಿವೃದ್ಧಿಗಳು ಕುಂಠಿತವಾಗಿವೆ. ಇದು ಬಹಳ ಮಹತ್ವದ ವಿಚಾರವಾಗಿರುವುದರಿಂದ ಎಲ್ಲಾ ಕಾರ್ಯ–ಕಲಾಪಗಳನ್ನು ಬದಿಗೊತ್ತಿ, ಈ ವಿಚಾರವನ್ನು ಚರ್ಚಿಸುವುದು ಬಹಳ ಅವಶ್ಯಕವಾಗಿದೆ. ಏಕೆಂದರೆ ಸರ್ಕಾರವು ಸ್ಟ್ರಕ್‌ಡೌನ್ ಆಗಿದೆ. ಇಡೀ ರಾಜ್ಯದಲ್ಲಿ ಕಾನೂನುರಹಿತವಾಗಿದ್ದು, ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಾವೇ ನಿಯಮಾವಳಿಗಳನ್ನು ರೂಪಿಸಿಕೊಂಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯ ಪ್ರಸ್ತಾಪಕ್ಕೆ ಅನುಮತಿ ಕೇಳುತ್ತಿದ್ದಾರೆ.

**ಸಭಾಪತಿಯವರುಃ–** ನೀವು ಇಲ್ಲಿದ್ದಾಗ ಮಾಡಿದ್ದನ್ನು ಈಗ ಅವರು ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಟಿ.ಎ. ಶರವಣಃ–** ಮಾನ್ಯ ಸಭಾಪತಿಯವರೇ, ತಾವು ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ನಿಯಮ ಏನು ಹೇಳುತ್ತದೆ?

**ಶ್ರೀ ಎಸ್.ಆರ್. ಪಾಟೀಲ್ಃ–** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಇನಿಷಿಯೇಷನ್ ಮಾಡಲು ತಾವು ಅವಕಾಶ ಕೊಟ್ಟಿದ್ದೀರಿ.

**(ಗೊಂದಲ)**

**ಸಭಾಪತಿಯವರು:–** ಅವರು ವಿಚಾರವನ್ನು ಪ್ರಸ್ತಾಪ ಮಾಡಲು ಕೇಳಿದ್ದಾರೆ. ಅನುಮತಿಯ ಬಗ್ಗೆ ನಾನು ನಂತರ ಹೇಳುತ್ತೇನೆ. ಅವರು 10 ನಿಮಿಷ ಮಾತನಾಡಲಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ " ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ" ಎನ್ನುವಂತೆ ಅವರು ಹಿಂದೆ ಇಲ್ಲಿ ಕುಳಿತು ಏನು ಮಾಡಿದ್ದರೋ, ಅದರ ಬಗ್ಗೆ ತಾವು ಹೇಳಿದ್ದೀರಿ. ಸಾರ್ವಜನಿಕರ ಮಹತ್ವದ ವಿಷಯ ಎಂದು ಹೇಳುತ್ತಿದ್ದಾರೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ನಾವು ಹೇಳುವುದನ್ನು ಸರ್ಕಾರ ಕೇಳುವುದಕ್ಕೆ ತಯಾರಿಲ್ಲ

**(ಗೊಂದಲ)**

**(12)/18.02.2020/11–30/ಹೆಚ್‌ವಿ–ಎಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿರುವಂತಹ ನಿಯಮ ಸರಿ ಇಲ್ಲವೆಂದು ನಾನು ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯ ಬಗ್ಗೆ ಪೂರ್ವಭಾವಿ ಪ್ರಸ್ತಾವ ಮಾಡುವುದಕ್ಕೆ ತಾವು ನನಗೆ ಅವಕಾಶವನ್ನು ಕೊಟ್ಟಿದ್ದೀರಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ನಾನು ವ್ಯಕ್ತಿಯ ಮೇಲೆ ಮಾತನಾಡುತ್ತಿಲ್ಲ, ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ತಾವು 'ವಿರೋಧ ಪಕ್ಷದ ನಾಯಕರೇ ಮಾತನಾಡಿ' ಎಂದು ಹೇಳಿ, ನನ್ನನ್ನು ಕರೆದಿದ್ದೀರಿ, ಮಧ್ಯದಲ್ಲಿ ಮಾನ್ಯ ಸಭಾ ನಾಯಕರು ಎದ್ದು ಮಾತನಾಡುತ್ತಿದ್ದಾರೆ. ನಿಲುವಳಿ ಸೂಚನೆಯ ಬಗ್ಗೆ ಪೂರ್ವಭಾವಿ ಪ್ರಸ್ತಾವನೆ ಮಾಡುವುದಕ್ಕೆ ತಾವು ನನಗೆ ಅನುಮತಿಯನ್ನು ಕೊಟ್ಟಿದ್ದೀರಿ. ನಾನು ಮಾತನಾಡಿ ಮುಗಿಸಿದ ಮೇಲೆ ಅವರು ಮಾತನಾಡಲಿ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ತಾವು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ತಮ್ಮ ನಿರ್ದೇಶನದಂತೆ ಅವರು ಮಾತನಾಡಲು ಎದ್ದು ನಿಂತಿದ್ದಾರೆ. ಅವರು ಮಾತನಾಡಲಿ, ಆಮೇಲೆ ಸರ್ಕಾರ ತನ್ನ ಅಭಿಪ್ರಾಯವನ್ನು ಹೇಳಲಿ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲು ತಾವು ಅನುಮತಿಯನ್ನು ಕೊಟ್ಟೇ ಇಲ್ಲ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಕಳೆದ 4–5 ವರ್ಷಗಳ ಕಾಲ ಅವರು ಈ ಭಾಗದಲ್ಲಿ ಕುಳಿತುಕೊಂಡು ಏನು ಮಾಡಿದ್ದರು, ಅದನ್ನೇ ಈಗ ನಾವು ಮಾಡುತ್ತಿದ್ದೇವೆ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, you are the custodian of the House. ತಮಗೆ ಎಲ್ಲ ಗೊತ್ತಿದೆ. ಇದು ಸರಿ ಇದೆಯೋ ತಪ್ಪಾಗಿದೆಯೋ ಅಥವಾ ಈ ವಿಚಾರದ ಮೇಲೆ ಚರ್ಚೆಗೆ ಅವಕಾಶವನ್ನು ಕೊಡಬೇಕೋ–ಬೇಡವೋ ಎನ್ನುವುದೆಲ್ಲ ತಮಗೆ ಗೊತ್ತಿದೆ. ಅದೆಲ್ಲದರ ಆಧಾರದ ಮೇಲೆ ತಾವು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶವನ್ನು ನೀಡಿದ್ದೀರಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ ವಿರೋಧ ಪಕ್ಷದ ನಾಯಕರು ಎದ್ದು ನಿಂತು, ‘ಇಂತಹ ವಿಚಾರದ ಮೇಲೆ ನಿಲುವಳಿ ಸೂಚನೆಯನ್ನು ಮಂಡಿಸುತ್ತಿದ್ದೇವೆ, ಅದಕ್ಕೆ ತಾವು ಅವಕಾಶವನ್ನು ಕೊಡಿ’ ಎಂದು ಕೇಳಿಕೊಳ್ಳುತ್ತಾರೆ. ಆಗ ಮಾನ್ಯ ಸಭಾಪತಿಯವರು ‘ಐದು ನಿಮಿಷಗಳಲ್ಲಿ ಪ್ರಸ್ತಾಪ ಮಾಡಿ’ ಎಂದು ಹೇಳುವುದು ರೂಢಿಯಲ್ಲಿದೆ. ಆದರೆ, ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿರುವಂತಹ ನಿಯಮ ಸರಿ ಇಲ್ಲವೆಂದು ಹೇಳುತ್ತಿದ್ದೇನೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಅಧ್ಯಾಯ–8ರಲ್ಲಿ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ನಿಲುವಳಿ ಸೂಚನೆ ತರುವುದು ಎನ್ನುವ ಶಿರೋನಾಮೆಯಡಿಯಲ್ಲಿ ನಿಯಮ 61(iii)ರಲ್ಲಿ ಉಲ್ಲೇಖ ಮಾಡಿರುವಂತೆ ‘ನಿಲುವಳಿ ಸೂಚನೆಯು ಇತ್ತೀಚೆಗೆ ನಡೆದ ನಿರ್ದಿಷ್ಟ ವಿಷಯಕ್ಕಷ್ಟೇ ಸೀಮಿತವಾಗಿರಬೇಕು’ ಎಂದು ಇದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿಯನ್ನು ನೀಡಿದರೆ ಒಂದು ಸಾವಿರ ಪ್ರಕರಣಗಳನ್ನು ನಾನು ಉಲ್ಲೇಖ ಮಾಡಬಹುದು.

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಚರ್ಚೆ ನಡೆಯುವುದು ತಪ್ಪಲ್ಲ; ಆದರೆ, ನಿಯಮಗಳಲ್ಲಿ 'ಒಂದು ನಿರ್ದಿಷ್ಟ ಪ್ರಕರಣದ ಬಗ್ಗೆ ಚರ್ಚೆ ನಡೆಸಬೇಕು' ಎಂದಿದೆ. ಅವರು ಕೊಟ್ಟಿರುವ ನಿಲುವಳಿ ಸೂಚನೆಯಲ್ಲಿ ನಿರ್ದಿಷ್ಟ ಪ್ರಕರಣದ ಬಗ್ಗೆ ಉಲ್ಲೇಖ ಮಾಡಿಯೇ ಇಲ್ಲ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಸನ್ಮಾನ್ಯ ಸಭಾಪತಿಯವರೇ, ತಾವು ಅನುಮತಿ ನೀಡದೇ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದಿಲ್ಲ. ಮಾನ್ಯ ಸಭಾನಾಯಕರು ಈ ರೀತಿ ತಮ್ಮನ್ನು ಪ್ರಶ್ನೆ ಮಾಡುವುದು ಸರಿಯಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ತಾವು ನನಗೆ ಪೂರ್ವಭಾವಿ ಪ್ರಸ್ತಾವ ಮಾಡಲು ಅವಕಾಶವನ್ನು ನೀಡಿದ್ದೀರಿ. ನಾನು ಐದು ನಿಮಿಷಗಳಿಗೂ ಕಡಿಮೆ ಅವಧಿಯಲ್ಲಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ನಾನು ನಿಲುವಳಿ ಸೂಚನೆಯ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡುತ್ತೇನೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಅವರು ಅವಕಾಶ ನೀಡಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಪೂರ್ವಭಾವಿ ಪ್ರಸ್ತಾವ ಮಾಡುವುದಕ್ಕೆ ತಾವು ಅನುಮತಿಯನ್ನು ಕೊಟ್ಟಿಲ್ಲ. ಅವರು ತಂದಿರುವಂತಹ ವಿಚಾರ ನಿಯಮಬದ್ಧವಾಗಿಲ್ಲ ಎನ್ನುವ ಅಂಶವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ.

**(ಗೊಂದಲ)**

**Sri S.R. PATIL:** I really wonder about our Leader of the House.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಸನ್ಮಾನ್ಯ ಸಭಾಪತಿಯವರೇ, ತಾವು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶವನ್ನು ನೀಡಿದ್ದೀರಿ, ಅವರು ಅದನ್ನು ಪ್ರಶ್ನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯ ಬಗ್ಗೆ ಪ್ರಾಸ್ತಾವಿಕವಾಗಿ ಪ್ರಸ್ತಾವ ಮಾಡಿದ ಮೇಲೆ ಸರ್ಕಾರದಿಂದ ಉತ್ತರವನ್ನು ಹೇಳಲು ಅವರಿಗೆ ಅವಕಾಶವಿದೆ. You have got a right. You will have ample opportunity. ನಾನು ಐದು ನಿಮಿಷಗಳಿಗಿಂತ ಕಡಿಮೆ ಅವಧಿಯಲ್ಲಿ ಮಾಡನಾಡುತ್ತೇನೆ, ನಾನು initiation ಅಷ್ಟೇ ಮಾಡುತ್ತೇನೆ.

(ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಈಗ ವಿರೋಧ ಪಕ್ಷದಲ್ಲಿಲ್ಲ, ಸರ್ಕಾರದಲ್ಲಿದ್ದಾರೆ. ನಾವು ಹೇಳುವುದನ್ನು ಕೇಳುವುದು ಅವರ ಕೆಲಸ, ಹೇಳುವುದು ನಮ್ಮ ಕೆಲಸ. ನಾವು ಹೇಳುವಂತಹ ಮಾತುಗಳನ್ನು ಕೇಳುವಂತಹ ಸೌಜನ್ಯವೇ ಅವರಿಗಿಲ್ಲವೆಂದರೆ ಕಷ್ಟವಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿಲುವಳಿ ಸೂಚನೆಯನ್ನು ತಂದಿದ್ದಾರೆ. ಐದು ನಿಮಿಷಗಳಲ್ಲಿ ಅವರು ತಮ್ಮ ಮಾತುಗಳನ್ನು ಮುಗಿಸಿಯೇ ಬಿಡುತ್ತಿದ್ದರು. ಈ ಸದನದ ಸಮಯ ವ್ಯರ್ಥವಾಗಬಾರದು ಎನ್ನುವುದು ನಮ್ಮ ಕಳಕಳಿಯಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ತಾವು ಅವಕಾಶವನ್ನು ನೀಡಿದ್ದೀರಿ. ಅಧಿಕಾರದಲ್ಲಿರುವವರು ಇನ್ನೂ ವಿರೋಧ ಪಕ್ಷದಲ್ಲಿರುವಂತೆ ವರ್ತಿಸುವುದು ಸರಿಯಲ್ಲ. You are in the ruling party. ನಮ್ಮ ಕೆಲಸ ಹೇಳುವುದು, ಅವರ ಕೆಲಸ ಕೇಳುವುದು.

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಅಧ್ಯಾಯ–8ರಲ್ಲಿ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ನಿಲುವಳಿ ಸೂಚನೆ ತರುವುದು ಎನ್ನುವ ಶಿರೋನಾಮೆಯಡಿಯಲ್ಲಿ ನಿಯಮ 59ರಲ್ಲಿ ಉಲ್ಲೇಖ ಮಾಡಿರುವಂತೆ "ಈ ನಿಯಮಗಳ ಉಪಬಂಧಗಳಿಗೊಳಪಟ್ಟು ಸಾರ್ವಜನಿಕವಾಗಿ ಅತ್ಯಂತ ಮಹತ್ವವುಳ್ಳ ಸಂವಿಧಾನ ಮತ್ತು ಕಾನೂನಿನಲ್ಲಿ ನಿರ್ದೇಶಿಸಲಾಗಿರುವ ಕರ್ತವ್ಯಗಳನ್ನು ಜಾರಿಗೊಳಿಸಲು ಸರ್ಕಾರದ ವೈಫಲ್ಯತೆ ಕಂಡು ಬಂದಲ್ಲಿ ಅಂತಹ ಒಂದು ನಿರ್ದಿಷ್ಟ ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ಸಭಾಪತಿಯವರ ಅನುಮತಿಯೊಂದಿಗೆ ಸದನದ ಸದನದ ಕಾರ್ಯಕಲಾಪಗಳನ್ನು ನಿಲುವಳಿ ಮಾಡುವ ಬಗ್ಗೆ ಸೂಚನೆಯನ್ನು ಪ್ರಶ್ನೋತ್ತರ ಮತ್ತು ಶೂನ್ಯವೇಳೆಯ ತರುವಾಯ ತರಬಹುದು" ಎಂದು ಇದೆ. ಈ ದಿನ ಪ್ರಶ್ನೋತ್ತರ ಅವಧಿ ಇಲ್ಲ. ವಿಶೇಷ ಪ್ರಸ್ತಾವನೆಗಳು ಮಾತ್ರ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ರಾಜ್ಯದಲ್ಲಿನ ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟಂತೆ ನಿರ್ದಿಷ್ಟವಾದ ಪ್ರಕರಣಗಳನ್ನು ನಿಲುವಳಿ ಸೂಚನೆಯಡಿಯಲ್ಲಿ ತಂದಿದ್ದಾರೆ. ತಾವು ಪೂರ್ವಭಾವಿ ಪ್ರಸ್ತಾವ ಮಾಡುವುದಕ್ಕೆ ಅವರಿಗೆ ಅನುಮತಿಯನ್ನು ನೀಡಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ ಅದು ಸರಿಯೇ ತಪ್ಪೇ ಎನ್ನುವುದರ ಬಗ್ಗೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸರ್ಕಾರ ತನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ಸಂಪೂರ್ಣವಾದ ಅಧಿಕಾರವಿದೆ. ನಿಯಮಗಳನ್ನು ನಾವು ಪಾಲನೆ ಮಾಡೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ರಚನಾತ್ಮಕವಾದ ಚರ್ಚೆಗಳು ಸದನದಲ್ಲಿ ಆಗಬೇಕೆನ್ನುವುದರ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಆದರೆ, ಅಧ್ಯಾಯ–8ರಲ್ಲಿ 'ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ನಿಲುವಳಿ ಸೂಚನೆ' ತರುವುದು ಎನ್ನುವ ಶಿರೋನಾಮೆಯಡಿಯಲ್ಲಿ ನಿಯಮ 61(iii)ರಲ್ಲಿ ಉಲ್ಲೇಖ ಮಾಡಿರುವಂತೆ 'ನಿಲುವಳಿ ಸೂಚನೆಯು ಇತ್ತೀಚೆಗೆ ನಡೆದ ನಿರ್ದಿಷ್ಟ ವಿಷಯಕ್ಕಷ್ಟೇ ಸೀಮಿತವಾಗಿರಬೇಕು' ಎಂದು ಇದೆ. ಆದ್ದರಿಂದ ಅವರು ಉಲ್ಲೇಖ ಮಾಡುತ್ತಿರುವ ವಿಚಾರದಲ್ಲಿ ನಿರ್ದಿಷ್ಟ ಪ್ರಕರಣಗಳು ಇಲ್ಲವೆಂದು ನಾನು ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯನ್ನು ತಮಗೆ ಕೊಟ್ಟಿದ್ದಾರೆ. ತಾವು ಅದನ್ನು ಪರಿಶೀಲನೆ ಮಾಡಿ, ಅದರ ಬಗ್ಗೆ ಪೂರ್ವಭಾವಿ ಪ್ರಸ್ತಾವನೆ ಮಾಡಲು ಅವರಿಗೆ ಅವಕಾಶವನ್ನು ನೀಡಿದ್ದೀರಿ. ಆ ನಿಲುವಳಿ ಸೂಚನೆ ಸರಿಯಾಗಿರುವುದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ. ತಾವು ಅನುಮತಿ ಕೊಟ್ಟಿರುವುದಕ್ಕಾಗಿ ಅವರು ಮಾತನಾಡಲು ಎದ್ದು ನಿಂತಿದ್ದಾರೆ. ಅವರು ಮಾತನಾಡಿದ ನಂತರ ಸರ್ಕಾರ ತನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶವಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ನಿರ್ದಿಷ್ಟವಾದ ಪ್ರಕರಣಗಳ ಬಗ್ಗೆ ಅವರು ಉಲ್ಲೇಖ ಮಾಡಿಲ್ಲವೆಂದು ನಾನು ಹೇಳುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ವಿರೋಧ ಪಕ್ಷದಲ್ಲಿ ಇದಂತಹ ಸಂದರ್ಭದಲ್ಲಿ ಒಂದು ರೀತಿ ಮಾತನಾಡುವುದು, ಆಡಳಿತ ಪಕ್ಷಕ್ಕೆ ಹೋದ ಮೇಲೆ ಮತ್ತೊಂದು ರೀತಿ ಮಾತನಾಡುವುದು ಸರಿಯಲ್ಲ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಸಭಾನಾಯಕರಂತಹ ಉನ್ನತ ಸ್ಥಾನದಲ್ಲಿದ್ದಾರೆ. ಅಂತಹ ಉನ್ನತ ಸ್ಥಾನದಲ್ಲಿರುವಾಗ, ನಾವು ಹೇಳುವುದನ್ನು ಕೇಳುವಂತಹ ಸಂಯಮ ಅವರಿಗೆ ಇರಬೇಕಾಗುತ್ತದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರ ಬಗ್ಗೆ ನಮಗೆ ಅಪಾರವಾದ ಗೌರವವಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಅಧ್ಯಾಯ–8ರಲ್ಲಿ 'ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ನಿಲುವಳಿ ಸೂಚನೆ ತರುವುದು' ಎನ್ನುವ ಶಿರೋನಾಮೆಯಡಿಯಲ್ಲಿ ನಿಯಮ 59ರಲ್ಲಿ ಉಲ್ಲೇಖ ಮಾಡಿರುವಂತೆ "ಈ ನಿಯಮಗಳ ಉಪಬಂಧಗಳಿಗೊಳಪಟ್ಟು ಸಾರ್ವಜನಿಕವಾಗಿ ಅತ್ಯಂತ ಮಹತ್ವವುಳ್ಳ ಸಂವಿಧಾನ ಮತ್ತು ಕಾನೂನಿನಲ್ಲಿ ನಿರ್ದೇಶಿಸಲಾಗಿರುವ ಕರ್ತವ್ಯಗಳನ್ನು ಜಾರಿಗೊಳಿಸಲು ಸರ್ಕಾರದ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವೈಫಲ್ಯತೆ ಕಂಡು ಬಂದಲ್ಲಿ ಅಂತಹ ಒಂದು ನಿರ್ದಿಷ್ಟ ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ಸಭಾಪತಿಯವರ ಅನುಮತಿಯೊಂದಿಗೆ ಸದನದ ಕಾರ್ಯಕಲಾಪಗಳನ್ನು ನಿಲುವಳಿ ಮಾಡುವ ಬಗ್ಗೆ ಸೂಚನೆಯನ್ನು ಪ್ರಶ್ನೋತ್ತರ ಮತ್ತು ಶೂನ್ಯವೇಳೆಯ ತರುವಾಯ ತರಬಹುದು" ಎಂದು ಇದೆ.

**ಸಭಾಪತಿಯವರು:–** ಪೂರ್ವಭಾವಿ ಪ್ರಸ್ತಾವ ಮಾಡುವುದಕ್ಕೆ ತಮಗೆ ನಾನು ಅನುಮತಿಯನ್ನು ನೀಡಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರ ಗಮನಕ್ಕೆ ಕೆಲವು ಅಂಶಗಳನ್ನು ತರಲು ನಿಯಮ 59ನ್ನು ಸದನದ ಗಮನಕ್ಕೆ ತಂದಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ತಾವು ಏನು ಹೇಳುತ್ತೀರಿ ಅದಕ್ಕೆ ನಮ್ಮ ಒಪ್ಪಿಗೆ ಇದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ Citizenship Amendment Act, NRC ತಂದಿರುವುದನ್ನು ವಿರೋಧಿಸಿ ಕರ್ನಾಟಕ ರಾಜ್ಯದ ಉದ್ದಗಲಕ್ಕೂ ಪ್ರತಿಭಟನೆಗಳು ನಡೆಯುತ್ತಿವೆ. ಸಿಆರ್‌ಪಿಸಿ ಸೆಕ್ಷನ್ 144ನ್ನು ಜಾರಿ ಮಾಡಿದ್ದಾರೆ. ಸಿಆರ್‌ಪಿಸಿ ಸೆಕ್ಷನ್ 144ರ ಬಗ್ಗೆ ನಮ್ಮ ರಾಜ್ಯದ ಹೈಕೋರ್ಟ್‌ನಲ್ಲಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಪಟ್ಟಂತೆ ಹೈಕೋರ್ಟ್ ತನ್ನ ತೀರ್ಪನ್ನು ನೀಡಿದೆ. It is the right of a citizen. They can protest. It is a democratic right. ರಾಷ್ಟ್ರಪಿತ ಮಹಾತ್ಮ ಗಾಂಧಿಜಿಯವರು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಕೊಡಿಸಿದಂತಹ ಸಂದರ್ಭದಲ್ಲಿಯೇ ಈ ಹಕ್ಕನ್ನು ನಮಗೆ ಕೊಡಿಸಿದ್ದಾರೆ. Therefore, they will have a right to protest. ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯ, ಬಾಂಬೆ ಉಚ್ಚ ನ್ಯಾಯಾಲಯ ಮತ್ತು ದೇಶದ ಸುಪ್ರೀಂ ಕೋರ್ಟ್‌ಗಳು ಸೆಕ್ಷನ್ 144.........

**ಶ್ರೀ ಲಹರ್‌ಸಿಂಗ್ ಸಿರೋಯಾ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಎಲ್.ಭೋಜೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಆ ಭಾಗದಲ್ಲಿ ಕುಳಿತುಕೊಳ್ಳುವುದಕ್ಕೆ ಕಷ್ಟವಾದರೆ, ಈ ಕಡೆ ಬಂದು ಕುಳಿತುಕೊಳ್ಳಲಿ.

**(ಗೊಂದಲ)**

**ಸಭಾಪತಿಯವರುಃ–** ಮಾನ್ಯ ಲಹರ್‌ಸಿಂಗ್ ಸಿರೋಯಾರವರೇ, ನಾನು ತಮಗೆ ಮಾತನಾಡಲು ಅವಕಾಶವನ್ನು ನೀಡಿಲ್ಲ. ತಾವು ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ. ಅವರು ಮಾತನಾಡಿರುವುದು ಯಾವುದೂ ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಮಾನ್ಯ ಲಹರ್‌ಸಿಂಗ್‌ರವರು ಮಾತನಾಡಿರುವುದು ಯಾವುದೂ ಕಡತಕ್ಕೆ ಹೋಗಬಾರದೆಂದು ಸೂಚಿಸಿದರು.)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಎಷ್ಟು ರಾಜ್ಯಗಳಿವೆಯೋ ಆ ರಾಜ್ಯಗಳ ಪೈಕಿ ಶಾಂತಿಪ್ರಿಯ ರಾಜ್ಯವೆಂದರೆ ಕರ್ನಾಟಕ ರಾಜ್ಯವಾಗಿದೆ. Peace-loving citizens are in Karnataka. ಇಡೀ ಭಾರತ ದೇಶದಲ್ಲಿ ಕಾಯಿದೆ ಮತ್ತು ಕಾನೂನಿಗೆ ಬಹಳ ಗೌರವ ಕೊಡುವಂತಹ ಜನರು ಯಾವುದಾದರೊಂದು ಭಾಗದಲ್ಲಿದ್ದಾರೆಂದರೆ, ಅದು ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರ. ಕನ್ನಡ ನಾಡಿನ ಜನರು ಶಾಂತಿಪ್ರಿಯರು ಮತ್ತು ಸರ್ವಧರ್ಮ ಸಹಿಷ್ಣುತರು. ನಾವು ಪರಸ್ಪರ ಗೌರವದಿಂದ ಸೌಹಾರ್ದಯುತವಾಗಿ ಭಾತೃತ್ವ ಪ್ರೇಮದಿಂದ ಒಂದೇ ತಾಯಿಯ ಮಕ್ಕಳು, ಒಂದೇ ರಕ್ತವನ್ನು ಹಂಚಿಕೊಂಡು ಹುಟ್ಟಿದ ಸಹೋದರ–ಸಹೋದರಿಯರು ಎನ್ನುವ ಭಾವನೆಯಿಂದ ಬದುಕಿ ಇಡೀ ಭಾರತ ದೇಶದಲ್ಲಿ ಕರ್ನಾಟಕ ರಾಜ್ಯಕ್ಕೆ ಹೆಸರು ತಂದುಕೊಟ್ಟಿದ್ದೇವೆ.

**(13) 18.2.2020 11.40 ಪಿಕೆ:ಎಕೆ**

**ಶ್ರೀ ಎಸ್.ಆರ್.ಪಾಟೀಲ್(ಮುಂದು):–**

ನಾನು ಈಗಾಗಲೇ ಹೇಳಿದ ಹಾಗೆ, ಸೆಕ್ಷನ್ 144 ಜಾರಿ ಮಾಡಿದ್ದು ತಪ್ಪು ಎನ್ನುವುದನ್ನು ನಮ್ಮ ಹೈಕೋರ್ಟ್‌ನವರು ಹೇಳಿದ್ದಾರೆ; ಬಾಂಬೆ ಹೈಕೋರ್ಟ್‌ನ ಡಿವಿಷನ್ ಬೆಂಚ್‌ನವರು ಹೇಳಿದ್ದಾರೆ; ದೇಶದ ಸರ್ವೋಚ್ಛ ನ್ಯಾಯಾಲಯ ಅಂದರೆ the Apex Court of this land has told; ಆದಾಗ್ಯೂ ಹೀಗೆ ಮಾಡಿದ್ದಾರೆ. ಮಂಗಳೂರು ಗೋಲಿ ಬಾರ್ ಪ್ರಕರಣದಂತಹ ಅನೇಕ ಪ್ರಕರಣಗಳ ಉದಾಹರಣೆಗಳು ಸಿಗುತ್ತವೆ. ಬೀದರ್‌ನ ಶಾಹಿನ್ ಶಾಲೆ ಪ್ರಕರಣವೂ ಒಂದು. ಮೈಸೂರಿನ ಮಾನಸ ಗಂಗೋತ್ರಿಯ, University Research Scholars Association ನ ಅಧ್ಯಕ್ಷರಾದಂಥ ಶ್ರೀ ಮರಿದೇವಯ್ಯ ಇವರನ್ನು ದೇಶದ್ರೋಹದ ಆರೋಪ ಹೊರಿಸಿ ಆರೋಪಿ ಸಂಖ್ಯೆ – 1 ಎಂದು ಎಫ್‌ಐಆರ್ ದಾಖಲು ಮಾಡಿದ್ದಾರೆ. ಬೀದರ್ ಜಿಲ್ಲೆಯ ಶಾಹಿನ್ ಶಾಲೆಯ ಪ್ರಕರಣದಲ್ಲಿ, ಆ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಮಗುವಿನ ತಾಯಿಯನ್ನು ಆರೋಪಿಯನ್ನಾಗಿ, ಶಾಲೆಯ ಪ್ರಾಂಶುಪಾಲರನ್ನು ಮತ್ತು ಆಡಳಿತ ಮಂಡಳಿಯನ್ನು ಆರೋಪಿಗಳನ್ನಾಗಿ ಮಾಡಿದ್ದಾರೆ. ಈ ರೀತಿ ಇಡೀ ರಾಜ್ಯದ ಉದ್ದಗಲಕ್ಕೂ ಮಾಡಿದ್ದಾರೆ. ಕರ್ನಾಟಕಕ್ಕೆ ಶಾಂತಪ್ರಿಯ ರಾಜ್ಯ, ಇಲ್ಲಿನ ಜನರಿಗೆ law-abiding citizens, peace-loving citizens ಎಂಬ ಹೆಸರಿತ್ತು. ಮಾನ್ಯ ಸಭಾಪತಿಯವರೇ, ಕೆಳಮನೆಯ ಸದಸ್ಯರಾದ ಶ್ರೀ ಯು.ಟಿ.ಖಾದರ್ ಅವರ ವಿರುದ್ಧ, ಭಾಜಪದ ಯುವ ಮೋರ್ಚದ ಪ್ರಧಾನ ಕಾರ್ಯದರ್ಶಿರವರಾದಂತಹ ಶ್ರೀ ಸಂದೇಶ್‌ಕುಮಾರ್ ಶೆಟ್ಟಿ ಎನ್ನುವವರು ಮಂಗಳೂರು ದಕ್ಷಿಣ ಪೋಲೀಸ್ ಠಾಣೆಗೆ ದೂರು ನೀಡಿದ್ದು, ಸದರಿ ಶಾಸಕರ ಮೇಲೆ ದೇಶ ದ್ರೋಹ ಆರೋಪದ ಕಾನೂನನ್ನು ಲಾಗು ಮಾಡಿದ್ದಾರೆ. He is a law-abiding citizen. ಅವರು ಜನಪ್ರತಿನಿಧಿ ಆಗಿದ್ದಾರೆ. ಉತ್ತರ ಭಾರತದಲ್ಲಿ ಆದಂತಹ ಘಟನೆ ಮ್ಮ ರಾಜ್ಯದಲ್ಲೂ ಆಗಬಾರದು, ಎಚ್ಚರಿಕೆಯಿಂದಿರಿ, ಸರ್ಕಾರ ಇದರ ಬಗ್ಗೆ ಮುನ್ನೆಚ್ಚರಿಕೆ ವಹಿಸಬೇಕು, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಗೃಹ ಮಂತ್ರಿಗಳ ಮೇಲೆ ಇದೆ, ನಮ್ಮ ರಾಜ್ಯದಲ್ಲಿ ಅಹಿತಕರವಾದಂತಹ ಘಟನೆಗಳು ನಡೆಯಬಾರದು ಎನ್ನುವ ಸದುದ್ದೇಶದಿಂದ ಮಾನ್ಯ ಯು.ಟಿ.ಖಾದರ್‌ರವರು ಮಾತನಾಡಿದ್ದರೆ, ಅವರ ವಿರುದ್ಧವು ಪ್ರಕರಣ ದಾಖಲು ಮಾಡಿದ್ದಾರೆ. ಮತ್ತೆ, ಕವಿಗಳು, ಕಲಾವಿದರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿದಂತಹ ಪ್ರಕರಣ ಕಂಡಿದ್ದೇವೆ. ಶಿರಾಜ್ ಬಿಸರಳ್ಳಿ ಎನ್ನುವ ಕವಿಗಳು ಒಂದು ಕವಿತೆ ಓದಿ ಹೇಳಿದ್ದಕ್ಕೆ ಗಂಗಾವತಿ ಪೋಲೀಸ್ ಠಾಣೆಯಲ್ಲಿ ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಮಾಡಿದಂತಹ ಗಂಭೀರವಾದ ಹಲ್ಲೆ ಎಂದು ನಾವು ಹೇಳಬೇಕಾಗುತ್ತದೆ. ಇದೇರೀತಿ ಕರ್ನಾಟಕ ರಾಜ್ಯದ ಉದ್ದಗಲಕ್ಕೂ ದೇಶದ್ರೋಹದ ಅನೇಕ ಪ್ರಕರಣಗಳು ದಾಖಲಾಗಿವೆ. ಮಾನ್ಯ ಸದಸ್ಯರಾದ ಹೊರಟ್ಟಿಯವರು, ಪಾಕಿಸ್ಥಾನದ ಪರ ಘೋಷಣೆ ಕೂಗಿದವರ ಬಗ್ಗೆ ಮೃದು ಧೋರಣೆ ತಾಳಿದುದರ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ, ನಮ್ಮ ಪಕ್ಷದಿಂದ ಉಡುಪಿ-ಮಂಗಳೂರು ಜಿಲ್ಲೆ ಸೇರಿ ಆಯ್ಕೆಯಾಗಿರುವ ಒಬ್ಬರೇ ಸದಸ್ಯರಾದ ಮಾನ್ಯ ಯು.ಟಿ.ಖಾದರ್ ಅಂಥವರು, ಕೆಳಮನೆ ಶಾಸಕರು, ಮಂತ್ರಿಗಳಾಗಿ ಕೆಲಸ ಮಾಡಿರುವವರು, ಎಲ್ಲಾ ಧರ್ಮಗಳ ಬಗ್ಗೆ ಗೌರವ ಇಟ್ಟುಕೊಂಡಿರುವವರು, ನಿಯತ್ತು-ಪ್ರಾಮಾಣಿಕತೆ-ಬದ್ಧತೆ ಇಟ್ಟುಕೊಂಡಿರುವವರು ಮಾತನಾಡುತ್ತಾ, ಉತ್ತರ ಭಾರತದಲ್ಲಿ ನಡೆದಂತಹ ಘಟನೆಗಳು ನಮ್ಮ ರಾಜ್ಯದಲ್ಲಿ ನಡೆಯಬಾರದು, ಅವು ನಮ್ಮ ರಾಜ್ಯದಲ್ಲಿ ಮರುಕಳಿಸಬಾರದು ಎನ್ನುವ ಉದ್ದೇಶದಿಂದ ಮಾತನಾಡಿದಾಗ ಅವರ ಮೇಲೂ ದೇಶದ್ರೋಹದ ಪ್ರಕರಣ ಎಂದು ಕೇಸ್ ದಾಖಲು ಮಾಡಿದ್ದಾರೆ. ಶಿಕ್ಷಕರ ಮೇಲೆ ದೇಶದ್ರೋಹದ ಪ್ರಕರಣಗಳು ದಾಖಲಾಗಿವೆ. ಆ ಮಗುವಿನ ತಂದೆ ಸತ್ತಿದ್ದಾನೆ; ತಾಯಿ ಜೈಲಿನಲ್ಲಿದ್ದಾಳೆ. ಹೀಗಾದರೆ ಆ ಮಗುವಿನ ಗತಿ ಏನು? ಇಂತಹ ಕಲ್ಲು ಹೃದಯ ಇರುವವರನ್ನು ನಾನೆಂದೂ ನೋಡಿಲ್ಲ ಎಂದು ಹೇಳಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, ರಾಜ್ಯದ ಉದ್ದಗಲಕ್ಕೂ ಪ್ರೊಟೆಸ್ಟ್ ರ್‍ಯಾಲಿಗಳು ನಡೆಯುತ್ತಿರುವುದರಿಂದ ಕಾನೂನು ಸುವ್ಯವಸ್ಥೆಯ ಸಮಸ್ಯೆ ಬಹಳ ದೊಡ್ಡ ಪ್ರಮಾಣದಲ್ಲಿ ಉದ್ಭವಿಸಿದೆ. Government machinery breakdown ಆಗಿದೆ. Lawlessness is prevailing throughout the state of Karnataka. ಇದರಿಂದ ರಾಜ್ಯದ ಅಭಿವೃದ್ಧಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕುಂಠಿತವಾಗುತ್ತದೆ. ಶಾಂತಿ–ಸುವ್ಯವಸ್ಥೆ ಇದ್ದರೆ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಸುಲಲಿತವಾಗಿ ಆಗುತ್ತವೆ. ಈಗ ಎಲ್ಲೆಂದರಲ್ಲಿ obstruction, road block ನಡೆಯುತ್ತಿದ್ದು, ಇದರಿಂದ ಸಾರ್ವಜನಿರಿಗೂ ತೊಂದರೆ ಆಗುತ್ತಿದೆ.

ಮಾನ್ಯ ಸಭಾಪತಿಯವರೇ, ಇಂತಹ ಪ್ರಕರಣಗಳಲ್ಲಿ ಪೊಲೀಸರ ವರ್ತನೆ ಹೇಗಿರುತ್ತದೆ ಎಂದರೆ, ಸರ್ಕಾರ ಏನು ಹೇಳುತ್ತದೆಯೋ ಅದೇರೀತಿ ನಡೆದುಕೊಳ್ಳುತ್ತಾರೆ. ದೂರು ಬಂದಾಗ, ಆ ದೂರನ್ನು ದೇಶದ್ರೋಹದ ಪ್ರಕರಣವಾಗಿ ಪರಿಗಣಿಸಬೇಕೆಂದು ಸರ್ಕಾರ ಹೇಳಿದರೆ ಪೊಲೀಸರು ಅದಕ್ಕೆ ತಥಾಸ್ತು ಎಂದು ಹೇಳುತ್ತಾರೆ. ಸರ್ಕಾರದವರು ನೂರು–ಸಾವಿರ ಹೇಳಬಹುದು, ಆದರೆ ಯಾವುದಾದರೂ ದೂರುಗಳು ಠಾಣೆಗೆ ಬಂದಾಗ ಅವು ಖಟಿಜುಚಿಟ Penal Code ನ ಯಾವ ಕಲಂ ಕೆಳಗೆ ಯಾವರೀತಿಯ ಅಪರಾಧ ಆಗುತ್ತದೆ ಎಂಬುದನ್ನು ನಿರ್ಧರಿಸಿ ಪೊಲೀಸಿನವರು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಸರ್ಕಾರ, ಠಾಣೆಗೆ ದೂರುಗಳು ಬಂದಾಗ, ಸದರಿ ದೂರನ್ನು ದೇಶದ್ರೋಹದ ಪ್ರಕರಣವೆಂದೇ ದಾಖಲಿಸಿ ಕೊಳ್ಳಬೇಕು, ಅದೇರೀತಿ ಎಫ್‌ಐಆರ್ ಹಾಕಬೇಕು ಎಂದು ಇಡೀ ಪೊಲೀಸ್ ಇಲಾಖೆಗೆ ನಿರ್ದೇಶನ ಕೊಡುತ್ತಾರೆಂದು ಕಾಣುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ಕುರಿತು . . . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ. (ಗೊಂದಲ) I will not yield to him. ನಾನು ಕನ್‌ಕ್ಲೂಡ್ ಮಾಡುತ್ತೇನೆ. (ಗೊಂದಲ) . . .

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ . . .

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ನೀವು ಹೊಸದಾಗಿ ನಮ್ಮ ಮನೆ ಸದಸ್ಯರಾಗಿ ಬಂದಿದ್ದೀರಿ. . . . I have not yielded.

**(ಗೊಂದಲ)**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ನಾನು ಸುಮ್ಮನೆ ಕುಳಿತುಕೊಂಡಿರುವುದಕ್ಕೆ ಬಂದಿಲ್ಲ. ಮಾತನಾಡುವುದಕ್ಕೆ ಬಂದಿದ್ದೇನೆ. **(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ . . .

**(ಗೊಂದಲ)**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ನೀವು ಹೇಳಿದ ಹಾಗೆ ಪೊಲೀಸರು ನಿರಂತರವಾಗಿ ಅಂತಹ ನಡವಳಿಗಳನ್ನು ತೋರುತ್ತಿದ್ದಾರೋ ಅಥವಾ ಈಗ ಮಾತ್ರ ತೋರಿಸುತ್ತಿದ್ದಾರೋ . . . .**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಈಗ ಆ ರೀತಿ ನಡೆದುಕೊಳ್ಳುತ್ತಿದ್ದಾರೆ . . .**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಂಗಳೂರು ಪೊಲೀಸ್ ಕಮಿಷನರ್‌ರವರು . . . .**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಕನ್‌ಕ್ಲೂಡ್ ಮಾಡುತ್ತೇನೆ. ಇಲ್ಲಿ ಮಂಗಳೂರು ಗೋಲಿಬಾರ್ ಪ್ರಕರಣವನ್ನು ಏಕೆ ಪ್ರಸ್ತಾಪ ಮಾಡಿದೆ ಎಂದರೆ, ಸದರಿ ಜಿಲ್ಲೆಯ ಬಗ್ಗೆ ನಮಗೆ ಅಪಾರ ಗೌರವ ಇದೆ. ಇಡೀ ದೇಶದಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಂಬರ್ ಒನ್ ಆಗಿದೆ, ಶಿಕ್ಷಣ ಕ್ಷೇತ್ರದಲ್ಲಿ ನಂಬರ್ ಒನ್ ಆಗಿದೆ ಹಾಗೂ ಹೊಟೇಲ್ ಉದ್ಯಮದಲ್ಲಿ ನಂಬರ್ ಒನ್ ಆಗಿದೆ. It is number one in education field. ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯವರು ಬಹಳ ದೊಡ್ಡ ಸಾಧನೆ ಮಾಡಿದ್ದಾರೆ. ಇಂತಹ ಪ್ರದೇಶಗಳಲ್ಲಿ disturbance ಆಗುವಂಥದ್ದಾದರೆ, ಬ್ಯಾಂಕಿಂಗ್ ಕ್ಷೇತ್ರ, ಶಿಕ್ಷಣ ಕ್ಷೇತ್ರ, ಹೊಟೇಲ್ ಉದ್ಯಮಗಳಿಗೆ ಧಕ್ಕೆಯಾಗುತ್ತದೆ. ಇಂಥದ್ದು ಆಗಬಾರದು ಎಂದು ಪ್ರೀತಿಯನ್ನಿಟ್ಟುಕೊಂಡು ಈ ಜಿಲ್ಲೆಯ ಬಗ್ಗೆ ಚರ್ಚೆ ಮಾಡಬಯಸುತ್ತಿದ್ದೇನೆ. ಆದರೆ ಇದೇ ಜಿಲ್ಲೆಯವರಾದ ಮಾನ್ಯ ಸಭಾನಾಯಕರು ನಾನು ಮಾತನಾಡಲು ಹೋದರೆ ಅದಕ್ಕೆ ಅಡ್ಡಿ ಮಾಡುತ್ತಿದ್ದಾರೆ. ಮಾನ್ಯ ಸಭಾಪತಿಯವರೇ, ಇಂತಹ ನಿರ್ದಿಷ್ಟ ಪ್ರಕರಣಗಳಿಗೆ ಸಂಬಂಧಪಟ್ಟಂತೆ lawlessness ಏಕಾಗಿದೆ? Government machinery ಏಕೆ breakdown ಆಗಿದೆ? ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ, ಸಾರ್ವಜನಿಕರ ಬದುಕು ಬಹಳ ದುರ್ಬರವಾಗಿದೆ. ರಾಜ್ಯದ ಅಭಿವೃದ್ಧಿಗೆ ಯಾವರೀತಿ ಹೊಡೆತ ಬಿದ್ದಿದೆ ಎನ್ನುವ ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದೇನೆ. The law and order has fully deteriorated in Karnataka State. Therefore, I kindly request you to allow me. ಮಾನ್ಯ ಸಭಾಪತಿಯವರೇ, ತಾವು ನಿಯಮ 59ರ ಅಡಿಯಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟರೆ ಚೆನ್ನಾಗಿರುತ್ತದೆ. It is well and good. We will discuss. ಹಾಗೆ ಮಾಡದೇ ಇದ್ದರೆ ನಿಯಮ 68ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ, ಈ ಭಾಗದ ಸದಸ್ಯರು ಮತ್ತು ಆ ಭಾಗದ ಸದಸ್ಯರು ಮಾತನಾಡುವುದಕ್ಕೆ ಅವಕಾಶವಾಗುತ್ತದೆ. ಈ ಕುರಿತು ವಿಸ್ತೃತವಾದ ಚರ್ಚೆ ಆಗಬೇಕು; ಸದನದ ಎಲ್ಲ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಬೇಕು. ಆದ್ದರಿಂದ ನಿಯಮ 68ರ ಕೆಳಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**(14) 18–02–2020 11.50 ಡಿಎಸ್–ಆರ್‌ಎನ್**

**ಸಭಾಪತಿಯವರು:–** ಆಯನೂರು ಮಂಜುನಾಥ್‌ರವರೇ, ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿರುವುದಕ್ಕೆ ನಾನು ಉತ್ತರ ಕೊಡುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಅವರು ಎಲ್ಲಾ ಹೇಳಿಬಿಟ್ಟಿದ್ದಾರೆ, ಮತ್ತೆ ಏಕೆ ಉತ್ತರ ಕೊಡುತ್ತಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರೇನು ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಇದು ಯಾವುದೂ ಕೂಡ ನಿಯಮದ ಚೌಕಟ್ಟಿನೊಳಗೆ ಬರುವುದಿಲ್ಲ. ಅವರು ನಿರ್ದಿಷ್ಟ ಪ್ರಕರಣವನ್ನು ಹೇಳಿಲ್ಲ. ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಸರ್ಕಾರ ಸಂಪೂರ್ಣವಾದ ಶ್ರಮ ಪಡುತ್ತಿದೆ. ಪೊಲೀಸರಿಗೆ ಪೂರ್ಣ ಪ್ರಮಾಣದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಬೇಕೆಂದು ಸರ್ಕಾರ ಹೇಳಿದೆ. ಅವರು, ಮೊನ್ನೆ ಮಂಗಳೂರಿನಲ್ಲಿ ನಡೆದ ಘಟನೆಯ ಬಗ್ಗೆ ಹೇಳಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಈ ವಿಚಾರವನ್ನು **<u>ನಾನು ನಿಯಮ 68ಕ್ಕೆ ಪರಿವರ್ತನೆ ಮಾಡಿದ್ದೇನೆ.</u>** ನಾನು ಈಗ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವುದಕ್ಕೆ ಕರೆದಿದ್ದೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಶಸ್ತ್ರಾಸ್ತ್ರ ಬಂಧನದಲ್ಲಿ ಹೊಡೆದವರನ್ನು ನೀವು ಮುಕ್ತರ ಸಾಲಿಗೆ ಸೇರಿಸುತ್ತೀರಾ?

**ಶ್ರೀ ಹೆಚ್.ಎಂ.ರೇವಣ್ಣ:-** ಒಬ್ಬ ಕೇಂದ್ರದ ಮಂತ್ರಿ ಗುಂಡು ಹೊಡೆಯಿರಿ ಎಂದು ಹೇಳುತ್ತಾರೆ, ಅದಕ್ಕೆ ಪೊಲೀಸರು ಗುಂಡು ಹೊಡೆಯುತ್ತಾರೆ, ಅವರಿಗೆ ಜವಾಬ್ದಾರಿ ಇಲ್ಲವೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇದು ಜವಾಬ್ದಾರಿಯುತ ಶಾಸಕರು ಹೇಳುವ ಮಾತೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, 'ಪಾಕಿಸ್ತಾನ್ ಜಿಂದಾಬಾದ್' ಎಂದು ಹೇಳಿದವರನ್ನು ಅರೆಸ್ಟ್ ಮಾಡಿ ಬಿಡುತ್ತಾರೆ, ಈಗ ಅವರು ಒಬ್ಬ ಜನಪ್ರತಿನಿಧಿಯ ಬಗ್ಗೆ ಮಾತನಾಡುತ್ತಿದ್ದಾರೆ? ಹುಬ್ಬಳ್ಳಿಯಲ್ಲಿ ಮೂವರು ವಿದ್ಯಾರ್ಥಿಗಳು 'ಪಾಕಿಸ್ತಾನ್ ಜಿಂದಾಬಾದ್' ಎಂದು ಹೇಳಿದ್ದಾರೆ, ಅವರನ್ನು ಮೊದಲೇ ಅರೆಸ್ಟ್ ಮಾಡಿಲ್ಲ? ಅವರಿಗೆ ನಾಚಿಕೆಯಾಗಬೇಕು.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಪಾರ್ಲಿಮೆಂಟ್‌ನಲ್ಲಿ ಶ್ರೀಮತಿ ಇಂದಿರಾಗಾಂಧಿಯವರನ್ನು ಸಾಕ್ಷಾತ್ ದುರ್ಗೆ ಎಂದು ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಹೇಳಿದ್ದರು. ಅವರು ಯಾವ ರೀತಿ ಇದ್ದರು, ಇವರು ಏಕೆ ಈ ರೀತಿ ಆಗಿದ್ದಾರೆ?

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಈ ವಿಚಾರವನ್ನು ನಿಯಮ 68ಕ್ಕೆ ಪರಿವರ್ತನೆ ಮಾಡಲಾಗಿದೆ. ಈಗ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ.

**7. ಉಭಯ ಸದನಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ ಹಾಗೂ ಅನುಮೋದನೆ**

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"2020ನೇ ಫೆಬ್ರವರಿ, 17 ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ."

**ಶ್ರೀ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಭಾರತ ದೇಶದ ಸಂವಿಧಾನದ 176ನೇ ಪರಿಚ್ಛೇದದ ಪ್ರಕಾರ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ರಾಜ್ಯದ ಗೌರವಾನ್ವಿತ ರಾಜ್ಯಪಾಲರು ದಯಪಾಲಿಸಿದ ಭಾಷಣದ ಚರ್ಚೆಯನ್ನು ಪ್ರಾರಂಭ ಮಾಡಿದ ಮಾನ್ಯ ಆಯನೂರು ಮಂಜುನಾಥ್‌ರವರ ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**8. ಉಭಯ ಸದನಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ**

**ಶ್ರೀ ಆಯನೂರು ಮಂಜುನಾಥ್:–** ಸದಸ್ಯರು ರಾಜ್ಯಪಾಲರ ಭಾಷಣ ಚೆನ್ನಾಗಿದೆ ಎಂದು ಹೇಳುತ್ತಿದ್ದಾರೆ. ರಾಜ್ಯಪಾಲರ ಭಾಷಣ ಕೇಳುವುದಕ್ಕೂ ನೋಡುವುದಕ್ಕೂ ಚೆನ್ನಾಗಿತ್ತು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ರಾಜ್ಯಪಾಲರು ಹಿಂದಿಯಲ್ಲಿ ಮಾತನಾಡಿದ್ದಾರೆ.

**ಶ್ರೀ ಪಿ.ರಘು ಆಚಾರ್:–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಚರ್ಚೆ ಮೇಲೆ ಎನ್ನುವುದಕ್ಕಿಂತ ಅವರು ಕೊಟ್ಟಂತಹ ಪುಸ್ತಕದ ಮೇಲೆ ಮಾತನಾಡುತ್ತಿದ್ದೇನೆ ಎಂದು ಹೇಳಿದರೆ ಬಹಳ ಚೆನ್ನಾಗಿರುತ್ತದೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ ಮಾನ್ಯ ರಘು ಆಚಾರ್‌ರವರು ಅದ್ಭುತವಾದಂತಹ ಸಲಹೆಯನ್ನು ಕೊಟ್ಟಿದ್ದಾರೆ. ಸದನ ಒಪ್ಪಿದರೆ ಅದನ್ನು ಮಾನ್ಯ ಮಾಡೋಣ. ಸಂಪ್ರದಾಯದಂತೆ ಸನ್ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಸರ್ಕಾರದ ವಿಚಾರವನ್ನು, ದೃಷ್ಟಿಕೋನವನ್ನು ಸಂಕ್ಷಿಪ್ತವಾಗಿ ಮಂಡನೆ ಮಾಡಿದ್ದಾರೆ. ಭಾರತೀಯ ಸಂಸದೀಯ ವ್ಯವಸ್ಥೆಯೊಳಗೆ ನನಗೆ ಬೇಕೋ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬೇಡವೋ ಅಥವಾ ಅದರ ಬಗ್ಗೆ ಏನೇ ಕಾಮೆಂಟ್ ಇದ್ದರೂ ಕೂಡ ಅದು ನಾವು ಒಪ್ಪಿದಂತಹ ವ್ಯವಸ್ಥೆ. ಸನ್ಮಾನ್ಯ ರಾಜ್ಯಪಾಲರು ಸರ್ಕಾರದ ದೃಷ್ಟಿಕೋನವನ್ನು ಸರ್ಕಾರದ ದಿಕ್ಕು ದಿಸೆಗಳನ್ನು, ಸರ್ಕಾರದ ಆಶಯವನ್ನು ಸದನದ ಮುಂದೆ ಇಟ್ಟಿದ್ದಾರೆ. ಅದು ಸಂಕ್ಷಿಪ್ತವಾದಂತಹ ಆಶಯಗಳು. ಸಂಪೂರ್ಣ ಆಶಯವನ್ನು ಮಾರ್ಚ್ 5ನೇ ತಾರೀಖಿನಂದು ಈ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಯಡಿಯೂರಪ್ಪನವರು ಬಜೆಟ್ ಮೂಲಕ ಸದನದ ಮುಂದೆ ಇಡುತ್ತಾರೆ. ಆಗ ಮತ್ತಷ್ಟು ವಿಸ್ತೃತವಾಗಿ ಚರ್ಚೆಯನ್ನು ಮಾಡಬಹುದು. ಆರು ತಿಂಗಳ ಈ ಕಾಲಾವಧಿಯಲ್ಲಿ ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗುತ್ತಿದ್ದಂತೆ ದುರಾದೃಷ್ಟವಶಾತ್ ಬಹಳ ದೊಡ್ಡ ಪ್ರವಾಹದ ಹಾವಳಿ, ಕೆಲವು ಕಡೆ ಬರಗಾಲದ ಹಾವಳಿ ಬಂತು.

**ಶ್ರೀ ಎಂ. ನಾರಾಯಣಸ್ವಾಮಿ:-** ದುರಾದೃಷ್ಟವಶಾತ್ ಎಂದು ತಾವೇ ಒಪ್ಪಿಕೊಂಡಿದ್ದೀರಿ.

**ಶ್ರೀ ಆಯನೂರು ಮಂಜುನಾಥ್:-** ನಾವು ಬಂದಾಗ ಆ ರೀತಿ ಆಗುತ್ತದೆ, ಮಾನ್ಯ ಬಸವರಾಜ ಹೊರಟ್ಟಿಯವರು ಬಂದಾಗ ಹೇಗೇಗೆ ಆಗುತ್ತದೆಂದು ಬೇರೆ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಈಗ ಅದರ ಬಗ್ಗೆ ಚರ್ಚೆ ಮಾಡುವುದು ಬೇಡ.

**ಶ್ರೀ ಎಂ.ನಾರಾಯಣಸ್ವಾಮಿ:-** ಆಯನೂರು ಮಂಜುನಾಥ್‌ರವರೇ, ನಮ್ಮ ಸರ್ಕಾರದ ಬಂದ ಮೇಲೆ ಈ ರೀತಿ ಆಯಿತು, ದುರ್ದೈವ ಎಂದು ನೀವೇ ಒಪ್ಪಿಕೊಂಡಿದ್ದೀರಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ನಾರಾಯಣಸ್ವಾಮಿಯವರೇ, ನಾನು ಯೀಲ್ಡ್ ಆಗಿಲ್ಲ. ಸಂದರ್ಭ ಬಂದಾಗ ಹೇಳದಿದ್ದರೆ ಅದು ಅರ್ಥ ಪೂರ್ಣ ಆಗುವುದಿಲ್ಲ. ಅಂತಹದ್ದಕ್ಕೆಲ್ಲಾ ಯಾವಾಗ ಗುಳಿಗೆಗಳನ್ನು ಹಾಕಬೇಕೆಂದು ಸನ್ಮಾನ್ಯ ಸಿ.ಎಂ.ಇಬ್ರಾಹಿಂ ರವರಿಂದ ನಾನು ಕಲಿತಿದ್ದೇನೆ. ಯಾವಾಗ ಬಾಲ್ ಹಾಕಬೇಕು, ಎಲ್ಲಾ ಟೈಮ್‌ನಲ್ಲೂ ಬಾಲ್ ಹಾಕಿದರೆ ಅದು 'ನೋ ಬಾಲ್' ಆಗಿಬಿಡುತ್ತದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಈಗ 17 ಬಾಲ್ ಹಾಕಿರುವುದು ಸಾಕಾಗಿದೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಈ ರಾಜ್ಯ ಕಂಡಂಥ ಕಾಲಿಗೆ ಚಕ್ರ ಕಟ್ಟಿಕೊಂಡು ಓಡಾಡುವಂತಹ ಅದ್ಭುತ ರಾಜಕಾರಣಿ ಎಂದರೆ ಸನ್ಮಾನ್ಯ ಯಡಿಯೂರಪ್ಪನವರು. ಇದನ್ನು ಎಲ್ಲಾ ಪಕ್ಷದವರು ಒಪ್ಪುತ್ತಾರೆ. ತಮ್ಮ ವಯೋಮಿತಿಯನ್ನು ಮೀರಿ ಹಗಲು ರಾತ್ರಿ ಓಡಾಡುವಂತಹ ದೈತ್ಯ ಶಕ್ತಿ ಅದು. ಅವತ್ತಿನ ದಿವಸ ಮಂತ್ರಿ ಮಂಡಲ ಪೂರ್ಣ ರಚನೆಯಾಗದಿದ್ದರೂ ಕೂಡ ಒಬ್ಬರೆ ಓಡಾಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಅವರು ದೈತ್ಯ ಶಕ್ತಿ ಎಂದು ಮೇಲಿನವರಿಗೆ ಹೇಳಿಬಿಡಿ.

**ಶ್ರೀ ಆಯನೂರು ಮಂಜುನಾಥ್:-** ನಮ್ಮ ಬಗ್ಗೆ ತುಂಬಾ ಕಾಳಜಿಯನ್ನಿಟ್ಟಿರುವಂತಹ ಎಲ್ಲಾ ಸ್ನೇಹಿತರುಗಳಿಗೆ ಧನ್ಯವಾದಗಳು. ನಿಮ್ಮಂಥವರು ಇರುವವರೆಗೆ ಮಾನ್ಯ ಯಡಿಯೂರಪ್ಪನವರು ಸುರಕ್ಷಿತವಾಗಿ ಇರುತ್ತಾರೆ. ನಿಮ್ಮೆಲ್ಲರ ಸಹಕಾರದಿಂದ ಅವರು ಮುಖ್ಯಮಂತ್ರಿಗಳಾಗಿದ್ದಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ನಮ್ಮಿಂದ ಅವರು ಸುರಕ್ಷಿತವಾಗಿರುತ್ತಾರೆ. ಆದರೆ ನಿಮ್ಮಿಂದ ಅವರಿಗೆ ಡೇಂಜರ್ ಇದೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ನಮ್ಮಿಂದ ಅವರಿಗೆ ಯಾವುದೇ ಡೇಂಜರ್ ಇಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಆಯನೂರು ಮಂಜುನಾಥ್‌ರವರೇ, ತಾವು ಚರ್ಚೆಯನ್ನು ಬಹಳ ಚೆನ್ನಾಗಿ ಪ್ರಾರಂಭ ಮಾಡಿದ್ದೀರಿ. ಕಾಲಿಗೆ ಚಕ್ರ ಕಟ್ಟಿಕೊಂಡು ಸುತ್ತುತ್ತಿದ್ದಾರೆ ಎಂದು ಹೇಳಿದ್ದೀರಿ. ಹಾಗಿದ್ದರೆ, ಏತಕ್ಕಾಗಿ ಮುಖ್ಯಮಂತ್ರಿ ಬೇಡ ರಾಜ್ಯಪಾಲರ ಆಡಳಿತ ಆಗಲೆಂದು ಮೂಗರ್ಜಿ ಬರೆಸಿದರು ಅದು ಅರ್ಥ ಆಗಲಿಲ್ಲ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಿಮ್ಮಿಂದಾಗಲಿ, ನಮ್ಮಿಂದಾಗಲಿ, ಒಂದು ಟೀಕೆಯನ್ನು ಸಹಿಸದೆ ಇರುವಂತಹ ಅಸಹನೀಯವಾದಂತಹ ಈ ಪ್ರವೃತ್ತಿ ಸದನದಲ್ಲಿ ಬರಬಾರದು. ಆ ಕಾರಣಕ್ಕಾಗಿ ಕಳೆದ ಎರಡು ಸಲ ಸದನದಲ್ಲಿ ಚರ್ಚೆ ಮಾಡಿರುವುದನ್ನು ನೋಡಿದ್ದೇನೆ. ಒಂದು ಸಣ್ಣ ಟೀಕೆಯನ್ನು ಪರಸ್ಪರ ಸಹಿಸದೆ ಎದ್ದು ನಿಂತು ಸದನದಲ್ಲಿ ಗದ್ದಲ ಮಾಡಿರುವುದನ್ನು ನೋಡಿದ್ದೇವೆ, ಯಾರು ಎಂದು ನಾನು ದೋಷಾರೋಪಣೆ ಮಾಡುತ್ತಿಲ್ಲ. ವಿಶೇಷವಾಗಿ ಮೇಲ್ಮನೆ, ಪ್ರಬುದ್ಧರ ಸಭೆಯೊಳಗೆ ಅವರು ಏನೇ ಟೀಕೆ ಮಾಡಿದರೂ ಕೂಡ ಅತ್ಯಂತ ಒಳ್ಳೆಯ ಮನೋಭಾವದಿಂದ ನಾವು ಸ್ವೀಕರಿಸಬೇಕು. ನಾವು ಟೀಕೆ ಮಾಡಿರುವುದನ್ನು ಅವರು ಸ್ವೀಕರಿಸಬೇಕು. ಆಗ ಮಾತ್ರ ಅರ್ಥಪೂರ್ಣ ಚರ್ಚೆಯಾಗುತ್ತದೆ. ಇನ್ನು ಮಾತೇ ಶುರು ಮಾಡಿಲ್ಲ, ಆಗಲೇ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿಯುವವರಿಗೆ ಬೇರೆ ಹೆಸರು ಹೇಳುತ್ತಾರೆ. ಆ ರೀತಿ ಈ ಸದನ ಆಗಬಾರದು. ಆ ಕಾರಣಕ್ಕಾಗಿಯೇ ಖುಷಿಯಿಂದಲೇ, ಹಾಸ್ಯದಿಂದಲೇ ಸದನದಲ್ಲಿ ಅರ್ಥಪೂರ್ಣವಾಗಿ ಚರ್ಚೆಗಳಾಗಲಿ. ಅವರು ಮಾಡಿದ ಎಲ್ಲಾ ಟೀಕೆಗಳನ್ನು ಸ್ವಾಗತ ಮಾಡುತ್ತೇನೆ. ನಿಜ, ನಮ್ಮ ನಾಯಕರಿಗೆ ಅವರಿಂದ ತೊಂದರೆ ಇಲ್ಲ. ಅವರಿಂದ ತೊಂದರೆ ಇದ್ದದ್ದು, ಮಾನ್ಯ ಕುಮಾರಸ್ವಾಮಿಯವರಿಗೆ ಮತ್ತು ಸಿದ್ದರಾಮಯ್ಯನವರಿಗೆ ಹೊರತು, ಮಾನ್ಯ ಯಡಿಯೂರಪ್ಪನವರಿಗೆ ಅಲ್ಲ. ಅದು ಕೂಡ ಸಾಬೀತಾಗಿದೆ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆ ರೀತಿ ಏಕಾಂಗಿಯಾಗಿ ಈ ರಾಜ್ಯದ ಅತಿ ಹೆಚ್ಚು ತಾಲ್ಲೂಕುಗಳು ಬರಪೀಡಿತ ಪ್ರದೇಶವಾಗಿತ್ತು, ಪ್ರವಾಹ ಪೀಡಿತ ಪ್ರದೇಶವಾಗಿತ್ತು. ಇಂತಹ ಸಂದರ್ಭದಲ್ಲಿ ಜನರಿಗೆ ಅನಾಥ ಪ್ರಜ್ಞೆ ಕಾಡದಿರುವಂತಹ ರೀತಿಯಲ್ಲಿ ಸಾಕಷ್ಟು ಕೆಲಸಗಳನ್ನು ಸನ್ಮಾನ್ಯ ಯಡಿಯೂರಪ್ಪನವರು ಮಾಡಿದ್ದಾರೆ.

**(015) 18–02–2020 12–00 ಬಿಕೆಪಿ–ಆರ್‌ಎನ್**

**ಶ್ರೀ ಆಯನೂರು ಮಂಜುನಾಥ್(ಮುಂದು. . .)**

ಇತಿಹಾಸದಲ್ಲಿ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಯಾವ ರಾಜ್ಯದಲ್ಲಿಯೂ ಇಲ್ಲದೇ ಇರತಕ್ಕಂತಹ ಪರಿಹಾರವನ್ನು ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕೊಟ್ಟರು. ಮನೆ ಕಟ್ಟಿಕೊಳ್ಳಲಿಕ್ಕೆ 5 ಲಕ್ಷ ರೂಪಾಯಿಗಳನ್ನು ಕೊಡುವಲ್ಲಿ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಲ್ಲಾ ನಿಯಮಾವಳಿಗಳನ್ನು ಮೀರಿ ಆ ಒಂದು ಸಂತ್ರಸ್ತರ ನೆರವಿಗೆ ಧೈರ್ಯವಾಗಿ ಹೆಜ್ಜೆಯನ್ನು ಇಡುವಂತಹ ಒಬ್ಬ ಮುಖ್ಯಮಂತ್ರಿ ಈ ದೇಶದಲ್ಲಿ ಇದ್ದರೆ, ಅವರು ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು. ಅವರು ಈ ನಿಟ್ಟಿನಲ್ಲಿ ನಿಯಮಾವಳಿಗಳನ್ನು ಮೀರಿ ಕೆಲಸ ಮಾಡಿದರು. ಆ ಕೆಲಸವನ್ನು ಎಲ್ಲರೂ ಸ್ವಾಗತ ಮಾಡಿದ್ದಾರೆಯೇ ಹೊರತು, ಯಾರೂ ಸಹ ವಿರೋಧ ಮಾಡಲಿಲ್ಲ. ಈ ನಿಟ್ಟಿನಲ್ಲಿ ಎಲ್ಲಾ ಶಾಸಕರು ಕೆಲಸ ಮಾಡಿದರು. ಈ ರಾಜ್ಯದ ಜನರು ಆ ಒಂದು ರೀತಿಯ ಸಂಕಷ್ಟಕ್ಕೆ ಸಿಲುಕಿದಂತಹ ಸಂದರ್ಭದಲ್ಲಿ ಸಹಾಯ ಮಾಡಲಿಕ್ಕೆ ನಿಯಮಾವಳಿಗಳು ಅಡ್ಡ ಬಾರದ ರೀತಿಯಲ್ಲಿ ಕೆಲಸ ಮಾಡಿದರು. ಈ ಒಂದು ಕೆಲಸ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದ ಸರ್ಕಾರದಲ್ಲಿ ಆಗಿದೆ. ರೈತ ಪರ ಕಾಳಜಿ ಬಗ್ಗೆ ಯಾರು ಚಕಾರ ಎತ್ತಲಿಲ್ಲ. ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸ್ವತಃ ರೈತ ಪರ ಹೋರಾಟದ ಮೂಲಕವೇ ಮೇಲೆ ಬಂದಂತಹವರು. ಹೀಗಾಗಿ, ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಸೂಚ್ಯವಾಗಿ ನೀರಾವರಿ ಯೋಜನೆಗಳ ಬಗ್ಗೆ ಏನು ಮಾಡುತ್ತೇವೆ, ರೈತರ ಪರವಾಗಿ ಏನು ಮಾಡುತ್ತೇವೆ ಎನ್ನುವಂತಹ ಅಂಶಗಳನ್ನು ಪ್ರಕಟ ಮಾಡಿದ್ದಾರೆ. ರೈತರ ಕಲ್ಯಾಣವನ್ನೇ ಆದ್ಯತೆಯನ್ನಾಗಿ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರ್ಕಾರ ಇಟ್ಟುಕೊಂಡಿರುವುದು ನಿನ್ನೆಯ ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಎಲ್ಲರಿಗೂ ಸೂಚ್ಯವಾಗಿ ಅರ್ಥವಾಗಿದೆ. ರಾಜ್ಯದಲ್ಲಿ ಕಾನೂನಿನ ವ್ಯವಸ್ಥೆ ಬಗ್ಗೆ ಚರ್ಚೆಯಾಗುತ್ತಿದೆ. ಈ ನಿಟ್ಟಿನಲ್ಲಿ ಅವಕಾಶವನ್ನು ಕೊಟ್ಟಿದ್ದೀರಿ, ಅದನ್ನು ನಾವು ಮಾಡುತ್ತೇವೆ. ಈಗ ರಾಜ್ಯದೊಳಗೆ ನಿಜಕ್ಕೂ ಸಹ ಸುವ್ಯವಸ್ಥೆಯ ವಾತಾವರಣ ಸೃಷ್ಟಿಯಾಗುತ್ತಿದೆ. ಸಂತೋಷದ ಸಂಗತಿ ಎಂದರೆ ಬಿಜೆಪಿ ಸರ್ಕಾರ ಬಂದ ಮೇಲೆ ಎಲ್ಲರಿಗೂ ಕೂಡ ದೇಶ ಭಕ್ತಿಯ ಮೇಲೆ, ಭಾರತ ಮಾತೆಯ ಘೋಷಣೆಯ ಬಗ್ಗೆ ಕೂಡ ಅಭಿಮಾನ ಬರುವಂತಹ ವಾತಾವರಣ ಸೃಷ್ಟಿಯಾಗುತ್ತಿದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಶ್ರೀಯುತ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ ಎಂದು ಹೇಳಿ. ಅದರ ಮೇಲೆಯೇ ಸರ್ಕಾರ ನಿಂತಿರುವುದಾಗಿದೆ.

**ಶ್ರೀ ಆಯನೂರು ಮಂಜುನಾಥ್:-** ಹೌದು, ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದ ಸರ್ಕಾರ. ಆ ಕಾರಣಕ್ಕಾದರೂ ಇವತ್ತು ಯಾರಾದರೂ "ಪಾಕಿಸ್ತಾನ ಜಿಂದಾಬಾದ್" ಎಂದು ಹೇಳಿದರೆ, ಪಕ್ಷಾತೀತವಾಗಿ ಅದನ್ನು ವಿರೋಧಿಸುವಂತಹ ಒಂದು ಸ್ವಾಭಿಮಾನದ, ರಾಷ್ಟ್ರಾಭಿಮಾನದ ವಾತಾವರಣ ನಮ್ಮ ಸರ್ಕಾರ ಬಂದ ಮೇಲೆ ಬಂದಿದೆ.

**ಶ್ರೀ ಯು.ಬಿ.ವೆಂಕಟೇಶ್(ನಾಮ ನಿರ್ದೇಶಿತರು):-** ಹಾಗಾದರೆ, "ಪಾಕಿಸ್ತಾನ ಜಿಂದಾಬಾದ್" ಎಂದವರಿಗೆಲ್ಲರಿಗೂ ಬಿಟ್ಟು ಬಿಡುತ್ತೀರಾ?

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನನ್ನ ಅಭಿಪ್ರಾಯವನ್ನು ಹೇಳಲಿಕ್ಕೆ ಅವಕಾಶ ಕೊಡಿ. ಮಾನ್ಯ ಸದಸ್ಯರು ನಂತರ ಹೇಳಲಿ. ನಾವು ಈಗ ಸದನದಲ್ಲಿ ಇದ್ದೇವೆಯೇ ಹೊರತು, ಯಾವುದೋ ಸಂತೆಯಲ್ಲಿ ಇಲ್ಲ.

**(ಗೊಂದಲ)**

ಮಾನ್ಯ ಸದಸ್ಯರು ಮಾತನಾಡುವಾಗ ಉತ್ತರ ತೆಗೆದುಕೊಳ್ಳಬಹುದು. ಮಾನ್ಯ ಸದಸ್ಯರು ಹಿರಿಯರು ಇದ್ದಾರೆ. ನನ್ನ ಪ್ರಶ್ನೆ ಮಾಡುವ ಅಧಿಕಾರ ಮಾನ್ಯ ಸದಸ್ಯರಿಗೆ ಇರುವುದಿಲ್ಲ. ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಅವರು ಸರ್ಕಾರಕ್ಕೆ ಪ್ರಶ್ನೆಯನ್ನು ಮಾಡಬೇಕು. ಆ ರೀತಿಯ ಒಂದು ವ್ಯವಸ್ಥೆಯ ಬಗ್ಗೆ ಕಲಿತುಕೊಳ್ಳಲಿ. ಮಾನ್ಯ ಸದಸ್ಯರು ತಮ್ಮ ಜೊತೆ ಈ ಬಗ್ಗೆ ಮಾತನಾಡಲಿ.

**ಶ್ರೀ ಯು.ಬಿ.ವೆಂಕಟೇಶ್:–** ಸನ್ಮಾನ್ಯ ಸಭಾಪತಿಯವರ ಮೂಲಕವೇ ಮಾನ್ಯ ಸದಸ್ಯರಿಗೆ ಕೇಳುತ್ತಿದ್ದೇನೆ.

**ಶ್ರೀ ಆಯನೂರು ಮಂಜುನಾಥ್:–** ಸನ್ಮಾನ್ಯ ಸಭಾಪತಿಯವರೇ, ನನಗೆ ಸಂತೋಷವಾಗಿದೆ. ಈ ದೇಶದ ಸಲುವಾಗಿಯೇ ಸಂವಿಧಾನ ರಚನೆಯಾಗಿದೆ. ಸಂವಿಧಾನವನ್ನು ಗೌರವಿಸುವಂತಹ ಭಾವನೆಗಳು, ಆಲೋಚನೆಗಳು ಈ ಸದನದಲ್ಲಿಯೂ ಬಂದಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. " ಟುಕಡೇ ಟುಕಡೇ ಕರೇಂಗೆ" ಎನ್ನುವವರ ಜೊತೆ ಇದ್ದವರೂ ಕೂಡ 'ಟುಕಡೇ ಟುಕಡೇ ಗ್ಯಾಂಗ್' ಜೊತೆ ಜೊತೆಯಲ್ಲಿ ಇದ್ದೇವೆ ಎಂದು ಹೇಳಿಕೊಂಡವರೂ ಕೂಡ, ಸಂಗಾತಿಯಾದವರೂ ಕೂಡ 'ಟುಕಡೇ ಟುಕಡೇ ಗ್ಯಾಂಗ್' ಎನ್ನುವಂತಹ ಘೋಷಣೆಯ ವಿರುದ್ಧ ಧ್ವನಿಯನ್ನು ಎತ್ತಿರುವಂತಹದ್ದನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ.

ನಮ್ಮ ಸರ್ಕಾರ ಬಂದ ನಂತರ ಆ ರೀತಿಯಲ್ಲಿ ಕಾನೂನು ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ಮತ್ತು ಅದನ್ನು ನಿಯಂತ್ರಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದ್ದೇವೆ. ಆಡಳಿತ ವ್ಯವಸ್ಥೆಯಲ್ಲಿ ಕೆಲವೊಂದು ಸಣ್ಣಪುಟ್ಟ ದೋಷಗಳು ಆಗಿರಬಹುದು. ಮಂತ್ರಿಗಳೇ ಕಾನೂನನ್ನು ಉಲ್ಲಂಘಿಸುತ್ತೇವೆ ಎಂದು ಹೇಳುವಾಗ, ದೊಂಬಿಯಾಗುತ್ತದೆ, ಬೆಂಕಿ ಹಚ್ಚಿ ಬಿಡುತ್ತಾರೆ ಎನ್ನುವಂತಹ ಮಾತುಗಳು ಮಂತ್ರಿಗಳ ಬಾಯಿಂದ ಬರುತ್ತಿತ್ತು. ಆದರೆ, ನಮ್ಮ ಸರ್ಕಾರ ಬಂದ ನಂತರ ಯಾವ ಮಂತ್ರಿಗಳ ಬಾಯಿಂದಲೂ ಕೂಡ ಸಂವಿಧಾನವನ್ನು ಉಲ್ಲಂಘಿಸುವಂತಹ, ಕಾನೂನು ಭಂಗ ಮಾಡುವಂತಹ ಮಾತುಗಳು ಬರದಂತೆ ಜವಾಬ್ದಾರಿಯುತ ಕಾನೂನು ವ್ಯವಸ್ಥೆಯನ್ನು ಈ 6 ತಿಂಗಳಲ್ಲಿ ನಮ್ಮ ಸರ್ಕಾರ ಜಾರಿಗೆ ತೆಗೆದುಕೊಂಡು ಬಂದಿದೆ. ಕಾನೂನು ಸುವ್ಯವಸ್ಥೆಯ ಬಗ್ಗೆ ಬದ್ಧತೆಯನ್ನು ತೋರಿಸಿದ್ದೇವೆ, ತೋರಿಸುತ್ತಿದ್ದೇವೆ ಎನ್ನುವಂತಹದ್ದನ್ನು ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ನಾವು ಕಂಡುಕೊಂಡಿದ್ದೇವೆ. ನೆರೆ ಸಂತ್ರಸ್ತರನ್ನು ಸಂತೈಸುವ ನಿಟ್ಟಿನಲ್ಲಿ ಸರ್ಕಾರ ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ಆ ಸಂತ್ರಸ್ತರ ಜೊತೆ ನಿಂತುಕೊಂಡು ಅವರಿಗೆ ಆತ್ಮವಿಶ್ವಾಸವನ್ನು ತುಂಬಿ ಸಂತೈಸಿದೆ. ರಾಜ್ಯದಲ್ಲಿ ಕೈಗಾರಿಕೆ, ಕೃಷಿ, ನೀರಾವರಿ, ಸಹಕಾರಿ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರಗತಿಯಾಗುತ್ತಿರುವುದು ಮತ್ತು ಅದಕ್ಕೆ ಈ 6 ತಿಂಗಳ ಅವಧಿಯಲ್ಲಿ ವೇಗ ಸಿಕ್ಕಿದೆ. ಮೊದಲಿನ ಸರ್ಕಾರವು ಕೆಲಸ ಮಾಡಿದ್ದು, ಅದಕ್ಕೆ ನಮ್ಮ ಸರ್ಕಾರ ವೇಗವನ್ನು ಕೊಟ್ಟಿದೆ. ಅದಕ್ಕೆ ಒಂದು ಅಂತಿಮ ರೂಪವನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಮ್ಮ ಸರ್ಕಾರ ಕೊಟ್ಟಿರುವುದು ನಮಗೆ ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಆಯುಷ್ಮಾನ್ ಭಾರತ್ ಯೋಜನೆಯಡಿ 3.3 ಲಕ್ಷ ಫಲಾನುಭವಿಗಳಿಗೆ ಚಿಕಿತ್ಸೆಯನ್ನು ಒದಗಿಸಲಾಗಿದೆ. ಅದೇ ರೀತಿ ಕೇಂದ್ರ ಸರ್ಕಾರದ ಎಲ್ಲಾ ಯೋಜನೆಗಳನ್ನು ಜಾರಿಗೆ ತರುವಲ್ಲಿ ರಾಜ್ಯದ ವತಿಯಿಂದ ಯಾವ್ಯಾವ ಯೋಜನೆಗಳು ಅನ್ವಯವಾಗುತ್ತವೋ ಅಂತಹ ಎಲ್ಲಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡುವಂತಹ ಎಲ್ಲಾ ರೀತಿಯ ಪ್ರಾಮಾಣಿಕ ಪ್ರಯತ್ನಗಳನ್ನು ನಮ್ಮ ಸರ್ಕಾರ ಮಾಡಿದೆ. ಕೃಷಿ ಪರ ಯೋಜನೆಗಳನ್ನು ಯಶಸ್ವಿಯಾಗಿ ಜಾರಿ ಮಾಡಿದ್ದೇವೆ. ಪ್ರವಾಹದ ಕಾರಣಕ್ಕೋಸ್ಕರ ಯಾವ್ಯಾವ ಮನೆಗಳು ಹಾನಿಗೊಂಡಿದ್ದವು, ಅವುಗಳ ಪುನರ್ ನಿರ್ಮಾಣಕ್ಕಾಗಿ ತಲಾ 5 ಲಕ್ಷ ರೂಪಾಯಿಗಳನ್ನು, ಮನೆಗಳ ದುರಸ್ತಿಗೆ ತಲಾ 3 ಲಕ್ಷ ರೂಪಾಯಿಗಳನ್ನು, ಸಣ್ಣ–ಪುಟ್ಟ ರೀತಿಯಲ್ಲಿ ಹಾನಿಯಾದಂತಹ ಮನೆಗಳ ದುರಸ್ತಿಗೆ ತಲಾ 50 ಸಾವಿರ ರೂಪಾಯಿಗಳನ್ನು, ಒಟ್ಟಾರೆ, 1.24 ಲಕ್ಷಕ್ಕೂ ಹೆಚ್ಚಿನ ಮನೆಗಳಿಗೆ 827 ಕೋಟಿ ರೂಪಾಯಿಗಳ ನೆರವನ್ನು ನಮ್ಮ ಸರ್ಕಾರ ನೀಡಿದೆ. ನಮ್ಮ ಸರ್ಕಾರ ರಚನೆಯಾದ ಆರಂಭದ ತಕ್ಷಣವೇ ಬಂದಂತಹ ಈ ರೀತಿಯ ಪ್ರವಾಹದ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಎದುರಿಸಿದೆ. ಹೀಗೆ 827 ಕೋಟಿ ರೂಪಾಯಿಗಳನ್ನು ಈ ಕಾರಣಕ್ಕಾಗಿಯೇ ಜನರಿಗೆ ನಮ್ಮ ಸರ್ಕಾರ ಒದಗಿಸಿದೆ. ಜೊತೆಗೆ ಮನೆಗಳನ್ನು ಕಟ್ಟಿಕೊಡುವುದರ ಜೊತೆಗೆ ಆ ಒಂದು ಪ್ರವಾಹದಲ್ಲಿ ತೇಲಿ ಹೋದಂತಹ ಪಾತ್ರೆ–ಪಗಡೆಗಳು, ಬಟ್ಟೆ, ದವಸ–ಧಾನ್ಯಗಳಿಗೂ ಕೂಡ, ಅವರ ದಿನನಿತ್ಯದ ಬದುಕಿಗಾಗಿ 207 ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ವಿನಿಯೋಗ ಮಾಡಿದೆ. ಕೊಚ್ಚಿ ಹೋದಂತಹ ಪದಾರ್ಥಗಳಿಗೆ, ನಿತ್ಯ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲಿಕ್ಕೆ ಮತ್ತು ತನ್ನ ಹೊಟ್ಟೆ ಪಾಡಿಗೆ ಬಡಿದಾಡುವಂತಹ ಕುಟುಂಬಗಳ ರಕ್ಷಣೆಗೆ ಶೀಘ್ರವಾಗಿ ಈ ಸರ್ಕಾರ ಧಾವಿಸಿರುವುದರ ಮೂಲಕ ಮಾನವೀಯತೆಯನ್ನು ಹೆಚ್ಚಿನ ರೀತಿಯಲ್ಲಿ ಗೌರವಸುವಲ್ಲಿ ಈ ಸರ್ಕಾರ ಕ್ರಮ ವಹಿಸಿದೆ ಎನ್ನುವುದು ಬಹಳ ಸೂಚ್ಯವಾಗಿ ಕಂಡು ಬರುತ್ತದೆ.

ಅದೇ ರೀತಿಯಲ್ಲಿ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಅಡಿಯಲ್ಲಿ 136 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸುಮಾರು 47,000 ಹೆಕ್ಟೇರ್ ಪ್ರದೇಶದಲ್ಲಿ ಜಲಾನಯನ ಅಭಿವೃದ್ಧಿಯನ್ನು ನಮ್ಮ ಸರ್ಕಾರ ಅನುಷ್ಠಾನಗೊಳಿಸಿದೆ. ರೈತರ ಪರವಾಗಿರುವಂತಹ ಪ್ರತಿನಿಧಿ, ರೈತರ ಪರ ಹೋರಾಟದಿಂದಲೇ ಈ ರಾಜ್ಯದ ಇತಿಹಾಸದೊಳಗೆ ಹೋರಾಟದಿಂದಲೇ ಮುಖ್ಯಮಂತ್ರಿ ಸ್ಥಾನವನ್ನು ಮುಟ್ಟಿದಂತಹ ಏಕಮಾತ್ರ ರಾಜಕಾರಣಿ ಈ ರಾಜ್ಯದಲ್ಲಿ ಇದ್ದರೆ, ಅವರು ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು. ಇವರು ಹೋರಾಟದ ಮೂಲಕವೇ ಬಂದಂತಹವರು.

ಆ ರೀತಿಯಲ್ಲಿ ರೈತರ ಪರ ಹೋರಾಟ ಮಾಡಿದಂತಹವರು ರಾಜ್ಯದಲ್ಲಿನ ಯೋಜನೆಗಳನ್ನು ಜಾರಿ ಮಾಡುವಲ್ಲಿ ಸಾಧ್ಯವಾಗಿದೆ. 100 ಬರಪೀಡಿತ ತಾಲ್ಲೂಕುಗಳಲ್ಲಿ "ಬರ ನಿಯಂತ್ರಣ ಜಲಾನಯನ ಅಭಿವೃದ್ಧಿ" ಎಂಬ ಒಂದು ಹೊಸ ಯೋಜನೆಯನ್ನು ಕೂಡ ಘೋಷಣೆ ಮಾಡುವುದು ಇದೆ. ಒಂದು ಸರ್ಕಾರ 6 ತಿಂಗಳಿನಲ್ಲಿಯೇ ಹೇಗೆ ಜನರ ಸಮೀಪ ಹೋಗಬಹುದು ಎನ್ನುವುದಕ್ಕೆ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ನೇತೃತ್ವದ ಬಿಜೆಪಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರದ ಈ ಕ್ರಮಗಳು ಸಾಕ್ಷಿಯಾಗಿವೆ. ಎಲ್ಲಿಯೂ ಸಹ ಒಂದು ರೀತಿಯಲ್ಲಿ ಜಡತ್ವವನ್ನು ತೋರಿಸದೇ ನಿತ್ಯ ಸಕ್ರೀಯವಾಗಿ ಕೆಲಸವನ್ನು ಮಾಡುತ್ತಿದೆ.

ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಅಡಿಯಲ್ಲಿ ಅರ್ಹ ಕೃಷಿ ಆಧಾರಿತ ಕುಟುಂಬಗಳಿಗೆ ಕೇಂದ್ರ ಸರ್ಕಾರವು ನೀಡುತ್ತಿರುವ 6,000 ರೂಪಾಯಿಗಳ ವಾರ್ಷಿಕ ಹಣಕಾಸಿನ ನೆರವಿನ ಜೊತೆಗೆ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದ ಸರ್ಕಾರವು ಪ್ರತಿ ವರ್ಷ 4000 ರೂಪಾಯಿಗಳ ಹೆಚ್ಚುವರಿ ಹಣಕಾಸಿನ ನೆರವನ್ನು ನೀಡುತ್ತಿದೆ. ಹೀಗೆ ರೈತರ ನೆರವಿಗೆ 10 ಸಾವಿರ ರೂಪಾಯಿಗಳನ್ನು ನೀಡಿದೆ. ರೇಷ್ಮೆ ಬೆಳೆಗಾರರಿಗೆ ನೆರವು ನೀಡಿದೆ. 9 ಲಕ್ಷ ಹಾಲು ಉತ್ಪಾದಕ ರೈತರ ನೆರವಿಗೆ ಬಂದಿದೆ. ಈ ರೀತಿಯಲ್ಲಿ ಹತ್ತು–ಹಲವಾರು ಯೋಜನೆಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವನ್ನು ಸನ್ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಹೋಗುವ ದಿಕ್ಕನ್ನು, ಒಂದು ರೀತಿಯ 'ಡೈರೆಕ್ಷನ್' ಅಂದರೆ ಸರ್ಕಾರ ಯಾವ ಕಡೆ ಹೋಗುತ್ತದೆ ಎನ್ನುವುದು ಅರ್ಥವಾಗಿದೆ. ಮುಂದಿನ ತಿಂಗಳ 5ನೇ ತಾರೀಖಿನ ಬಜೆಟ್‌ನೊಳಗೆ ಇವೆಲ್ಲವೂ ಸಹ ರಿಫ್ಲೆಕ್ಟ್ ಆಗುತ್ತವೆ. ಅದರೊಳಗೆ ಅಳವಾದಂತಹ, ವಿವರವಾದಂತಹ ಯೋಜನೆಯ ಸಂಪೂರ್ಣ ರೂಪು–ರೇಷೆಗಳು ಈ ಸದನದ ಮುಂದೆ ಬರಲಿವೆ.

ಅಪೌಷ್ಠಿಕತೆ ಇರುವ ಮಕ್ಕಳಿಗೆ, ಆಯುಷ್ಮಾನ್ ಭಾರತ್ ಯೋಜನೆಯಡಿಯಲ್ಲಿ ಬಡ ಕುಟುಂಬಗಳ ಚಿಕಿತ್ಸೆಗಾಗಿ ಹಣ ಒದಗಿಸಲು ಅನುಮೋದನೆ ನೀಡಲಾಗಿದೆ. ಮತ್ತೆ ಆಶಾ ಕಾರ್ಯಕರ್ತೆಯವರು ಮಾಸಿಕ ಗೌರವ ಧನವನ್ನು ಹೆಚ್ಚು ಮಾಡುವಂತೆ ಸರ್ಕಾರವನ್ನು ಕೋರಿ ಪ್ರತಿ ಬಾರಿ ಬೆಂಗಳೂರಿಗೆ ಬರುವುದನ್ನು ನೋಡಿದ್ದೇವೆ.

ಆ ಸಂದರ್ಭದಲ್ಲಿ ಅವರು ತಮ್ಮ ಸಣ್ಣ ಮಕ್ಕಳನ್ನು ತಮ್ಮ ಕಂಕಳಿನಲ್ಲಿಟ್ಟುಕೊಂಡು ಮಹಿಳೆಯರು ಶೌಚಾಲಯದ ಸಮಸ್ಯೆ, ಮಳೆಯ ಸಮಸ್ಯೆ, ಚಳಿಯ ಸಮಸ್ಯೆಯ ಮಧ್ಯೆ, ತನ್ನ ಮಗುವಿಗೆ ಹಾಲು ಕುಡಿಸಲು ಪರದಾಡಿದಂತಹ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಇದರ ಬಗ್ಗೆ ಈ ಹಿಂದೆ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಮನ ಮುಟ್ಟುವಂತೆ ಹೇಳಿದ್ದಾರೆ.

ಮಾನ್ಯ ಮುಖ್ಯಮಂತ್ರಿಗಳು ಆ ಮಹಿಳೆಯರ ಬಗ್ಗೆ ಮಾನವೀಯತೆಯನ್ನು ವ್ಯಕ್ತ ಮಾಡಿ ಅವರ ಮಾಸಿಕ ಗೌರವ ಧನವನ್ನು 3,500 ರೂ.ಗಳಿಂದ 4,000 ರೂ.ಗಳಿಗೆ ಹೆಚ್ಚಿಸಿದ್ದಾರೆ. ಮತ್ತೆ ಅಂಗನವಾಡಿ ಕಾರ್ಯಕರ್ತೆಯರಿಗೆ 8,000 ರೂಪಾಯಿಗಳಿಂದ 10,000 ರೂ.ಗಳಿಗೆ ಹೆಚ್ಚು ಮಾಡಿದ್ದಾರೆ. ಮತ್ತೆ ಬಾಕಿ ಉಳಿದಿದ್ದ ಭಾಗ್ಯಲಕ್ಷ್ಮಿ ಬಾಂಡುಗಳನ್ನು ಅರ್ಹ ಫಲಾನುಭವಿಗಳಿಗೆ ವಿತರಿಸಲು ಕ್ರಮ ವಹಿಸಲಾಗಿದೆ. ಹೆಣ್ಣು ಮಕ್ಕಳ ಭ್ರೂಣಹತ್ಯೆ ಆಗಬಾರದು ಎನ್ನುವ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದೆ. ಹುಟ್ಟಿದ ಹೆಣ್ಣು ದರಿದ್ರ ಲಕ್ಷ್ಮಿ ಅಲ್ಲ, ಭಾಗ್ಯಲಕ್ಷ್ಮಿ. ಆಕೆ ಹೊರೆಯಲ್ಲ, ಅವಳು ಕುಟುಂಬದ ಬೆಳಕು ಎನ್ನುವ ಹಿನ್ನೆಲೆಯಲ್ಲಿ ಆ ಒಂದು ಯೋಜನೆಯನ್ನು ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಜಾರಿಗೆ ತಂದರು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(016) 18.02.2020 12.10 ಎಸ್‌ವಿ–ವಿಕೆ**

**ಶ್ರೀ ಆಯನೂರು ಮಂಜುನಾಥ್ (ಮುಂದು):**

ಅದಕ್ಕೂ ಮುನ್ನ ಹೆಣ್ಣುಮಕ್ಕಳು ಹುಟ್ಟಿದರೆ ಯಾರ ಮನೆಯಲ್ಲಿಯೂ ಸಂತೋಷವಿರಲಿಲ್ಲ. ಇದು ಹಳ್ಳಿಗಳಲ್ಲಿ ಮಾತ್ರವಲ್ಲ, ಪಟ್ಟಣಗಳಲ್ಲಿಯೂ ಇದೆ. ಹೆಣ್ಣುಮಕ್ಕಳು ಹುಟ್ಟಿದರೆ ಮುಖವನ್ನು ತಿರುಗಿಸಿಕೊಂಡು ಓಡಾಡುವವರನ್ನು ನಾವು ನೋಡಿದ್ದೇವೆ. ಹೆಣ್ಣುಮಗುವಿನ ತಂದೆಯಾದವನು ಹೆಣ್ಣುಮಗುವಾಯಿತೆಂದು ಬಹಳ ಬೇಜಾರಿನಿಂದ ಬಸ್‌ನಿಲ್ದಾಣದಲ್ಲಿ ಗಡ್ಡವನ್ನು ಕೆರೆದುಕೊಳ್ಳುತ್ತಾ ಓಡಾಡುತ್ತಿದ್ದುದನ್ನು ನಾವು ನೋಡಿದ್ದೇವೆ. ಅವನನ್ನು ಮಾತನಾಡಿಸಿ, 'ಏಕೆ ಬೇಜಾರು ಮಾಡಿಕೊಂಡಿದ್ದೀಯಪ್ಪಾ' ಎಂದರೆ, 'ಹೆಣ್ಣುಮಗು ಹುಟ್ಟಿದೆ' ಎಂದು ಬೇಸರಿಸಿಕೊಂಡು ಹೇಳುತ್ತಿದ್ದನು. ಮನೆಯಲ್ಲಿ ಅತ್ತೆಯಾದವಳು ಹೆಣ್ಣುಮಗುವನ್ನು ಹಡೆದಂತಹ ಸೊಸೆಯ ಸ್ವಾಟೆ ತಿವಿಯುತ್ತಿದ್ದಳು. ಹೆಣ್ಣುಮಗುವನ್ನು ಹಡೆಯುವುದರಲ್ಲಿ ಸೊಸೆಯದ್ದೇ ತಪ್ಪು, ಮಗನದ್ದೇನೂ ತಪ್ಪು ಇಲ್ಲವೆನ್ನುವ ರೀತಿಯಲ್ಲಿ ಹಿಂಸೆಯನ್ನು ನೀಡಲಾಗುತ್ತಿತ್ತು. ಆ ಹೆಣ್ಣನ್ನು ಸಮಾಜದಲ್ಲಿ ನಿಕೃಷ್ಟವಾಗಿ ಕಾಣಲಾಗುತ್ತಿತ್ತು. ಇಂದು ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಸ್ವೀಕಾರ ಮಾಡಿ 'ಭಾಗ್ಯಲಕ್ಷ್ಮಿ ಯೋಜನೆ'ಯನ್ನು ಜಾರಿಗೆ ತಂದ ನಂತರ ಇಂದು ಗಂಡು ಮಗುವನ್ನು ಹಡೆದರೆ ಅತ್ತೆಯು ಸೊಸೆಯ ಸ್ವಾಟೆ ತಿವಿಯುವಂತಹ ಪರಿಸ್ಥಿತಿ ಬಂದೊದಗಿದೆಯೆಂದರೆ ಬಹುಶಃ ತಪ್ಪಾಗಲಿಕ್ಕಿಲ್ಲ. ಏಕೆ ಗಂಡು ಮಗುವನ್ನು ಹಡೆದೆ? ಇವು ಮುಂದೆ ದುಡಿಯುತ್ತವೆಯೋ ಇಲ್ಲವೋ ಎಂಬುದು ಗೊತ್ತಿಲ್ಲ ಎಂದು ಹೇಳುತ್ತಾರೆ. ಅದೇ ಹೆಣ್ಣು ಮಗುವಾದರೆ ಹುಟ್ಟಿದಾಗಲೇ ಭಾಗ್ಯವನ್ನು ತೆಗೆದುಕೊಂಡು ಬಂದಿದ್ದಾಳೆ ಎಂದು ಆಸ್ಪತ್ರೆಯಿಂದ ಬಿಡುಗಡೆ ಹೊಂದಿ ಮನೆಗೆ ಬಂದಾಗ ಆರತಿ ಎತ್ತಿ, 'ಮಗುವಿನ ಜೊತೆಯಲ್ಲಿ ಮಾನ್ಯ ಯಡಿಯೂರಪ್ಪನವರ ಭಾಗ್ಯಲಕ್ಷ್ಮಿ ಬಾಂಡ್ ಅನ್ನು ತಂದಿದ್ದೀಯ' ಎಂದು ಕೇಳುತ್ತಾರೆ. ಹೆಣ್ಣು ಜೀವಗಳಿಗೆ ಮೌಲ್ಯವನ್ನು ತಂದುಕೊಟ್ಟಂತಹ ಯೋಜನೆ ಈ ಭಾಗ್ಯಲಕ್ಷ್ಮಿ ಯೋಜನೆ. ಈ ಭಾಗ್ಯಲಕ್ಷ್ಮಿ ಬಾಂಡ್‌ಗಳ ವಿತರಣೆಯಲ್ಲಿ ಬಾಕಿ ಇದ್ದವುಗಳನ್ನು ಕೂಡಲೇ ವಿತರಣೆ ಮಾಡುವ ಕೆಲಸವನ್ನು ಮಾಡಿದ್ದಾರೆ. ಅಪೂರ್ಣ ಮನೆಗಳನ್ನು ಪೂರ್ಣಗೊಳಿಸಿ ಫಲಾನುಭವಿಗಳಿಗೆ ವಿತರಣೆ ಮಾಡಲಾಗುತ್ತಿದೆ. ಈ ರೀತಿಯಾಗಿ ಸರ್ಕಾರದ ಎಲ್ಲಾ ಯೋಜನೆಗಳನ್ನು ಸೂಚ್ಯವಾಗಿ, ಸಂಕ್ಷಿಪ್ತವಾಗಿ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ ಸನ್ಮಾನ್ಯ ರಾಜ್ಯಪಾಲರು ಕರ್ನಾಟಕ ರಾಜ್ಯ ಸರ್ಕಾರದ ಆಲೋಚನೆಯ ದಿಕ್ಕನ್ನು ನಿಗದಿ ಪಡಿಸಿಕೊಟ್ಟಿದ್ದಾರೆ. ಈ ಸರ್ಕಾರವು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಾಗಿ ಹಣವನ್ನು ಬಿಡುಗಡೆ ಮಾಡಿದೆ. 'ನಮ್ಮ ಗ್ರಾಮ–ನಮ್ಮ ರಸ್ತೆ' ಎನ್ನುವ ಹೊಸ ಯೋಜನೆಯನ್ನು ಘೋಷಣೆ ಮಾಡಿ 874 ಕಿ.ಮೀ ಉದ್ದದ ರಸ್ತೆಯನ್ನು ನಿರ್ಮಿಸಲಾಗಿದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಇದು ಹಳೆಯ ಯೋಜನೆಯೇ ಆಗಿದೆ.

**ಶ್ರೀ ಎನ್.ಎಸ್.ಬೋಸ್‌ರಾಜು:–** 2018–19ರ ಸಾಲಿನ ಆಯವ್ಯಯದಲ್ಲಿಯೇ ಇದರ ಉಲ್ಲೇಖವಿದೆ and it is already spent.

**ಶ್ರೀ ಆಯನೂರು ಮಂಜುನಾಥ್:–** ತಿದ್ದುಪಡಿಗಾಗಿ ಧನ್ಯವಾದಗಳು. ನಾನು ಅದನ್ನು ಸ್ವೀಕರಿಸುತ್ತೇನೆ. ಮಾನ್ಯ ರೇವಣ್ಣನವರೇ, ನಾನು yield ಆಗಿರುವುದಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ತಾವು ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ನಾವು ಕುಳಿತುಕೊಂಡು ತಮ್ಮ ಮಾತನ್ನು ಆಲಿಸುತ್ತಿದ್ದೇವೆ. ತಾವು ಈ ಭಾಗದಲ್ಲಿ ಕುಳಿತಿದ್ದಾಗ ಹೇಗೆ ನಡೆದುಕೊಂಡಿದ್ದೀರಿ ಎಂಬುದನ್ನು ಜ್ಞಾಪಿಸಿಕೊಳ್ಳುತ್ತಿದ್ದೇವೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಎಷ್ಟೋ ಸಂದರ್ಭಗಳಲ್ಲಿ ಸರ್ಕಾರಗಳು ಬದಲಾವಣೆಯಾಗಿದ್ದರೂ ಕೂಡ ಯೋಜನೆಗಳನ್ನು ಮುಂದುವರೆಸಲಾಗಿರುತ್ತದೆ. ಅದನ್ನು ನೀವು ಇಷ್ಟು ಉಲ್ಲೇಖ ಮಾಡುವ ಅವಶ್ಯಕತೆಯಿರಲಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಅದು ನನಗೂ ತಿಳಿದಿದೆ. ಆದರೆ ಅವರು ಮಾತನಾಡುವಾಗ ಅದನ್ನು ವೈಭವೀಕರಿಸಿ ಹೇಳುತ್ತಿದ್ದರೆ ನಾವು ಕೇಳುತ್ತಾ ಕುಳಿತಿರಬೇಕೆ?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಅವರು ನೈಜ ಪರಿಸ್ಥಿತಿಯನ್ನು ಹೇಳಿದ್ದಾರೆ. ಅದು ನಿಮಗೆ ವೈಭವೀಕರಣ ಎನ್ನಿಸಿದರೆ ಅದು ಯಾರ ತಪ್ಪೆಂದು ನನಗೆ ತಿಳಿಯುತ್ತಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಅದನ್ನು ವೈಭವೀಕರಿಸುತ್ತಿರುವವರು ಯಾರೆಂದು ನಮಗೆ ಗೊತ್ತಾಗುತ್ತಿದೆ. ಅದು ಹೊಸ ಯೋಜನೆಯಲ್ಲ, ಹಳೆಯ ಯೋಜನೆ ಎಂದಷ್ಟೇ ನಾನು ಹೇಳಿದೆನು.

**ಶ್ರೀ ಆಯನೂರು ಮಂಜುನಾಥ್:–** ಕಾಂಗ್ರೆಸ್‌ನ ಇಬ್ಬರು ಹಿರಿಯ ಸದಸ್ಯರಿಗೆ ಧನ್ಯವಾದಗಳು. ಮಾನ್ಯ ಯಡಿಯೂರಪ್ಪನವರು ಏನು ಮಾಡಿದ್ದಾರೆಂಬುದನ್ನು ನನಗಿಂತಲೂ ಚೆನ್ನಾಗಿ ತಾವು ಸಮರ್ಥನೆ ಮಾಡುತ್ತಿದ್ದೀರಿ. ಅದನ್ನೇ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ್ ಯೋಜನೆಯಡಿಯಲ್ಲಿ 33 ಸಾವಿರಕ್ಕೂ ಹೆಚ್ಚಿನ ಅಭ್ಯರ್ಥಿಗಳಿಗೆ ಅಗತ್ಯ ಕೌಶಲ್ಯಗಳಲ್ಲಿ ತರಬೇತಿಯನ್ನು ನೀಡಲಾಗಿದೆ. 411 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಶಿಕ್ಷಣವನ್ನು ಪಡೆಯುತ್ತಿರುವ ಸುಮಾರು 1.70 ಲಕ್ಷ ವಿದ್ಯಾರ್ಥಿನಿಯರಿಗೆ ಪೂರ್ಣ ಶುಲ್ಕ ವಿನಾಯಿತಿಯನ್ನು ನೀಡಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಅತಿಥಿ ಉಪನ್ಯಾಸಕರು ಇತ್ಯಾದಿ ಹಲವು ಸಮಸ್ಯೆಗಳಿವೆ. ಅದನ್ನು ಬೇರೆ ಸಂದರ್ಭದಲ್ಲಿ ಸದನದಲ್ಲಿ ಚರ್ಚೆ ಮಾಡೋಣ. ಅದರ ಬಗ್ಗೆ ಬಹಳಷ್ಟು ಮಾನ್ಯ ಸದಸ್ಯರು ಹೇಳುವವರಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಆ ಸಂದರ್ಭದಲ್ಲಿ ಯಾರ ಓಲೈಕೆಗೂ ಮಾತನಾಡದೆ ತಮ್ಮ ಆತ್ಮಸಾಕ್ಷಿಗನುಗುಣವಾಗಿ ಮಾತನಾಡಬೇಕು.

**ಶ್ರೀ ಆಯನೂರು ಮಂಜುನಾಥ್:–** ಆ ವಿಷಯದಲ್ಲಿ ನಾವು–ನೀವು ಒಟ್ಟಾಗಿಯೇ ಮಾತನಾಡೋಣ ಮಾನ್ಯ ಭೋಜೇಗೌಡರೆ. ಅದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಈಗ ಪ್ರಸ್ತಾಪ ಮಾಡುತ್ತಿರುವುದು ಸುಮಾರು 1.70 ಲಕ್ಷ ವಿದ್ಯಾರ್ಥಿನಿಯರಿಗೆ ಪೂರ್ಣ ಶುಲ್ಕ ರಿಯಾಯಿತಿ ನೀಡುವ ಬಗ್ಗೆ. ಅದೇ ರೀತಿಯಾಗಿ ಶಿಕ್ಷಣ, ಕೃಷಿ, ಆರೋಗ್ಯ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀರಾವರಿ, ಕೌಶಲ್ಯಾಭಿವೃದ್ಧಿ, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಎಲ್ಲಾ ಕ್ಷೇತ್ರಗಳಲ್ಲಿಯೂ ಬಿಜೆಪಿ ಸರ್ಕಾರ ಆರು ತಿಂಗಳುಗಳಲ್ಲಿ...

**ಶ್ರೀ ಹೆಚ್.ಎಂ.ರೇವಣ್ಣ:–** ಈ ರಾಜ್ಯದ 25 ಲಕ್ಷ ವಿದ್ಯಾರ್ಥಿಗಳಿಗೆ ಕೊಡಲಾಗುತ್ತಿದ್ದಂತಹ ವಿದ್ಯಾರ್ಥಿ ವೇತನವನ್ನು ನಿಲ್ಲಿಸಲಾಗಿದೆ. ದಿವಂಗತ ಶ್ರೀ ದೇವರಾಜ ಅರಸ್ ಅವರ ಕಾಲದಿಂದಲೂ ಜಾತ್ಯಾತೀತವಾಗಿ ಕೊಡಲಾಗುತ್ತಿತ್ತು. ಅದರಲ್ಲಿಯೂ ಹೆಣ್ಣುಮಕ್ಕಳಿದ್ದಾರೆ. ಈ ವಿಷಯದಲ್ಲಿ ಮೂತಿ ತಿವಿಯುವುದೇನಿಲ್ಲ.

**ಡಾ:ವೈ.ಎ.ನಾರಾಯಣಸ್ವಾಮಿ:–** ಅದನ್ನು ಹಿಂದಿನ ಸರ್ಕಾರದ ಅವಧಿಯಲ್ಲೇ ನಿಲ್ಲಿಸಲಾಗಿದೆ. ನಾವು ಅದಕ್ಕೆ ಚಾಲನೆಯನ್ನು ಕೊಡಿಸುತ್ತೇವೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ರೇವಣ್ಣನವರೇ, ತಾವು ಹಿರಿಯ ಸದಸ್ಯರು, ಸಚಿವರಾಗಿದ್ದಂಥವರು. ತಮಗೂ ಮಾತನಾಡಲು ಅವಕಾಶ ದೊರೆಯುತ್ತದೆ. ಆಗ ತಮ್ಮ ವಿಷಯವನ್ನು ಮಂಡನೆ ಮಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಆಯನೂರು ಮಂಜುನಾಥ್‌ರವರು ಹಿರಿಯ ಸದಸ್ಯರಾಗಿದ್ದು, ರಾಜಕೀಯದಲ್ಲಿ ಲೋಕಸಭಾ, ರಾಜ್ಯಸಭಾ ಸದಸ್ಯರಾಗಿ ಹಲವಾರು ಮಜಲುಗಳನ್ನು ನೋಡಿದ್ದಾರೆ. ಆದರೆ 1.70 ಲಕ್ಷ ವಿದ್ಯಾರ್ಥಿನಿಯರಿಗೆ ಪೂರ್ಣ ಶುಲ್ಕ ವಿನಾಯಿತಿಯನ್ನು ಹಿಂದೆ ಇದ್ದಂತಹ ಸರ್ಕಾರಗಳು ಹತ್ತು ಹಲವು ವರ್ಷಗಳಿಂದ ಮಾಡಿಕೊಂಡು ಬಂದಿದ್ದು, ಅದನ್ನು ಮುಂದುವರೆಸಲಾಗಿದೆ ಎಂದು ಹೇಳಲಿ. ದಯಮಾಡಿ 'ನಮ್ಮ ಸರ್ಕಾರ ಮಾಡಿದೆ ಎನ್ನದೆ, ಮುಂದುವರೆಸಲಾಗಿದೆ' ಎಂದು ಹೇಳಲಿ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಂಬಿಕೆಯಿದೆ ಎನ್ನುವ ಕಾರಣಕ್ಕಾಗಿ ಇಲ್ಲಿಗೆ ಬಂದಿದ್ದಾರೆ. ಸದನದ ನಿಯಮಾವಳಿಗಳನ್ವಯ ನಾವು ಮಾತನಾಡುತ್ತಿದ್ದೇವೆ. ಇದು ಚರ್ಚೆಯ ಪ್ರಾರಂಭವಷ್ಟೆ. ಮುಂದೆ ಚರ್ಚೆಗೆ ಅವಕಾಶ ಸಿಗುತ್ತದೆಯೆನ್ನುವ ವಿಶ್ವಾಸವಿದ್ದರೆ ಅದನ್ನು ಕಾಯ್ದಿರಿಸಿಕೊಂಡು ಅವರಿಗೆ ಅವಕಾಶ ದೊರೆತಾಗ ಮಾತನಾಡಲಿ. ನಾನು ಮಾತನಾಡುವಾಗ ಮಧ್ಯದಲ್ಲಿ ತಮ್ಮದೊಂದು ಒಗ್ಗರಣೆಯಿರಲಿ ಎನ್ನುವ ಧೋರಣೆ ಬೇಡ. ಅವರ ಹತ್ತಿರ ವಿಷಯವಿದ್ದರೆ ಪ್ರತ್ಯೇಕವಾಗಿ ಪ್ರಸ್ತಾಪ ಮಾಡಲಿ. ನಾನು ಮಾತನಾಡುವಾಗ ಮಧ್ಯದಲ್ಲಿ ಬಾಯಿ ಹಾಕುತ್ತಿದ್ದರೆ, ಅವರ ಮಾತು ಅರ್ಥವಾಗುವುದಿಲ್ಲ ಮತ್ತು ನನ್ನ ಮಾತು ತಿಳಿಯುವುದಿಲ್ಲ. ಹಾಗೆ ಮಾಡದೆ ಅವರ ನಿಲುವುಗಳನ್ನು ಎಲ್ಲಾ ಸಾಮಗ್ರಿಗಳ ಜೊತೆಯಲ್ಲಿ ಸಮರ್ಥಿಸಿಕೊಳ್ಳಲಿ. ಅದನ್ನು ಈ ಸದನದಲ್ಲಿ ನಾವು ಸ್ವಾಗತ ಮಾಡುತ್ತೇವೆ. ಅದನ್ನು ಬಿಟ್ಟು ಮಧ್ಯದಲ್ಲಿ ಈ ರೀತಿ ಎದ್ದೆದ್ದು ಮಾತನಾಡಿದರೆ ನನ್ನ ಭಾಷಣ ಹಾಳಾಗುತ್ತದೆ. ನನ್ನ ಆಲೋಚನೆಗೆ ಅಡ್ಡ ಬರುವಂತಹ ಅಧಿಕಾರ ಅವರಿಗಿಲ್ಲ.

ಮಾನ್ಯ ಸಭಾಪತಿಯವರೇ, ನನ್ನ ಈ ಆಲೋಚನೆಗಳನ್ನು ಎಲ್ಲರೂ ಸಮರ್ಥಿಸಿದ್ದಾರೆ. ನಾನು ಆಕಸ್ಮಿಕವಾಗಿ ರಾಜ್ಯಪಾಲರ ಭಾಷಣದ ಅಂಶಗಳನ್ನು ಬಿಟ್ಟಿದ್ದರೆ ಅದನ್ನು ನೆನಪು ಕೂಡ ಮಾಡಿಕೊಟ್ಟಿದ್ದಾರೆ. ಈ ರೀತಿಯಾಗಿ ಸರ್ಕಾರದ ಯೋಜನೆಗಳನ್ನು ಸನ್ಮಾನ್ಯ ರಾಜ್ಯಪಾಲರು ಸದನದ ಮುಂದೆ ತೆಗೆದುಕೊಂಡು ಬಂದಿದ್ದಾರೆ. ಹಾಗಾಗಿ ಸರ್ಕಾರದ ದಿಕ್ಕನ್ನು ಸ್ಪಷ್ಟವಾಗಿ ಗೋಚರಿಸುವಂತೆ ಮಾಡಿದ ರಾಜ್ಯಪಾಲರ ಭಾಷಣಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತಾ, ಇದರ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೇಲಿನ ಚರ್ಚೆಯ ನಂತರ ಸದನ ಈ ಪ್ರಸ್ತಾವವನ್ನು ಅಂಗೀಕರಿಸಬೇಕೆಂದು ಪ್ರಾರ್ಥನೆಯನ್ನು ಮಾಡುತ್ತೇನೆ. ಇಲ್ಲಿಗೆ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ. ಧನ್ಯವಾದಗಳು.

**ಸಭಾಪತಿಯವರು:–** ಮುಂದಿನ ಸರದಿ ಶ್ರೀ ಸಿ.ಎಂ.ಇಬ್ರಾಹಿಂ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ವಂದನಾರ್ಪಣಾ ಪ್ರಸ್ತಾವವನ್ನು ಅನುಮೋದಿಸಿದವರು ಈಗ ಮಾತನಾಡಬೇಕು.

**ಸಭಾಪತಿಯವರು:–** ಈಗಲೇ ಮಾತನಾಡಬೇಕೆಂದಿಲ್ಲ, ಕಡೆಯಲ್ಲಿಯೂ ಮಾತನಾಡಬಹುದು. ಸ್ವಲ್ಪ ಬದಲಾವಣೆಯಿರಲಿ. ಈಗ ಮಾನ್ಯ ಸಿ.ಎಂ.ಇಬ್ರಾಹಿಂ ಅವರು ಮಾತನಾಡಲಿ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹುತೇಕವಾಗಿ ರಾಜ್ಯಪಾಲರ ಭಾಷಣದ ಬಗ್ಗೆ ಹೇಳಿದ್ದಾರೆ. 'ದುಡ್ಡಿಲ್ಲ ಕಾಸಿಲ್ಲ, ಸಂಪತ್ತಯ್ಯಂಗಾರಿ' ಎನ್ನುವಂತಹ ಪರಿಸ್ಥಿತಿ ಈಗ ಇದೆ. ಇದು ಕೇವಲ ಈ ಸರ್ಕಾರದ ಪರಿಸ್ಥಿತಿಯಲ್ಲ. ದೇಶದ ಪರಿಸ್ಥಿತಿಯೇ ಹಾಗಾಗಿದೆ. ನಿನ್ನೆ ರಾಜ್ಯಪಾಲರ ಭಾಷಣವನ್ನು ಓದುತ್ತಿದ್ದಾಗ ನನಗೆ ಒಂದು ಕತೆ ನೆನಪಾಯಿತು. ಒಬ್ಬ ಹಾಡುಗಾರ ಒಬ್ಬ ರಾಜನ ಆಸ್ಥಾನಕ್ಕೆ ಹೋಗಿ ಜೋರಾಗಿ ಹಾಡಿದನು. ರಾಜನಿಗೆ ಸಂತೋಷವಾಗಿ ಹಾಡುಗಾರನಿಗೆ 50 ಎಕರೆ ಜಮೀನು ಕೊಡುವಂತೆ ಹೇಳಿದನು. ಇನ್ನೂ ಜೋರಾಗಿ ಹಾಡಿದಾಗ ರಾಜನು ಇನ್ನೊಂದು 100 ಎಕರೆ ಜಮೀನು ಕೊಡುವಂತೆ ಹೇಳಿದನು. ಹಾಡುಗಾರ ಹಾಡುತ್ತಲೇ ಹೋದನು. ಹಾಡು ಮುಗಿದು ಹೋಗಬೇಕಾದರೆ ಬಹುಮಾನ ಇಂದು ಬರುತ್ತದೆ, ನಾಳೆ ಬರುತ್ತದೆ ಎಂದು ಕಾಯುತ್ತಲೇ ಇದ್ದನು. ಬರಲೇ ಇಲ್ಲ. ಕೊನೆಯಲ್ಲಿ ರಾಜನ ಬಳಿ ಬಂದು, 'ಸ್ವಾಮಿ ನಾನು ಹಾಡಿದಾಗ ತಾವು ಈ ರೀತಿಯಾಗಿ ಬಹುಮಾನಗಳನ್ನು ನೀಡುವುದಾಗಿ ಹೇಳಿದ್ದಿರಿ' ಎಂದು ಹೇಳಿದನು. ಆಗ ರಾಜನು, 'ನೀನು ನನ್ನನ್ನು ಹಾಡಿ ಸಂತೋಷ ಪಡಿಸಿರುವೆ. ನೀನು ನನಗೆ ಏನನ್ನೂ ಕೊಟ್ಟಿರುವುದಿಲ್ಲ. ನಾನು ನಿನಗೂ ಏನನ್ನೂ ಕೊಡುವುದಿಲ್ಲ. ನೀನು ನನಗೆ ಅದನ್ನು ಹೇಳಿ ಸಂತೋಷ ಪಡಿಸಿದ್ದಕ್ಕೆ ನಾನು ನಿನಗೆ ಇದನ್ನು ಹೇಳಿ ಸಂತೋಷಪಡಿಸಿದೆನು' ಎಂದು ಹೇಳಿದನು. ಇಂದು ರಾಜ್ಯಪಾಲರ ಭಾಷಣದಲ್ಲಿ ಅದು ಮಾಡುತ್ತೇವೆ, ಇದು ಮಾಡುತ್ತೇವೆಂದು ಹೇಳಿದ್ದಾರೆ. ಮುಂದಿನ ವರ್ಷ ಮತ್ತೆ ಇದೇ ಪುನರಾವರ್ತನೆಯಾಗುತ್ತದೆ. ಮಾನ್ಯ ಯಡಿಯೂರಪ್ಪನವರು ಹೋರಾಟಗಾರರು ನಿಜ. ಇದು ಯಡಿಯೂರಪ್ಪನವರ ಸರ್ಕಾರ, ಬಿಜೆಪಿ ಸರ್ಕಾರ ಅಲ್ಲ.

**(17) 18.02.2020 KG.VK 12.20**

**ಶ್ರೀ ಸಿ.ಎಂ.ಇಬ್ರಾಹಿಂ(ಮುಂದು)**

ಆಡಳಿತ ಪಕ್ಷದವರು ಈ 17 ಜನ ಶಾಸಕರ ಫೋಟೋಗಳನಿಟ್ಟು ಅವರಿಗೆ ಕೈ ಮುಗಿಯಬೇಕು. ಏಕೆಂದರೆ, ಅವರಿಂದ ಇವರು ವಿರೋಧಪಕ್ಷದಿಂದ ಆಡಳಿತ ಪಕ್ಷದ ಕಡೆಗೆ ಹೋಗಿದ್ದಾರೆ. ಅವರು ಪುಣ್ಯಾತ್ಮರು. ಅವರಿಲ್ಲದಿದ್ದರೆ ಇವರು ಇಲ್ಲೇ ಇರುತ್ತಿದ್ದರು. ಅದಕ್ಕೆ ರಾಜಕೀಯವಾದಂತಹ ನಿಲುವುಗಳು ಬದಲಾಗುತ್ತಿರುತ್ತವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅದಕ್ಕೆ ಮಾನ್ಯ ಸದಸ್ಯರಿಗೆ ಧನ್ಯವಾದಗಳು.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಮೊದಲೇ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರಿಗೆ ನೀವು ಇಲ್ಲಿಗೆ ಬೇಗ ಬರುತ್ತೀರಿ, ಅಲ್ಲಿ ನಿಮ್ಮನ್ನು ನೋಡುತ್ತೇವೆಂದು ಹೇಳಿದ್ದೆ. ನನಗೆ ರಾಜಕಾರಣದಲ್ಲಿ ಸುಮಾರು 45 ವರ್ಷಗಳ ಅನುಭವ ಇದೆ. ನಾನು ಮಾನ್ಯ ಸದಸ್ಯರಾದ ಆಯನೂರು ಮಂಜುನಾಥರವರಿಗೆ ಸಲಹೆ ಕೊಡುವುದೇನೆಂದರೆ, ಈ ದೇಶದಲ್ಲಿ ಹಿಂದೂ–ಮುಸಲ್ಮಾನರು ಎಂದು ಮಾಡದಿದ್ದರೂ ಸಹ, ನಿಮಗೆ ಓಟು ಬರುತ್ತಿರುವುದು ಅವರಿಂದ ಅಲ್ಲ. ಒಂದು ದೊಡ್ಡ ಸಮಾಜ ನಿಮ್ಮ ಜೊತೆಗೆ ನಿಂತಿದೆ. ಆ ಸಮಾಜದ ಕಡೆಯಿಂದ ನೀವು ಇಲ್ಲಿದ್ದೀರಿ. ನಮ್ಮ ರಾಜ್ಯದಲ್ಲಿ ಉತ್ತರ ಪ್ರದೇಶ ಅಥವಾ ಮಧ್ಯಪ್ರದೇಶದಂತೆ ಮತಗಳ ಚಿಂತನೆ ಆಗುವುದಿಲ್ಲ. ನಮ್ಮ ರಾಜ್ಯದಲ್ಲಿ ಆಗುವಂತಹದ್ದು ಐದು ಶಕ್ತಿಗಳಿಂದ ಮಾತ್ರ. ಅವುಗಳು ಯಾವುವು ಎಂದರೆ, ಲಿಂಗಾಯಿತರು, ಒಕ್ಕಲಿಗರು, Backward class, ದಲಿತರು, ಮುಸಲ್ಮಾನರು. ಇದರ ಆಧಾರದ ಮೇಲೆ ಚುನಾವಣೆ ಆಗುತ್ತದೆಯೇ ಹೊರತು, ನಾವು ಹಿಂದೂ, ನೀವು ಮುಸಲ್ಮಾನರು ಎಂದು ಚುನಾವಣೆ ಆಗುವುದಿಲ್ಲ. ಇದನ್ನು ಮಾಡುವಂತಹ ಅವಶ್ಯಕತೆಯೇ ನಿಮಗೆ ಇಲ್ಲ. ಇಲ್ಲಿ ನಮಗೆ ಏನಾಗಿದೆ ಎಂದರೆ, ಗಂಡ–ಹೆಂಡತಿ ಜಗಳದಲ್ಲಿ ಕೂಸು ಬಡವ ಆಯಿತು ಎಂದು, ನಿಮ್ಮ ನಿಮ್ಮ ಜಗಳದಲ್ಲಿ ನಾವು ಇವತ್ತಿನ ದಿವಸ ಮುಸಲ್ಮಾನರು ಬಿದ್ದು ಒದ್ದಾಡುತ್ತಿದ್ದೇವೆ. ಇವತ್ತಿನ ದಿವಸ ರಾಜ್ಯದಲ್ಲಿ Law and Order ಪರಿಸ್ಥಿತಿ ಹೇಗಿದೆಯೆಂದರೆ, ನಮ್ಮ ರಾಜ್ಯದ ಮಂಗಳೂರಿನಲ್ಲಿ ಬಿಟ್ಟರೆ, ಬೇರೆ ಎಲ್ಲೂ ಸಹ ಗಲಾಟೆ ಆಗಿಲ್ಲ. ಅದಕ್ಕೆ ಕಾರಣ ಏನೆಂದರೆ, ಅದು ಮಾನ್ಯ ಸದಸ್ಯರಾದ ಕೋಟ ಶ್ರೀನಿವಾಸ ಪೂಜಾರಿಯವರಿಗೂ ಗೊತ್ತಿದೆ, ಅಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ ಪೂರ್ತಿ ಇಲ್ಲ. ಅಲ್ಲಿ ಬೇರೆ ಸರ್ಕಾರ ಇದೆ. ಬೇರೆ ಜಿಲ್ಲೆಗಳಲ್ಲಿ ಏಕೆ ಗಲಾಟೆ ಆಗಲಿಲ್ಲ? ನಾನೇ ಗುಲ್ಬರ್ಗಾದಲ್ಲಿ ಸಭೆ ಮಾಡಿದ್ದೇನೆ. ಅಲ್ಲಿ ಎಲ್ಲಾ ಸಮುದಾಯದ ಸುಮಾರು 5 ಲಕ್ಷ ಜನರು ಸೇರಿದ್ದರು. ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಸಭೆ ನಡೆಯಿತು. ಅಲ್ಲಿ ಏಕೆ ಗಲಾಟೆ ಆಗಲಿಲ್ಲ. ಬೆಂಗಳೂರಿನಲ್ಲಿ ಸಭೆ ನಡೆಯಿತು. ಇಲ್ಲಿಯೂ ಸಹ ಸುಮಾರು 5 ಲಕ್ಷ ಜನ ಸೇರಿದ್ದರು. ಇಲ್ಲಿ ಏಕೆ ಗಲಾಟೆ ಆಗಲಿಲ್ಲ? ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಅಧಿಕಾರದಲ್ಲಿ ಇರಬೇಕು, ಇರಲಿ. ಮೂರು ವರ್ಷ ಅವರು ಇರಲಿ. ನಾವು ಅಪೇಕ್ಷೆ ಪಡುತ್ತೇವೆ. ಏಕೆಂದರೆ, ಯಾರು ಅಧಿಕಾರದಲ್ಲಿ ಇರಬೇಕು, ಯಾರು ಅಧಿಕಾರದಲ್ಲಿ ಇರಬಾರದು ಎನ್ನುವುದನ್ನು ಜನರು ಅಂತಿಮವಾಗಿ ತೀರ್ಮಾನ ಮಾಡುತ್ತಾರೆ.

ಮಾನ್ಯ ಸಭಾಪತಿಯವರೇ, ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ತೀವ್ರವಾಗಿ ಹಾನಿಗೊಳಗಾದ ಮನೆಗಳ ಪುನರ್ ನಿರ್ಮಾಣಕ್ಕಾಗಿ ತಲಾ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದಕ್ಕೆ ನಮ್ಮ ಕಡೆಯಿಂದ ಇಬ್ಬರು, ಅವರ ಕಡೆಯಿಂದ ಮೂರು ಜನ ಸದಸ್ಯರನ್ನು ಸೇರಿಸಿ ಒಂದು ಸದನ ಸಮಿತಿಯನ್ನು ಮಾಡಿ. ಮೂರು ಲಕ್ಷ ಮನೆಗಳು ಬಿದ್ದಿರುವ ಕಡೆಗೆ ಹೋಗೋಣ, ಅದರಲ್ಲಿ ಎಷ್ಟು ಜನರಿಗೆ ಮನೆಗಳು ಸಿಕ್ಕಿವೆ, ಎಷ್ಟು ಜನರಿಗೆ ಪರಿಹಾರ ಸಿಕ್ಕಿದೆ

ಎಂಬುದನ್ನು ಖುದ್ದಾಗಿ ಕೇಳೋಣ. ಅದಕ್ಕೆ ನೀವು ತಯಾರಾಗಿದ್ದೀರಾ? ತಯಾರಾಗಿದ್ದರೆ, ಅದಕ್ಕೆ ಸದನ ಸಮಿತಿಯನ್ನು ಮಾಡಿ. ಇದನ್ನು ನಾನು ಏಕೆ ಕೇಳುತ್ತಿದ್ದೇನೆಂದರೆ, ನಾನು ಈ ರಾಜ್ಯದ ಉದ್ದಗಲಕ್ಕೂ ತಿಂಗಳಲ್ಲಿ 20 ದಿವಸ ಈಗಲೂ ಸುತ್ತಾಡುತ್ತಿದ್ದೇನೆ. ಇನ್ನೂ ಅಲ್ಲಿ ಮನೆಗಳ ಸರ್ವೆ ಆಗಿಲ್ಲ. ಅಲ್ಲಿ ಜನರು ಕಣ್ಣೀರು ಹಾಕುತ್ತಿದ್ದಾರೆ. ಅಲ್ಲಿ ಏನಾದರೂ ಮಾಡೋಣ ಅಂದರೆ, ಸರ್ಕಾರದಲ್ಲಿ ಹಣ ಇಲ್ಲ. ಕೇಂದ್ರ ಸರ್ಕಾರದಿಂದ ಜಿ.ಎಸ್.ಟಿ ಹಣ ಎಷ್ಟು ಬಂತು? ಅದನ್ನು ನೀವು ಏನಾದರೂ ಕೇಳಿದ್ದಾರೆಯೇ? ಎಷ್ಟು ಹಣ ಬರುವುದು ಬಾಕಿ ಇದೆ? ಆ ಹಣ ಏಕೆ ಬರಲಿಲ್ಲ? ಕೇಂದ್ರ ಸರ್ಕಾರದವರು ಬರ ಪರಿಹಾರಕ್ಕೆ ಎಂದು ಎಷ್ಟು ಹಣ ನಮ್ಮ ರಾಜ್ಯಕ್ಕೆ ಬಂದಿದೆ? ಅದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಇಲ್ಲ. ನಮ್ಮ ರಾಜ್ಯಕ್ಕೊಂದು ನೀತಿ, ಬೇರೆ ರಾಜ್ಯಕ್ಕೊಂದು ನೀತಿ ಸರಿಯೇ? ಮಾನ್ಯ ಬಿ.ಎಸ್ ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿರುವುದು ತಪ್ಪು ಎನ್ನುವ ದೃಷ್ಟಿಯಿಂದ ಈ ರೀತಿ ಮಾಡಿದ್ದಾರೆಯೇ? ಕೇಂದ್ರದ ಮಂತ್ರಿಗಳು ನಮ್ಮ ರಾಜ್ಯಕ್ಕೆ ಬಂದು ವೀಕ್ಷಣೆ ಮಾಡಿ ವರದಿ ಕೊಟ್ಟ ಮೇಲೆ, ಕೇಂದ್ರ ಸರ್ಕಾರದವರು ಏನು ಮಾಡಿದ್ದಾರೆ? ಮಾನ್ಯ ಸದಸ್ಯರಾದ ಆಯನೂರು ಮಂಜುನಾಥರವರೇ, ಇದನ್ನು ನಾವು ಪಕ್ಷಾತೀತವಾಗಿ ಚಿಂತನೆ ಮಾಡಬೇಕಾಗುತ್ತದೆ. ನೀವು ಮೂರು ವರ್ಷಗಳು ಇರಬಹುದು. ನಾವು ಮೂರು ವರ್ಷಗಳು ಇರಬಹುದು, ಆದರೆ, ಮುಂದಿನ ಪೀಳಿಗೆಗೆ ನಾವು ಏನು ಮಾರ್ಗದರ್ಶನವನ್ನು ಬಿಟ್ಟು ಹೋಗುತ್ತಿದ್ದೇವೆ ಎನ್ನುವುದು ಇಲ್ಲಿ ಬಹಳ ಪ್ರಾಮುಖ್ಯವಾದದು.

ಮಾನ್ಯ ಸಭಾಪತಿಯವರೇ, ಕೇಂದ್ರದ ಬಜೆಟ್ ಆಗಿದೆ, ರೈಲ್ವೆ ಬಜೆಟ್ ಏನಾಗಿದೆ ಎಂಬುದರ ಬಗ್ಗೆ ಏನಾದರೂ ಪ್ರಸ್ತಾಪ ಇದೆಯಾ? ನಮ್ಮ ರಾಜ್ಯದಿಂದ 26 ಜನ ಸಂಸದರು ಆಯ್ಕೆಯಾಗಿ ಕೇಂದ್ರಕ್ಕೆ ಹೋಗಿದ್ದಾರೆ. ಆದರೆ, ನಮ್ಮ ರಾಜ್ಯಕ್ಕೆ ಸಿಕ್ಕಿರುವಂತಹ ಮಂತ್ರಿಮಂಡಲದ ಪ್ರಾತಿನಿಧ್ಯ ಎಷ್ಟು? ಅದನ್ನು ನಾವು ಏಕೆ ಚಿಂತನೆ ಮಾಡಬಾರದು? ಅದನ್ನು ನಾವು ಏಕೆ ಚರ್ಚೆ ಮಾಡಬಾರದು? ಮಾನ್ಯ ಸುರೇಶ್ ಅಂಗಡಿಯವರಿಗೆ ಒಂದು ಮಂತ್ರಿಗಿರಿಯನ್ನು ಕೊಟ್ಟಿದ್ದಾರೆ. ಅವರು ಬಜೆಟ್ ಆದ ಮೇಲೆ ಅಂಗಡಿಯನ್ನು ತೆಗೆದಿಲ್ಲ. ಒಂದು ಕೋಟಿ ರೂಪಾಯಿಗಳನ್ನು suburban ಗೆ ಕೊಟ್ಟಿದ್ದಾರೆ. ಅವರು ಅಂಗಡಿಯನ್ನು ಬಂದ್ ಮಾಡಬೇಕು. ಕೋಲಾರದಲ್ಲಿ ಇದ್ದಂತಹ ಒಂದು ರೈಲ್ವೆ ಕೈಗಾರಿಕೆಯನ್ನು ಸಂಪೂರ್ಣವಾಗಿ ಮುಚ್ಚಿದ್ದಾರೆ. Suburban Railway ಗೆ ಇವತ್ತು ಏನು ಸಿಗಲಿಲ್ಲ. ಇವತ್ತಿನ ದಿವಸ ನಾವು ನಿಮಗೆ ಶಕ್ತಿ ತುಂಬುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈಗ ಮಾನ್ಯ ಬಿಎಸ್.ಯಡಿಯೂರಪ್ಪನವರು ಸದನದಲ್ಲಿ ಇಲ್ಲ. ಮಾನ್ಯ ಬಿ.ಎಸ್.ಯಡಿಯೂರಪ್ಪನವರಿಗೆ ನಾನು ಹೇಳುವುದೇನೆಂದರೆ, ನೀವು ಶಕ್ತಿವಂತರಾಗಿ ನಿಂತುಕೊಳ್ಳಬೇಕು. ನಮ್ಮ ರಾಜ್ಯದ ಹಿತದೃಷ್ಟಿಯಿಂದ ನಿಮ್ಮ ಜೊತೆಗೆ ಎಲ್ಲರೂ ಸಹಾಯ ಮಾಡುವುದಕ್ಕೆ ತಯಾರಿದ್ದೇವೆ. ನೀವು ಯಾವ ಪಕ್ಷದವರು ಎನ್ನುವುದು ಇಲ್ಲಿ ನಮಗೆ ಚಿಂತೆ ಇಲ್ಲ. ನಾವು ಕೇಳುವಂಥದ್ದು ನಮ್ಮ ರಾಜ್ಯದ ಅಭಿವೃದ್ಧಿ ಆಗುತ್ತಿದೆಯೇ ಎಂದು, ಕಾರಣ ನಮ್ಮ ರಾಜ್ಯ ಸೂಫಿಸಂತರ ನಾಡು. ಮಾನ್ಯ ಸದಸ್ಯರಾದ ಆಯನೂರು ಮಂಜುನಾಥರವರು ಇದನ್ನು ತಿಳಿದುಕೊಳ್ಳಬೇಕು. ನೂರಾರು ವರ್ಷಗಳಿಂದ ದೊಡ್ಡ ಸಮಾಜ ಎಂದರೆ, ವೀರಶೈವ ಲಿಂಗಾಯುತ ಸಮಾಜ. ಇದನ್ನು ನಾನು ಓಪನ್ ಆಗಿ ಹೇಳುತ್ತೇನೆ. ಹೌದು. ಇವತ್ತು ಆ ಸಮಾಜ ಇರುವುದರಿಂದ ನಮ್ಮ ರಾಜ್ಯದಲ್ಲಿ ನಿರೀಕ್ಷೆ ಎನ್ನುವುದು

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉಳಿದಿದೆ. ಸುಮಾರು 800 ವರ್ಷಗಳ ಹಿಂದೆ ಕಾಡಿಗೆ ಓಡಿಹೋಗಿ ಜೋಳಿಗೆ ಹಿಡಿದು ಭಿಕ್ಷೆ ಎತ್ತಿ ಅನ್ನದಾಸೋಹ, ವಿದ್ಯಾದಾಸೋಹ ಕೊಟ್ಟಿರುಂತಹ ಸಮಾಜಕ್ಕೆ ಸೇರಿರುವಂಥವರು. ಮಾನ್ಯ ಬಿ.ಎಸ್ ಯಡಿಯೂರಪ್ಪನವರು ಆ ದೃಷ್ಟಿಯಿಂದ ನಾವು ಅವರನ್ನು ಗೌರವಿಸುತ್ತಿದ್ದೇವೆ. ಅವರು ಮುಖ್ಯ ಮಂತ್ರಿಯಾಗಿದ್ದಾರೆ. ಇವತ್ತಿನದಿವಸ ನೀವೆಲ್ಲರೂ ಸೇರಿ ಕೇಂದ್ರಕ್ಕೆ ಹೋಗಿ ಈ ರೀತಿ ನೀವು ಮಾತನಾಡುತ್ತಿರುವುದು ತಪ್ಪು ನಮ್ಮ ಜಿಎಸ್‌ಟಿ ಹಣವನ್ನು ವಾಪಸ್ ಕೊಡಿ. ಮೂರು ಲಕ್ಷ ಮನೆಗಳು ಬಿದ್ದುಹೋಗಿವೆ. ಲಕ್ಷಾಂತರ ಜನ ಇವತ್ತಿನ ದಿವಸ ನಿರುದ್ಯೋಗಿಗಳಾಗಿದ್ದಾರೆ. ಅವರಿಗೆ ಮನೆ ಮಠಗಳೂ ಇಲ್ಲ ಎಂದು ಕೇಂದ್ರ ಸರ್ಕಾರವನ್ನು ಕೇಳುವಂತಹ ಕೆಲಸವನ್ನು ನೀವೇನಾದರು ಮಾಡಿದ್ದರೆ, ನಾವು ಸಂಪೂರ್ಣವಾಗಿ ನಿಮ್ಮ ಜೊತೆಗೆ ನಿಲ್ಲುತ್ತಿದ್ದೆವು. ಆದರೂ ನಿಮ್ಮ ಜೊತೆ ಇವತ್ತು ನಿಂತಿದ್ದೇವೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಅವರ ಮನಸ್ಸಿನಲ್ಲಿರುವಂತಹ ಆಸೆಗಳನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತೊಡಿಕೊಂಡಿದ್ದಾರೆ. ಆ ಆಸೆಗಳು ಈಡೇರಬೇಕೆಂದರೆ, ಅದಕ್ಕೆ ಸಂಕಲ್ಪ ಬೇಕಾಗಿದೆ. ಸಂಕಲ್ಪ ಬೇಕೆಂದರೆ, ಪೂರ್ಣವಾದಂತಹ ಬೆಂಬಲ ಅವರಿಗೆ ಬೇಕಾಗಿದೆ. ಇವತ್ತಿನ ದಿವಸ ಮಾನ್ಯ ಬಿ.ಎಸ್. ಯಡಿಯೂರಪ್ಪನವರ ಪರಿಸ್ಥಿತಿ ಏನಾಗಿದೆ ಎಂದರೆ, ಅವರಿಗೆ ಮದುವೆ ಆಗಿದೆ. ಆದರೆ, ಅವರಿಗೆ ಪ್ರಸ್ತ ಮಾಡುವುದಕ್ಕೆ ಬಿಡುತ್ತಿಲ್ಲ. ಅವರು ನಮ್ಮ ಹುಡುಗಿ ಎಲ್ಲಿದ್ದಾರೆಂದು ಕೊಠಡಿಗಳನ್ನು ಹುಡುಕುತ್ತಿದ್ದಾರೆ. ಇಷ್ಟು ದಿವಸ ಬೇಕಾಗಿತ್ತಾ, ಈ ಮಂತ್ರಿಮಂಡಲವನ್ನು ರಚನೆ ಮಾಡುವುದಕ್ಕೆ? ಆ ಮಂತ್ರಿಮಂಡಲವನ್ನು ಅವರೇ ಮಾಡಬಹುದಿತ್ತು. ಆದರೆ ಅವರಿಗೆ ಅಧಿಕಾರ ಕೊಡಲಿಲ್ಲ. ಹಾಗಾಗಿ ಅದರಿಂದ ನಮಗೆ ಬಹಳ ನೋವು ಆಗುತ್ತಿತ್ತು. ಅವರಿಗೆ ಪೂರ್ಣವಾದಂತಹ ಅಧಿಕಾರ ಸಿಕ್ಕಿದರೆ, ಎಲ್ಲಾ ಪಕ್ಷದವರು ಅವರಿಗೆ ಸಹಾಯ ಮಾಡುವುದಕ್ಕೆ ತಯಾರಾಗಿದ್ದೇವೆ. ನಾವೇನು urgent ಮಾಡುತ್ತಿಲ್ಲ. ಏಕೆಂದರೆ, ಸುಮಾರು 65 ವರ್ಷಗಳ ಕಾಲ ನಮ್ಮ ದೇಶವನ್ನು ಕಾಂಗ್ರೆಸ್ ಪಕ್ಷ ಆಡಳಿತ ನಡೆಸಿದೆ. ಆದುದರಿಂದ ಇನ್ನು ಐದು ವರ್ಷ ನೀವು ಆಡಳಿತ ನಡೆಸುವುದಾದರೆ ನಮ್ಮ ಅಭ್ಯಂತರ ಇಲ್ಲ.

ಮಾನ್ಯ ಸಭಾಪತಿಯವರೇ, ಏಕಕಡನೆಯದಾಗಿ, ಮಾನ್ಯ ಸದಸ್ಯರು ಕಾನೂನಿನ ಬಗ್ಗೆ ಹೇಳಿದ್ದಾರೆ. ಅವರು ಪಾಕಿಸ್ಥಾನಕ್ಕೆ ಜೈ, ಹಿಂದೂಸ್ಥಾನಕ್ಕೆ ಜೈ ಎಂದು ಹೇಳಿದರು. 6 ವರ್ಷದ ಮಗು ಒಂದು ಡ್ರಾಮ ಮಾಡಿದೆ ಎಂದು ಆ ಮಗುವಿನ ತಾಯಿಯ ಮೇಲೆ ದೇಶದ್ರೋಹದ ಕೇಸ್ ಹಾಕಿದ್ದಾರೆ. ಅದನ್ನು ನೀವು ಸಮರ್ಥನೆ ಮಾಡುತ್ತೀರಾ ಹೇಳಿ. ಇವತ್ತಿನ ದಿವಸ ಆ ಮಗುವಿನ ತಾಯಿ ಜೈಲಿನಲ್ಲಿದ್ದಾರೆ. 13 ವರ್ಷದ ಹುಡುಗ ಗುಂಡಿಟ್ಟು ಹೊಡೆದರೆ ಅಂದರೆ, juvenile. Criminal Act ಆತನ ವಿರುದ್ಧ ಬರುವುದಿಲ್ಲ. ಕೇವಲ 6 ವರ್ಷದ ಮಗುವಿನ ತಾಯಿಯ ಮೇಲೆ ಕೇಸ್ ಹಾಕಿದ್ದಾರೆ. ಇವರು ಹೇಳಿದರು, ಹಿಂದೆ ಸೌತ್ ಕೆನರಾದಲ್ಲಿ *Kalladka Prabhakar Bhat* ಏನು ಮಾಡಿದರು, ಅವರ ವಿರುದ್ಧ ನಮ್ಮ ಸರ್ಕಾರ ದೇಶದ್ರೋಹದ ಕೇಸ್ ಹಾಕಲಿಲ್ಲ. ಅದಕ್ಕೆ ಇವರ ನಿಶಕ್ತಿ ಇತ್ತೋ, ಅಶಕ್ತಿ ಇತ್ತೋ ಗೊತ್ತಿಲ್ಲ. ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಯಾವತ್ತು confrontation ನಲ್ಲಿ ಗೆಲ್ಲಬೇಕೆಂದು ಹೇಳುವವನಲ್ಲ. Conciliation ನಲ್ಲಿ ಗೆಲ್ಲಬೇಕೆಂದು ಹೇಳುವವನು. ಹುಬ್ಬಳ್ಳಿ ಈದ್ಗಾ ಮೈದಾನ ಉರಿಯುತ್ತಿತ್ತು ಇವತ್ತು ಅಲ್ಲಿ ಪ್ರಶ್ನೆ ಇದೆಯಾ? ಇವತ್ತು ಸದನದಲ್ಲಿ ಮಾನ್ಯ ಬಸವರಾಜು ಬೊಮ್ಮಾಯಿ ಸದನದಲ್ಲಿ ಇಲ್ಲ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆ ಸಂದರ್ಭದಲ್ಲಿ ನನ್ನ 6 ವರ್ಷದ ಮಗ ಸತ್ತಿದ್ದ. 5ನೇ ತಾರೀಖು ಅವನನ್ನು ಮಣ್ಣು ಮಾಡಿ, 6 ನೇ ತಾರೀಖು ಹೋಗಿ ಹುಬ್ಬಳ್ಳಿಯಲ್ಲಿ ಕುಳಿತುಕೊಂಡು ಆ ಸಮಸ್ಯೆಯನ್ನು ಬಗೆಹರಿಸಿದ್ದೇನೆ. ಮೂರು ಸಾವಿರದ ಮಠದ ಸ್ವಾಮಿಗಳು ಒಂದು ಕಡೆ, ಮುಸಲ್ಮಾನರ ಸಮಾಜ ಒಂದು ಕಡೆ. ನಾವು ಏಕೆ ಬಗೆಹರಿಸಿದ್ದೇವೆ. ರಾಷ್ಟ್ರೀಯತೆಯ ಭಾವನೆಯಿಂದ ಬಗೆಹರಿಸಿದ್ದೇವೆ. ಇವತ್ತಿನ ದಿವಸ ಸಮಾಜದಲ್ಲಿ ಮುಸಲ್ಮಾರಿಗೆ ಅಕ್ಷರ ಜ್ಞಾನ ಇಲ್ಲವೆಂದು ಹೇಳುತ್ತಾರೆ. ಹೌದು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

**(18)18–02–2020(12–30)ಎಂವಿ–ಬಿಎನ್‌ಎಸ್**

**ಶ್ರೀ ಸಿ.ಎಂ.ಇಬ್ರಾಹಿಂ (ಮುಂದು):**

ಪಂಕ್ಚರ್ ಹಾಕುವ ನನ್ನ ಮಕ್ಕಳು ಇವರು. ಎರಡು ಅಕ್ಷರದ ಜ್ಞಾನವಿಲ್ಲದವರು ಎಂದು ನಿಮ್ಮ ಪಕ್ಷದ ಎಂ.ಪಿ.ಯವರು ಹೇಳಿದ್ದಾರೆ. ನಾವು ಅದನ್ನು ಸ್ವಾಗತ ಮಾಡಿದ್ದೇವೆ. ಹೌದು, ನಾವು ಕಾಯಕ ಮಾಡಿಕೊಂಡು ದುಡಿದು ತಿನ್ನುವಂತಹವರು. ನಮ್ಮ ಪರಿಸ್ಥಿತಿ ಏನಿದೆ ಎಂಬುದನ್ನು ನೀವೇ ಹೇಳುತ್ತಿದ್ದೀರಿ. ಅದನ್ನೇ ಇವತ್ತಿನ ದಿವಸ ಸಾಚಾರ್ ಕಮಿಟಿಯವರು ಹೇಳಿದ್ದಾರೆ. ಅದಕ್ಕೆ ನೀವು ಏನು ಮಾಡಬೇಕು ಎಂದರೆ, ನಾನು ಮಾನ್ಯ ಕೇಂದ್ರದ ಗೃಹಮಂತ್ರಿಗಳಾದ ಶ್ರೀ ಅಮಿತ್ ಶಾ ಮತ್ತು ದೇಶದ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರಿಗೆ ಪತ್ರ ಬರೆದಿದ್ದೇನೆ. ಇವತ್ತು CAA (Citizenship (Amendment) Act), NRC (National Register of Citizens) and NPR (National Population Register) ಬಗ್ಗೆ ಪ್ರಸ್ತಾಪ ಮಾಡಿದ್ದೀರೋ, Muslim intellectuals ಅನ್ನು ಕರೆಸಿ, ನಾವು ನಿಮ್ಮ ಜೊತೆ ಮಾತನಾಡುವುದಕ್ಕೆ ತಯಾರಿದ್ದೇವೆ. ನೀವು ಇವತ್ತು ಏನು CAA ಯಲ್ಲಿ ಕೇವಲ ಐದು ಸಮಾಜಗಳನ್ನು ಹೇಳಿದ್ದೀರೋ. ಜನವರಿ, 1948ರಲ್ಲಿ ಮಹಾತ್ಮ ಗಾಂಧಿಯವರು ಭಾಷಣ ಮಾಡುವಾಗ ಏನು ಹೇಳಿದ್ದಾರೆಂದರೆ, ಪಾಕಿಸ್ತಾನದಿಂದ ಬರುವಂತಹ ಹಿಂದೂಗಳಾಗಲಿ, ಸಿಖ್‌ರಾಗಲಿ, ಕ್ರೈಸ್ತರಾಗಲಿ ಅಥವಾ ಈ ರಾಷ್ಟ್ರದ ಮೇಲೆ ಭಕ್ತಿ ಇರುವಂತಹ ಮುಸಲ್ಮಾನರು ಬಂದರೂ ಕೂಡ ನಾವು ಅವರನ್ನು ಸ್ವಾಗತ ಮಾಡುತ್ತೇವೆಂದು ಹೇಳಿದ್ದಾರೆ. ಇದು ಮಹಾತ್ಮ ಗಾಂಧಿಯವರು 1948ನೇ ಇಸವಿಯಲ್ಲಿ ಮಾಡಿರುವಂತಹ ಭಾಷಣ. ಇವತ್ತು ಆರು ಜಾತಿಗಳಿಗೆ ಎಂದು ಏನು ಮಾಡಿದ್ದಾರೆ ಅದು ತಪ್ಪಾಗಿರಬಹುದು. ಚಳುವಳಿಗೆ ಕುಳಿತುಕೊಂಡಾಗ ಮಾತನಾಡುವುದಕ್ಕೆ ತಯಾರಾಗಿದ್ದೇವೆ ಎಂದು ಹೇಳಿದ್ದೇವೆ. ನಮ್ಮನ್ನು ಕರೆದು ನಮ್ಮ ಜೊತೆ ಚರ್ಚೆ ಮಾಡಿ. ಇವತ್ತು ಈ ಸಮಾಜದ ಎಲ್ಲರೂ ಏಕೆ ಎದ್ದು ನಿಂತಿದ್ದಾರೆ? ಈಗ ನಮಗೆ ಏನು ಭಯವಾಗುತ್ತಿದೆ ಎಂದರೆ, ಸಂವಿಧಾನವನ್ನು ಬದಲಾವಣೆ ಮಾಡುವಂತಹ ದೊಡ್ಡ ಹುನ್ನಾರ ನಡೆದಿದೆ ಎನ್ನುವಂತಹ ಭಾವನೆ ಬಂದಿದೆ. ಈ ತರಹದ ಭಾವನೆ ಬರುವುದಕ್ಕೆ ಕಾರಣವೇನು? ಮಾನ್ಯ ಲೋಕಸಭಾ ಸದಸ್ಯರಾದ ಶ್ರೀ ಅನಂತ ಕುಮಾರ್ ಹೆಗಡೆಯವರು ಬಂದ ತಕ್ಷಣ ಏನು ಹೇಳಿದರು ಎಂದರೆ, ನಾವು ಬಂದಿರುವುದೇ ಸಂವಿಧಾನವನ್ನು ತೆಗೆಯುವುದಕ್ಕೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಂದು ಹೇಳಿಲಿಲ್ಲವೇ? ಅವರಿಂದ ಆ ತರಹದ ಹೇಳಿಕೆ ಬಂತು. ಆಗ ನೀವು ಅವರ ಮೇಲೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ? ಇವತ್ತು ಅದೇರೀತಿ ನಿಮ್ಮ ಆರ್.ಎಸ್.ಎಸ್.ನ ಕಾರ್ಯದರ್ಶಿಯಾದ ಶ್ರೀ ಬಿ.ಎಲ್.ಸಂತೋಷ್...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರ ಆದೇಶವನ್ನೇ ಉಲ್ಲೇಖ ಮಾಡಿ ಹೇಳುತ್ತೇನೆ. ಈ ಸದನದಲ್ಲಿ ತಮ್ಮನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲದವರ ಹೆಸರನ್ನು ಉಲ್ಲೇಖ ಮಾಡಬಾರದು ಎಂದು ಮಾನ್ಯ ಸದಸ್ಯರೇ ಹೇಳಿದ್ದಾರೆ. ಆದುದರಿಂದ ಮಾನ್ಯ ಬಿ.ಎಲ್.ಸಂತೋಷ್‌ರವರ ಹೆಸರನ್ನು ಉಲ್ಲೇಖ ಮಾಡದೆ ಹೇಳಬೇಕು.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರ ಹೆಸರನ್ನು ತೆಗೆಯಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ನಾನು ಹೇಳುವುದನ್ನು ಕೇಳಲಿ, ಅವರು ಭಾರಿ ಪ್ರಾಮಾಣೀಕಸ್ಥರು. ನನ್ನ ಮನಸ್ಸಿನಲ್ಲಿ ಅವರ ಬಗ್ಗೆ ಯಾವ ಭಾವನೆಯಿದೆ ಎಂದು ಅದು ಅವರಿಗೆ ಗೊತ್ತಿದೆ. ರಾಜಕೀಯ ನನ್ನ ಕಸಬು ಅಲ್ಲ, ಅದು ನನ್ನ ಹವ್ಯಾಸ. ದಯವಿಟ್ಟು ಸ್ವಲ್ಪ ನಾನು ಏನು ಹೇಳುತ್ತೇನೆಂದು ಕೇಳಿ. ಅವರು ಹೇಳಿರುವಂಥದ್ದು ಸತ್ಯವೋ ಸುಳ್ಳೋ, ಅವರು ಹೇಳಿದ್ದಾರೋ ಇಲ್ಲವೋ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಮಗೆ ಅವರ ಬಗ್ಗೆ ಇರುವಂತಹ ಆತಂಕ ಏನೆಂದರೆ, ಅವರ ರಾಜಕಾರಣದ ಅನುಭವ, ವಿಚಾರಗಳ ಮಂಡನೆ, ಸಮಸ್ಯೆಗಳ ವಿಶ್ಲೇಷಣೆ, ಕರ್ನಾಟಕದಲ್ಲಿ ಮತ್ತೊಬ್ಬ ರಾಜಕಾರಣಿ ಅವರ ಎದುರಿಗೆ ನಿಲ್ಲುತ್ತಾರೆ ಎಂದು ಹೇಳುವ ಧೈರ್ಯ ನನಗೆ ಇಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:–** ಶರಣು, ಶರಣಾರ್ಥಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗ ನಮಗೆ ಇರುವ ಆತಂಕ ಏನೆಂದರೆ, ಅವರು ಪಾತ್ರ ಪ್ರದರ್ಶನ ಮಾಡುವುದರಲ್ಲಿ ಅದ್ಭುತ ವ್ಯಕ್ತಿ. ಅವರು ಶ್ರೀರಾಮನ ಬಗ್ಗೆ ಮಾತನಾಡುತ್ತಾ ಹೋದರೆ, ಜಯ ಪುರುಷ ಶ್ರೀರಾಮ ಎಂದು ಹೇಳುತ್ತಾರೆ. ಒಂದು ವೇಳೆ ರಾವಣನನ್ನು ಸಮರ್ಥನೆ ಮಾಡುತ್ತಾ ಹೋದರೆ, ಆ ರಾವಣನಿಗಿಂತ ಒಬ್ಬ ದೊಡ್ಡ ವ್ಯಕ್ತಿ ಇನ್ನೊಬ್ಬರಿಲ್ಲವೆಂದು ಸೃಷ್ಟಿ ಮಾಡುತ್ತಾರೆ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಅವರಿಗೆ ರಾವಣನ ಚರಿತ್ರೆ ಗೊತ್ತಿಲ್ಲ. ರಾವಣ ಭಾರಿ ದೊಡ್ಡ ಮತ್ತು ಮಹಾನ್ ಶಿವಭಕ್ತ ಮತ್ತು ಶಿವನ ಬಳಿ ಇಷ್ಟಲಿಂಗ ಪಡೆದ ಮಹಾತ್ಮ. ನಾನು ಹೇಳುವುದನ್ನು ಕೇಳಿ, ದಯವಿಟ್ಟು ಸಭಾ ನಾಯಕರು ಕುಳಿತುಕೊಳ್ಳಬೇಕು.

**ಡಾ॥ ತೇಜಸ್ವಿನಿ ಗೌಡ:–** ರಾಮನನ್ನು ಅವಹೇಳನ ಮಾಡುವ ಭಾವನೆಯಿಂದ ರಾವಣನನ್ನು ಆರಾಧಿಸುವುದನ್ನು ಬಿಟ್ಟರೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಅದು ಇಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಅದು ಬೇರೆ ಚರ್ಚೆ. ನಿಮ್ಮಂತಹವರೇ ಅದನ್ನು ಮಾಡಿದರೆ ಹೇಗೆ?

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ರಾವಣನು ಸಾಯುವ ಸಮಯದಲ್ಲಿ ಶ್ರೀರಾಮ ಲಕ್ಷ್ಮಣನಿಗೆ ಹೇಳುತ್ತಾನೆ ಹೋಗಿ ರಾವಣನ ಆಶೀರ್ವಾದ ಪಡೆದುಕೋ ಎಂದು. ಶ್ರೀರಾಮಚಂದ್ರ ಅವನ ಹತ್ತಿರ ಹಿತವಚನ ತೆಗೆದುಕೊಳ್ಳುವುದಕ್ಕೆ ಲಕ್ಷ್ಮಣನನ್ನು ಖುದ್ದು ರಾವಣನ ಹತ್ತಿರಕ್ಕೆ ಕಳುಹಿಸಿಕೊಡುತ್ತಾನೆ. ಇಲ್ಲಿ ಏನಾಗಿದೆ ಎಂದರೆ, ಜಾಸ್ತಿ ಓದಿ ಬಿಟ್ಟಿದ್ದೇವೆ, ಆದುದರಿಂದ ನಮ್ಮ ಬಳಿ ದುಡ್ಡಿಲ್ಲ ಮತ್ತು ಜಾತಿಯಿಲ್ಲ. ಈಗ ಅದೇ ಬಂದಿರುವುದು. ಇವತ್ತು ಅವರ ಪಕ್ಷದ ಕಾರ್ಯದರ್ಶಿಯವರು ಏನೆಂದು ಹೇಳಿದ್ದಾರೆಂದರೆ, ಶೇಕಡಾ 68ರಷ್ಟು ಜನರು ಹೊರಗಿನಿಂದ ಬಂದಿದ್ದಾರೆಂದು ಕ್ಯಾಸೆಟ್ ಬಂತು. ಆ ಶೇಕಡಾ 68ರಲ್ಲಿ ಭೋವಿ, ವಾಲ್ಮೀಕಿ ಮತ್ತು ದಲಿತರು, ಇವರಿಗೆ ನಾಗರಿಕತ್ವ ಕೊಟ್ಟರೆ ಅವರಿಗೆ ಸಿಟ್ಟು ಏಕೆ? ಇವರು ಹೊರಗಿನಿಂದ ಬಂದಿರುವವರೇ? ನೀವು ಈ ರಾಜ್ಯದ ಜನರಿಗೆ ಯಾವ ರೀತಿಯ ಸಂದೇಶವನ್ನು ಕೊಡುತ್ತಿದ್ದೀರಿ. ಮಾನ್ಯ ಸಭಾ ನಾಯಕರಾದ ಪೂಜಾರಿಯವರೇ ನೀವು ಚಿಂತನೆ ಮಾಡಿ. ಇವತ್ತು ಯಾರಾದರೂ ನಿಮ್ಮ ವಿರುದ್ಧವಾಗಿ ಮಾತನಾಡಿದರೆ ಅವರನ್ನು ದೇಶದ್ರೋಹಿಗಳು ಎನ್ನುತ್ತಾರೆ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಲ್. ಸಂತೋಷ್‌ಜೀಯವರು ನಮ್ಮ ರಾಷ್ಟ್ರೀಯ ನಾಯಕರು. ಅವರು ಈ ಸದನದಲ್ಲಿ ಇಲ್ಲ. ಮಾನ್ಯ ಸಿ.ಎಂ.ಇಬ್ರಾಹಿಂಜೀಯವರಂತಹ ನುರಿತ ಮುತ್ಸದ್ದಿಗಳು ಈ ಸದನವನ್ನು ಉದ್ದೇಶಪೂರ್ವಕವಾಗಿ ಅಪಾರ್ಥ ಮಾಡಿಸುವುದಕ್ಕೆ ಅವಕಾಶವಿಲ್ಲ. ಅವರು ತಪ್ಪು ವ್ಯಾಖ್ಯಾನವನ್ನು ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ನಾನು ತಪ್ಪು ವ್ಯಾಖ್ಯಾನವನ್ನು ಮಾಡುತ್ತಿಲ್ಲ. ಕ್ಯಾಸೆಟ್ ಬಗ್ಗೆ ಹೇಳುತ್ತಿದ್ದೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಅದು ಯಾವ ಕ್ಯಾಸೆಟ್?

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಇಲ್ಲಿ ಯದ್ವಾತದ್ವ ಗಂಟೆಗಳು ಅಲುಗಾಡುತ್ತಿವೆ ಇದಕ್ಕೆ ಏನು ಹೇಳುತ್ತೀರಿ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಂತೋಷ್‌ಜೀಯವರು ವಿದ್ವತ್ ಇರುವಂತಹವರು ಮತ್ತು ಅವರು ನಮ್ಮ ಪಕ್ಷದ ಕೆಲಸ ಮಾಡುತ್ತಿದ್ದಾರೆ. ಈಗ ಅಧಿಕಾರದಲ್ಲಿ ಇಲ್ಲದೇ ಇರುವಂತಹವರು ದೇಶದ ಬಗ್ಗೆ ಮತ್ತು ದೀನ ದಲಿತರ ಬಗ್ಗೆ ಮಾತ್ರ ಮಾತನಾಡುತ್ತಾರೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಈ ತರಹದ ಕ್ಯಾಸೆಟ್ ಬಂದರೆ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹೇಗೆ ಇರುತ್ತದೆ?

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಒಂದು ರಾಷ್ಟ್ರೀಯ ಪಕ್ಷದ ಹಿರಿಯರಾದವರು ಉದ್ದೇಶಪೂರ್ವಕವಾಗಿ ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಅದು ನಮಗೆ ಅಸಮಾಧಾನದ ವಿಚಾರ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:** ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂರವರೇ ಹೆಸರು ಹೇಳುವುದು ಬೇಡ, ವಿಷಯವನ್ನು ಮುಂದುವರೆಸಿ. ಈಗ ಅವರು ಮಾತನಾಡುವುದನ್ನು ಮುಂದುವರೆಸಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಯಾವುದೇ ಸಂದರ್ಭದಲ್ಲಿಯಾದರೂ ಮಾನ್ಯ ಸದಸ್ಯರಾದ ಸಿ.ಎಂ.ಇಬ್ರಾಹಿಂ ಸಾಹೇಬರ ಭಾಷಣವನ್ನು ತಡೆಯುವಂತಹ ಶಕ್ತಿ ನಮಗೆ ಯಾರಿಗೂ ಇಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾ ನಾಯಕರು ಆ ರೀತಿಯು ಹೇಳುತ್ತಾರೆ ಮತ್ತು ಹೀಗೂ ಹೇಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಅವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಯಾಯ ರಾಜಕೀಯ ಸಂಘಟನೆಯ ಕಾರ್ಯಕರ್ತರು, ಪ್ರಮುಖರು ಮತ್ತು ಶಾಸಕರು ತಮ್ಮ ಅಭಿಪ್ರಾಯಗಳನ್ನು ಧ್ವನಿಯ ಮೂಲಕ ವಿಚಾರಗಳನ್ನು ಹೇಳುವಂತಹ ಅವಕಾಶವಿರುತ್ತದೆ. ಅದಕ್ಕೆ ಮತ್ತೊಂದು ರಾಜಕೀಯ ಪಕ್ಷದವರು ಮಾರುತ್ತರವನ್ನು ಕೊಡುತ್ತಾರೆ. ಇದು ಪ್ರಜಾಪ್ರಭುತ್ವದ ವ್ಯವಸ್ಥೆ. ಯಾರಾದರೂ ನಮ್ಮ ಕಡೆಯಿಂದ ಏನಾದರೂ ಹೇಳಿದರೂ ಕೂಡ ಮತ್ತೊಂದು ಕಡೆಯಿಂದ ಭಾಷಣ ಮಾಡಿ ಉತ್ತರವನ್ನು ಕೊಡುತ್ತಾರೆ. ಇದು ಈಗ ಇರುವಂತಹ ವ್ಯವಸ್ಥೆ. ಹಾಗಾಗಿ ನಿಮ್ಮ ವಾದವನ್ನು ಒಂದು ಚೌಕಟ್ಟಿನ ಒಳಗೆ ಗೌರವಿಸಬೇಕು ಮತ್ತು ನಮ್ಮ ವಾದವನ್ನು ಕೂಡ ನೀವು ಅರ್ಥ ಮಾಡಿಕೊಳ್ಳಬೇಕು ಎಂಬುದಷ್ಟೆ ವಿಚಾರ. ಹಾಗಾಗಿ ಏನು ಹೇಳಿದ್ದಾರೆ ಅದೇ ತಪ್ಪು ಎಂದು ಹೇಳುವುದಕ್ಕೆ ಆಗುವುದಿಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಅವರು ತಪ್ಪು ಮಾಡಿದ್ದಾರೆಂದು ಹೇಳಿಲ್ಲ. ನಿಮ್ಮ ಅವಗಾಹನೆಗೆ ಸಮರ್ಪಣೆ ಮಾಡಿದ್ದೇನೆ. ಈ ದೇಶದ ವಾಲ್ಮೀಕಿ, ದಲಿತರು ಮತ್ತು ಭೋವಿ ಇವರಿಗೆ ನಾಗರಿಕತ್ವ ಕೊಡುವುದರಲ್ಲಿ ತಪ್ಪೇನು? ನೀವು ರಾಮಾಯಣವನ್ನು ಒಪ್ಪಿಕೊಳ್ಳುತ್ತೀರಿ ಅದೇ ರೀತಿ ವಾಲ್ಮೀಕಿಯನ್ನು ಸಹ ಒಪ್ಪಿಕೊಳ್ಳಿ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ನಾವು ಮಹರ್ಷಿ ವಾಲ್ಮೀಕಿ ರಾಮಾಯಣವನ್ನು ಒಪ್ಪಿಕೊಳ್ಳಿ ಎಂದು ಹೇಳುತ್ತಿದ್ದೇವೆ. ನೀವು ತಪ್ಪು ಆರೋಪವನ್ನು ಮಾಡಬೇಡಿ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಡಾ॥ ತೇಜಸ್ವಿನಿ ಗೌಡರವರೇ ನಿಮ್ಮ ಅವಕಾಶ ಬಂದಾಗ ಮಾತನಾಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಏನು ಹೇಳಿದ್ದಾರೆ, ಅದಕ್ಕೆ ನೀವು ಗೌರವ ನೀಡಿ. ಈಗ ನಮ್ಮ ಮತ್ತು ನಿಮ್ಮ ಉದ್ದೇಶ ರಾಜ್ಯಕ್ಕೆ ಮತ್ತು ಜನರಿಗೆ ಒಳ್ಳೆಯದಾಗಬೇಕು ಎಂಬುದು. ಈಗ ಜಾತಿ ಬಗ್ಗೆ ಹೇಳುವುದಾದರೆ, ನಾನು ಮುಸ್ಲಿಂ ಜಾತಿಯಲ್ಲಿ ಹುಟ್ಟಿದ್ದೇನೆ. ಕೆಲವರು ಪೂಜಾರಿಯವರ ಜಾತಿಯಲ್ಲಿ ಹುಟ್ಟಿದ್ದಾರೆ, ಕೆಲವರು ಲಿಂಗಾಯುತರ ಜಾತಿಯಲ್ಲಿ ಹುಟ್ಟಿದ್ದಾರೆ. ಇಂತಹ ಜಾತಿಯಲ್ಲಿ ಹುಟ್ಟಿಸು ಎಂದು ನಾವು ಏನು ದೇವರಿಗೆ ಅರ್ಜಿ ಕೊಟ್ಟಿದ್ದೇವೆಯೇ? ಈಗ ನಾವು ಈ ಜಾತಿಯಲ್ಲಿ ಹುಟ್ಟಿ ಬಿಟ್ಟಿದ್ದೇವೆ. ಆದರೆ, ಹಿಂದೂ ಧರ್ಮ ಏನು ಹೇಳುತ್ತದೆಂದರೆ; "ಸ್ವಧರ್ಮ ನಿಷ್ಠೆ, ಪರಧರ್ಮ ಸಹಿಷ್ಣುತೆ, ಸರ್ವಧರ್ಮ ಸಮನ್ವಯ, ಸರ್ವೇಜನೋ ಸುಖೀನೋಭವಂತು" ಇದು ಈ ದೇಶದಲ್ಲಿ ಆಗುತ್ತಿದೆಯೇ? ದಯವಿಟ್ಟು ಇದನ್ನು ನೀವು ನಿಮ್ಮ ಆತ್ಮಕ್ಕೆ "ಅನ್ಯರ ಡೊಂಕನ್ನು ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವಾ ಸಂತೈಸಿಕೊಳ್ಳಿ" ಎಂದು ಭಕ್ತ ಭಂಡಾರಿ ಬಸವಣ್ಣನವರು ಹೇಳಿರುವಂತಹ ಮಾತು. ಇವತ್ತು ಸರ್ಕಾರ ನಿಮ್ಮ ಕೈಯಲ್ಲಿ ಇದೆ. ಪೊಲೀಸರು ಸೂರ್ಯಕಾಂತಿ ಹೂವು ಇದ್ದ ಹಾಗೆ, ಅವರು ಮೈ ಮೇಲೆ ಬಿದ್ದು ಪ್ರಮೋಷನ್ ತೆಗೆದುಕೊಳ್ಳುತ್ತಾರೆ. ನಾನು ಅವರನ್ನು ನೋಡಿದ್ದೇನೆ. ಅವರುಗಳು ದೇವಸ್ಥಾನದ **XXX** ಇದ್ದ ಹಾಗೆ. ಅವರು ನಿಮ್ಮ ಹತ್ತಿರ ಅಧಿಕಾರ ಇದ್ದಾಗ ನಿಮ್ಮ ಕಡೆ ಇರುತ್ತಾರೆ, ಇವರ ಹತ್ತಿರ ಅಧಿಕಾರ ಬಂದಾಗ ಇವರ ಕಡೆ ಇರುತ್ತಾರೆ.

**ಡಾ|| ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಾನು ಇದನ್ನು ಬಿಡುವುದಿಲ್ಲ, ಇದನ್ನು ಖಂಡಿಸುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಕೇಳು ತಾಯಿ, ನಾನು 1980ರಲ್ಲಿ ಮದುವೆಯಾಗಿ, 1990ರಲ್ಲಿ ಮಿನಿಸ್ಟರ್ ಆಗಿದ್ದೆ, ಕುಳಿತುಕೊಳ್ಳವ್ವ ನನಗೆ ಗೊತ್ತಿದೆ.

**ಡಾ|| ತೇಜಸ್ವಿನಿ ಗೌಡ:–** ನಾನು ಕುಳಿತುಕೊಳ್ಳುವುದಿಲ್ಲ. ನೀವು **XXX** ಏಕೆ ಅಪಮಾನ ಮಾಡುತ್ತೀರಿ. **XXX** ಸೃಷ್ಟಿಸಿದ ಸಮಾಜವನ್ನು ಖಂಡಿಸಿ. ನೀವು ಅವರ ಉದಾಹರಣೆಯನ್ನು ಏಕೆ ತೆಗೆದುಕೊಳ್ಳುತ್ತೀರಿ. ನಿಮಗೆ ಹೆಣ್ಣು ಮಕ್ಕಳೇ ಸಿಗುತ್ತಾರೆಯೇ?

---

**XXX ಸಭಾಪತಿಯವರ ಅಪ್ಪಣೆ ಮೇರೆಗೆ ಸದರಿ ಪದವನ್ನು ಕಡತದಿಂದ ತೆಗೆದು ಹಾಕಲಾಗಿದೆ.**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಇವತ್ತು ನಾವು ಅಧಿಕಾರಿಗಳನ್ನು ಎಷ್ಟು ಕಟ್ಟುನಿಟ್ಟಾಗಿ ಇಡುತ್ತೇವೆಯೋ **(ಗೊಂದಲ)** ಭ್ರಷ್ಟಾಚಾರ ಅಲ್ಲೇ ಇದೆ. ನಮ್ಮ ರಾಜಕಾರಣಿಗಳದ್ದು ಏನೂ ಇಲ್ಲ. ನಾವು ಐದು ವರ್ಷಕ್ಕೆ ಹೊರಟು ಹೋಗುತ್ತೇವೆ. ನಾವು 1980ರಲ್ಲಿ ಯೋಜನಾ ಆಯೋಗದ ಮುಖ್ಯಸ್ಥರಾಗಿದ್ದ ಶ್ರೀಮಾನ್ ನಂಜುಂಡಪ್ಪನವರ ಕೈಕೆಳಗೆ ಬೆಳೆದವರು. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ನಿಜಲಿಂಗಪ್ಪನವರ ಹತ್ತಿರ ಸಾಯುವ ಕೊನೆಯ ದಿನಗಳಲ್ಲಿ ಕಾರು ಇರಲಿಲ್ಲ.

**19) 18.02.2020 12-40 LL-BNS**

**ಶ್ರೀ ಸಿ.ಎಂ.ಇಬ್ರಾಹಿಂ (ಮುಂದು):**

ಮಾನ್ಯ ವೀರೇಂದ್ರ ಪಾಟೀಲ್‌ರವರು ಸತ್ತಾಗ 80 ಲಕ್ಷ ರೂಪಾಯಿ ಸಾಲ ಇತ್ತು. ಅಂತಹವರ ಕೈ ಕೆಳಗಡೆ ಬೆಳೆದಂತವರು ನಾವು. 'ಅರಮನೆ ದುಡ್ಡು, ಗುರುಮಲೆ ದುಡ್ಡಿಗೆ ನಿಲ್ಲುವುದಿಲ್ಲ' ಎಂಬ ಮಾತನ್ನು ಶ್ರೀ ಡಿ.ದೇವರಾಜು ಅರಸುರವರು ಪದೇ ಪದೇ ನನಗೆ ಹೇಳುತ್ತಿದ್ದರು. ನಾವು ಎಷ್ಟು ದುಡ್ಡು ಮಾಡಿದರೂ ಸಹ ದುಡ್ಡು ನಮ್ಮ ಬಳಿ ನಿಲ್ಲುವುದಿಲ್ಲ. 'ಪಾಪಿಯ ಹಣ ಪ್ರಾಯಶ್ಚಿತಕ್ಕಲ್ಲದೇ, ಸತ್ಪಾತ್ರಕ್ಕೆ ಸಲ್ಲದಯ್ಯ, ನಾಯಿಯ ಹಾಲು ನಾಯಿಯ ಮಕ್ಕಳಿಗಲ್ಲದೇ, ಪಂಚಾಮೃತಕ್ಕೆ ದಕ್ಕದಯ್ಯ'. ಆದುದರಿಂದ, ಇವೊತ್ತಿನ ದಿನ ನಾವು ರಾಜ್ಯಕ್ಕೆ ಮಾರ್ಗದರ್ಶನ ಕೋಡೋಣ. ಶ್ರೀ ಬಿ.ಎಸ್. ಯಡಿಯೂರಪ್ಪನವರು ಸರ್ಕಾರ ನಡೆಸಲಿ. ಅದರಲ್ಲಿ ನಮ್ಮದೇನು ಬೇರೆ ಮಾತಿಲ್ಲ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಇಬ್ರಾಹಿಂ ಸಾಹೇಬರು ಬಹಳ ಅರ್ಥಗರ್ಭಿತವಾಗಿರತಕ್ಕಂತಹ ಮಾತುಗಳನ್ನು ಆಡುತ್ತಿದ್ದರು. ಬಹಳ ಶ್ರದ್ಧೆಯಿಂದ ನಾನು ಅವರ ಮಾತುಗಳನ್ನು ಕೇಳುತ್ತಿದ್ದೆನು. ಈ ಹಿಂದೆ ನಮ್ಮ ದೇಶ ಆಳಿದಂತಹ ಅನೇಕ ಮಹಾ ಪುರಷರ ಬಗ್ಗೆ ಅವರು ಉಲ್ಲೇಖ ಮಾಡಿದರು. ಈ ಸಂದರ್ಭದಲ್ಲಿ ಒಂದು ಘಟನೆ ನಾನು ಹೇಳುವುದಕ್ಕೆ ಬಯಸುತ್ತೇನೆ. ಗುಜರಾತ್ ರಾಜ್ಯದೊಳಗೆ ಒಬ್ಬ ವ್ಯಕ್ತಿ ಇದ್ದರು. ಅಲ್ಲಿ ರಾಜರ ಆಸ್ಥಾನ ಇತ್ತು. ಆ ಆಸ್ಥಾನದೊಳಗೆ ಬಹಳ ಪ್ರಮುಖ ಸ್ಥಾನವನ್ನು ಅಲಂಕರಿಸಿದಂತಹ ಒಬ್ಬ ಅಧಿಕಾರಿ ಇದ್ದರು. ಆತನ ಹೆಸರು ಶ್ರೀ ಉತ್ತಮ್ ಚಂದ್ ಗಾಂಧಿ ಎಂದು. ಮಹಾತ್ಮ ಗಾಂಧಿಯವರ ಅಜ್ಜ ಅವರು. ಒಮ್ಮೆ ಉತ್ತಮ್ ಚಂದ್ ಗಾಂಧಿಯವರ ಮನೆತನದೊಳಗೆ ಒಂದು ಕಲ್ಯಾಣ ಕಾರ್ಯ ನಡೆಯಿತು. ಆ ಕಲ್ಯಾಣ ಕಾರ್ಯ ನಡೆದಂತಹ ಸಂದರ್ಭದಲ್ಲಿ, ಶ್ರೀ ಉತ್ತಮ್ ಚಂದ್ ಗಾಂಧಿಯವರು, 'ನನ್ನ ಮಗಳ ಮದುವೆ ಇದೆ, ನೀವೆಲ್ಲರೂ ಬಂದು ಹಾರೈಸಿ ಆಶೀರ್ವದಿಸಬೇಕು' ಎಂದು, ರಾಜ್ಯದ ಎಲ್ಲಾ ಜನರಿಗೂ ಆಹ್ವಾನ ಕೊಟ್ಟಿದ್ದರು. ಆ ಕಾರ್ಯಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಜನ ಸೇರಿತ್ತು. ನಮ್ಮ ಕಡೆ ಲಗ್ನದೊಳಗೆ 'ಐಯರ್' ಎಂದು ಮಾಡುತ್ತಾರೆ. ಅಂದರೆ, ಗಿಫ್ಟ್ ಎಂದು. ಐಯರ್ ಮತ್ತು ಗಿಫ್ಟ್ ಎರಡೂ ಕೂಡ ಒಂದೇ ಅರ್ಥ ಬರುತ್ತದೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಅಲ್ಲಂ ವೀರಭದ್ರಪ್ಪ:–** ನಮ್ಮ ಕಡೆಯಲ್ಲಿ 'ಮುಯ್ಯಿ' ಎಂದು ಹೇಳುತ್ತೇವೆ.

**ಶ್ರೀ ಐವನ್ ಡಿ'ಸೋಜಾ:–** ನಮ್ಮ ಕಡೆಯಲ್ಲಿಯೂ ಸಹ 'ಐಯರ್' ಎಂದು ಹೇಳುತ್ತಾರೆ.

**(ಗೊಂದಲ)**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಅದನ್ನು 'ಉಡುಗೊರೆ' ಎಂದು ಹೇಳುತ್ತಾರೆ. ಆ ಕಲ್ಯಾಣ ಕಾರ್ಯದಲ್ಲಿ ಬಹಳಷ್ಟು ಜನ ಉಡುಗೊರೆಯನ್ನು ತಂದುಕೊಟ್ಟರು. ಸಾಯಂಕಾಲ ಆಯಿತು, ಎಲ್ಲಾ ಜನರು ಹೋದರು. ಆ ನಂತರ ಶ್ರೀ ಉತ್ತಮ್ ಚಂದ್ ಗಾಂಧಿಯವರು ತನ್ನ ಮನೆಯವರಿಗೆ ಇದೆಲ್ಲವನ್ನೂ ಒಂದು ರೂಮಿನಲ್ಲಿ ಇಡಿ ಎಂದು ಹೇಳುತ್ತಾರೆ. ಆ ರೂಮಿನೊಳಗೆ ಇಟ್ಟು ಮಾರನೆಯ ದಿನ ಬೆಳಿಗ್ಗೆ ಆ ಎಲ್ಲಾ ಉಡುಗೊರೆಯನ್ನು ಒಂದು ವಾಹನದಲ್ಲಿ ಏರಿಕೊಂಡು ರಾಜನ ಹತ್ತಿರ ಹೋಗುತ್ತಾರೆ. ಅಲ್ಲಿ ರಾಜನಿಗೆ, "ಮಹಾ ಪ್ರಭು ನಿನ್ನೆಯ ದಿವಸ ನಮ್ಮ ಮನೆಯಲ್ಲಿ ಕಲ್ಯಾಣ ಕಾರ್ಯ ಇತ್ತು. ಆ ಕಲ್ಯಾಣ ಕಾರ್ಯಕ್ಕೆ ರಾಜ್ಯದ ಎಲ್ಲಾ ಜನ ಬಂದಿದ್ದರು. ಅವರೆಲ್ಲರೂ ನಮಗೆ ಉಡುಗೊರೆ ಕೊಟ್ಟಿದ್ದಾರೆ. ಆದರೆ, ಈ ಉಡುಗೊರೆ ನನಗೆ ಸೇರುವಂಥದ್ದಲ್ಲ. ಅದೆಲ್ಲವೂ ತಮಗೆ ಸೇರುವಂಥದ್ದು" ಎಂದು ಹೇಳಿ ಉಡುಗೊರೆಯನ್ನು ರಾಜನಿಗೆ ಒಪ್ಪಿಸುತ್ತಾರೆ. ಅದಕ್ಕೆ ರಾಜ, "ನಿಮ್ಮ ಮನೆಯಲ್ಲಿ ಕಲ್ಯಾಣ ಕಾರ್ಯ ಇದ್ದು, ಉಡುಗೊರೆ ಕೊಟ್ಟಿರುವುದು ನಿಮಗೋಸ್ಕರ, ಇದನ್ನು ನನಗೆ ಏತಕ್ಕೆ ಕೊಟ್ಟಿದ್ದೀಯಾ" ಎಂದು ಕೇಳುತ್ತಾರೆ. ಆಗ ಶ್ರೀ ಉತ್ತಮ್ ಚಂದ್ ಗಾಂಧಿಯವರು ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ, ಉತ್ತಮ್ ಚಂದ್ ಗಾಂಧಿಯವರ ಮನೆಯಲ್ಲಿ ಕಲ್ಯಾಣ ಕಾರ್ಯಕ್ಕಾಗಿ ಜನ ಉಡುಗೊರೆ ತಂದುಕೊಟ್ಟಿರುವುದಿಲ್ಲ. ನಿನ್ನ ರಾಜ್ಯದ ಆಸ್ಥಾನದಲ್ಲಿ ಒಬ್ಬ ಹಿರಿಯ ಅಧಿಕಾರಿಯಾಗಿರುವುದರಿಂದ, ಆ ಅಧಿಕಾರವನ್ನು ನೋಡಿ ಈ ಉಡುಗೊರೆಯನ್ನು ತಂದುಕೊಟ್ಟಿದ್ದಾರೆಂಬ ಮಾತನ್ನು ಹೇಳಿ, ಆ ಉಡುಗೊರೆಯನ್ನು ತಮಗೆ ಸಮರ್ಪಣೆ ಮಾಡುತ್ತಿದ್ದೇನೆ. ಅದನ್ನು ತಾವು ಒಪ್ಪಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಾರೆ. ಆಗ ರಾಜ ಒಂದು ಮಾತನ್ನು ಹೇಳುತ್ತಾನೆ, ಅದೇನೆಂದರೆ, "ನನ್ನ ಆಸ್ಥಾನದೊಳಗೆ ನೀನು ಒಂದು ಪ್ರಮುಖ ಸ್ಥಾನದಲ್ಲಿರುವುದರಿಂದ ಆ ಅಧಿಕಾರ ಅಥವಾ ಕುರ್ಚಿಯ ಕಾರಣದಿಂದ ಉಡುಗೊರೆ ಕೊಟ್ಟಿದ್ದಾರೆಂದು" ಹೇಳಿದ ಮಾತನ್ನು ನಾನು ಮೆಚ್ಚಬೇಕಾಗುತ್ತದೆ. ಆದರೆ, ಈ ಉಡುಗೊರೆ ನನ್ನದಲ್ಲ ಎಂಬ ಭಾವನೆಯಿಂದ ನನಗೆ ಸಮರ್ಪಣೆ ಮಾಡಿದ್ದೀಯಾ. ಆದರೆ, ಈ ಉಡುಗೊರೆ ನನ್ನದು ಸಹ ಅಲ್ಲ. ಅದು ರಾಜ್ಯದ ಜನತೆಗೆ ಸೇರಬೇಕಾಗಿದೆ. ಆದುದರಿಂದ, ಇದು ಖಜಾನೆಗೆ ಸೇರಬೇಕೆಂದು ರಾಜ್ಯದ ಖಜಾನೆಗೆ ಜಮಾ ಮಾಡುತ್ತಾನೆ. ಇದು ಹಳೆಯ ಕಾಲದ ಕಥೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಈಗಿನ ಕಾಲದಲ್ಲಿ ಎಷ್ಟು ಜನ ಆ ರೀತಿ ಇದ್ದಾರೆ?

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಈಗ ನಾವು, ಅವರು, ಇಲ್ಲಿದ್ದವರು, ಅಲ್ಲಿದ್ದವರು ಕೇವಲ ಹೇಳುವುದೇ ಆಗಿದೆ. ಇವೊತ್ತಿನ ದಿವಸ ಆಚರಣೆಯೊಳಗೆ ಎಲ್ಲಿಯೂ ನಡೆಯುತ್ತಿಲ್ಲ. ಆದರೆ, ಹಿಂದಿನವರನ್ನು ಈಗ ನೆನಪಿಸಿಕೊಳ್ಳುವುದಕ್ಕೆ ತಮಗೆ ಅಭಿನಂದನೆಯನ್ನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಗೆ ಅಥವಾ ಉಪ ಮುಖ್ಯಮಂತ್ರಿಗಳಿಗೆ ಬರುವಂತಹ ಉಡುಗೊರೆಗಳನ್ನು ಸರ್ಕಾರಕ್ಕೆ ವಾಪಸ್ಸು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡಬೇಕು. They are not allowed to take away their gifts to their houses. **(ಗೊಂದಲ)** ಕೆಲವು ಮಂದಿ ಬಂಗಾರದ ಗಿಫ್ಟ್‌ಗಳನ್ನು... ಹಿಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು, ಶ್ರೀ ಎಸ್. ನಿಜಲಿಂಗಪ್ಪನವರು ತಮಗೆ ಬಂದಂತಹ ಉಡುಗೊರೆಗಳನ್ನು ಕ್ಯಾಬಿನೆಟ್ ಹಾಲ್‌ನಲ್ಲಿಯೇ ಇಟ್ಟಿದ್ದಾರೆ.

**(ಗೊಂದಲ)**

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮಗೆ ಯಾವುದೇ ವಾಚ್ ಉಡುಗೊರೆಯಾಗಿ ಬಂದಿರುವುದಿಲ್ಲ.

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರುಗಳು ತಮ್ಮ ವಾಚ್‌ಗಳನ್ನು ಯಾವಾಗ ಇಟ್ಟಿದ್ದಾರೆ? ಅದರ ಬಗ್ಗೆ ಮೀಡಿಯಾದಲ್ಲಿ ಸುದ್ದಿಯಾದ ನಂತರ ಇಟ್ಟಿರುತ್ತಾರೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಉಡುಗೊರೆಗಳು ಬಂದ ತಕ್ಷಣ ಅವುಗಳನ್ನು ಕೂಡಲೇ ತಮ್ಮ ಮನೆಗಳಿಗೆ ಒಯ್ಯಬಾರದು. It should be surrendered to the Government.

**(ಗೊಂದಲ)**

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ರೇವಣ್ಣನವರೇ, ನಮಗೆ ಯಾವುದೇ ವಾಚ್ ಅಥವಾ ಕನ್ನಡಕಗಳಂತಹ ಯಾವುದೇ ಉಡುಗೊರೆ ಬಂದಿರುವುದಿಲ್ಲ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾನು ಹೇಳಿರುವುದೇನೆಂದರೆ, ಮುಖ್ಯಮಂತ್ರಿಗಳಾದಂತವರು ಹಸ್ತಾಂತರವಾದಾಗ ಮುಖ್ಯಮಂತ್ರಿಗಳು ವಾಚ್‌ಗಳನ್ನು ಕೊಟ್ಟಿರುವುದನ್ನು ನೆನಪಿಸುತ್ತಿದ್ದೇನೆ. ಅದನ್ನು ಅವರು ಕೂಡ ತಿಳಿದುಕೊಳ್ಳಲಿ.

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ವಾಚ್ ಕೊಟ್ಟಿದ್ದನ್ನು ನಾನು ಅಭಿನಂದಿಸುತ್ತೇನೆ. ಆದರೆ, ವಾಚ್ ಕೊಟ್ಟಂತಹ ಪ್ರಸಂಗ ಮತ್ತು ಕೊಡಬೇಕಾದಂತಹ ಪರಿಸ್ಥಿತಿ ಯಾವಾಗ ನಿರ್ಮಾಣ ಆಯಿತು ಎನ್ನುವುದನ್ನು ಸ್ವಲ್ಪ ನೆನಪಿಸಿಕೊಳ್ಳಬೇಕು.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಎಲ್ಲರೂ ಕೂಡ ಅವರೇ ಆಗಿದ್ದು, ಇಲ್ಲಿ ಒಬ್ಬರ ವಿಷಯವನ್ನು ಮತ್ತೊಬ್ಬರು ತೆಗೆದುಕೊಳ್ಳುತ್ತಿದ್ದಾರೆ. ಆದುದರಿಂದ, ಈ ಬಗ್ಗೆ ಚರ್ಚೆ ಮಾಡುವುದು ಬೇಡ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)** ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ಮೊನ್ನೆಯ ದಿವಸ ಒಂದು ಮಾತನ್ನು ಹೇಳಿದರು. ಅದೇನೆಂದರೆ, ಒಬ್ಬ ಭಕ್ತ ಮಾನ್ಯ ಸ್ವಾಮೀಜಿಯವರಿಗೆ ಎರಡು ಶರ್ಟ್ ಮತ್ತು ಎರಡು ಲುಂಗಿಗಳನ್ನು ಉಡುಗೊರೆಯಾಗಿ ನೀಡಿದನು. ಆದರೆ, ಸ್ವಾಮೀಜಿಗಳು ಬೇರೆಯವರು ಕೊಟ್ಟಂತಹ ಶರ್ಟ್ ಮತ್ತು ಲುಂಗಿಗಳನ್ನು ಹಾಕುತ್ತಿದ್ದು, ಎರಡೂ ವರ್ಷಗಳಾದರೂ ಆ ಭಕ್ತ ಕೊಟ್ಟಂತಹ ಶರ್ಟ್ ಮತ್ತು ಲುಂಗಿಗಳನ್ನು ಹಾಕಲಿಲ್ಲ. ಇದರಿಂದಾಗಿ, ಆ ಭಕ್ತನಿಗೆ ಬಹಳ ಬೇಸರವಾಯಿತು. ಅದಕ್ಕೆ ಆತ, ಮಾನ್ಯ ಸ್ವಾಮೀಜಿಯವರಿಗೆ, "ನಾನು ಅತ್ಯಂತ ಪ್ರೀತಿ ಮತ್ತು ಗೌರವದಿಂದ ಎರಡು ಶರ್ಟ್ ಮತ್ತು ಎರಡು ಲುಂಗಿಯನ್ನು ತಮಗೆ ಕೊಟ್ಟಿದ್ದೇನೆ. ಆದರೆ, ತಾವು ಅವುಗಳನ್ನು ಹಾಕಿರುವುದಿಲ್ಲ"ವೆಂದು ಕೇಳಿದನು. ಅದಕ್ಕೆ, ಮಾನ್ಯ ಸ್ವಾಮೀಜಿಯವರು, "ಇಲ್ಲಪ್ಪಾ, ಅವುಗಳನ್ನು ನೀನು ಬಹಳ ಪ್ರೀತಿ ಮತ್ತು ಗೌರವದಿಂದ ಕೊಟ್ಟಿರುತ್ತೀಯಾ. ಆದರೆ, ನಾನು ಏತಕ್ಕೆ ಹಾಕಿರುವುದಿಲ್ಲವೆಂದರೆ, ಅದರಲ್ಲಿ ನೀನು ಕಿಸೆ(ಜೇಬು) ಹಾಕಿಸಿರುತ್ತೀಯಾ, ಅದಕ್ಕೆ ನಾನು ಅವುಗಳನ್ನು ಹಾಕಿರುವುದಿಲ್ಲ"ವೆಂದು ಉತ್ತರ ನೀಡುತ್ತಾರೆ. ಅದರಂತೆ, ಮಾನ್ಯ ಸ್ವಾಮೀಜಿಯವರ ಬಟ್ಟೆಯಲ್ಲಿ ಕಿಸೆ ಇರಬಾರದು. ಅಂತಹ ಸ್ವಾಮೀಜಿಗಳು ಇದ್ದಾರೆ. ಇಡೀ ಜಗತ್ತು ನಮಗೆ ಬರಲಿ ಎನ್ನುವ ಸ್ವಾಮೀಜಿಗಳು ಸಹ ನಮ್ಮ ರಾಜ್ಯದಲ್ಲಿ ಇದ್ದಾರೆ.

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ನನಗೆ ಬಹಳ ಅಭಿಮಾನ ಮತ್ತು ಸಂತೋಷ ಆಗುತ್ತದೆ. ಏಕೆಂದರೆ, ನಾನು ನಮ್ಮ ನಾಡು ಕರ್ನಾಟಕದಲ್ಲಿ ಹುಟ್ಟಿದ್ದೇನೆ. ಇವೊತ್ತು ರಾಷ್ಟ್ರಕವಿ ಶ್ರೀ ಪುಟ್ಟಪ್ಪನವರು, "ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ" ಎಂದು ಹಾಡಿದರು. ನಮ್ಮಲ್ಲಿ ನಡೆಯುವಷ್ಟು ದಾಸೋಹ ಹಿಂದೂಸ್ತಾನದ ಯಾವ ರಾಜ್ಯದಲ್ಲಿಯೂ ನಡೆಯುವುದಿಲ್ಲ. ಇಲ್ಲಿ ಮಕ್ಕಳಿಗೆ ಕೊಡತಕ್ಕಂತಹ ವಿದ್ಯಾಭ್ಯಾಸ, ಒಂದೊಂದು ಜಿಲ್ಲೆಯಲ್ಲಿ ಲಿಂಗಾಯುತರಾಗಲಿ, ಒಕ್ಕಲಿಗರಾಗಲಿ, ನಮ್ಮ ಧರ್ಮಸ್ಥಳದಲ್ಲಾಗಲೀ, ಉಡುಪಿಯಲ್ಲಾಗಲೀ, ನಡೆಯುತ್ತಿದೆ. ಕಾರಣ ಅದು ನಮ್ಮ ಪರಂಪರೆ. ಆದುದರಿಂದ, ಇವೊತ್ತಿನ ದಿವಸ ಮುಂದೆ ಇನ್ನೂ ಮಾತನಾಡತಕ್ಕಂತಹ ಅವಕಾಶ ಇದೆ. ಅದಕ್ಕಾಗಿ, ನಾನು ಮಾನ್ಯ ಬಿ.ಎಸ್. ಯಡಿಯೂರಪ್ಪನವರಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ದಯವಿಟ್ಟು, ಇಂದಿನ ಹಣಕಾಸಿನ ಪರಿಸ್ಥಿತಿ ಏನಿದೆ, ಆ ಬಗ್ಗೆ ಒಂದು ವೈಟ್ ಪೇಪರ್ ರಿಲೀಸ್ ಮಾಡಿ. ಅದನ್ನು ಮುಚ್ಚಿಡುವುದರಿಂದ ಏನೂ ಪ್ರಯೋಜನವಿಲ್ಲ. ಸತ್ಯಾಸತ್ಯತೆ ಇಷ್ಟು ದುಡ್ಡಿದೆ ಎಂಬುದನ್ನು ಹೇಳಬೇಕು. ಮೊನ್ನೆ ಮಾನ್ಯ ಬಿ.ಎಸ್. ಯಡಿಯೂರಪ್ಪನವರು, ಮಾನ್ಯ ಪ್ರಧಾನ ಮಂತ್ರಿಯವರ ಎದುರಿಗೆ, ಈ ರಾಜ್ಯದ ಬಗ್ಗೆ 4 ಸಲ ಕೇಳಿದರೂ ಪರಿಹಾರ ಸಿಕ್ಕಿರುವುದಿಲ್ಲವೆಂದು ಒಂದು ಮಾತನ್ನು ಹೇಳಿದರು. ಅದಕ್ಕಾಗಿ, ನಾನು ಅವರಿಗೆ ಅಭಿನಂದಿಸಿದ್ದೇನೆ. ಇವೊತ್ತಿನ ದಿವಸ ಕೇಂದ್ರ ಸರ್ಕಾರ ಯಾವುದೇ ಪಾರ್ಟಿಯಾಗಿರಲಿ, ರಾಜ್ಯದಲ್ಲಿರತಕ್ಕಂತಹ ಸರ್ಕಾರ ಯಾವುದೇ ಪಾರ್ಟಿಯಾಗಲಿ, ಆದರೆ, ರಾಜ್ಯದ ದೃಷ್ಟಿ ಬಂದಾಗ ನಮ್ಮೆಲ್ಲಾ ಪಕ್ಷಗಳು, ಪಕ್ಷ ಬೇಧ, ಜಾತಿ ಬೇಧ–ಭಾವಗಳನ್ನು ಮರೆತು ಒಂದಾಗಿದ್ದೇವೆಂದು ಹೇಳಿ ನಿಂತರೆ ಕರ್ನಾಟಕದ ನಮ್ಮ ಪಾಲು ಸಿಗುತ್ತದೆ. Karnataka is third largest State. ಮಾನ್ಯ ಸಭಾನಾಯಕರೇ, ಈ ದೇಶದ ಬೊಕ್ಕಸಕ್ಕೆ ದುಡ್ಡು ಕೊಡುತ್ತಿರುವ ರಾಜ್ಯ ನಮ್ಮದು. ಇವೊತ್ತಿನ ದಿವಸ ಅನೇಕ ರಾಜ್ಯದಿಂದ ಬಂದವರಿಗೂ ಕೂಡ, ಉದಾಹರಣೆಗೆ, ಉತ್ತರಪ್ರದೇಶದಿಂದ, ಬಿಹಾರದಿಂದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಥವಾ ಕಾಶ್ಮೀರದಿಂದ ಬಂದವರಿಗೆ ಹಾಗೂ ಬೆಂಗಳೂರಿನಿಂದ ಹೊರಗಡೆ ಇರುವವರನ್ನೂ ಕೂಡ ನಾವು ಎರಡು ಬಾಹುಗಳಿಂದ ಆಲಂಗಿಸಿದ್ದೇವೆ. ಆದರೆ, ನಮ್ಮ ಹಳ್ಳಿಗಳಲ್ಲಿರುವಂತಹ ಜನ ಇವೊತ್ತಿನ ದಿವಸ ನರಳುತ್ತಿದ್ದಾರೆ. ರೈತ ಇವೊತ್ತಿನ ದಿವಸ ನರಳುತ್ತಿದ್ದಾನೆ. ಆದುದರಿಂದ, ಇವೊತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ, ನಮ್ಮ ಹತ್ತಿರ ಇಷ್ಟು ದುಡ್ಡು ಇದೆ. ನಮಗೆ ಕೇಂದ್ರದಿಂದ GST (Goods and Services Tax) ಬಾಕಿ ಬರಬೇಕಾಗಿದ್ದು ಇಷ್ಟು, NREG (National Rural Employment Guarantee) Scheme ಗಳಲ್ಲಿ ಬರಬೇಕಾಗಿದ್ದು ಇಷ್ಟು ಹಣ ಎನ್ನುವುದನ್ನು ಒಪ್ಪಿಕೊಳ್ಳಬೇಕು. ಸತ್ಯ ಹೇಳುವಂತಹವರನ್ನು ಈ ರಾಜ್ಯದ ಜನ ಯಾವೊತ್ತು ಎತ್ತಿ ಹಿಡಿಯುತ್ತಾರೆ. ಮಾನ್ಯ ಬಿ.ಎಸ್. ಯಡಿಯೂರಪ್ಪನವರಲ್ಲಿ ಆ ಶಕ್ತಿ ಇದೆ. ಏಕೆಂದರೆ, ಸಿ.ಎಂ. ಇಬ್ರಾಹಿಂನವರು ಎಂತಹವರು ಎಂದು ಮಾನ್ಯ ಬಿ.ಎಸ್. ಯಡಿಯೂರಪ್ಪನವರನ್ನು ಖುದ್ದಾಗಿ ಕೇಳಿ. ಆದರೆ, ಅದನ್ನು ಬಹಿರಂಗ ಸಭೆಯಲ್ಲಿ ಕೇಳಬೇಕಾದ ಅವಶ್ಯಕತೆ ಇಲ್ಲ. ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಕೆಲವು ಯೋಜನೆಗಳನ್ನು ಜಾರಿಗೆ ತಂದರು. ಇಡೀ ಭಾರತ ದೇಶದ ಯಾವುದೇ ರಾಜ್ಯ ಕೊಡದೇ ಇರತಕ್ಕಂತಹ ಯೋಜನೆಗಳನ್ನು ಶ್ರೀಮಾನ್ ಸಿದ್ದರಾಮಯ್ಯವರು ಕೊಟ್ಟರು. ಆದರೂ ಅವರು ಸೋತರು. ಸೋಲುವುದಕ್ಕೆ ಬೇರೆ ಬೇರೆ ಕಾರಣಗಳಿವೆ. ಕೈ ಹಾಕದೇ ಇರುವ ಜಾಗದಲ್ಲಿ ಕೈ ಹಾಕಿದರೆ ಆಗುವ ಪರಿಸ್ಥಿತಿಯೇ ಅಂತಹದ್ದು.

**(20)18.02.2020/12.50/ವೈಎಲ್–ಕೆಎಸ್**

**ಶ್ರೀ ಸಿ.ಎಂ. ಇಬ್ರಾಹಿಂ (ಮುಂದು):**

ಆ ರೀತಿಯ ಕೆಲಸವನ್ನು ಆಡಳಿತ ಪಕ್ಷದವರು ಮಾಡುವುದಕ್ಕೆ ಹೋಗುವುದು ಬೇಡ. ಬಿಜೆಪಿ ಸರ್ಕಾರವು ಇನ್ನೂ ಮೂರು ವರ್ಷಗಳ ಅಧಿಕಾರಾವಧಿಯನ್ನು ಪೂರೈಸಬೇಕೆಂಬುದು ನಮ್ಮ ಆಸೆ. ಆದರೆ, ಎಷ್ಟು ವರ್ಷಗಳು ಅಧಿಕಾರದಲ್ಲಿ ಇರುತ್ತದೆ ಎಂಬುದು ಗೊತ್ತಿಲ್ಲ, ನಡೆಯಲಿ. ನಾವು ಮುಸಲ್ಮಾನರು, ಹೊಸ ಕಾರು ತೆಗೆದುಕೊಳ್ಳುವುದಕ್ಕೆ ನಮಗೆ ಸಾಧ್ಯ ಇಲ್ಲ. 4 ಕಾರುಗಳನ್ನು ಹೊಡೆದು ಒಂದು ಕಾರನ್ನು ಮಾಡುವುದೇ ನಮ್ಮ ಪರಂಪರೆ ಆಗಿದೆ. ಆದ್ದರಿಂದ ಅದರ ಮೇಲೆ GST (Goods and Services Tax) ಮತ್ತು CST (Central Sales Tax) ಈ ರೀತಿಯ ಯಾವುದೇ ತೆರಿಗೆಗಳನ್ನು ವಿಧಿಸುವುದಕ್ಕಾಗುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಅವರ ಮಂತ್ರಿಗಳಿಗೆ ಪಕ್ಷದಲ್ಲಿರತಕ್ಕಂಥವರಿಗೆ 'ನೀವು statement ನೀಡುವಾಗ, ದಯವಿಟ್ಟು ಇದನ್ನು ಹೇಳಬೇಡಿ' ಎಂದು ಸೂಚನೆ ಕೊಟ್ಟು, ಯಾವುದನ್ನು ಹೇಳಬಾರದು ಎಂಬುದನ್ನು ಮೊದಲೇ ತಿಳಿಸಬೇಕು. ಒಂದು ವಿಚಾರವನ್ನು ನಾನು ತಿಳಿಸಬಯಸುವುದೇನೆಂದರೆ, ಯಾವುದೇ ಕಾರಣಕ್ಕೂ ಸಂವಿಧಾನ ಶಿಲ್ಪಿ ಡಾ॥ ಬಾಬ ಸಾಹೇಬ್ ಅಂಬೇಡ್ಕರ್‌ರವರು ರೂಪಿಸಿದ ಸಂವಿಧಾನದಲ್ಲಿನ ಒಂದು ಅಕ್ಷರವನ್ನು ಸಹ ಬದಲಾಯಿಸುವುದಕ್ಕೆ ನಾವು ಒಪ್ಪುವುದಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದು ನಮ್ಮ ನಿಲುವು. ರಾಷ್ಟ್ರಪಿತ ಮಹಾತ್ಮ ಗಾಂಧಿಜೀಯವರ ಕಲ್ಪನೆ ಏನಿದೆ ಹಾಗೂ ಡಾ॥ ಬಾಬ ಸಾಹೇಬ್ ಅಂಬೇಡ್ಕರ್‌ರವರು ಸಂವಿಧಾನ ಹಕ್ಕನ್ನು ನೀಡಿರತಕ್ಕಂಥ ಮಹಾತ್ಮರು. ಡಾ॥ ಬಾಬ ಸಾಹೇಬ್ ಅಂಬೇಡ್ಕರ್‌ರವರು ನೀಡಿರುವ ಸಂವಿಧಾನವು ಪುಣ್ಯಾತ್ಮ ಬಸವಣ್ಣನವರಿಂದಲೇ ಆಯ್ಕೆ ಮಾಡಿಕೊಂಡು ಬರೆದಿರುವಂಥ ಪುಸ್ತಕವಾಗಿದೆ. 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಸಮಗಾರ ಹರಳಯ್ಯ ಮಾದಾರ ಚೆನ್ನಯ್ಯ, 'ಅವ ನಮ್ಮ ಅಣ್ಣಯ್ಯ, ಓ ಎಂದು ಕೂಗಿರಿ, ಕೂಡಲ ಸಂಗಯ್ಯ' ಎಂದು 800 ವರ್ಷಗಳ ಹಿಂದೆಯೇ ಹೇಳಿರುವಾಗ; ಈಗ ಹೇಳಿದರೇ ನಮ್ಮಲ್ಲಿ ಇಷ್ಟು ವಿರೋಧಗಳಿರುವಾಗ ಇನ್ನು 800 ವರ್ಷಗಳ ಹಿಂದಿನ ಪರಿಸ್ಥಿತಿ ಯಾವ ರೀತಿ ಇರಬಹುದೆಂಬುದನ್ನು ವಿಚಾರ ಮಾಡಿಕೊಳ್ಳಬೇಕು. ಹಿಂದೆ ಟಿ.ವಿ., ರೇಡಿಯೋ, ನ್ಯೂಸ್ ಪೇಪರ್, ವಿದ್ಯುತ್ ವ್ಯವಸ್ಥೆ ಇರಲಿಲ್ಲ. 110 ವರ್ಷಗಳ ಕಾಲ ನೆಲೆಸಿದ್ದ ಸಿದ್ಧಗಂಗಾ ಮಠಾಧೀಶರಿಗೆ 'ಭಾರತ ರತ್ನ' ನೀಡುವುದಕ್ಕೆ ಹಿಂದೆ-ಮುಂದೆ ಯೋಚಿಸುತ್ತಾರೆ. ಏಕೆಂದರೆ, ಇವರ ಹೆಸರು Guinness book of World records ಸೇರಿದೆ. ಶ್ರೀ ಶ್ರೀ ಶ್ರೀ ಸಿದ್ಧಗಂಗಾ ಸ್ವಾಮಿಜೀಯವರು ಅಷ್ಟು ವರ್ಷಗಳ ಕಾಲ ಪೀಠದಲ್ಲಿ ಕುಳಿತಿದ್ದು, ಇವತ್ತಿನವರೆಗೂ ಜಗತ್ತಿನಲ್ಲಿ ಯಾವುದೇ ಧರ್ಮಾಧಿಕಾರಿ ಅಷ್ಟು ವರ್ಷಗಳ ಕಾಲ ಒಂದು ಪೀಠದಲ್ಲಿ ಕುಳಿತಿರುವ ಯಾವುದೇ ದಾಖಲೆಯು ಇಲ್ಲ. ಆ ದಾಖಲೆ ಇರುವುದರಿಂದ ಆ ಒಂದೇ ಕಾರಣಕ್ಕೆ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ನೀಡಬಹುದಾಗಿತ್ತು. 'ಕಾಲಾಯ ತಸ್ಮೈ ನಮಃ' ಕಾಲಚಕ್ರ ಉರುಳಿದಾಗ ಸಿಗಬೇಕಾದುದು ಸಿಗುತ್ತದೆ ಎಂದು ಹೇಳುತ್ತೇವೆ. ಭಾರತ ರತ್ನ ಪ್ರಶಸ್ತಿಯನ್ನು ಶ್ರೀ ಶ್ರೀ ಶ್ರೀ ಸಿದ್ಧಗಂಗಾ ಸ್ವಾಮಿಜೀಯವರಿಗೆ ನೀಡಿದ್ದರೆ, ಶ್ರೀ ಶ್ರೀ ಶ್ರೀ ಸಿದ್ಧಗಂಗಾ ಸ್ವಾಮಿಜೀಯವರಿಗೆ ಅದರಿಂದ ಗೌರವ ಬರುತ್ತಿರಲಿಲ್ಲ, ಇವತ್ತಿನ ದಿವಸ ಇಂಥ ಮಹಾನ್ ವ್ಯಕ್ತಿಗೆ ಭಾರತ ರತ್ನ ಪ್ರಶಸ್ತಿ ನೀಡಿದ್ದಾರೆ ಎಂದು ಭಾರತ ರತ್ನ ಪ್ರಶಸ್ತಿಗೇ ಗೌರವ ಬರುತ್ತಿತ್ತು.

ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಸಂಬಳ ನೀಡುವುದು ಬಾಕಿ ಇದೆ. ಎಂ.ಎಲ್.ಸಿ.ಗಳ ಫಂಡ್ ಇನ್ನೂ ಬಿಡುಗಡೆ ಮಾಡಿರುವುದಿಲ್ಲ.

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):-** ಅದು ನಿನ್ನೆ ಬಿಡುಗಡೆಯಾಗಿದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಸುಮ್ಮನೆ ಇರಿ, ತಮಗೆ ಏನು ಗೊತ್ತು? ತಾವು ಕುಳಿತ ಜಾಗದಲ್ಲಿಯೇ ಮಧ್ಯದಲ್ಲಿ ಮಾತನ್ನಾಡುತ್ತೀರಲ್ಲಾ! ತಮಗೆ ಫಂಡ್ ಬಿಡುಗಡೆಯಾಗಿರಬಹುದು. ಆದರೆ, ನಮಗೆ ಫಂಡ್ ಬಿಡುಗಡೆಯಾಗಿಲ್ಲ.

**(ಗೊಂದಲ)**

ಮಾನ್ಯ ಸಭಾಪತಿಯವರೇ, ಅದಕ್ಕಾಗಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಿಗೆ ಪ್ರಾರ್ಥಿಸುವುದೇನೆಂದರೆ, ಇವತ್ತು ಎಂ.ಎಲ್.ಸಿ.ಗಳ ಫಂಡ್ ಬಿಡುಗಡೆ ಮಾಡುವುದಕ್ಕೆ ಏನು ತೊಂದರೆ ಇದೆ? ಅದಕ್ಕೆ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ದಯವಿಟ್ಟು ಆ ಬಗ್ಗೆ ಒಂದು ಶ್ವೇತ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪತ್ರವನ್ನು ಹೊರಡಿಸಬೇಕು. ಎರಡನೆಯದಾಗಿ, ವಿರೋಧ ಪಕ್ಷದಲ್ಲಿರುವ ನಮ್ಮಗಳ ಕೆಲಸ ಏನಿದೆ, ಅದನ್ನು ಸದನದ ಒಳಗೆ ಮತ್ತು ಹೊರಗೆ ಎತ್ತಿಹಿಡಿಯುವಂಥ ಕೆಲಸವನ್ನು ನಾವು ಮಾಡುತ್ತೇವೆ, ಆಡಳಿತ ಪಕ್ಷದವರ ಕಾರ್ಯಭಾರವನ್ನು ಅವರು ಮಾಡಲಿ. ಕೊನೆಯದಾಗಿ ತಮ್ಮ ಮೂಲಕ ಆಡಳಿತ ಪಕ್ಷದವರಿಗೆ ಹೇಳುವುದೇನೆಂದರೆ; ಸರ್ಕಾರದ ಕೆಲಸ ನಾವು ಹೇಳುವುದನ್ನು ಕೇಳಬೇಕು, ನಾವು ಅವರಿಗೆ ಆಡಳಿತದಲ್ಲಿನ ವೈಫಲ್ಯಗಳೇನೆಂದು ಹೇಳಬೇಕು. ದುರ್ದೈವ ಏನೆಂದರೆ; ಬಿಜೆಪಿ ನಾಯಕರಿಗೆ ಸರ್ಕಾರ ನಡೆಸುವುದು ಗೊತ್ತಿಲ್ಲ, ನಮಗೆ ವಿರೋಧ ಪಕ್ಷದ ಸ್ಥಾನದಲ್ಲಿರುವುದು ಗೊತ್ತಿಲ್ಲ. ಹೀಗಾಗಿ ಅದಕ್ಕೆ ಸ್ವಲ್ಪ ದಿವಸ ಸಮಯ ತೆಗೆದುಕೊಳ್ಳುತ್ತದೆ. ನಮಗೂ ಸರ್ಕಾರದಲ್ಲಿದ್ದು, ಜಾಸ್ತಿ ಅನುಭವ ಇಲ್ಲ. ಎಲ್ಲಾ ಕಡೆಯು ಸುತ್ತಿರತಕ್ಕಂಥವರು. ಜೈಲು, ಹೊಡೆದಾಟ ಇವೆಲ್ಲವನ್ನೂ ಅನುಭವಿಸಿರತಕ್ಕಂಥವರು. ಮಾನ್ಯ ಸಚಿವರಾದ ಲಕ್ಷ್ಮಣ ಸಂಗಪ್ಪ ಸವದಿಯವರು ಹೇಳಿದ ಹಾಗೆ ನಿಷ್ಠೆ ಎನ್ನುವುದನ್ನು ಜೀವನದಲ್ಲಿ ಶುದ್ಧವಾಗಿ ಇಟ್ಟುಕೊಂಡಿದ್ದೇವೆ. 45 ವರ್ಷಗಳ ಕಾಲ ರಾಜಕಾರಣ ಜೀವನ ನಡೆಸಿ, ಇವತ್ತಿಗೂ ರೂ. 35.00 ಕೋಟಿಗಳಷ್ಟು ಸಾಲ ಇದೆ. ಹೆಣ್ಣು ಮಕ್ಕಳ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದರು. ನಾನು 8 ಜನ ಹೆಣ್ಣು ಮಕ್ಕಳ ತಂದೆ. ಹೊರಗೆ ಅದನ್ನು ಹೇಳುವ ಹಾಗಿಲ್ಲ, ಬಿಡುವ ಹಾಗಿಲ್ಲ. ಹೆಣ್ಣು ಮಕ್ಕಳ ಮೇಲೆ ಎಷ್ಟು ಪ್ರೀತಿ ಇದೆ ಎಂಬುದನ್ನು ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿದಾಗ...

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಹಾಗಾದರೆ ತಮಗೆ ಒಟ್ಟು ಎಷ್ಟು ಮಕ್ಕಳು?

**ಶ್ರೀ ಸಿ.ಎಂ.ಇಬ್ರಾಹಿಂ:–** ಒಟ್ಟು 09 ಮಕ್ಕಳಿದ್ದಾರೆ.

**ಡಾ॥ ತೇಜಸ್ವಿನಿಗೌಡ:–** ಆ ಒಂಭತ್ತನೆಯ ಗಂಡು ಮಗುವಿಗಾಗಿ ತಾವು 8 ಹೆಣ್ಣು ಮಕ್ಕಳಿಗೆ ತಂದೆಯಾದಿರಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಆಗ 'ಭಾಗ್ಯಲಕ್ಷ್ಮಿ' ಯೋಜನೆ ಇರಲಿಲ್ಲವಲ್ಲ, ಅದಕ್ಕಾಗಿ!

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ನಾನು ವಿಷಯಕ್ಕೆ ಬರುತ್ತೇನೆ. ಇವತ್ತು CAA [Citizenship (Amendment) Act] ಹಾಗೂ NRC (National Register of Citizens) ಪ್ರತಿಭಟನೆಯು ಶಾಂತಿಯುತವಾಗಿ ನಡೆಯುತ್ತಿದ್ದು, ಪ್ರತಿಭಟನಾಕಾರರ ಮೇಲೆ ನಿರ್ಬಂಧ ಹಾಕದಂತೆ ಪೊಲೀಸ್ ಅಧಿಕಾರಿಗಳಿಗೆ ತಿಳಿಸಿ. ಪ್ರತಿಭಟನಾಕಾರರು ತಮ್ಮ ದುಃಖ ಏನಿದೆ, ಅದನ್ನು ಹೇಳಿಕೊಳ್ಳಲಿ ಹಾಗೂ ಹೊರಗಿನಿಂದ ನುಸುಳಿ ಬರುವವರನ್ನು ಕಂಡು ಹಿಡಿಯಬೇಕು. ಅವರನ್ನು ಹಿಡಿಯಬಾರದೆಂದು ನಾವು ಹೇಳುವುದಿಲ್ಲ. ಅವರನ್ನು ಕಂಡು ಹಿಡಿಯುವುದಕ್ಕೆ ಸಂಬಂಧಪಟ್ಟ ಸ್ಥಳೀಯ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ರವರನ್ನು ಕರೆದು ಆ ಏರಿಯಾಕ್ಕೆ ಯಾರ್‍ಯಾರು ಹೊಸದಾಗಿ ಬಂದು ನೆಲೆಸಿದ್ದಾರೆ ಎಂಬುದರ ಮಾಹಿತಿಯನ್ನು ಒದಗಿಸುವುದಕ್ಕೆ ಹೇಳಿದರೆ 8 ದಿವಸಗಳೊಳಗೆ ಅವರು ಮಾಹಿತಿಯನ್ನು ಒದಗಿಸುತ್ತಾರೆ. ಆದರೆ, ಈಗ ಪರಿಸ್ಥಿತಿ ಏನಾಗಿದೆ ಎಂದರೆ, ಅಕ್ಕಿಯಲ್ಲಿ ಕಲ್ಲು

ಹುಡುಕಬೇಕೇ ಹೊರತು, ಕಲ್ಲಿನಲ್ಲಿ ಅಕ್ಕಿಯನ್ನು ಹುಡುಕುವ ಕೆಲಸ ಮಾಡಿದರೆ ಸುಮಾರು 10 ವರ್ಷಗಳಷ್ಟು ಸಮಯ ಬೇಕಾಗುತ್ತದೆ. ಅದರ ಸಲುವಾಗಿಯೇ ಮಾನ್ಯ ಅಮಿತ್ ಶಾ ರವರಿಗೆ ಪತ್ರ ಬರೆದು, ನಾವುಗಳು ಬಂಧು ತಮಗೆ ಸಲಹೆ ನೀಡುವುದಕ್ಕೆ ತಯಾರಿದ್ದೇವೆ, ದಯವಿಟ್ಟು ಇದನ್ನು ತಾವು ಅವಗಾಹನೆಗೆ ತೆಗೆದುಕೊಳ್ಳುವಂತೆ ಮಾನ್ಯ ಪ್ರಧಾನ ಮಂತ್ರಿಯವರಿಗೆ ಹಾಗೂ ಮಾನ್ಯ ರಾಷ್ಟ್ರಪತಿಯವರಿಗೆ ಸಹ ಪತ್ರ ಬರೆಯಲಾಗಿದೆ.

ನನ್ನ ಬಗ್ಗೆ ತಮಗೆಲ್ಲಾ ಗೊತ್ತಿದೆ. ನನಗೂ NRC ಯಲ್ಲಿ ನಮೂದಿಸಲು ಮಾಹಿತಿ ಕೇಳಿದರೆ, ನಾನು ಹುಟ್ಟಿದ ತಾರೀಖು ನೀಡಬಹುದು, ಹುಟ್ಟಿದ್ದು ರಾಣಿಬೆನ್ನೂರಿನಲ್ಲಿ ಎಂದು ಹೇಳಬಹುದೇ ಹೊರತು, ಅಪ್ಪ–ಅಮ್ಮ ಎಲ್ಲಿ ಜನಿಸಿದ್ದರು, ಅವರ ಮದುವೆ ಎಲ್ಲಿಯಾಗಿತ್ತು ಎಂದೆಲ್ಲಾ ಮಾಹಿತಿ ಕೇಳಿದರೆ ಆಡಳಿತ ಪಕ್ಷದವರಿಗಾಗಲಿ ಅಥವಾ ನನಗಾಗಲಿ ಮಾಹಿತಿ ನೀಡುವುದಕ್ಕೆ ಸಾಧ್ಯವೇ? ಇವತ್ತಿನ ದಿವಸ ಇಂತಹ ಗೊಂದಲದಿಂದ ಜನರು ಎಲ್ಲಿಂದ ಮಾಹಿತಿ ತರುವುದು ಎಂದು ಗಾಬರಿಗೊಳಗಾಗಿದ್ದಾರೆ. ಕೇಂದ್ರ ಸರ್ಕಾರದಿಂದ Aadhar card ಹಾಗೂ Passport ನೀಡಿದೆ. ಆದರೆ, ನನ್ನ ಪಾಸ್‌ಪೋರ್ಟ್‌ನ್ನು ಭಾರತದಲ್ಲಿಯೇ ತೋರಿಸಿದರೆ ನನ್ನನ್ನು ಭಾರತದವನು ಎಂದು ಗುರುತಿಸುವುದಿಲ್ಲ. ಅದೇ ಪಾಸ್‌ಪೋರ್ಟ್ ದುಬೈನಲ್ಲಿ ತೋರಿಸಿದರೆ ನನ್ನನ್ನು ಭಾರತದವನು ಎಂದು ಗುರುತಿಸುತ್ತಾರೆ. ಹೊರದೇಶಗಳಲ್ಲೂ ನನ್ನ ಪಾಸ್‌ಪೋರ್ಟ್ ನೋಡಿದರೆ ತಕ್ಷಣ ‘ಹೌದು, ಈತ ಭಾರತದವನು’ ಎಂದು ಹೇಳುತ್ತಾರೆ. ನನ್ನ ಪಾಸ್‌ಪೋರ್ಟ್ ನೋಡಿ ಭಾರತದವರೆ ನನ್ನನ್ನು ಭಾರತೀಯನಲ್ಲ ಎಂದು ಹೇಳಿದರೆ, ಇದು ಯಾವ ರೀತಿಯ ವಿಪರ್ಯಾಸ. ಇಂತಹ ಗೊಂದಲಗಳಿರುವುದರಿಂದ ಕೇಂದ್ರ ಸರ್ಕಾರದವರು ಕುಳಿತುಕೊಂಡು ‘ದೇಶದ ನಾಗರೀಕ’ ಹೌದೇ–ಅಲ್ಲವೇ ಎಂದು ರಿಜಿಸ್ಟ್ರೇಷನ್ ಮಾಡಿಸಬೇಕು. 2010ನೇ ಸಾಲಿನಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ದಿವಂಗತ ಅಟಲ್ ಬಿಹಾರಿ ವಾಜಪೇಯಿಯವರ ಕಾಲದಲ್ಲಿ ಈ ವಿಧೇಯಕಕ್ಕೆ ಮಂಜೂರಾತಿ ದೊರೆತಿದೆ. ಅವರಿಗೆ ನಾವು ಕೈ ಮುಗಿಯುತ್ತೇವೆ ಎಂದರೆ, ಅದಕ್ಕೆ ಕಾರಣ ಅಂತಹ ನಾಯಕರು ನಮ್ಮ ದೇಶಕ್ಕೆ ಬೇಕು. ಪಂಡಿತ್ ದೀನ್ ದಯಾಳ್ ಉಪಾಧ್ಯಾಯರ ಬಗ್ಗೆಯೂ ನಾವು ಎಂದೂ ತಪ್ಪಾಗಿ ಮಾತನಾಡಿಲ್ಲ. ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಬಗ್ಗೆ ಮಾನ್ಯ ಸಚಿವರಾದ ಕೆ.ಎಸ್.ಈಶ್ವರಪ್ಪನವರು ಕಾರ್ಯಕ್ರಮ ಮಾಡಿದಾಗ ನಾವು ಸಹ ಖುದ್ದಾಗಿ ಹೋಗಿದ್ದೆವು. ಹಾಗೆಯೇ ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ಸನ್ಮಾನ್ಯ ಎಲ್.ಕೆ.ಅಡ್ವಾಣಿಯವರು ಹೋರಾಟ ನಡೆಸಿದಂತಹ ಸಂದರ್ಭದಲ್ಲಿ ನಾವು ಸಹ ಅವರ ಜೊತೆ 18 ತಿಂಗಳುಗಳು ಜೈಲಿನಲ್ಲಿ ಇದ್ದೆವು. ಅದೇ ಆದರ್ಶವನ್ನು ಆಡಳಿತ ಪಕ್ಷದವರು ಪಾಲನೆ ಮಾಡಿದರೆ ಇವರಿಗೆ ಯಾವುದೇ ರೀತಿಯ ಸಮಸ್ಯೆ ಬರುವುದಿಲ್ಲ. ಆದರೆ, ಆತುರದಲ್ಲಿ ಏನಾಗಿದೆ ಎಂದರೆ, ‘ನಾನು’ ಎಂಬ ಭಾವನೆಯಿಂದ ಮಾಡಿದರೆ ಅದು ಒಳ್ಳೆಯದಾಗುವುದಿಲ್ಲ; ‘ನಾವು’ ಎಂದು ಯೋಚಿಸಿ ಮಾಡಿದರೆ ಬಾರಿ ಒಳ್ಳೆಯದು. ಇವತ್ತು ಈ ದೇಶದಲ್ಲಿ ‘ನಾವು’ ಎನ್ನುವ ಬದಲು ‘ನಾನು’ ಎನ್ನುವ ಭಾವನೆ ಉದ್ಭವಿಸಿರುವುದರಿಂದಲೇ ಜಗಳ ಶುರುವಾಗಿರುವುದು. ಆದ್ದರಿಂದ ರಾಜ್ಯಪಾಲರ ಭಾಷಣ ಏನಿದೆ, ಅದರ ಮೇಲೆ ಚರ್ಚೆ ಮಾಡಲು ಪುನಃ ಸದನದಲ್ಲಿ ಮಾನ್ಯ ವಿರೋಧ ಪಕ್ಷದ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರು ಮತ್ತು ಸನ್ಮಾನ್ಯ ಸಭಾಪತಿಯವರು ಅವಕಾಶ ಮಾಡಿಕೊಟ್ಟಿದ್ದಾರೆ. ನಮ್ಮಲ್ಲಿ ದುಡ್ಡು ಇಲ್ಲದೇ ಇರಬಹುದು, ಜಾತಿ, ಪಂಗಡ ಎಂಬುದರ ಭಾವನೆ ಇಲ್ಲದೇ ಇರಬಹುದು. ಆದರೆ, 50 ವರ್ಷಗಳ ಕಾಲ ರಾಜಕೀಯದಲ್ಲಿ ಸೇವೆ ಸಲ್ಲಿಸಿರುವ ಅನುಭವ ಇದೆ. ಆದ್ದರಿಂದ ನಮ್ಮನ್ನು ಸಹ ಆಡಳಿತ ಪಕ್ಷದವರು ವಿಶ್ವಾಸಕ್ಕೆ ತೆಗೆದುಕೊಳ್ಳಲಿ.

ಈ ಮುಸ್ಲಿಂ ಸಮಾಜ ಎನ್ನುವುದು ಮುಗ್ಧ ಸಮಾಜವಾಗಿದ್ದು, ಇದಕ್ಕೆ ಏನೂ ಗೊತ್ತಾಗುವುದಿಲ್ಲ. ಮುಸ್ಲಿಂ ಸಮಾಜದವರಿಗೆ ಹೋರಾಟ ಎಂದರೆ ಏನು, ಯಾವ ರೀತಿ ಹೋರಾಟ ಮಾಡಬೇಕು ಎಂಬುದನ್ನು ಸ್ವಾತಂತ್ರ್ಯ ಬಂದು 72 ವರ್ಷಗಳಾದ ನಂತರ ತಿಳಿದುಕೊಳ್ಳುತ್ತಿದ್ದಾರೆ. ಅದಕ್ಕಾಗಿ ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರನ್ನು ನಾನು ಅಭಿನಂದಿಸುತ್ತೇನೆ. ಮೊದಲ ಬಾರಿ ಎಲ್ಲಾ ಮುಸಲ್ಮಾನರನ್ನು ಒಟ್ಟುಗೂಡಿಸಿದ್ದಾರೆ. ಹಿಂದೆ ಮುಸಲ್ಮಾನರಲ್ಲಿಯೂ ಸಹ ಒಳಜಗಳ ಬಹಳವಾಗಿತ್ತು. ಆದರೆ, ಇವತ್ತು ಎಲ್ಲರೂ ಒಟ್ಟಿಗೆ ಸೇರಿ ಈ ದೇಶದಲ್ಲಿ ಡಾ॥ ಬಾಬ ಸಾಹೇಬ್ ಅಂಬೇಡ್ಕರ್‌ರವರು ರೂಪಿಸಿರುವ ಸಂವಿಧಾನ ಉಳಿಯಬೇಕು ಎಂದು ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಹೊರಟಿದ್ದಾರೆ. ಆದ್ದರಿಂದ ಆಡಳಿತ ಪಕ್ಷದವರು ಅವರನ್ನು ನೀವು ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಸ್ವಾಗತಿಸಬೇಕು. ಆ ಸಭೆಗಳಿಗೆ ಆಡಳಿತ ಪಕ್ಷದವರು ಸಹ ಬಂದು ಭಾಷಣ ಮಾಡಲಿ. ನಾನೇ ಸಭೆಗಳನ್ನು ಆಯೋಜಿಸುತ್ತೇನೆ. ಮೊನ್ನೆ ನಡೆದ ಸಭೆಗೆ ನಾವೆಲ್ಲಾ ಸ್ವಾಮಿಗಳನ್ನು ಕರೆಸಿದ್ದೆವು. ನಾನು ಸಿರಿಗೆರೆ ಮಠದವನಾಗಿದ್ದು, ನಾವು 1962ರಲ್ಲಿ ಜೈ ತರಳಬಾಳು ಮರುಳಸಿದ್ಧ ಎಂದು ಹೊರಟವರು. ನಮಗೆ ಮಠದ ಸ್ವಾಮಿಗಳು ಒಂದು ಶಿಷ್ಟಾಚಾರ, ಆಚಾರವನ್ನು ಕಲಿಸಿದ್ದಾರೆ. ಇವತ್ತು ಇಸ್ಲಾಂ ಧರ್ಮ, ವೀರಶೈವ ಲಿಂಗಾಯತ ಧರ್ಮ, Sufi, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಇವೆಲ್ಲವನ್ನು ನಾವು ಆಳವಾಗಿ ಅಭ್ಯಾಸ ಮಾಡಿದರೆ ಮಾತ್ರ ಅದರಲ್ಲೆಲ್ಲಾ ಇರುವುದು ಮನುಷ್ಯರು-ಮನುಷ್ಯತ್ವ ಎಂದರೇನೆಂಬುದು ಅರ್ಥವಾಗುತ್ತದೆ. ಅದನ್ನೇ 'ವಸುದೈವ ಕುಟುಂಬಕಂ' ಎಂದು ಧರ್ಮ ಗ್ರಂಥಗಳಲ್ಲಿ ಹೇಳಿರುವುದು. ಆತ್ಮೀಯ ಸ್ನೇಹಿತರಾದ ಶಿಕ್ಷಣ ಸಚಿವರು ಈ ಸದನದಲ್ಲಿಯೇ ಇದ್ದು, ಅವರು ಸಹ ಹಿಂದೆ ನನ್ನ ಜೊತೆ ಜೈಲಿನಲ್ಲಿದ್ದಂಥವರು. ನಾವೆಲ್ಲರೂ ಸೇರಿ ಈ ದೇಶವನ್ನು 'ವಸುದೈವ ಕುಟುಂಬಕಂ' ಆಗಿ ಮಾಡೋಣ. ನಮಗೆ ಒಂದು ವಿಶ್ವಾಸ ಇರಬೇಕು. ಅದೇನೆಂದರೆ, ಒಬ್ಬ ತಂದೆ, ಒಬ್ಬ ತಾಯಿಯಿಂದ ಇಡೀ ಮಾನವ ಕುಲ ಹುಟ್ಟಿರುವುದು ಎಂಬ ವಿಶ್ವಾಸ ಇರಬೇಕು. ಈ ಮಾತನ್ನು ಇಸ್ಲಾಂ ಧರ್ಮದವರು, ಕ್ರೈಸ್ತರು, ಜೈನರು ಎಲ್ಲಾ ಧರ್ಮದವರು ಒಪ್ಪಿಕೊಳ್ಳುತ್ತಾರೆ. ಆದ್ದರಿಂದ ರಾಜ್ಯಪಾಲರ ಭಾಷಣವು ಓದುವುದಕ್ಕೆ ಆಶಾದಾಯಕವಾಗಿದ್ದು, ವಾಸ್ತವಾಂಶದಲ್ಲಿ...

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನನಗೆ ಸ್ವಲ್ಪ ಗೊಂದಲವಾಗುತ್ತಿದೆ. ಮಾನ್ಯ ಸದಸ್ಯರು ಮಾತನಾಡಿದ್ದನ್ನೆಲ್ಲಾ ನಾವು ಕೇಳಿದ್ದೇವೆ. ಅವರ ವಾಗ್ಝರಿ ಹಾಗೂ ವಚನಗಳ ಉದ್ಘೋಷಣೆ ಕೇಳಿ ಬಹಳ

ಖುಷಿಯಾಗಿದೆ. ಆದರೆ, ನಿನ್ನೆ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯಲ್ಲಿ ಮಾನ್ಯ ಸದಸ್ಯರು ಉಲ್ಲೇಖಿಸಿರುವ ಯಾವುದೇ ವಿಚಾರ ಇಲ್ಲವಲ್ಲಾ!

**(21)/18.02.2020/1.00/ಎಸ್‌ಕೆ–ಕೆಎಸ್**

**(ಗೊಂದಲ)**

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ನಾರಾಯಣಸ್ವಾಮಿಯವರೇ ನಾನು ಎಂದೂ ಸಹ ಭಾಷಣಕ್ಕೆ ಹೋಗಬೇಕಾದರೆ, ಭಾಷಣವನ್ನು ಬರೆದುಕೊಂಡು ಹೋದವನೇ ಅಲ್ಲ. ನನ್ನ ನಲವತ್ತೈದು ವರ್ಷದ ಅನುಭವ ಏನಿದೆಯೋ ಅದರ ಮೇಲೆ ನಾನು ಭಾಷಣ ಮಾಡುತ್ತಿದ್ದೆ. ರಾಜ್ಯಪಾಲರ ಭಾಷಣದಲ್ಲಿ ಒಂದೊಂದಾಗಿ ಹೇಳಿದ್ದಾರೆ. ಮೂರು ಕಡೆ prisons ಮಾಡುತ್ತಿದ್ದೇವೆ. ಈ ಕಡೆ ಇಷ್ಟು ಕೊಡುತ್ತಿದ್ದೇವೆ. ಅಷ್ಟು ಈ ಕಡೆ ಕೊಡುತ್ತಿದ್ದೇವೆ. ರಾಜ ಹೇಳಿದಾಗೇ ತಗೋ ಐವತ್ತು ಎಕರೆ, ತಗೋ ಮೂವತ್ತು ಎಕರೆ. ಆಗ ಇವನು ಖುಷಿಯಾದ. ಅವನು ಹೋದ. ನೀನು ಕೊಡಲಿಲ್ಲ. ನಾನು ತೆಗೆದುಕೊಂಡಿಲ್ಲ. ರಾಜ್ಯಪಾಲರ ಭಾಷಣ ಅಷ್ಟೆಯೇ ಆಗಿರುವಂಥದ್ದು. ಅದು ಹಾಗೇ ಆಗಬಾರದು. ವಾಸ್ತವಿಕವಾಗಿ ಹಣ ಬೇಕು. ನಿಮ್ಮ ಶ್ವೇತ ಪತ್ರವನ್ನು ಹೊರಡಿಸಿ, ಇಂತಿಷ್ಟು ಹಣ ನಮ್ಮ ಹತ್ತಿರ ಇದೆ. ಇಂತಿಷ್ಟು ಹಣ collection ಆಗಿದೆ. ಇಂತಿಷ್ಟು ಹಣ GST (Goods and Services Tax) ಯಿಂದ ಬರಬೇಕಾಗಿದೆ. ಕೇಂದ್ರ ಸರ್ಕಾರದವರು ನಮಗೆ ಕೊಡಲಿಲ್ಲ. ನಿಮ್ಮ ಸಹಕಾರ ನನಗೆ ಬೇಕು. ಬೇಕಾದರೆ ಇಲ್ಲಿಂದಲೇ ಒಂದು ನಿಯೋಗ ಹೋಗೋಣ. ಕನ್ನಡ ನಾಡಿನ ಜನ ನಾವು ಇಲ್ಲಿಗೆ ಬಂದಿದ್ದೇವೆ. ನಮಗೆ ಬೇಕಾದಂತಹ ಪಾಲನ್ನು ನಮಗೆ ಕೊಡಿ ಎಂದು ಪ್ರಧಾನ ಮಂತ್ರಿ ಮಾನ್ಯ ಮೋದಿಯವರಿಗೆ ಕೇಳೋಣ. ನಿಮಗೋಸ್ಕರನೇ ನಾವು ಬರುವುದಕ್ಕೆ ತಯಾರಾಗಿದ್ದೇವೆ ಎಂಬ ಮಾತನ್ನು ಹೇಳಿ, ರಾಜ್ಯಪಾಲರು 'ಹಿಂದಿ' ಭಾಷೆಯಲ್ಲಿ ಮಾತನಾಡಿದರು ಎಂಬುದು ನನಗೆ ಭೇದ–ಭಾವವಿಲ್ಲ. 'ಹಿಂದಿ' ನಮ್ಮ ರಾಷ್ಟ್ರೀಯ ಭಾಷೆ. ರಾಜ್ಯಪಾಲರು ಹಿಂದಿ ಭಾಷೆಯಲ್ಲಿ ಮಾತನಾಡಿದ್ದಾರೆ. ಅದರ ಅನುವಾದವನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿಯೂ ಸಹ ಕೊಟ್ಟಿದ್ದಾರೆ. ರಾಜ್ಯಪಾಲರು ಚೆನ್ನಾಗಿ ಭಾಷಣ ಮಾಡಿದ್ದಾರೆ. ನಿನ್ನೆಯೂ ಕೂಡ ಯಾವುದೇ ವಿವಾದಾತ್ಮಕವಾದ ಹೇಳಿಕೆಗಳು ಅದರಲ್ಲಿ ಬರಲಿಲ್ಲ. ಅದಕ್ಕೆ ನಾನು ರಾಜ್ಯಪಾಲರನ್ನು ಅಭಿನಂದಿಸಿ, ಇವತ್ತು ನಾವೆಲ್ಲರೂ ಕೂಡ ರಾಜ್ಯವನ್ನು ಉಳಿಸೋಣ. ಅದಕ್ಕೆ ನೀವು ಮೊದಲು ಮಾನ್ಯ ಯಡಿಯೂರಪ್ಪನವರ ಕೈ ಬಲಪಡಿಸಿ, ನಿಮ್ಮ ಜೊತೆಯಲ್ಲಿ ನಾವಿದ್ದೇವೆ. ಜೈಹಿಂದ್.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣ ಸಾಹೇಬ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರಣ ಸಬಲೀಕರಣ ಸಚಿವರು):–** ಮಾನ್ಯ ಸಭಾಪತಿಯವರೇ ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ನಾವು ವಿಧಾನ ಪರಿಷತ್ತಿಗೆ ಹೊಸಬರು. ಹೊಸ ಸಚಿವರಾಗಿ ಮೊದಲ ಬಾರಿಗೆ ವಿಧಾನ ಪರಿಷತ್ತಿಗೆ ಬಂದಿದ್ದೇವೆ. ಇವತ್ತು ಮಾನ್ಯ ಹಿರಿಯ ಸದಸ್ಯರೆಲ್ಲರೂ ಬಹಳಷ್ಟು ಉತ್ತಮವಾಗಿ ಮಾತನಾಡಿದ್ದಾರೆ. ನಾವು ಅವರಿಂದ ಕಲಿಯಬೇಕಾದದ್ದು,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಹಳಷ್ಟು ಇದೆ. ನಾನು ಹೇಳುವುದೇನೆಂದರೆ, **XXX** ಎನ್ನುವಂತಹ ಒಂದು ಪದವನ್ನು ಕಡತದಿಂದ ತೆಗೆದುಹಾಕಬೇಕು.

**ಸಭಾಪತಿಯವರು:–** ಆಯಿತು.

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಯವಿಟ್ಟು, ಆ ಪದವನ್ನು ಕಡತದಿಂದ ಅಲ್ಲ. ಸಮಾಜದಿಂದಲೇ ತೆಗೆದು ಹಾಕಬೇಕು. ಸಮಾಜದಿಂದ ತೆಗೆದು ಹಾಕುವುದನ್ನು ಬಿಟ್ಟು, ಕಡತದಿಂದ ತೆಗೆದು ಹಾಕುವುದಾಗಿ ಏನು ಮಾಡುತ್ತೀರಿ?

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ ಮಾತನಾಡಿ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಈಗಾಗಲೇ ವಿಧಾನಮಂಡಲದ ರಾಜ್ಯಪಾಲರ ಭಾಷಣದ ಭಾಷಣಕ್ಕೆ ಒಳಪಟ್ಟು, ನಾನು ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರೆಲ್ಲರೂ ಕೂಡ ಬೇರೆ ಬೇರೆ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇನ್ನು ಕೆಲವು ಸದಸ್ಯರು ಭಾಷಣ ಮಾಡುವವರಿದ್ದಾರೆ. ಬಹಳ ಮುಖ್ಯವಾಗಿ ಮಾನ್ಯ ಆಯನೂರು ಮಂಜುನಾಥ್ ಮಾತನಾಡುವಂತಹ ಸಂದರ್ಭದಲ್ಲಿ ಟೀಕೆಯನ್ನು ಸಹಿಸತಕ್ಕಂಥ ಮತ್ತು ಹೊಟ್ಟೆಯೊಳಗೆ ಹಾಕಿಕೊಳ್ಳತಕ್ಕಂಥ ಸಂಯಮ ನಮ್ಮಲ್ಲಿರಬೇಕು ಎನ್ನುವ ಒಳ್ಳೆಯ ಮಾತನ್ನು ಹೇಳಿದರು. 'ನಿಂಧಕರು ಇರಬೇಕಯ್ಯ' ಎಂದು ದಾಸರು ಹೇಳಿದ್ದಾರೆ. ನಿಂಧಕರು ಇಲ್ಲದಿದ್ದರೆ, ಸಮಾಜವನ್ನು ತಿದ್ದುವವರು ಯಾರು? ಸಮಾಜದ ತಪ್ಪುಗಳನ್ನು ತೋರಿಸುವವರು ಯಾರು? ಮುಖ್ಯವಾಗಿ ಹೇಳುವುದೇನೆಂದರೆ, ಇಲ್ಲಿರುವಂತಹ ನಾವೆಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ರೈತ ಕುಟುಂಬದಿಂದ ಬಂದಿರತಕ್ಕಂಥವರು. ಇಲ್ಲಿ ಯಾವ Oxford University ಮತ್ತು Cambridge University ಯಿಂದ ಕಲಿತು ಬಂದಂತಹವರಲ್ಲ. ಕೃಷಿ ಬದುಕನ್ನೇ ಅವಲಂಬಿಸಿ, ಕೃಷಿ ಬದುಕನ್ನೇ ನಂಬಿ ಕೆಲಸವನ್ನು ಮಾಡತಕ್ಕಂತಹ ಸಂದರ್ಭದಲ್ಲಿ ಕೃಷಿ ಬದುಕಿಗೆ ಅನುಗುಣವಾಗಿರುವಂತಹ ಕೆಲಸವನ್ನು ಯಾವುದೇ ಸರ್ಕಾರಗಳು ಮಾಡಿದ್ದರೂ ಕೂಡ ಮೆಚ್ಚ ಬೇಕಾದಂತಹ ವಿಚಾರವಿದೆ. ಇವತ್ತು ಕೃಷಿ ಎತ್ತ ಸಾಗಿದೆ ಎನ್ನುವ ವಿಚಾರವನ್ನು ನಾವು ಒಮ್ಮೆ ಅವಲೋಕನ ಮಾಡಿದಾಗ, ನಮ್ಮನ್ನು ನಮ್ಮೆಲ್ಲಾ ಹಿರಿಯರು ಕೃಷಿಯ ಬದುಕಿನಲ್ಲಿಯೇ ಬೆಳೆಸಿದ್ದಾರೆ. ನಮ್ಮ ವಿದ್ಯಾಭ್ಯಾಸ ಇರಬಹುದು, ಬೇರೆ ಬೇರೆ ವಿಚಾರಗಳು ಇರಬಹುದು, ನಮ್ಮ ಮಕ್ಕಳನ್ನು ಮುಂದಿನ ಅಮೆರಿಕಾ ದೇಶ ಹಾಗೂ ಬೇರೆ ಬೇರೆ ದೇಶಗಳಲ್ಲಿ ದುಡಿಯವುದಕ್ಕೆ ಕಳಿಸಿರಬಹುದು. ನಮ್ಮನ್ನೆಲ್ಲಾ ನಮ್ಮ ಹಿರಿಯರು ಕೃಷಿಯ ಬದುಕಿನಲ್ಲಿ ಸಾಕಿ–ಸಲುಹಿ ಬೆಳೆಸಿದ್ದಾರೆ. ಆ ಕೃಷಿ ಬದುಕೇ ಇವತ್ತು ನಮ್ಮಿಂದ ದೂರವಾಗುತ್ತಿದೆ. ಹಿರಿಯರು

---

**XXX ಸಭಾಪತಿಯವರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒಕ್ಕಲು ಹುದ್ದೆ ಮುಕ್ಕಾಲು ಬುದ್ಧಿಯಲ್ಲೇ ನಮ್ಮನ್ನು ಬೆಳೆಸಿದರು. ಯಾರು ಕಲಿತು ಬೆಳೆಸಿದ್ದಲ್ಲ. ಯಾವುದೇ Ph.D. (Doctor of Philosophy) ಅಥವಾ Doctorate ತೆಗೆದುಕೊಂಡು ಮಾಡಿದ್ದಲ್ಲ. ಆ ಕೃಷಿ ಬದುಕನ್ನು ಉಳಿಸಬೇಕಾದಂತಹ ಆದ್ಯ ಕರ್ತವ್ಯ ಇವತ್ತು ನಮ್ಮ ಮುಂದಿದೆ.

ಮಾನ್ಯ ಸಭಾಪತಿಯವರೇ, ಯಾವುದೇ ಸರ್ಕಾರಗಳಿರಲಿ, ಈ ಕೃಷಿ ಬದುಕಿಗೆ ಒತ್ತು ಕೊಡುವಂತಹ ಕೆಲಸಗಳನ್ನು ಸರ್ಕಾರ ಮಾಡದೇ ಇದ್ದರೆ, ಮುಂದಿನ ಪೀಳಿಗೆ ಎತ್ತ ಸಾಗುತ್ತದೆ ಎನ್ನುವ ವಿಚಾರವನ್ನು ನಾವು ಇವತ್ತು ಊಹಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಇತ್ತೀಚೆಗೆ ನಡೆದಂತಹ ಒಂದು ಸಂವಾದ ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯಮಂತ್ರಿಯವರನ್ನು ನಾವೆಲ್ಲರೂ ಕೃಷಿ ಬದುಕಿನಲ್ಲಿ ಇರತಕ್ಕಂಥ ಸಂದರ್ಭದಲ್ಲಿ ನಾಡಿನಾದ್ಯಂತ ತಾಲ್ಲೂಕು ಕೇಂದ್ರಗಳು ಇರಬಹುದು ಮತ್ತು ಜಿಲ್ಲಾ ಕೇಂದ್ರಗಳು ಇರಬಹುದು ಹಳ್ಳಿಗಳು ಇರಬಹುದು. ಹಳ್ಳಿಗಳಲ್ಲಿರುವ ಎಲ್ಲಾ ಯುವಕರು ಪಟ್ಟಣ ಪ್ರದೇಶಕ್ಕೆ ವಲಸೆ ಬರುತ್ತಿದ್ದಾರೆ. ಈ ವಲಸೆ ಬರುವುದನ್ನು ವಲಸೆ ಹೋಗುವುದನ್ನು ತಡೆಯುವುದಕ್ಕೆ ಸರ್ಕಾರ ಏನು ಮಾನದಂಡ ಅನುಸರಿಸುತ್ತಿದೆ ಮತ್ತು ಏನು ಆಲೋಚನೆಗಳಿವೆ ಎನ್ನುವ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಶ್ನೆಯನ್ನು ಮಾಡಿದ್ದೇನೆ. ಈ ವಿಚಾರದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಎಲ್ಲೂ ಕೂಡ ಚರ್ಚೆಯಾಗಿಲ್ಲ ಮತ್ತು ಆ ಅಂಶಗಳು ಸಹ ಬಂದಿಲ್ಲ. ಇವತ್ತು ಅತ್ಯಂತ ನೋವಿನಿಂದ ಈ ಸಂದರ್ಭದಲ್ಲಿ ಹೇಳವುದಕ್ಕೆ ಬಯಸುತ್ತೇನೆ. ರಾಜ್ಯಪಾಲರ ಭಾಷಣದ ಮೊದಲನೇ ಪುಟದಲ್ಲಿ ಮಳೆಯ ಹಾನಿಗಾಗಿ ಮಂಜೂರು ಮಾಡಿದ ಹಣಕಾಸು, ದೇಶದ ಇತಿಹಾಸದಲ್ಲೇ ಅತ್ಯಂತ ಹೆಚ್ಚಿನದಾಗಿದೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ತಮಗೆ ಗೊತ್ತಿರುವ ಹಾಗೇ ಅನೇಕ ಜನ ಕೊಡಗಿನಿಂದ ಬಂದಂತಹ ಸದಸ್ಯರು ಇಲ್ಲಿದ್ದಾರೆ. ಮಾನ್ಯ ಕುಮಾರಸ್ವಾಮಿಯವರು ಕಾಂಗ್ರೆಸ್ ಮತ್ತು ಜನತಾ ದಳ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಕೊಡಗಿನಲ್ಲಿ ಮನೆ ನಿರ್ಮಾಣ ಮಾಡಿದ್ದು, ಆದರೆ ಮಾನ್ಯ ಯಡಿಯೂರಪ್ಪನವರು ಸರ್ಕಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳೇ ಹೋಗಿ ಉದ್ಘಾಟನೆಯನ್ನು ಮಾಡಿದ್ದಾರೆ. ಐದು ಲಕ್ಷ ರೂಪಾಯಿಗಳು ಕೊಟ್ಟಂತಹ ಮನೆ ಇನ್ನೂ ಕೂಡ ನಿರ್ಮಾಣವಾಗಿಲ್ಲ. ಮಾನ್ಯ ಸದಸ್ಯರೆಲ್ಲರೂ ಕೂಡ ಒಂದು ಸದನ ಸಮಿತಿ ಮಾಡಿ, ನಾವೆಲ್ಲರೂ ಹೋಗಿ ನೋಡೋಣ ಎಂಬ ಮಾತನ್ನು ಮಾನ್ಯ ಸದಸ್ಯರೆಲ್ಲರೂ ಕೂಡ ಹೇಳಿದರು. ಇವತ್ತು ಕೊಡಗಿನಲ್ಲಿ ಸುಮಾರು ಹದಿಮೂರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಸುಮಾರು 985 ಮನೆಗಳನ್ನು ನಿರ್ಮಿಸಿ ಅವುಗಳನ್ನು ಲೋಕಾರ್ಪಣೆ ಮಾಡಿದ್ದಾರೆ. ಮಾನ್ಯ ನಾರಾಯಣಮೂರ್ತಿಯವರು Infosys foundation ನಿಂದ ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಮನೆಗಳನ್ನು ಕಟ್ಟಿ ಈಗ ಲೋಕಾರ್ಪಣೆ ಮಾಡಿದರು. ಈಗಾಗಲೇ ಗೃಹಪ್ರವೇಶವನ್ನು ಕೂಡ ಮಾಡಿದ್ದಾರೆ. ದೇಶದ ಇತಿಹಾಸದಲ್ಲೇ ಇಲ್ಲವೆಂದು ಹೇಳಿ, ರಾಜ್ಯಪಾಲರ ಹತ್ತಿರ ಇಂತಹ ಒಂದು ಸುಳ್ಳು ವರದಿಯನ್ನು ಓದಿಸಿದ್ದು, ಅತ್ಯಂತ ನೋವಿನ ಸಂಗತಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ತರಹ ತಪ್ಪು ಮಾಹಿತಿಗಳನ್ನು ಕೊಡುವಂತಹ ವಿಚಾರ ಆಗಬಾರದು. ಅದೇ ರೀತಿ ಇಡೀ ದೇಶದಲ್ಲಿಯೇ ಕರ್ನಾಟಕ ಹಾಲು ಉತ್ಪಾದನೆಯಲ್ಲಿ ಬಹಳ ಮುಂದಿದೆ. ಇದರಲ್ಲಿ ಒಂಭತ್ತು ಲಕ್ಷ ಹಾಲು ಉತ್ಪಾದಕ ರೈತರಿಗೆ ಪ್ರತಿ ಲೀಟರ್‌ಗೆ ಐದು ರೂಪಾಯಿಗಳ ಪ್ರೋತ್ಸಾಹ ಧನ ಕೊಟ್ಟಿದ್ದೇವೆಂಬುದು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದರಲ್ಲಿ ಬಂದಿದೆ. ಮಾನ್ಯ ಸಭಾಪತಿಯವರೇ, ದಯವಿಟ್ಟು ಇದರ ಬಗ್ಗೆ ಗಮನಹರಿಸಬೇಕು. 2008 ರಿಂದ 2020ನೇ ಸಾಲಿನಲ್ಲಿ ಇದ್ದೇವೆ. 2008 ರಿಂದ 2020ರ ವರೆಗೆ ಇಲ್ಲಿಯವರೆಗೆ ಕೊಟ್ಟಿರುವಂತಹದ್ದು ಬರೀ ಐದು ರೂಪಾಯಿಗಳು ಮಾತ್ರ. 2008 ರಿಂದ 2020 ರವರೆಗೆ ಯಾವ್ಯಾವ ಸರ್ಕಾರಗಳಿದ್ದವು ಎಂಬುದರ ಬಗ್ಗೆ ದಯಮಾಡಿ ಗಮನ ಹರಿಸಬೇಕಾಗುತ್ತದೆ. ಈ ಹಿಂದೆ ಕುಮಾರಸ್ವಾಮಿಯವರ ಸರ್ಕಾರ ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಬಜೆಟ್‌ನಲ್ಲಿ ಒಂದು ರೂಪಾಯಿ ಘೋಷಣೆ ಮಾಡಿದ್ದಾರೆ. ಅದು implement ಆಗಿಲ್ಲ. ಬಜೆಟ್‌ನಲ್ಲಿ ಘೋಷಣೆಯಾಗಿದ್ದು, ಅದು ಬಜೆಟ್‌ನಲ್ಲಿ ಕೂಡ ಅವಕಾಶ ಮಾಡಿಕೊಟ್ಟಿದ್ದಾರೆ. ಐದು ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆಂದು ಹೇಳಿ, ನನ್ನ ಸರ್ಕಾರ ಕೊಟ್ಟಿದೆ ಎಂದು ಹೇಳುವಂತಹ ವಿಚಾರ ಅಕ್ಷರಶಃ ಸುಳ್ಳಾಗಿದೆ. ದಯವಿಟ್ಟು, ಇಂತಹ ಭಾಷಣವನ್ನು ರಾಜ್ಯಪಾಲರಿಂದ ಪ್ರಿಂಟ್ ಮಾಡಿ ಓದಿಸತಕ್ಕಂಥದ್ದು. ಇನ್ನು ಮುಂದಾದರೂ ಇದನ್ನು ಕೈಬಿಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇವತ್ತು ಕಲ್ಯಾಣ ಕರ್ನಾಟಕದಿಂದ ಅನೇಕ ಸದಸ್ಯರಿದ್ದಾರೆ. 'ಕಲ್ಯಾಣ ಕರ್ನಾಟಕ' ಎಂಬ ಹೆಸರು ಇಟ್ಟರೆ ಮಾತ್ರ ಸಾಧ್ಯವಿಲ್ಲ. ಕಲ್ಯಾಣ ಕರ್ನಾಟಕ ಆಗಬೇಕಾದರೆ ಅನೇಕ ಕುತ್ತಿಗೆ ಇಳಿಯತಕ್ಕಂತಹ ಕೆಲಸಗಳು ಆಗಬೇಕಾಗುತ್ತದೆ. ಉದಾಹರಣೆಗೆ ಡೈರಿ ವಿಚಾರವನ್ನು ತೆಗೆದುಕೊಂಡರೆ ಇಡೀ ರಾಜ್ಯದಲ್ಲಿ ರೈತರಿಗೆ ಅತಿ ಹೆಚ್ಚು ಲೀಟರ್ ಹಾಲು ಉತ್ಪಾದನೆ ಕೊಡತಕ್ಕಂತಹ ಯಾವುದಾದರೂ ಜಿಲ್ಲೆ ಇದೆ ಎಂದು ಹೇಳಿದರೆ, ಅದು ಹಾಸನ ಹಾಲು ಒಕ್ಕೂಟ ಎಂಬ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೂವತ್ತು ರೂಪಾಯಿ ಇಪ್ಪತ್ತು ಪೈಸೆಯನ್ನು ಕೊಡುತ್ತಿದ್ದಾರೆ. ಮಂಡ್ಯದಲ್ಲಿ ಮೂವತ್ತು ರೂಪಾಯಿ ಕೊಡುತ್ತಿದ್ದಾರೆ. ಮೈಸೂರಿನಲ್ಲಿ ಇಪ್ಪತೊಂಭತ್ತು ರೂಪಾಯಿ ಕೊಡುತ್ತಿದ್ದಾರೆ. ಕೋಲಾರದಲ್ಲಿ ಇಪ್ಪತ್ತೆಂಟು ಕೊಡುತ್ತಿದ್ದಾರೆ. ಕಲ್ಯಾಣ ಕರ್ನಾಟಕ ಬಗ್ಗೆ ಮೊಸಳೆ ಕಣ್ಣೀರು ಸುರಿಸಿರತಕ್ಕಂತಹ ಸರ್ಕಾರ "ಕಲ್ಯಾಣ ಕರ್ನಾಟಕದಲ್ಲಿ" ಇನ್ನೂ ಕೂಡ ಇಪ್ಪತ್ತಾರು ರೂಪಾಯಿಗಳು ಕ್ರಾಸ್ ಆಗಲಿಲ್ಲ. ಅಲ್ಲಿನ ರೈತರ ಬಗ್ಗೆ ಎಷ್ಟು ಕಾಳಜಿ ಇದೆ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಸರ್ಕಾರ ಆಲೋಚನೆ ಮಾಡಬೇಕಾಗುತ್ತದೆ. 'ಕಲ್ಯಾಣ ಕರ್ನಾಟಕ' ಎಂಬ ಹೆಸರು ಇಟ್ಟರೆ ಮಾತ್ರ ಸಾಲದು ಕಲ್ಯಾಣ ಕರ್ನಾಟಕವಾಗಬೇಕಾದರೆ ಏನೇನೂ ರೂಪ-ರೇಷೆಗಳನ್ನು ತಯಾರು ಮಾಡಬೇಕು ಎನ್ನುವ ವಿಚಾರದಲ್ಲಿ ಸರ್ಕಾರ ಆಲೋಚನೆ ಮಾಡಬೇಕು. ಇನ್ನು ಬಹಳ ಮುಖ್ಯ ವಿಚಾರಗಳಿವೆ ನಂತರ ಸಮಯವಿದ್ದರೆ ಚರ್ಚೆ ಮಾಡುತ್ತೇನೆ.

**(22)18-2-2020/1.10/ಎಂ.ಎಂ-ಜಿ.ಆರ್**

**ಶ್ರೀ ಎಸ್.ಎಲ್. ಭೋಜೇಗೌಡ (ಮುಂದು):-**

ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ 2020ನೇ ಇಸವಿಯಲ್ಲಿ ರೈತರ ಆದಾಯವನ್ನು ದ್ವಿಗುಣ ಮಾಡುತ್ತೇವೆ ಎಂದು ಹೇಳಿದೆ. ರಾಜ್ಯ ಸರ್ಕಾರವೂ ಅದಕ್ಕೆ ಪೂರಕವಾಗಿದೆ ಎಂದು ನಾನು ಭಾವಿಸುತ್ತೇನೆ. ಇವತ್ತು ವೈದ್ಯನಾಥನ್ ವರದಿ ಬಂದ ನಂತರ PACS (Primary *Agricultural* Co-Operative Credit Societies) ಗಳ ಪರಿಸ್ಥಿತಿ ಹಿಂದೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಏನಿತ್ತು ಆ ವರದಿಯಲ್ಲಿ ಏನನ್ನು ಹೇಳಿದರು ಎಂದರೆ, ಅನೇಕ ಸಹಕಾರಿ ಧುರೀಣರು ಇಲ್ಲಿದ್ದಾರೆ. ಶೇ.75 ಭಾಗ ಸಹಕಾರ ಸಂಸ್ಥೆಗಳು ಸಂಪೂರ್ಣವಾಗಿ ಅಧೋಗತಿಗೆ ಹೋಗಿದ್ದು, ನಷ್ಟವನ್ನು ಅನುಭವಿಸುತ್ತಿದ್ದ ಸಂದರ್ಭದಲ್ಲಿ ಅಂದಿನ ಕೇಂದ್ರ ಸರ್ಕಾರ ಎಲ್ಲವಕ್ಕೂ ಸ್ವಾಯತ್ತತೆಯನ್ನು ಕೊಟ್ಟು ಎಲ್ಲಾ PACS ಗಳಿಗೆ ಜೀವ ತುಂಬಿ ನಷ್ಟವಾಗಿರುವುದನ್ನು ಸಂಪೂರ್ಣವಾಗಿ ತುಂಬಿಕೊಟ್ಟ ಪರಿಣಾಮವಾಗಿ PACS ಗಳು ಉತ್ತಮವಾದ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಇವೆ. ಶೇ.75ರಷ್ಟು ಸಹಕಾರ ಸಂಸ್ಥೆಗಳು ಅಧೋಗತಿಗೆ ಹೋದಂತಹ ಸಂದರ್ಭದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟು ಅವುಗಳಿಗೆ ಸ್ವಾಯತ್ತತೆ ತುಂಬಿದ ಸಂದರ್ಭದಲ್ಲಿ ಇವತ್ತು PACS ಎಂದರೆ ಏನು? Primary *Agricultural* Co-Operative Credit Societies ಗಳಿಗೆ ನಾವು ಕೃಷಿಯನ್ನು ಆಧರಿಸಿ ಕೃಷಿಯಲ್ಲಿ ಬೆಳೆ ಸಾಲ ಇರಬಹುದು, ಅಭಿವೃದ್ಧಿ ಸಾಲ ಇರಬಹುದು ಕೃಷಿಗೆ ಸಂಬಂಧಪಟ್ಟಂತಹ ಎಲ್ಲಾ ಚಟುವಟಿಕೆಗಳಿಗೆ ನಾವು PACS ಮುಖಾಂತರ ಸಾಲವನ್ನು ಕೊಡುತ್ತಿದ್ದೇವೆ. ಸುಮಾರು ಮೂರು ಲಕ್ಷದ ವರೆಗೆ ಉಚಿತ ಬಡ್ಡಿದರದಲ್ಲಿ ಮತ್ತು 10 ಲಕ್ಷ ರೂಪಾಯಿಗಳವರೆಗೆ ಶೇ.3ರಷ್ಟು ಬಡ್ಡಿ ದರದಲ್ಲಿ ಸಾಲವನ್ನು ಕೊಡುತ್ತಿದ್ದೇವೆ. ರಾಜ್ಯಪಾಲರ ಭಾಷಣದಲ್ಲಿ ಇನ್ನೂ ಕೂಡ ಕೃಷಿ ಸಾಲದ ಬಗ್ಗೆ enhance ಮಾಡಿದ ವಿಚಾರವಾಗಲೀ, ಶೇ. 3ರಷ್ಟು ಬಡ್ಡಿಯನ್ನು, 3 ಲಕ್ಷ ಇದ್ದುದನ್ನು 5 ಲಕ್ಷಕ್ಕೆ ಏರಿಸಿದ ವಿಚಾರ ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ರೈತರ ಆದಾಯ ದ್ವಿಗುಣ ಆಗುವುದಾದರೂ ಹೇಗೆ? 2020ಕ್ಕೆ ಎಲ್ಲಾ ರೈತರ ಆದಾಯ ದ್ವಿಗುಣವಾಗುತ್ತದೆ ಎಂದು ಮಹತ್ವಾಕಾಂಕ್ಷಿ ಯೋಜನೆಯನ್ನು ತಂದಿದ್ದಾರೆ. PACS ಗಳಿಗೆ ಬಂದಿರುವ ಇನ್ನೊಂದು ಮಾರಕವೇನೆಂದರೆ, ನಾನು 15 ವರ್ಷಗಳ ಹಿಂದೆ ಹೊರಗಡೆ ಮಾತನಾಡುತ್ತಿದ್ದೇನೆ. ಯಾವ ಸಹಕಾರ ಸಂಸ್ಥೆಗಳು ರೈತರಿಗೆ ಅನುಕೂಲವಾಗುವಂತಹ ಶೇ.3ರಷ್ಟು ಬಡ್ಡಿರಹಿತ ಸಾಲ ಮತ್ತು 10 ಲಕ್ಷದವರೆಗೆ, ಕಳೆದ ಸಾಲಿನಲ್ಲಿ ಶೇ. 3ರಷ್ಟು ಸಾಲ ಕೊಟ್ಟಂತಹ ಸಹಕಾರ ಸಂಸ್ಥೆಗಳೇನಿವೆ ಆ ಸಂಸ್ಥೆಗಳಿಗೆ ಕೃಷಿ ಆದಾಯಕ್ಕೆ ಯಾವುದೇ ಕಾರಣಕ್ಕೂ ಆದಾಯ ತೆರಿಗೆ ಇಲ್ಲ ಎಂದು ದೇಶದ ಕಾನೂನು ಇದೆ. ಹಾಗೆ ಕಾನೂನು ಇರುವಂತಹ ಸಂದರ್ಭದಲ್ಲಿ ಸಹಕಾರ ಸಂಸ್ಥೆಗಳಲ್ಲಿ ಕೃಷಿಗೆ ಕೊಟ್ಟ ಸಾಲದಲ್ಲಿ ಬಂದಂತಹ ಆದಾಯಕ್ಕೆ ಡಿ.ಸಿ.ಸಿ ಬ್ಯಾಂಕ್, ಅಪೆಕ್ಸ್ ಬ್ಯಾಂಕ್ ಇನ್ನಿತರ ಬೇರೆ ಬೇರೆ ಬ್ಯಾಂಕುಗಳಿರಬಹುದು ಆ ಬ್ಯಾಂಕುಗಳಿಗೆ ಶೇ.33ರಷ್ಟು ಆದಾಯ ತೆರಿಗೆ ವಿಧಿಸಿದ್ದು ಎಷ್ಟರ ಮಟ್ಟಿಗೆ ಸರಿ ಎನ್ನುವ ವಿಚಾರವನ್ನು ಬಹಳ ಹಿಂದೆಯೇ ಪ್ರಶ್ನೆ ಮಾಡಿದ್ದೇನೆ. ಈಗ ಅದನ್ನು ಶೇ. 22ಕ್ಕೆ ಇಳಿಸಿದ್ದೇವೆ ಎಂದು ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಘೋಷಣೆ ಮಾಡಿದೆ. ಇದನ್ನು ಅತ್ಯಂತ ನೋವಿನಿಂದ ಹೇಳುತ್ತೇನೆ. PACS ಗಳು ಉಳಿದಿರುವುದೇ ರೈತರಿಂದ. ಇದು ಸಂಪೂರ್ಣವಾಗಿ ರೈತರ ಸಂಸ್ಥೆ. ಕೃಷಿಯಿಂದ ಆದಾಯ ಗಳಿಸುವ ಈ ಸಂಸ್ಥೆಗಳಿಗೆ ಆದಾಯ ತೆರಿಗೆ ಹಾಕುವ ಮಾರಕ ಅಸ್ತ್ರವನ್ನು ತಂದಿರುವುದು ಎಷ್ಟರಮಟ್ಟಿಗೆ ಸರಿ ಇದೆ ಮತ್ತು ರೈತರ ಆದಾಯ ಯಾವರೀತಿ ದ್ವಿಗುಣವಾಗುತ್ತದೆ ಎಂಬುದನ್ನು ದಯಮಾಡಿ ತಾವು ಹೇಳಬೇಕಾಗುತ್ತದೆ. ದಯವಿಟ್ಟು ಇದನ್ನು ಕೂಡಲೇ ಬಿಡಬೇಕಾಗುತ್ತದೆ. ಕೇಂದ್ರ ಸರ್ಕಾರವು ಶೇ.22ಕ್ಕೆ ಇಳಿಸಿರುವ ವಿಚಾರವನ್ನು ರಾಜ್ಯ ಸರ್ಕಾರವು ಯಾವುದೇ ಕಾರಣಕ್ಕೂ ಒಪ್ಪಬಾರದು. ಕೇಂದ್ರಸರ್ಕಾರದ ಕಣ್ಣು ತೆರೆಸುವ ಕೆಲಸ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿ, ರೈತರನ್ನು ಉಳಿಸುವ ಕೆಲಸ ಮಾಡಿದರೆ, ತಾವು ಏನು ಮಹತ್ವಾಕಾಂಕ್ಷೆ ಹೊಂದಿದ್ದೀರಿ, ಇವತ್ತು ರೈತರಿಗೆ ಅನುಕೂಲ ಮಾಡಿದ ಹಾಗೆ ಆಗುತ್ತದೆ. ದಯಮಾಡಿ ತೆರಿಗೆ ಹಾಕುವ ಕೆಲಸವನ್ನು ಪಕ್ಷಾತೀತವಾಗಿ ಎಲ್ಲಾ ಸದಸ್ಯರೂ ಒಗ್ಗೂಡಿ ಈ ಕೆಲಸ ಮಾಡಿದರೆ ರೈತರು ಖಂಡಿತ ಉಳಿಯುತ್ತಾರೆ ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. PACS ಆಯಿತು, ಡೈರಿಗಳ ಬಗ್ಗೆ ಹೇಳುವುದಾದರೆ, ಈ ರಾಜ್ಯದಲ್ಲಿ ಸುಮಾರು 3500 ಹಾಲು ಒಕ್ಕೂಟ ಸಂಘಗಳಿಗೂ ಆದಾಯ ತೆರಿಗೆಯನ್ನು ಹಾಕುತ್ತಾ ಬಂದಿದ್ದೀರಿ. ಇಲ್ಲಿ ಮಾನ್ಯ ಸಹಕಾರ ಸಚಿವರು ಇದ್ದಾರೆ, ಅವರಿಗೆ ಇದೆಲ್ಲಾ ಗೊತ್ತಿದೆ ಮತ್ತು ಸಂಪೂರ್ಣ ಅರಿವಿದೆ. PACS ಗಳಿಗೆ, ಡೈರಿಗಳಿಗೆ ತೆರಿಗೆ ವಿಧಿಸಿದರೆ ರೈತರ ಸಂಸ್ಥೆ ಉಳಿಯುತ್ತದೆಯೇ ಎಂಬ ವಿಚಾರವನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಯಾವರೀತಿ ನಮ್ಮ ಆದಾಯ ದ್ವಿಗುಣವಾಗುತ್ತದೆ ಎಂಬುದನ್ನು ದಯಮಾಡಿ ತಿಳಿಸಿ.

ಇನ್ನೊಂದು ಬಹಳ ಮುಖ್ಯವಾದ ವಿಚಾರವೇನೆಂದರೆ, ಪ್ರಧಾನಮಂತ್ರಿಯವರ ಮಹತ್ವಾಕಾಂಕ್ಷಿ ಯೋಜನೆಯಾದ ಫಸಲ್ ಭಿಮಾ ಯೋಜನೆ. ಹಿಂದೆ ಕೂಡ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಇದು ಪ್ರಧಾನಮಂತ್ರಿಯವರ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಯಾವುದೇ ಯೋಜನೆಗಳನ್ನು ತರಬೇಕಾದರೆ, ಅದರ ಸಾಧಕ–ಬಾಧಕಗಳು ಸಾರ್ವಜನಿಕವಾಗಿ ಚರ್ಚೆಯಾಗಬೇಕಾಗುತ್ತದೆ. ಇದು ಸಾರ್ವಜನಿಕವಾಗಿ ಚರ್ಚೆಯಾಗಿಲ್ಲ ಎನ್ನುವ ವಿಚಾರವನ್ನು ನಾನು ಎಲ್ಲಿ ಬೇಕಾದರೂ ಹೇಳುತ್ತೇನೆ. ಈ ವಿಚಾರ ಸಾರ್ವಜನಿಕವಾಗಿ ಚರ್ಚೆಯಾಗಲಿಲ್ಲ. ಈ ಯೋಜನೆಯನ್ನು ತರಬೇಕಾದರೆ, ನಾನು ಆಗಲೂ ಕೂಡ ಹೇಳಿದ್ದೇನೆ. ಈಗಲೂ ಹೇಳುತ್ತೇನೆ. ಅನೇಕ ಇನ್ಸೂರೆನ್ಸ್ ಕಂಪನಿಗಳು ಈ ದೇಶದಲ್ಲಿವೆ. The Oriental Insurance Company or National Insurance Company Limited or United India Insurance Company ಇರಬಹುದು, ಸರ್ಕಾರದ ಅಧೀನಕ್ಕೊಳಪಟ್ಟಂತಹ ಇಂತಹ ಅನೇಕ ಹತ್ತಾರು ಇನ್ಸೂರೆನ್ಸ್ ಕಂಪನಿಗಳು ಇದ್ದಾಗ್ಯೂ ಕೂಡ ಫಸಲ್ ಭಿಮಾ ಯೋಜನೆಯನ್ನು ಖಾಸಗಿಯವರಿಗೆ ಕೊಟ್ಟಂತಹ ಸಂದರ್ಭದಲ್ಲಿ ಈ ದೇಶದಲ್ಲಿ ಏಕೆ ಅಂತಹ ಪರಿಸ್ಥಿತಿ ನಿರ್ಮಾಣವಾಯಿತು? ಆ ಪರಿಸ್ಥಿತಿಯಿಂದ ಏನಾಯಿತು? ಯಾರು ಇದರ ಒಡೆಯರಿದ್ದಾರೆ? ಎಲ್ಲಿ ಅದರ ಕಛೇರಿ ಇದೆ? ಎನ್ನುವ ವಿಚಾರ ಇವತ್ತಿನವರೆಗೂ ನಮಗೆ ಗೊತ್ತಿಲ್ಲ. ಯಾರಿಗಾದರೂ ಗೊತ್ತಿದ್ದರೆ ದಯಮಾಡಿ ಹೇಳಿ. ಫಸಲ್ ಭಿಮಾ ಯೋಜನೆಗೆ ಸಂಬಂಧಪಟ್ಟ ಕಛೇರಿ ತಾಲ್ಲೂಕು ಕೇಂದ್ರದಲ್ಲಿದೆಯೇ, ಜಿಲ್ಲಾ ಕೇಂದ್ರದಲ್ಲಿದೆಯೇ? ಈ ಫಸಲ್ ಭಿಮಾ ಯೋಜನೆಗೆ ಪ್ರತಿಯೊಬ್ಬ ರೈತರನ್ನು ತೊಡಗಿಸಿಕೊಳ್ಳದಿದ್ದರೆ ಸಹಕಾರ ಸಂಘಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಿಂದ ಹಿಡಿದು, PACS ಗಳ ನಿರ್ದೇಶಕರುಗಳನ್ನು ಅನರ್ಹಗೊಳಿಸುತ್ತೇವೆ, supersede ಮಾಡುತ್ತೇವೆ ಎಂದು ಒತ್ತಾಯ ಮಾಡಿದಂತಹ ಉದಾಹರಣೆಗಳಿವೆ. ಸಾವಿರಾರು ಕೋಟಿ ರೂಪಾಯಿಗಳ ಇನ್ಸೂರೆನ್ಸ್‌ಗಳನ್ನು ರೈತರಿಂದ ವಸೂಲಿ ಮಾಡಿದರು. ಪರಿಣಾಮವಾಗಿ ರೈತರು ಇನ್ಸೂರೆನ್ಸ್ ಕಂಪನಿಗಳಿಗೆ ಕಟ್ಟಿದ ಹಣ ಇನ್ಸೂರೆನ್ಸ್ ಕಂಪನಿಗಳಿಂದ ಪಾವತಿಯಾಯಿತೇ? ಕಳೆದ ವಾರದ ಪತ್ರಿಕೆಯಲ್ಲಿ ತಾವೆಲ್ಲಾ ನೋಡಿರಬಹುದು. ಬಡವರಿಗೆ ದಕ್ಕದ ಫಸಲ್ ಭಿಮಾ ಯೋಜನೆ; ಈ ನಾಡಿನ ರೈತರಿಗೆ ದಕ್ಕದಿರುವ ಇಂತಹ ಯೋಜನೆಗಳು ಏಕೆ ಇರಬೇಕು?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿ.ಸಿ. ಪಾಟೀಲ (ಗಣಿ ಮತ್ತು ಭೂವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ....

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಚಿವರೇ ದಯಮಾಡಿ ಕುಳಿತುಕೊಳ್ಳಿ, ನಾನು ಈಗ ಮಾತನಾಡುತ್ತಿದ್ದೇನೆ.

**ಶ್ರೀ ಸಿ.ಸಿ. ಪಾಟೀಲ (ಗಣಿ ಮತ್ತು ಭೂವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಚೆನ್ನಾಗಿ ವಿಶ್ಲೇಷಣೆ ಮಾಡುತ್ತಿದ್ದಾರೆ. ಮಾನ್ಯ ಪ್ರಧಾನಮಂತ್ರಿಯವರ ಫಸಲ್ ಭಿಮಾ ಯೋಜನೆಯು ಅತ್ಯಂತ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಕಳೆದ ಸಾಲಿನಲ್ಲಿ ಕೆಲವು ನ್ಯೂನತೆಗಳಿದ್ದವು. ಅದಕ್ಕೆ ನಮ್ಮ ಸಹಕಾರ ಸಚಿವರು ಉತ್ತರ ಕೊಡುತ್ತಾರೆ. ಈ ಬಾರಿ ಜಿಲ್ಲೆಗೊಬ್ಬರು ನೋಡಲ್ ಆಫೀಸರ್ ಇದ್ದಾರೆ. ಕೆಲವೊಂದು ರೈತರಿಗೆ ಎಲ್ಲೋ ಸ್ವಲ್ಪ ಅಧಿಕಾರಿಗಳ ಮಟ್ಟದಲ್ಲಿರಬಹುದು ಅಥವಾ ಕಾಗದ ಪತ್ರಗಳ ಮಟ್ಟದಲ್ಲಿ ನ್ಯೂನತೆಗಳಾಗಿರಬಹುದು. ಆದರೆ ಬಹಳ ಜನ ರೈತರಿಗೆ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ರೈತರ ಬೆಳೆ ಬಂದಿದ್ದರೆ ಎಷ್ಟು ಲಾಭ ಸಿಗುತ್ತಿತ್ತೋ ಅದಕ್ಕಿಂತ ಹೆಚ್ಚಿಗೆ ಲಾಭ ಸಿಕ್ಕಿದೆ. ಬಹುತೇಕ ತಾವೆಲ್ಲರೂ ಇದನ್ನು ಒಪ್ಪುತ್ತೀರಿ ಎಂದು ನಾನು ಭಾವಿಸುತ್ತೇನೆ. ಅದಕ್ಕಾಗಿ ಫಸಲ್ ಭಿಮಾ ಯೋಜನೆ ಬಗ್ಗೆ ಟೀಕೆ ಮಾಡುವಂತಹ ಸಂದರ್ಭದಲ್ಲಿ ಎಲ್ಲೋ ಒಂದು ಘಟನೆಯನ್ನು ಇಡೀ ಯೋಜನೆಗೆ ಹೋಲಿಸುವುದು ಸೂಕ್ತವಲ್ಲ ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಫಸಲ್ ಭಿಮಾ ಯೋಜನೆಯಲ್ಲಿ ನಾನು ಒಬ್ಬ ಫಲಾನುಭವಿಯಾಗಿದ್ದೇನೆ. ನಾನು ಇಲ್ಲವೆಂದು ಹೇಳುವುದಿಲ್ಲ. ನಾನೊಬ್ಬ ಫಲಾನುಭವಿಯಾದರೆ ಸಾಕೇ ನಮ್ಮ ಹಿಂದೆ ಅನೇಕ ರೈತರಿಗೆ, ಒಬ್ಬ ರೈತರಿಗೆ ತೊಂದರೆಯಾದರೂ ಕೂಡ ಈ ಫಸಲ್ ಭಿಮಾ ಯೋಜನೆಗೆ ದೊಡ್ಡ ಕೆಟ್ಟ ಹೆಸರು ಬರುತ್ತದೆ ಎನ್ನುವ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಇದರಲ್ಲಿ ಯಾರೊಬ್ಬರಿಗೂ ತೊಂದರೆಯಾಗಬಾರದು. ಇದರಲ್ಲಿ ಇನ್ನೊಂದು ಬಹಳ ಮುಖ್ಯವಾದ ವಿಚಾರವೇನೆಂದರೆ, ಇದರಲ್ಲಿ ಏನು ಆದಾಯ ಬರುತ್ತದೆ ಆ ಆದಾಯ ಸರ್ಕಾರಕ್ಕೆ ಉಳಿಯಲಿ. ಇದಕ್ಕೆ ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರ ಪಾಲು ಕೊಡುತ್ತಿದೆ. ರೈತರು ಕೂಡ ಕೊಡುತ್ತಿದ್ದಾರೆ. ಈ ಮೂವರು ಸೇರಿ ಮಾಡುತ್ತಿರುವ ಯೋಜನೆ ಇದಾಗಿದೆ. ಈ ಲಾಭಾಂಶವನ್ನು ಯಾರೋ ಖಾಸಗಿ ವ್ಯಕ್ತಿಗೆ ಏಕೆ ಕೊಡಬೇಕು? ಇದು ಬಹಳ ಮುಖ್ಯವಾದಂತಹ ಅಂಶವಾಗಿದೆ or United India Insurance Company ಯಲ್ಲಿ ಉಳಿದರೆ ಉಳಿಯಲಿ ಮುಂದೊಂದು ದಿನ ನಮಗೆ ಬೇಕಾಗುತ್ತದೆ. The Oriental Insurance Company ಬೇಕಾದರೆ ಉಳಿಯಲಿ, National Insurance Company Limited ಉಳಿದರೆ ಉಳಿಯಲಿ ಸರ್ಕಾರಕ್ಕೆ ಸಂಬಂಧಪಟ್ಟಂತಹ ಯಾವುದೇ ಇನ್ಶೂರೆನ್ಸ್ ಕಂಪನಿಗೆ ಈ ಆದಾಯ ಹೋದರೆ ಮುಂದೆ ಯಾವತ್ತಾದರೂ ಒಂದು ದಿವಸ ನಾವು ಅದರ ಅನುಕೂಲ ಪಡೆದುಕೊಳ್ಳಬಹುದು. ಇವತ್ತು ಸರ್ಕಾರವು ನಾವು ಉಳಿತಾಯ ಮಾಡಿದ ಎಲ್.ಐ.ಸಿ., ನಲ್ಲಿ ಲಾಭ ಪಡೆದುಕೊಳ್ಳುತ್ತಿಲ್ಲವೇ? ಆ ರೀತಿ ಸರ್ಕಾರದ ಸ್ವಾಮ್ಯಕ್ಕೆ ಸಂಬಂಧಪಟ್ಟಂತಹ ಯಾವುದೇ ಇನ್ಶೂರೆನ್ಸ್ ಕಂಪನಿಯಿಂದ ಇದೇ ಯೋಜನೆಯನ್ನು ಪ್ರಾರಂಭ ಮಾಡಿ. ಕಂಪನಿಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗುಜರಾತ್‌ನಲ್ಲಿ 1076 ಕೋಟಿ ರೂಪಾಯಿ ಲಾಭವಾಗಿದೆ, ಬಿಹಾರದಲ್ಲಿ 828 ಕೋಟಿ ರೂಪಾಯಿ, ಮಹಾರಾಷ್ಟ್ರದಲ್ಲಿ 2043 ಕೋಟಿ ರೂಪಾಯಿ ಲಾಭವಾಗಿದೆ, ಕರ್ನಾಟಕದಲ್ಲಿ ಮೈನಸ್ 283 ರೂಪಾಯಿ ಲಾಭವಾಗಿದೆ ಮತ್ತು ಉತ್ತರಪ್ರದೇಶದಲ್ಲಿ 223 ಕೋಟಿ ರೂಪಾಯಿ ಲಾಭವಾಗಿದೆ.

**ಶ್ರೀ ಸಿ.ಸಿ. ಪಾಟೀಲ (ಗಣಿ ಮತ್ತು ಭೂವಿಜ್ಞಾನ ಸಚಿವರು):-** ಮಾನ್ಯ ಸದಸ್ಯರೇ, ಮೈನಸ್ 283 ಎಂದರೆ ಏನು?

**ಶ್ರೀ ಎಸ್.ಎಲ್. ಭೋಜೇಗೌಡ:-** ಮೈನಸ್ 283 ಎಂದರೆ ಕಡಿಮೆ ಪ್ರೀಮಿಯಂ ಹಣ ಕಟ್ಟಿದ್ದೇವೆ, ಫಸಲ್ ಭಿಮಾ ಯೋಜನೆ ಲಾಭ ಕೊಟ್ಟಿದ್ದಾರೆ. ಅಂದರೆ ನಾವು 881 ಕೋಟಿ ರೂಪಾಯಿ ಪ್ರೀಮಿಯಂ ಹಣ ಕಟ್ಟಿದ್ದೇವೆ.

**(23) 18-02-2020/ 01-20/ ಕೆಹೆಚ್-ಜಿಆರ್**

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):-**

ಸುಮಾರು 1165 ಕೋಟಿ ರೂಪಾಯಿಗಳಷ್ಟು ಕೊಟ್ಟಿದ್ದಾರೆ. ಅಂದರೆ ಇನ್ನೂ ಕೂಡ 881 ಕೋಟಿ ರೂಪಾಯಿಗಳ ಪ್ರೀಮಿಯಂ ಮೊತ್ತಕ್ಕೆ ಸುಮಾರು 400 ಕೋಟಿ ರೂಪಾಯಿಗಳಷ್ಟು ಹಣ ವಾಪಸ್ಸು ಕರ್ನಾಟಕ್ಕೆ ಬರಬೇಕಾಗಿದೆ. ಇದರಲ್ಲಿ ಬರುವ ಲಾಭಾಂಶ ಯಾರೋ ಒಬ್ಬ ಖಾಸಗಿ ವ್ಯಕ್ತಿಗೆ ಏಕೆ ಹೋಗಬೇಕು? ಇದಕ್ಕೆ ನಮ್ಮಲ್ಲಿ ability ಇಲ್ಲವೇ, ನಮ್ಮಲ್ಲಿ ಅಧಿಕಾರಿಗಳು ಇಲ್ಲವೇ, ನಮ್ಮ ಸರ್ಕಾರದ ಸ್ವಾಮ್ಯದಲ್ಲಿ ನಡೆಯುತ್ತಿರುವ ಇನ್ಷೂರೆನ್ಸ್ ಕಂಪನಿಗಳು ಇಲ್ಲವೇ, ಇದರ ಮುಖಾಂತರ ಏಕೆ ಮಾಡಿಸಬಾರದು? ಅಂತಹ ಮಹತ್ವಾಕಾಂಕ್ಷೆಯು ಎಲ್ಲಿಯೂ ಕೂಡ ಲ್ಯಾಪ್ಸ್ ಆಗಬಾರದು ಎಂಬುದು ನನ್ನ ಮನದಾಳದ ಮಾತು. ಇದನ್ನು ತಾವೆಲ್ಲಾ ಮಾನ್ಯ ಸದಸ್ಯರುಗಳು ಒಪ್ಪುತ್ತೀರೋ, ಇಲ್ಲವೋ ನನಗೆ ಗೊತ್ತಿಲ್ಲ. ದಯಮಾಡಿ, ಈ ಪಸಲ್ ಭೀಮಾ ಯೋಜನೆಯನ್ನು ಅತ್ಯಂತ ಸಂತೋಷವಾಗಿ ಒಪ್ಪಿಕೊಂಡು ಸ್ವೀಕಾರ ಮಾಡಬೇಕು. ನಾವೆಲ್ಲರೂ ಕೂಡ ನಮ್ಮ ಬ್ಯಾಂಕಿನಲ್ಲಿ ಶೇಕಡಾ 100 ರಷ್ಟು ಇನ್ಷೂರೆನ್ಸ್ ಮಾಡಿಸಿದ ನಂತರ ನಿಮ್ಮ ಮಾತು ಕೇಳಿ ಇನ್ಷೂರೆನ್ಸ್ ಮಾಡಿಸಿದ್ದೇವೆ ಎಂದು ರೈತರ ಹತ್ತಿರ ಮಾತು ಕೇಳಬೇಕಾದಂತಹ ಪರಿಸ್ಥಿತಿ ಇವತ್ತಿನ ದಿವಸ ಬಂದಿದೆ. ಇದನ್ನು ನೀವು ಮಾಡದೇ ಇದ್ದರೆ ನಿಮ್ಮನ್ನು supersede ಮಾಡುತ್ತೇವೆಂದು ರೈತರು ನಮ್ಮ ಅಧಿಕಾರಿಗಳನ್ನು ಸಹ ಎದುರಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಾವು ಎರಡು ವಿಚಾರಗಳ ಬಗ್ಗೆ ಗಮನ ಕೊಡಬೇಕು. ಮೊದಲನೆಯದು ಟ್ಯಾಕ್ಸ್ ಹಾಕುವಂತಹ ವಿಚಾರದಲ್ಲಿ ಯೋಚನೆ ಮಾಡಬೇಕು. ಈ ಸದನದಲ್ಲಿರುವ ಮಾನ್ಯ ಸದಸ್ಯರುಗಳು veteran co-operatives ಆಗಿದ್ದು, ಇಲ್ಲಿ ಯಾರೂ ಸಹ ಕಡಿಮೆ ಇಲ್ಲ. ಸಹಕಾರ ಕ್ಷೇತ್ರವನ್ನು ಅರೆದು ಕುಡಿದಂತಹವರು ಇದ್ದಾರೆ. ಇವತ್ತಿನ ದಿವಸ ಡೈರಿಗಳಲ್ಲಿ ಹಾಲು ಮಾರಿ ಬಂದ ಆದಾಯಕ್ಕೆ ಈ ದೇಶದಲ್ಲಿ ಟ್ಯಾಕ್ಸ್ ಹಾಕುತ್ತಾರೆ ಎಂದರೆ ಹೇಗೆ? ಇದರಲ್ಲಿ ನೂರಕ್ಕೆ ಎಂಭತ್ತು ಭಾಗದಷ್ಟು ರೈತ ಮಹಿಳೆಯರು ಇದ್ದಾರೆ. agriculture income ಗೆ ಟ್ಯಾಕ್ಸ್ ಹಾಕುತ್ತಾರೆ ಎಂದರೆ ಹೇಗೆ? ತಾವು ರೈತರ ಆದಾಯವನ್ನು ಹೇಗೆ ಡಬಲ್ ಮಾಡುತ್ತೀರಿ. ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬ ಬಗ್ಗೆ ಆಲೋಚನೆ ಮಾಡಬೇಕಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇನ್ನು ರಾಜ್ಯಪಾಲರ ಭಾಷಣದಲ್ಲಿ fertilizer ವಿಚಾರದ ಬಗ್ಗೆ ಎಲ್ಲೂ ಕೂಡ ಪ್ರಸ್ತಾಪವಾಗಿರುವುದಿಲ್ಲ. ನಮ್ಮ ದೇಶದಲ್ಲಿ ಆದಾಯ ದ್ವಿಗುಣವಾಗುವ ವಿಚಾರದಲ್ಲಿ ಮಾತ್ರ ನಾನು ಮಾತನಾಡುತ್ತೇನೆ. ನಮ್ಮ ದೇಶದ ಆದಾಯ ದ್ವಿಗುಣವಾಗಬೇಕು. ನಮ್ಮ ದೇಶದ ಆದಾಯ 2020ನೇ ಸಾಲಿನಲ್ಲಿ ದ್ವಿಗುಣವಾಗುತ್ತದೆ ಎಂದು ಖುಷಿ ಇದೆ. ರೈತರು ಯಾವ ರೀತಿಯ ಸಂಕಷ್ಟದಲ್ಲಿ ಸಿಲುಕಿದ್ದಾನೆ ಎಂಬ ವಿಚಾರವೂ ಕೂಡ ಇದೆ. 2012ನೇ ಸಾಲಿನಲ್ಲಿ ಯೂರಿಯಾಗೆ 286 ರೂಪಾಯಿಗಳ ದರ ಇತ್ತು. ಇವತ್ತಿನ 2019-20ನೇ ಸಾಲಿನಲ್ಲಿ ಯೂರಿಯಾಗೆ 266 ರೂಪಾಯಿ ಇದೆ. ಯಾವ ಯಾವ ಗೊಬ್ಬರಗಳಿಗೆ ಎಷ್ಟೆಷ್ಟು ದರ ಇದೆ ಎಂಬ ಬಗ್ಗೆ ಪಟ್ಟಿ ಇದೆ. ಆದರೆ 2012ನೇ ಸಾಲಿನಲ್ಲಿ 50 ಕೆ.ಜಿ ಯೂರಿಯಾ ಬ್ಯಾಗ್‌ಗಳನ್ನು ಕೊಡುತ್ತಿದ್ದರು. ಆದರೆ, ಇವತ್ತು 45 ಕೆ.ಜಿ ಯೂರಿಯಾ ಬ್ಯಾಗ್‌ಗಳನ್ನು ಕೊಡುತ್ತಿದ್ದಾರೆ. ಇದರಲ್ಲಿ ಏನು ವ್ಯತ್ಯಾಸಗಳಿದೆ, ಎಲ್ಲಿಯಾದರೂ ರೈತರಿಗೆ ಗೊಬ್ಬರಗಳನ್ನು ಉಚಿತವಾಗಿ ಕೊಡುತ್ತೇವೆಂದು ಪ್ರಸ್ತಾಪ ಮಾಡಲಾಗಿದೆಯೇ? Pesticides ಅನ್ನು ಉಚಿತವಾಗಿ ನೀಡಲಾಗುವುದೆಂದು ಎಲ್ಲಾದರೂ ಹೇಳಲಾಗಿದೆಯೇ? Interest-free ಇರುವಂತಹ ಸಾಲವನ್ನು 3 ಲಕ್ಷ ರೂಪಾಯಿಗಳಿಂದ 5 ಲಕ್ಷ ರೂಪಾಯಿಗಳಿಗೆ ಹೆಚ್ಚಿಗೆ ಮಾಡಿದ್ದೇವೆಂದು ಎಲ್ಲಾದರೂ ಪ್ರಸ್ತಾಪ ಮಾಡಲಾಗಿದೆಯೇ ಎಂದು ನೋಡಿದಾಗ, ಅದನ್ನು ಮಾಡಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಅನೇಕ ನೀರಾವರಿ ಯೋಜನೆಗಳ ಬಗ್ಗೆ ಘೋಷಣೆ ಮಾಡಿರುವುದು ಬಹಳ ಒಳ್ಳೆಯ ವಿಚಾರ. ಇನ್ನು ಹನಿ ನೀರಾವರಿ ಯೋಜನೆಯ ಬಗ್ಗೆ ಬಹಳಷ್ಟು ವಿಚಾರಗಳನ್ನು ಪ್ರಸ್ತಾಪಿಸಿರುವ ಬಗ್ಗೆ ನನ್ನ ಹತ್ತಿರ ಸಂಪೂರ್ಣವಾದ ದಾಖಲೆಗಳಿವೆ. ನಮ್ಮ ಇಲಾಖೆಯ ಅಧಿಕಾರಿ ವರ್ಗದವರು ಹನಿ ನೀರಾವರಿ ಯೋಜನೆಗೆ ಸಂಬಂಧಪಟ್ಟಂತೆ 200 ರಿಂದ 250 ಪುಟಗಳುಳ್ಳ ಕಡತದಲ್ಲಿ ಷರತ್ತು ಹಾಕಿ ತಯಾರು ಮಾಡಿದ್ದಾರೆ. ಈ ಷರತ್ತುಗಳ ಪ್ರಕಾರ ಮಾಡಿದರೆ ಯಾರೊಬ್ಬರೂ ಕೂಡ qualified ಅಲ್ಲ. ಹನಿ ನೀರಾವರಿ ಯೋಜನೆಗೆ ಕೊಡುವಂತಹ lateral pipes, tubes ಇರಬಹುದು, PVC pipes ಇರಬಹುದು, ನಮ್ಮ ಕರ್ನಾಟಕ ರಾಜ್ಯಕ್ಕೆ ಇಸ್ರೇಲ್ ಮಾದರಿಯ ಹನಿ ನೀರಾವರಿ ಯೋಜನೆಯನ್ನು ಜಾರಿಗೆ ತರುತ್ತೇವೆಂದು ಹೇಳಿದ್ದರು. ಹಾಗೆಯೇ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಇಸ್ರೇಲ್ ದೇಶಕ್ಕೆ ಭೇಟಿ ಕೊಟ್ಟು, ಅದೇ ರೀತಿಯ ಮಾದರಿಯನ್ನು ನಮ್ಮ ರಾಜ್ಯದ ಕೃಷಿಯಲ್ಲಿ ಜಾರಿಗೆ ತರೋಣವೆಂದು ಹಿಂದಿನ ಆಯವ್ಯಯ ಭಾಷಣದಲ್ಲಿ ತಿಳಿಸಿದ್ದರು. ಆ ರೀತಿಯ ಮಾದರಿಯನ್ನು ನಮ್ಮ ದೇಶದ ಕೃಷಿಯಲ್ಲಿ ಅಳವಡಿಸಿದರೆ ಆದಾಯ ಡಬಲ್ ಅಲ್ಲ, ತ್ರಿಬಲ್ ಆಗುತ್ತದೆ ಎಂದು ನಾನು ಒಬ್ಬ ರೈತನಾಗಿ ಮತ್ತು ಅಡಿಕೆ ಬೆಳೆಗಾರನಾಗಿ ಹೇಳುತ್ತೇನೆ. ನಾನು ಒಂದು ಎಕರೆಗೆ 17 ಕ್ವಿಂಟಾಲ್ ಅಡಿಕೆಯನ್ನು ಬೆಳೆಯುತ್ತಿದ್ದೇನೆ. ಇವತ್ತಿನ ದಿವಸ ಒಂದು ಕ್ವಿಂಟಾಲ್ ಅಡಿಕೆಗೆ 40 ಸಾವಿರ ರೂಪಾಯಿಗಳ ದರ ಇದೆ. ನಾನು ಇಸ್ರೇಲ್ ಮಾದರಿಯನ್ನು ಅಳವಡಿಸಿಕೊಂಡರೆ ಒಂದು ಎಕರೆಗೆ 25 ಕ್ವಿಂಟಾಲ್‌ನಷ್ಟು ಅಡಿಕೆಯನ್ನು ಬೆಳೆಯಬಹುದು. ಉತ್ತರ ಕರ್ನಾಟಕದ ಬಹಳಷ್ಟು ಮಂದಿ ಅಡಿಕೆ ಬೆಳೆಗಾರರು ಈ ಸದನದಲ್ಲಿ ಇದ್ದಾರೆ. ಇವತ್ತಿನ ದಿವಸ ಒಂದು ಕ್ವಿಂಟಾಲ್ ಅಡಿಕೆಗೆ 40 ಸಾವಿರ ರೂಪಾಯಿಗಳ ದರ ಇದ್ದು, ಇದಕ್ಕೆ 10 ಲಕ್ಷ ರೂಪಾಯಿಗಳಷ್ಟು ಆದಾಯ ಬರುತ್ತದೆ. ಹಾಗೆಯೇ ಅಡಿಕೆ ಬೆಳೆಯುವುದಕ್ಕೆ ಸುಮಾರು 2 ಲಕ್ಷ ರೂಪಾಯಿಗಳಷ್ಟು ಖರ್ಚು ಬರುತ್ತದೆ. ಸರ್ಕಾರವು ಹನಿ ನೀರಾವರಿಗಾಗಿ ಶೇಕಡಾ 90 ರಷ್ಟು ಸಬ್ಸಿಡಿಯನ್ನು ಕೊಡುತ್ತಿದೆ. ಇದಕ್ಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಬ್ಸಿಡಿಯನ್ನು ಕೊಟ್ಟರೆ ಆಗುವುದಿಲ್ಲ. ಗುಣಮಟ್ಟದಿಂದ ಕೂಡಿದ materials ಬೇಕಾಗುತ್ತದೆ. ಇವತ್ತಿನ ದಿವಸ lateral pipes ಗಳಿಂದ ಹಿಡಿದು ಯಾವುದೇ materials ಗುಣಮಟ್ಟದಿಂದ ಕೂಡಿರುವುದಿಲ್ಲ. ಇದರ ಬಗ್ಗೆ ಮಾನ್ಯ ಸಚಿವರಾದ ಸಿ.ಸಿ.ಪಾಟೀಲರವರನ್ನು ಕೇಳಬಹುದು. ಸರ್ಕಾರವು ರೈತರಿಗೆ ಒಮ್ಮೆ ಸಬ್ಸಿಡಿಯನ್ನು ಕೊಟ್ಟರೆ ಕನಿಷ್ಠ ಐದು ವರ್ಷದವರೆಗೂ ಹೋಗುತ್ತದೆ. ಹತ್ತು ವರ್ಷಕ್ಕೆ ಒಂದು ಬಾರಿಯಾದರೂ ಸಬ್ಸಿಡಿಯನ್ನು ನಾವು ರೈತರಿಗೆ ವಾಪಸ್ಸು ಕೊಡಬೇಕಲ್ಲವೇ, ನಾನು ಐದು ವರ್ಷಗಳ ಹಿಂದೆ ಸಬ್ಸಿಡಿಯನ್ನು ತೆಗೆದುಕೊಂಡಿದ್ದೇನೆ. ಮತ್ತೆ ನನಗೆ 10 ವರ್ಷ, 15 ವರ್ಷವಾದರೂ ಅರ್ಹತೆ ಇಲ್ಲವೆಂದರೆ ಹೇಗೆ? ಇದು ತಮಗೆ ನ್ಯಾಯವೆನಿಸುತ್ತದೆಯೇ? ದಯಮಾಡಿ ಈ ರೀತಿಯ ವಿಚಾರಗಳನ್ನು ಸರ್ಕಾರವು ರಾಜ್ಯಪಾಲರ ಭಾಷಣದಲ್ಲಿ ಘೋಷಣೆ ಮಾಡಿರುವುದಿಲ್ಲ. ಇದು ಬಹಳ ಅತ್ಯಂತ most essential ಆಗಿದ್ದು, ಇದನ್ನು ಮಾಡಲೇಬೇಕಾಗಿದೆ. ಐದು ವರ್ಷಗಳ ಹಿಂದೆ ಯಾವುದಾದರೂ ರೈತರಿಗೆ ಸಬ್ಸಿಡಿಯನ್ನು ಕೊಟ್ಟಿದ್ದರೆ, ಐದು ವರ್ಷಗಳಾದ ನಂತರ ಮತ್ತೆ ಅರ್ಹತೆ ಇದೆ ಎಂದು ಸರ್ಕಾರ ಮಾಡಬೇಕಾಗುತ್ತದೆ. ಇದನ್ನು ಮಾಡದೇ ಇದ್ದರೆ ರೈತರ ಪರಿಸ್ಥಿತಿ ಬಹಳ ತೊಂದರೆಗೆ ಸಿಲುಕುತ್ತದೆ. ಆ ದೃಷ್ಟಿಯಿಂದ ಈ ಎಲ್ಲಾ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ದಯಮಾಡಿ ಸರ್ಕಾರ ಮನಸ್ಸು ಮಾಡಿದರೆ ರೈತರ ಆದಾಯ ಹೆಚ್ಚು ಆಗುವುದರಲ್ಲಿ ಎರಡು ಮಾತಿಲ್ಲ. ಹನಿ ನೀರಾವರಿ ಯೋಜನೆಗಾಗಿ ಒಳಪಡಿಸಿರುವಂತಹ ಕಂಪನಿಗಳು ಒಳ್ಳೆಯ ಗುಣಮಟ್ಟವನ್ನು ಹೊಂದಿರಬೇಕು. ದಯಮಾಡಿ, ಇದರ ಬಗ್ಗೆ ಚರ್ಚೆ ಮಾಡಲು ತಾವು ಯಾರನ್ನು ಕರೆಯಬೇಕಾಗಿಲ್ಲ. ನಮ್ಮ ಪ್ರತಿ ಜಿಲ್ಲೆಯಲ್ಲಿ ಪ್ರಗತಿಪರ ಕೃಷಿಕರು 50 ರಿಂದ 100 ಜನರು ಸಿಗುತ್ತಾರೆ. ಆ ಕೃಷಿಕರನ್ನು ಕರೆದು ಮೀಟಿಂಗ್‌ನ್ನು ಮಾಡಿ, ಅವರ ಅನುಭವಗಳನ್ನು ತೆಗೆದುಕೊಳ್ಳಿ. ಸರ್ಕಾರವು ಯಾವುದೇ ಹೊರ ದೇಶದಿಂದ ಜನರನ್ನು ಕರೆದುಕೊಂಡು ಬರಬೇಕಾಗಿಲ್ಲ. ಕೃಷಿಕರ ಅನುಭವವನ್ನು ತೆಗೆದುಕೊಂಡರೆ, ಕೃಷಿ ಬದುಕು ಬಹಳ ಸಂತೋಷವಾಗಿರುತ್ತದೆ. ಆ ಕೃಷಿ ಬದುಕಿನಿಂದ ನಮ್ಮ ಯುವಕರು ತಾಲ್ಲೂಕು ಕೇಂದ್ರ, ಜಿಲ್ಲಾ ಕೇಂದ್ರ ಮತ್ತು ಇನ್ನು ಬೇರೆ ಬೇರೆ ಕೇಂದ್ರಗಳಿಂದ ವಲಸೆ ಬಂದು ಬೆಂಗಳೂರಿನಲ್ಲಿ ಡ್ರೈವರ್ ಕೆಲಸ, ಇನ್ನಿತರ ಕೆಲಸಕ್ಕೆ ಎಂಟು ಸಾವಿರ, ಹತ್ತು ಸಾವಿರ ರೂಪಾಯಿಗಳಿಗೆ ದುಡಿಯುತ್ತಿದ್ದಾರೆ. ಅಂತಹ ಯುವಕರನ್ನು ಕೃಷಿಯಲ್ಲಿ ನಾವು ಉಳಿಸುವ ಕೆಲಸ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಬಹಳಷ್ಟು ಮಾನ್ಯ ಸದಸ್ಯರು ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ತಾವು ಏನು ಸೂಚನೆ ಕೊಟ್ಟಿದ್ದೀರಿ. ಅದಕ್ಕೆ ತಪ್ಪದೇ ನನ್ನ ಮಾತಿಗೆ ವಿರಾಮವನ್ನು ತಿಳಿಸುತ್ತೇನೆ. ದಯಮಾಡಿ, ಈ ನಾಡಿನಲ್ಲಿ ಎಲ್ಲಾ ರೈತರು ಕೃಷಿ ಬದುಕನ್ನು ಅವಲಂಬಿಸಿದ್ದು ಮತ್ತು ಕೃಷಿಯನ್ನೇ ನಂಬಿ ಬಂದಿರುವಂತಹ ನಾವುಗಳು ಮುಂದಿನ ಪೀಳಿಗೆಗೂ ಕೃಷಿ ಬದುಕು ಲಾಭದಾಯಕವಾಗವೆಂದು ತೋರಿಸುವಂತಹ ಸನ್ನಿವೇಶವನ್ನು ನಿರ್ಮಾಣ ಮಾಡಬೇಕಾದ ಆದ್ಯ ಕರ್ತವ್ಯ ನಮ್ಮದಾಗಿದೆ. ಇದರಲ್ಲಿ ನಾವೆಲ್ಲರೂ ಪಾಲ್ಗೊಳ್ಳಬೇಕೆಂದು ಈ ಸಂದರ್ಭದಲ್ಲಿ ತಿಳಿಸಿ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್‌ರವರೇ ತಾವು ಮಾತನಾಡಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ನಂತರದಲ್ಲಿ ಮಾತನಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸದನವು ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಪ್ರಾರಂಭವಾಗಿದ್ದು, ಈಗ ಭೋಜನಕ್ಕಾಗಿ ಸದನವನ್ನು ಮುಂದೂಡಿ.

**ಸಭಾಪತಿಯವರು:–** ಡಾ॥ ತೇಜಸ್ವಿನಿಗೌಡರವರೇ ತಾವು ಮಾತನಾಡಿ.

**ಶ್ರೀ ಸಿ.ಸಿ.ಪಾಟೀಲ:–** ಮಾನ್ಯ ಸಭಾಪತಿಯವರೇ, ಈಗ ಭೋಜನಕ್ಕಾಗಿ ಸದನವನ್ನು ಮೂಂದೂಡುವುದಿಲ್ಲವೇ.

**ಡಾ॥ ತೇಜಸ್ವಿನಿಗೌಡ:–** ಪೀಠ ಹೇಳಿದ ಹಾಗೆ ನಾನು ಮಾಡುತ್ತೇನೆ.

**ಸಭಾಪತಿಯವರು:–** ಆಯಿತು. ಈಗ ಸದನವನ್ನು ಮಧ್ಯಾಹ್ನ 2 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

024/18–02–2020/02–50/ಬಿಎಸ್‌ಡಿ–ಎಕೆ

**(ಭೋಜನಕ್ಕಾಗಿ ಮಧ್ಯಾಹ್ನ 01 ಗಂಟೆ 28 ನಿಮಿಷಕ್ಕೆ ಮುಂದೂಡಿದ್ದ ಸದನವು ಪುನಃ ಮಧ್ಯಾಹ್ನ 2 ಗಂಟೆ 53 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**9. ಪ್ರಕಟಣೆ**

**ಸಭಾಪತಿಯವರುಃ–** ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ವಿ. ನಾರಾಯಣಸ್ವಾಮಿ ರವರು ವಿದೇಶ ಪ್ರವಾಸದಲ್ಲಿರುವ ಕಾರಣ ವಿಧಾನ ಪರಿಷತ್ತಿನ 140ನೇಯ ಅಧಿವೇಶನದ ದಿನಾಂಕಃ 17–02–2020 ರಿಂದ 20–02–2020 ರವರೆಗೆ ಹಾಗೂ ದಿನಾಂಕ 02–03–2020ರಿಂದ 05–03–2020ರ ವರೆಗಿನ ಅಧಿವೇಶನದಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲವಾದ ಕಾರಣದಿಂದ ಹಾಜರಾತಿ ವಿನಾಯಿತಿ ನೀಡಬೇಕೆಂದು ಕೋರಿರುತ್ತಾರೆ. ಸದರಿಯವರ ಗೈರು ಹಾಜರಿಗೆ ಸದನದ ಸಹಮತಿ ಇದ್ದೆ ಎಂದು ಭಾವಿಸುತ್ತೇನೆ.

**10. ಉಭಯ ಸದನಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ**

**ಸಭಾಪತಿಯವರುಃ–** ಈಗ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಬಗ್ಗೆ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್. ಪಾಟೀಲರು ಮಾತನಾಡಲಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಬಗ್ಗೆ ಮಾನ್ಯ ಲೆಹರ್‌ಸಿಂಗ್ ಸಿರೋಯ ರವರು ಮಾತನಾಡುತ್ತಾರೆ. ಮಾನ್ಯ ಮಂತ್ರಿಯವರು ಬಂದ ನಂತರ ಶ್ರೀ ಎಸ್.ಆರ್. ಪಾಟೀಲ್ ರವರು ಮಾತನಾಡಬಹುದಾಗಿದೆ. ಮಾನ್ಯರು ಮಂತ್ರಿಗಳು ಇರುವಾಗ ಮಾತನಾಡಿದ್ದರೆ ಒಳ್ಳೆಯದಿತ್ತು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನನಗೆ ಆರೋಗ್ಯ ಸರಿಯಿಲ್ಲದ ಕಾರಣ ಬೇಗ ಮುಕ್ತಾಯ ಮಾಡುತ್ತೇನೆ. ಮಾನ್ಯ ಸಭಾನಾಯಕರು ಎಂದರೆ ಇಡೀ ಸರ್ಕಾರವೇ ಎಂದಾಗುತ್ತದೆ. ಅವರು ಸರ್ಕಾರದ ಆಗು–ಹೋಗುಗಳಿಗೆ ಪೂರ್ಣ ಬಾಧ್ಯಸ್ಥರಾಗಿರುತ್ತಾರೆ. ಮಾನ್ಯ ಸಭಾನಾಯಕರು ಮಂತ್ರಿಗಳಾಗಿರುವುದರಿಂದ ಅವರಿಗೆ ಕೆಳಮನೆಯಲ್ಲಿಯೂ ಅವಕಾಶ ಇದೆ. ಮಾನ್ಯ ಸಭಾನಾಯಕರು ಎಲ್ಲವನ್ನು ನೋಟ್ ಮಾಡಿಕೊಂಡು ಮಾನ್ಯ ಗೃಹ ಮಂತ್ರಿಗಳಿಗೆ ತಿಳಿಸಬಹುದಾಗಿದೆ.

**ಸಭಾಪತಿಯವರು:–** ಮಾನ್ಯ ಲೆಹರ್ ಸಿಂಗ್ ಸಿರೋಯ ರವರು ಎಲ್ಲಿಗೋ ಹೋಗುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಅವರು ವಿದೇಶಕ್ಕೆ ಹೋಗುತ್ತಿದ್ದಾರೆಯೇ?

**ಶ್ರೀ ಲೆಹರ್ ಸಿಂಗ್ ಸಿರೋಯಾ:–** ನಾನು ಖಂಡಿತ ವಿದೇಶಕ್ಕೆ ಹೋಗುವುದಿಲ್ಲ.

**ಸಭಾಪತಿಯವರು:–** ಮಾನ್ಯ ಲೆಹರ್ ಸಿಂಗ್ ಸಿರೋಯಾ ರವರು ಮಾನ್ಯ ಎಸ್.ಆರ್. ಪಾಟೀಲರ ಅನುಮತಿಯನ್ನು ಕೇಳಬೇಕಾಗುತ್ತದೆ. ಏಕೆಂದರೆ ನಾನು ಅವರ ಹೆಸರನ್ನು ಕರೆದಿದ್ದೇನೆ. ನನ್ನ ಆಕ್ಷೇಪವೇನೂ ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಅವರು ಬೇಗ ಮುಗಿಸುತ್ತಾರಲ್ಲವೇ?

**ಶ್ರೀ ಲೆಹರ್‌ಸಿಂಗ್ ಸಿರೋಯಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ನಾನು ಹೆಚ್ಚು ಮಾತನಾಡುವುದಿಲ್ಲ. ಪ್ರತಿ ವರ್ಷ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡುತ್ತಾ, ಸರ್ಕಾರದ ನಿಲುವು ಮತ್ತು ಉದ್ದೇಶಗಳ ಬಗ್ಗೆ ಮಾಹಿತಿ ಕೊಡುತ್ತಾರೆ. ಈಗಿನ ಭಾಷಣದ ಬಗ್ಗೆ ಹೆಚ್ಚು ಸದಸ್ಯರು ಟೀಕೆಗಳನ್ನು ಮಾಡಿಲ್ಲ. ಕೆಲವು ಸದಸ್ಯರು ಹಿಂದಿನ ಸರ್ಕಾರದ ಕೆಲಸಗಳನ್ನು ಮುಂದುವರೆಸಿರುವ ಬಗ್ಗೆ ತಿಳಿಸಿದ್ದು, ಇದರಿಂದ ಎಲ್ಲರಿಗೂ ಸಂತೋಷವಾಗಬೇಕು. ನಾನು 2018 ರಲ್ಲಿ ಆ ಕಡೆ ಇದ್ದಾಗ ಮಾತನಾಡಿದ್ದೇನೆ. ಮಾನ್ಯ ಜಿ.ಟಿ. ದೇವೇಗೌಡ ರವರು ಮಂತ್ರಿಯಾಗಿದ್ದರು. ನಂತರ ಏನೇನೋ ಬದಲಾವಣೆ ಆಯಿತು. ಪರ ಅಥವಾ ವಿರುದ್ಧ ಮಾತನಾಡಬೇಕೆಂದು ಅರ್ಥವಾಗುವುದಿಲ್ಲ. ಅವರು 17 ಜನರ ಫೋಟೋವನ್ನು ಪೂಜೆ ಮಾಡಬೇಕೆಂದು ಹೇಳುತ್ತಿದ್ದರು. ನಿಜವಾಗಲೂ ನಾವು 17 ಜನರ ಫೋಟೋಗಳನ್ನು ಪೂಜೆ ಮಾಡಬೇಕು. ಏಕೆಂದರೆ ಒಂದೂವರೆ ವರ್ಷದ ಅಪವಿತ್ರ ಸರ್ಕಾರ ಏನೇನು ಅನಾಹುತಗಳನ್ನು ಮಾಡಿದೆ, ಇಂತಹ ಸರ್ಕಾರದಿಂದ ಆರು ಕೋಟಿ ಜನರನ್ನು ಮುಕ್ತ ಮಾಡಬೇಕೆಂದು 17 ಜನರು ಮುಂದೆ ಬಂದಿದ್ದಾರೆ. ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಫೋಟೋ ಹಾಕಿ ಪೂಜೆ ಮಾಡುತ್ತಾರಲ್ಲವೇ?

**ಶ್ರೀ ಲೆಹರ್ ಸಿಂಗ್ ಸಿರೋಯಾ:–** ಆ ಕೆಲಸ ಜನರು ಮಾಡುತ್ತಾರೆ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಪರಲೋಕಕ್ಕೆ ಹೋದವರ ಫೋಟೋವನ್ನು ಪೂಜೆ ಮಾಡುತ್ತಾರೆ. ಜೀವಂತವಾಗಿರುವವರ ಫೋಟೋ ಪೂಜೆ ಮಾಡುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಈ ರೀತಿ ಮಾತನಾಡಲು ಅವರಿಗೆ ನಾಚಿಕೆಯಾಗುವುದಿಲ್ಲವೇ?

**(ಗೊಂದಲ)**

**ಶ್ರೀ ಲೆಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ನಿಜವಾಗಿಯೂ ನಾಚಿಕೆಯಾಗುತ್ತದೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ:–** ಎಲ್ಲರನ್ನು ಕರೆದುಕೊಂಡು ಹೋದರು, ಸುಪ್ರೀಂಕೋರ್ಟ್‌ಗೆ ಹೋದರು. ನಂತರ ಶಾಸಕರನ್ನಾಗಿ ಹಾಗೂ ಮಂತ್ರಿಗಳನ್ನಾಗಿ ಮಾಡಿರುವುದು ಒಳ್ಳೆಯ ಸರ್ಕಾರದ ಕೆಲಸವೇ?

**ಶ್ರೀ ಲೆಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ನಾನು ಬಜೆಟ್ ಬಗ್ಗೆ ಭಾಷಣ ಮಾಡುವಾಗ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರ ಬಗ್ಗೆ ಒಳ್ಳೆಯ ಮಾತುಗಳನ್ನು ಆಡಿದ್ದೇನೆ. ಇದು ಎಲ್ಲರಿಗೂ ಗೊತ್ತಿದೆ. ಜೊತೆಗೆ ನಾನು ಒಂದು ಎಚ್ಚರಿಕೆಯನ್ನು ಕೊಟ್ಟಿದ್ದೇನೆ. ನಾನು ಏನು ಎಚ್ಚರಿಕೆ ಕೊಟ್ಟಿದ್ದೇನೆ ಎಂದು ದಾಖಲೆ ಇದೆ. ಅವರು ಮಾನ್ಯ ಕುಮಾರಸ್ವಾಮಿಯವರಿಗೆ ಕೆಲಸ ಮಾಡಲು ಬಿಡುವುದಿಲ್ಲ. ಮಾನ್ಯ ದೇವೇಗೌಡರಿಗೆ ಪಾರ್ಲಿಮೆಂಟ್‌ನಲ್ಲಿ ಹೇಗೆ ಗೋಳು ಹೊಯ್ದುಕೊಂಡರು, ನಂತರ ಯಾವ ರೀತಿ ಚಿತ್ರಹಿಂಸೆ ಕೊಟ್ಟರೋ, ಅದೇರೀತಿ ಮಾನ್ಯ ಕುಮಾರಸ್ವಾಮಿಯವರಿಗೂ ಚಿತ್ರಹಿಂಸೆ ಕೊಡುತ್ತಾರೆ ಮತ್ತು ಕಣ್ಣಲ್ಲಿ ನೀರು ಹಾಕಿಸುತ್ತಾರೆ ಎಂದು ಎಚ್ಚರಿಸಿದ್ದೆನು. ಆಗ ಮಾನ್ಯ ಬೋಜೇಗೌಡರು ಇದರ ಬಗ್ಗೆ ಹೆಚ್ಚಿನ ಗಮನ ಕೊಡಲಿಲ್ಲ. ಆಗ ಮಾನ್ಯ ಧರ್ಮೇಗೌಡರು ಇದ್ದರು. ನಮ್ಮ ಮಾನ್ಯ ಮುಖ್ಯಮಂತ್ರಿಯವರು ಖಂಡಿತವಾಗಿಯೂ ಉಳಿದ ಅವಧಿಗೆ ಮುಂದುವರೆಯುತ್ತಾರೆ. ಆದರೆ ಮಾನ್ಯ ಕುಮಾರಸ್ವಾಮಿಯವರಿಗೆ ಯಾವ ರೀತಿ ಸಹಕಾರ ನೀಡಿದ್ದರೋ, ಆ ಸಹಕಾರ ದಯವಿಟ್ಟು ನಮಗೆ ಬೇಕಾಗಿಲ್ಲ. ಏಕೆಂದರೆ ಪ್ರತಿಯೊಂದು ದಿವಸ ಮಾನ್ಯ ಕುಮಾರಸ್ವಾಮಿಯವರಿಗೆ ಏನೇನು ಮಾಡಿದರು, ಅವರು ಹೇಗೆ ಕಣ್ಣಲ್ಲಿ ನೀರು ಹಾಕಿಕೊಂಡು ಚಪ್ರಾಸಿ ರೀತಿ ಆಗಿದ್ದೇನೆ ಎಂದು ಹೇಳಿರುವುದೆಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ಅವರ ಸಹಕಾರವನ್ನು ದಯವಿಟ್ಟು ಅವರ ಬಳಿಯೇ ಇಟ್ಟುಕೊಳ್ಳಲಿ. ಮಾನ್ಯ ಯಡಿಯೂರಪ್ಪನವರು ಇನ್ನೂ ಮೂರುವರೆ ವರ್ಷ ಆಡಳಿತ ಮಾಡಿ, ಇನ್ನೊಮ್ಮೆ ಆಯ್ಕೆಯೂ ಆಗುತ್ತಾರೆ.

**(25)/18.02.2020/3.00/ಹೆಚ್‌ವಿ–ಎಕೆ**

**ಶ್ರೀ ಲಹರ್‌ಸಿಂಗ್ ಸಿರೋಯಾ(ಮುಂದುವರೆದದ್ದು):–**

ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವುದನ್ನು ಅವರುಗಳು ಅಭ್ಯಾಸ ಮಾಡಿಕೊಳ್ಳಬೇಕಾಗಿದೆ. ಮಾನ್ಯ ಎ.ಟಿ.ರಾಮಸ್ವಾಮಿಯವರು ಕೆಳಮನೆಯಲ್ಲಿ ಮಾತನಾಡುತ್ತಾ, ನಮ್ಮ ಬಗ್ಗೆ ಬಹಳ ನೋವನ್ನು ವ್ಯಕ್ತಪಡಿಸಿದರು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಮ್ಮ ಸರ್ಕಾರ ಅಧಿಕಾರದಲ್ಲಿದ್ದ ಅವಧಿಯಲ್ಲಿ ಏನೇನು ಹಗರಣಗಳಾಗಿರುವ ಬಗ್ಗೆ ಮತ್ತು 29 ಎಕರೆ ಒತ್ತುವರಿ ಆಗಿರುವ ಬಗ್ಗೆ ಮಾನ್ಯ ಸಿ.ಟಿ.ರವಿಯವರನ್ನು ಟೀಕೆ ಮಾಡಿದರು. ಈ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದರ ಬಗ್ಗೆ ಒಂದು ಮಾತನ್ನು ಸಹ ಹೇಳಿಲ್ಲ. ನನ್ನ ಮನವಿ ಏನೆಂದರೆ, ನಮ್ಮ ಸದನದಲ್ಲಿಯೂ ಸಹ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ವಿಷಯಗಳ ಬಗ್ಗೆ ಅಧ್ಯಯನ ಮಾಡಿಕೊಂಡು, homework ಮಾಡಿಕೊಂಡು, ಸದನದಲ್ಲಿ ಬಂದು ಟೀಕೆ ಟಿಪ್ಪಣಿಗಳನ್ನು ಮಾಡಿದರೆ ನಾವು ಆಡಳಿತದಲ್ಲಿ ಸುಧಾರಣೆ ಮಾಡಿಕೊಳ್ಳುತ್ತೇವೆ. ಏಕೆಂದರೆ, ಅಧಿಕಾರಶಾಹಿಗಳಿಂದ ವಿವಿಧ ಹಂತಗಳಲ್ಲಿ ವ್ಯತ್ಯಾಸಗಳಾಗಿರುತ್ತವೆ ಇವುಗಳ ಬಗ್ಗೆ ವಿರೋಧ ಪಕ್ಷದವರು ಗಮನ ಕೊಡಬೇಕಾಗುತ್ತದೆ. ಇಲ್ಲಿಯೂ ಸಹ ಅವರುಗಳು ವಿರೋಧ ಪಕ್ಷದವರಾಗಿ ಕಾರ್ಯವನ್ನು ನಿರ್ವಹಿಸಿದರೆ ಅವರಿಗೆ ಅಭಿನಂದನೆಗಳನ್ನು ಮತ್ತು ಶುಭಾಷಯಗಳನ್ನು ಸಲ್ಲಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ನನ್ನ ಆಪ್ತ ಸ್ನೇಹಿತರಾದ ಮಾನ್ಯ ಸಿ.ಎಂ.ಇಬ್ರಾಹಿಂರವರು ಈಗ ಸದನದಲ್ಲಿ ಉಪಸ್ಥಿತರಿಲ್ಲ.

**ಸಭಾಪತಿಯವರುಃ-** ಅವರು ಬಂದ ಮೇಲೆ ತಾವು ಮಾತನಾಡುತ್ತೀರಾ?

**(ಸದನದಲ್ಲಿ ನಗೆಯ ಅಲೆ)**

**ಶ್ರೀ ಲಹರ್‌ಸಿಂಗ್ ಸಿರೋಯಾಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸಿ.ಎಂ. ಇಬ್ರಾಹಿಂರವರ ರೀತಿ ನನಗೆ ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಗಳು ಬರುವುದಿಲ್ಲ. ಅವರು ಒಂದೆರಡು ಅಂಶಗಳ ಬಗ್ಗೆ ಉಲ್ಲೇಖ ಮಾತನಾಡುತ್ತಿದ್ದಾಗ, ಮಾನ್ಯ ಸಭಾ ನಾಯಕರು, 'ತಾವು ರಾಮ-ರಾವಣನ ಬಗ್ಗೆ ಒಂದೇ ರೀತಿ ಮಾತನಾಡುತ್ತೀರಾ' ಎಂದು ಹೇಳಿದಾಗ, ಮಾನ್ಯ ಇಬ್ರಾಹಿಂ ಸಾಹೇಬರು 'ಇಲ್ಲ ರಾವಣ ಬಹಳ ಒಳ್ಳೆಯ ಮನುಷ್ಯ' ಎಂದು ಹೇಳಿದರು. Raavana was a very intelligent and a very learned person ಎನ್ನುವ ಮಾತನ್ನು ಒಪ್ಪಿಕೊಳ್ಳೋಣ.

ಸನ್ಮಾನ್ಯ ಸಭಾಪತಿಯವರೇ, 26ನೇ ಜೂನ್ 1975ರಲ್ಲಿ ಮಾನ್ಯ ಹೆಚ್.ಡಿ.ದೇವೇಗೌಡರು ಮೈಸೂರು ಬ್ಯಾಂಕ್ ಕಟ್ಟಡದಲ್ಲಿ ಭಾಷಣ ಮಾಡಿದಾಗ ನಾನು 25 ವರ್ಷದ ಯುವಕನಾಗಿದ್ದೆ. ಅವರು ನಮ್ಮನ್ನು ಎಷ್ಟೊಂದು ಮಂತ್ರಮುಗ್ಧರನ್ನಾಗಿ ಮಾಡಿದ್ದರು ಎಂದರೆ, ನಾನು ವ್ಯಾಪಾರವನ್ನು ಬಿಟ್ಟು ಅವರ ಕಾಲದಲ್ಲಿಯೇ ರಾಜಕೀಯಕ್ಕೆ ಬಂದು ಜನತಾ ಪಾರ್ಟಿಯನ್ನು ಸೇರಿಕೊಂಡೆ. ಅವರು ಭಾಷಣ ಮಾಡುವ ಸಂದರ್ಭದಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಏನೇನೋ ಮಾತನಾಡಿ, ಅವರು ಎಷ್ಟೊಂದು ಅನಾಚಾರ ಮಾಡಿದ್ದರು ಎನ್ನುವುದನ್ನು ಹೇಳಿದ್ದರು. ಇವತ್ತಿಗೂ ನನಗೆ ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಸಮಾಧಾನವಿಲ್ಲ. ಮಾನ್ಯ ಹೆಚ್.ಡಿ.ದೇವೇಗೌಡರು ಮಾಡಿದ ಭಾಷಣದಿಂದಾಗಿ ಇವತ್ತಿನವರೆಗೂ ನಾನು ಕಾಂಗ್ರೆಸ್ ಪಕ್ಷದ ಜೊತೆಗೆ ಸೇರಿಲ್ಲ. ಡಾಃಬಿ.ಆರ್. ಅಂಬೇಡ್ಕರ್ ಬಗ್ಗೆ ಕಾಂಗ್ರೆಸ್‌ನವರು ಬಹಳಷ್ಟು ಮಾತನಾಡುತ್ತಾರೆ. ಆದರೆ, ಡಾಃಬಿ.ಆರ್. ಅಂಬೇಡ್ಕರ್‌ರವರಿಂದ ರಚಿತವಾದ ಸಂವಿಧಾನಕ್ಕೆ ಇವರುಗಳು ತುರ್ತು ಪರಿಸ್ಥಿತಿಯಲ್ಲಿ ಎಷ್ಟೊಂದು ಬಾರಿ ದ್ರೋಹವೆಸಗಿದ್ದಾರೆ ಮತ್ತು ಅದನ್ನು ಅಪವಿತ್ರಗೊಳಿಸಿದ್ದಾರೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಷಾ ಭಾನು ಪ್ರಕರಣದಲ್ಲಿ ಸಂವಿಧಾನವನ್ನು ಹೇಗೆ ತಿರುಚಿದ್ದಾರೆ ಎನ್ನುವುದು ನಮ್ಮೆಲ್ಲರಿಗೂ ಗೊತ್ತಿದೆ. ಷಾ ಭಾನು ಪ್ರಕರಣದಲ್ಲಿ ಕೇರಳದ ರಾಜ್ಯಪಾಲ ಮತ್ತು ಪ್ರಾಮಾಣಿಕ ರಾಜಕಾರಣಿಯಾಗಿದ್ದ ಮಾನ್ಯ ಮೊಹಮ್ಮದ್ ಅಹಮದ್ ಖಾನ್‌ರವರು ಯಾವುದೇ ಸ್ವಾರ್ಥವಿಲ್ಲದೆ ರಾಜಿನಾಮೆಯನ್ನು ಕೊಟ್ಟಿದ್ದರು. ನಮ್ಮ ಪ್ರಧಾನಮಂತ್ರಿಗಳು ಅವರನ್ನು ಗುರುತಿಸಿ ಇವತ್ತು ಕೇರಳ ರಾಜ್ಯದ ರಾಜ್ಯಪಾಲರನ್ನಾಗಿ ನೇಮಕ ಮಾಡಿದ್ದಾರೆ. 'ಆಜ್ ತಕ್' ಮತ್ತು 'ಆಪ್ ಕಿ ಅದಾಲತ್'ನಲ್ಲಿ ಪೌರತ್ವ ತಿದ್ದುಪಡಿ ಕಾಯಿದೆ ಬಗ್ಗೆ ವಿವರಣೆಯನ್ನು ನೀಡಿದ್ದಾರೆ. CAA is applicable only to those muslims coming from Afghanistan, Bangladesh and Pakistan. Vested interest ನಿಂದ, ಬೇರೆ ಬೇರೆ ಕಾರಣಗಳಿಗಾಗಿ ಮತ್ತು ಇಲ್ಲಿ ಭಯೋತ್ಪಾದನೆಯನ್ನು ಹುಟ್ಟು ಹಾಕುವುದಕ್ಕಾಗಿ ಬರುವವರಿಗೆ ಮಾತ್ರ ಈ ಕಾಯಿದೆ ಇದೆಯೇ ಹೊರತು ಭಾರತೀಯ ಮುಸ್ಲಿಮರಿಗೆ ಇದು ಅನ್ವಯವಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದರೂ ಕೂಡ ಪೌರತ್ವ ಕಾಯಿದೆಯನ್ನು ನಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಮಟ್ಟಕ್ಕೆ ನಾವು ಇಳಿದಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು ಮಾತನಾಡುತ್ತಾ, ರಾಜ್ಯದ್ರವ್ಯದ ಬಗ್ಗೆ ಪ್ರಸ್ತಾಪ ಮಾಡಿದ್ದರು. ರಾಜ್ಯದ್ರವ್ಯವನ್ನು ನಾವು ಯಾವ ಮಟ್ಟಕ್ಕೆ ಹಾಳು ಮಾಡುತ್ತಿದ್ದೇವೆ ಎನ್ನುವುದನ್ನು ನೋಡಿದರೆ ನಮ್ಮೆಲ್ಲರಿಗೂ ನಾಚಿಕೆಯಾಗಬೇಕಾಗಿದೆ. ನಮ್ಮನ್ನು ನಾವು ಸುಧಾರಣೆ ಮಾಡಿಕೊಳ್ಳಬೇಕೆನ್ನುವ ಎಚ್ಚರಿಕೆಯನ್ನು ನಾನು ಕೊಡುತ್ತಿದ್ದೇನೆ, ಜನರೂ ಸಹ ನಮಗೆ ಎಚ್ಚರಿಕೆ ಕೊಡುತ್ತಿದ್ದಾರೆ. ಪ್ರಧಾನಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ದೇಶಕ್ಕೋಸ್ಕರ ಯಾವ ರೀತಿ ಪ್ರಾಮಾಣಿಕವಾಗಿ ದುಡಿಯುತ್ತಿದ್ದಾರೆ ಅದರಲ್ಲಿ ಶೇಕಡಾ 10ರಷ್ಟಾದರೂ ನಾವು ಪ್ರಾಮಾಣಿಕರಾಗಿರುವ ಪ್ರಯತ್ನವನ್ನು ಮಾಡೋಣ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ನಮ್ಮ ನಿಮ್ಮ ಅಸ್ತಿತ್ವಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆ. ಮೊನ್ನೆ ನಡೆದಂತಹ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಅರವಿಂದ ಕೇಜ್ರಿವಾಲ್‌ರವರು ಗೆದ್ದು ಮುಖ್ಯಮಂತ್ರಿಗಳಾಗಿದ್ದಾರೆ. ಕೇಂದ್ರದಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರವಿದೆ. ದೆಹಲಿಯ ಸುತ್ತಮುತ್ತ ಅಂದರೆ, ಪಂಜಾಬ್, ರಾಜಸ್ಥಾನ್, ಚತ್ತೀಸ್‌ಗಡ್ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದೆ. ಆದರೂ ಸಹ ಕಾಂಗ್ರೆಸ್ ಪಕ್ಷವನ್ನು ಹೀನಾಮಾನವಾಗಿ ಸೋಲಿಸಿ, ನಮಗೂ ಸ್ವಲ್ಪ ಪಾಠ ಕಲಿಸಿ ಆಮ್ ಆದ್ಮಿ ಪಕ್ಷದವರು ಜನರಿಂದ ಆಯ್ಕೆಗೊಂಡಿದ್ದಾರೆ. ನಾನು ದೆಹಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಸರ್ಕಾರ ಜಾರಿಗೆ ತಂದಿರುವ 2–3 ಜನೋಪಯೋಗಿ ಯೋಜನೆಗಳನ್ನು ಗಮನಿಸಿದ್ದೇನೆ.

**ಸಭಾಪತಿಯವರುಃ–** ತಾವು ಚಿತ್ರದುರ್ಗಕ್ಕೆ ಹೋಗುವುದಿಲ್ಲವೇ?

**ಶ್ರೀ ಲಹರ್‌ಸಿಂಗ್ ಸಿರೋಯಾಃ–** ಸನ್ಮಾನ್ಯ ಸಭಾಪತಿಯವರೇ, ನಾನು ರಾತ್ರಿ ಹೋಗುತ್ತೇನೆ. ಈ ಚಿಂತಕರ ಭಾವಣೆಯಿಂದ ನಾನು ರಾಜಕೀಯ ಮಾತನಾಡುವುದಿಲ್ಲ, ಜನಪರವಾಗಿ ಮಾತನಾಡುತ್ತೇನೆ. ದೆಹಲಿ ಸರ್ಕಾರ 'ಮೊಹಲ್ಲಾ ಕ್ಲಿನಿಕ್' ಎಂದು ಮಾಡಿದ್ದರು. ಇದರಿಂದಾಗಿ ಬಡ ಜನರಿಗೆ ಬಹಳಷ್ಟು ಅನುಕೂಲವಾಗಿದೆ. ಇಲ್ಲಿಗೆ ಶ್ರೀಮಂತರು ಯಾರೂ ಹೋಗುವುದಿಲ್ಲ. ನಮ್ಮಲ್ಲಿರುವ ವಿಕ್ಟೋರಿಯಾ ಮತ್ತು ಬೌರಿಂಗ್ ಹಾಸ್ಪೆಟಲ್‌ಗಳಿಗೆ ಅಧಿಕಾರಿಗಳು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮತ್ತು ಪತ್ರಕರ್ತರು ಯಾವಾಗಲಾದರೂ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಯನ್ನು ವೀಕ್ಷಣೆ ಮಾಡಬೇಕಾಗಿ ನನ್ನ ವಿನಂತಿ. ಅಲ್ಲಿನ ವ್ಯವಸ್ಥೆ ಯಾವ ರೀತಿ ಇದೆಯೆಂದರೆ, ಒಂದೇ ಟೇಬಲ್‌ನಲ್ಲಿ 3–4 ಜನ ವೈದ್ಯರು ಕುಳಿತುಕೊಂಡಿರುತ್ತಾರೆ. ಒಂದೊಂದು ವಾರ್ಡ್‌ನಲ್ಲಿ 100 ರಿಂದ 200 ಜನ ರೋಗಿಗಳಿರುತ್ತಾರೆ. ಇದು ಯಾರ ಕಣ್ಣಿಗೂ ಕಾಣುವುದಿಲ್ಲವೇ? ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪಾರ್ಕಿಂಗ್‌ಗೆ ಜಾಗ ಸರಿಯಾಗಿಲ್ಲ. ಜನರು ಓಡಾಡುವುದಕ್ಕೆ ಸಾಧ್ಯವಿಲ್ಲ. ಈ ಆಸ್ಪತ್ರೆಗಳಿಗೆ ಶ್ರೀಮಂತರು ಯಾರೂ ಹೋಗುವುದಿಲ್ಲ. ಬಡವರು ಮಾತ್ರ ಹೋಗುತ್ತಾರೆ. ಇಲ್ಲಿನ ಅವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಯಾರೂ ಇಲ್ಲಿಯವರೆಗೆ ಕ್ರಮ ಕೈಗೊಂಡಿಲ್ಲ.

ಸನ್ಮಾನ್ಯ ಸಭಾಪತಿಯವರೇ, ದೆಹಲಿಯ ಮುಖ್ಯಮಂತ್ರಿಗಳಾದ ಶ್ರೀ ಅರವಿಂದ ಕೇಜ್ರಿವಾಲ್‌ರವರು ಬಡ ಮಹಿಳೆಯರು ಉಚಿತವಾಗಿ ಬಸ್‌ನಲ್ಲಿ ಪ್ರಯಾಣಿಸುವುದಕ್ಕೆ ಅನುಕೂಲವಾಗುವಂತೆ ಉಚಿತ ಬಸ್‌ಪಾಸ್ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದಾರೆ. ಈ ಬಸ್‌ಗಳಲ್ಲಿ ಶ್ರೀಮಂತರು ಮತ್ತು ಮಧ್ಯಮ ವರ್ಗದ ಮಹಿಳೆಯರು ಪ್ರಯಾಣಿಸುವುದಿಲ್ಲ. ಇದರಲ್ಲಿ ಕೂಲಿಗೆಲಸ ಮಾಡುವ ಮಹಿಳೆಯವರು ಪ್ರಯಾಣಿಸುತ್ತಾರೆ. ಉಚಿತ ಬಸ್‌ಪಾಸ್ ಸೌಲಭ್ಯವನ್ನು ಪಡೆದುಕೊಂಡ ಈ ಮಹಿಳೆಯರು ಪುನಃ 'ಆಮ್ ಆದ್ಮಿ' ಪಕ್ಷಕ್ಕೆ ತಮ್ಮ ಮತವನ್ನು ನೀಡಿದ್ದಾರೆ. ಆದರೆ, ನಮ್ಮಲ್ಲಿರುವ ರಸ್ತೆಗಳ ವ್ಯವಸ್ಥೆ, ಬಸ್‌ಗಳ ಅವ್ಯವಸ್ಥೆ ಮತ್ತು ಆ ಬಸ್‌ಗಳಲ್ಲಿ ಇರುವಂತಹ ಕಂಡಕ್ಟರ್‌ಗಳ ವ್ಯವಸ್ಥೆಯನ್ನು ನೋಡಿದರೆ ಏನು ಹೇಳಬೇಕೆಂದು ಅರ್ಥವಾಗುವುದಿಲ್ಲ. ಎಂ.ಎಲ್.ಎ. ಅಥವಾ ಎಂ.ಎಲ್.ಸಿ.ಗಳಾದ ಮೇಲೆ ನಮಗೆ ದೊಡ್ಡದೊಡ್ಡ ಕಾರುಗಳು ಬೇಕಾಗುತ್ತದೆ. ಈ ಬಡವರ ಬಗ್ಗೆ ಗಮನ ಕೊಡುವವರು ಯಾರು? ಹೆಣ್ಣುಮಕ್ಕಳು ಎರಡು ಗಂಟೆಗಳ ಕಾಲ ಟ್ರಾಫಿಕ್‌ನಲ್ಲಿ ಸಿಕ್ಕಿ ಹಾಕಿಕೊಂಡಿರುತ್ತಾರೆ. ಮನೆಗೆ ಹೋಗಿ ಅಡುಗೆ ಮಾಡಬೇಕು ಎನ್ನುವ ಆಲೋಚನೆಯಲ್ಲಿರುತ್ತಾರೆ. ಮೊನ್ನೆ ನಾನು ವಿಧಾನಸೌಧದಿಂದ ಯು.ಬಿ.ಸಿಟಿಗೆ ಹೋಗಬೇಕಾದರೆ ಮಾರ್ಗಮಧ್ಯೆ ಕಬ್ಬನ್‌ಪಾರ್ಕ್ ಅನ್ನು ಹಾದು ಅಲ್ಲಿಗೆ ಹೋಗುವುದಕ್ಕೆ ಸುಮಾರು 45 ನಿಮಿಷಗಳು ಬೇಕಾಯಿತು. ಮಂತ್ರಿಗಳಿಗೆ ಗನ್‌ಮ್ಯಾನ್‌ಗಳಿರುತ್ತಾರೆ ಅವರುಗಳು ಟ್ರಾಫಿಕ್ ಕ್ಲಿಯರ್ ಮಾಡಿ ಕರೆದುಕೊಂಡು ಹೋಗುತ್ತಾರೆ.

**ಶ್ರೀ ಐವನ್ ಡಿ'ಸೋಜಾ:–** ಸನ್ಮಾನ್ಯ ಸಭಾಪತಿಯವರೇ, ಅವರು ಯಾರಿಗೆ ಹೇಳುತ್ತಿದ್ದಾರೆ ಎನ್ನುವುದು ಗೊಂದಲವಾಗಿದೆ. ಯಾವುದೂ ಕ್ಲಿಯರ್ ಆಗಿಲ್ಲ.

**ಶ್ರೀ ಲಹರ್‌ಸಿಂಗ್ ಸಿರೋಯಾ:–** ಸನ್ಮಾನ್ಯ ಸಭಾಪತಿಯವರೇ, ಜನರ ನೋವನ್ನು ನಾನು ಹೇಳುತ್ತಿದ್ದೇನೆ. ಎಷ್ಟೋ ಬಡ ಜನರು ಗಂಟೆಗಟ್ಟಲೆ ಬಸ್‌ನಲ್ಲಿ ಕುಳಿತುಕೊಂಡಿರುತ್ತಾರೆ, ಎಷ್ಟೊಂದು ಅಸಹಾಯಕರಾಗಿರುತ್ತಾರೆ ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು ಅಧಿಕಾರಿಗಳನ್ನು ಬಿಗಿ ಮಾಡಬೇಕು ಪಾದಚಾರಿ ರಸ್ತೆಗಳ ಒತ್ತುವರಿಯನ್ನು ತೆಗೆಯಬೇಕು. ವಾಹನ ದಟ್ಟಣೆಯನ್ನು ಯಾವ ರೀತಿ ಕಡಿಮೆ ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆಯಾಗಬೇಕಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(26) 18.2.2020 3.10 ಪಿಕೆ:ಆರ್‌ಎನ್**

**ಶ್ರೀ ಲಹರ್‌ಸಿಂಗ್ ಸಿರೋಯಾ(ಮುಂದು)**
ಸಾವಿರಾರು ಜನ ಏರ್‌ಪೋರ್ಟ್‌ನಿಂದ ಅಥವಾ ಬೇರೆ ಬೇರೆ ಕಡೆ ಓಡಾಡುವ ಜನ ಎಷ್ಟು ಕಷ್ಟ ಅನುಭವಿಸುತ್ತಿದ್ದಾರೆ ಎನ್ನುವುದರ ಬಗ್ಗೆ ಯಾರೂ ಪ್ರಸ್ತಾಪ ಮಾಡುವುದಿಲ್ಲ; ಯಾರೂ ಕೂಡ ಇಂಥದ್ದರ ಬಗ್ಗೆ ಕೇರ್ ಮಾಡುತ್ತಿಲ್ಲ. ಮಾನ್ಯ ಇಬ್ರಾಹಿಂರವರು 800 ವರ್ಷಗಳ ಹಿಂದಿನ ವಚನಗಳ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ಇವತ್ತು ನಮ್ಮ ಕಣ್ಣಿನ ಮುಂದಿರುವ ಸಮಸ್ಯೆ ಕಾಣಿಸುವುದೇ ಇಲ್ಲ.

ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ ರಾಜ್ಯದಲ್ಲಿ ಬರ ಇತ್ತು. ನಂತರ ಪ್ರವಾಹ ಎದುರಾಯಿತು. ನಮ್ಮ ಸರ್ಕಾರ ಆ ಸಂದರ್ಭದಲಿè new buildings and houses ನಿರ್ಮಾಣಕ್ಕೆ ಮತ್ತು ಕಿಸಾನ್ ಸಮ್ಮಾನ್ ಯೋಜನೆ ಇತ್ಯಾದಿಗಳಿಗೆ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಈ ಮಾತನ್ನು ನಾನು ಹೇಳುತ್ತಿಲ್ಲ, ಇದಕ್ಕೆಲ್ಲಾ ಸರ್ಕಾರಿ ದಾಖಲೆಗಳಿವೆ. ಆದರೆ ನನ್ನ ಸಲಹೆ ಏನೆಂದರೆ I am not satisfy with that. I want more to done. ಮಾನ್ಯ ಮುಖ್ಯಮಂತ್ರಿಗಳು ಪ್ರತಿಯೊಂದು ಜಿಲ್ಲೆಗೆ ಸಂಬಂಧಪಟ್ಟಂತೆ ಒಂದು ಸಮಿತಿ ಮಾಡಬೇಕು; ಡಿಸ್ಟ್ರಿಕ್ಟ್ ಇನ್‌ಚಾರ್ಜ್ ಮಿನಿಸ್ಟರ್‌ಗಳೆಂದು ಮಾಡುವುದರ ಜೊತೆಗೆ ಸಿವಿಲ್ ಸೊಸೈಟಿಗಳ ಜನರನ್ನು ಇದಕ್ಕೆ ಜೋಡಿಸಬೇಕು. ಈ ಕಮಿಟಿಗಳು ಎಲ್ಲಾ ಜಿಲ್ಲೆಗಳಿಗೆ ಭೇಟಿ ಕೊಟ್ಟು, ವರದಿ ತಯಾರು ಮಾಡಿ ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡಬೇಕು. ಆ ವರದಿ ಬಗ್ಗೆ ನಾವು-ನೀವೆಲ್ಲರೂ ಚರ್ಚೆ ಮಾಡಿ ಸಂತ್ರಸ್ತರಿಗೆ ಸೂಕ್ತ ರೀತಿಯಲ್ಲಿ ಪರಿಹಾರ ಕೊಡಿಸುವ ಕೆಲಸ ಮಾಡಬೇಕು. ಇದುವರೆಗೂ ಏನು ರೂ. 3 ಸಾವಿರ ಕೋಟಿಗಳನ್ನು ಖರ್ಚು ಮಾಡಿದ್ದಾರೋ ಆ ಪೈಕಿ ಒಂದು ರೂಪಾಯಿ ಕೂಡ ಹಗರಣವಾಗಿರುವುದು ಕಂಡು ಬಂದಿಲ್ಲ. ಆದರೆ ನೀವು ಸರ್ಕಾರದಲ್ಲಿದ್ದಾಗ ಆ ಭಾಗ್ಯ, ಈ ಭಾಗ್ಯ ಎಂದು ಮಾಡಿ ಎಲ್ಲದರಲ್ಲೂ ಹಗರಣಗಳು ಕಂಡುಬಂತು. ಪ್ರವಾಹ ಸಂತ್ರಸ್ತರಿಗೆ ಸೂಕ್ತ ಪರಿಹಾರ ಕೊಡುವ ನಿಟ್ಟಿನಲ್ಲಿ ಕಮಿಟಿಗಳನ್ನು ಮಾಡಿ ಮುಂದುವರೆದರೆ ಸೂಕ್ತವಾಗುತ್ತದೆ ಎಂದು ಸರ್ಕಾರಕ್ಕೆ ಇನ್ನೊಮ್ಮೆ ಸಲಹೆ ಕೊಡಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಈ ಸರ್ಕಾರ Global Investors' Meet ಮಾಡುತ್ತಿದ್ದು, ಈಗಾಗಲೇ ಇದಕ್ಕೆ ಸುಮಾರು ರೂ.70 ಸಾವಿರ ಕೋಟಿ ಇನ್ವೆಸ್ಟ್‌ಮೆಂಟ್ ಬಂದಿದೆ. ಇನ್ನೂ ಇನ್ವೆಸ್ಟ್‌ಮೆಂಟ್ ಬರಬೇಕು ಎಂದು GIM ಮಾಡುತ್ತಿದ್ದಾರೆ. ಇದು ಅಭಿನಂದನಿಯ ಕಾರ್ಯವಾಗಿದೆ. ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಯಡಿಯೂರಪ್ಪನವರು ತಾವು ಏನು ಮಾತು ಕೊಡುತ್ತಾರೋ ಅದರ ಪಾಲನೆಯನ್ನು ಮಾಡಿಯೇ ಮಾಡುತ್ತಾರೆ. ಈ ವಿಚಾರ 17 ಜನ ಶಾಸಕರಿಗೂ ಗೊತ್ತಿದೆ, ಬಡವರಿಗೂ ಗೊತ್ತಿದೆ, ಸಾರ್ವಜನಿಕರಿಗೂ ಗೊತ್ತಿದೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒಂದು ಸಲಹೆ ಕೊಡಬಯಸುತ್ತೇನೆ. ನಮ್ಮಲ್ಲಿ ಇನ್ನೂ American Consulate Office ಆಗಿಲ್ಲ. Bengaluru being the most preferred destination place from Europe

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

and US. ಬಹಳ ಕಂಪನಿಗಳು ಬರುವುದರಿಂದ ಈ ಕಚೇರಿಯ ಅವಶ್ಯಕತೆ ಇದೆ. Karnataka Government Should pursue the pending proposal of getting an American Consulate Office to Bengaluru. This will help thousands of our children who go to the US every year. I would like to request the CM to take this matter with the Prime Minister so he can persuade the American government to take an appropriate decision.

ಮಾನ್ಯ ರಾಜ್ಯಪಾಲರ ಭಾಷಣದಲ್ಲಿ, ಪರಪ್ಪನ ಅಗ್ರಹಾರದಲ್ಲಿ very high security cells develop ಮಾಡಬೇಕು ಎಂದು ಹೇಳಲಾಗಿದೆ. I welcome the home department's initiatives. ಇದು ಒಳ್ಳೆಯ ವಿಚಾರವಾಗಿದೆ. ಜೈಲಿನಲ್ಲಿ ಭ್ರಷ್ಟಾಚಾರ ನಡೆಯುತ್ತಿದ್ದುದರ ವಿಚಾರವಾಗಿ ಪರಿಶೀಲನೆ ಮಾಡಲು ನಿವೃತ್ತ ಐಎಎಸ್ ಅಧಿಕಾರಿಯಾದ ಶ್ರೀ ವಿನಯ್‌ಕುಮಾರ್‌ರವರ ನೇತೃತ್ವದಲ್ಲಿ ಒಂದು ಕಮಿಟಿ ಮಾಡಲಾಯಿತು. ಈ ಕಮಿಟಿ ನೀಡಿರುವ ಶಿಫಾರಸ್ಸುಗಳಿಗೆ ಅನುಗುಣವಾಗಿ ಪಾಲಿಸಿಯನ್ನು ಸೂಕ್ತ ರೀತಿಯಲ್ಲಿ ಬದಲು ಮಾಡದೇ ಹೋದರೆ ಭ್ರಷ್ಟಾಚಾರದ ಪ್ರಕರಣಗಳು ಇನ್ನೂ ಹೆಚ್ಚಾಗುವ ಸಾಧ್ಯತೆ ಇರುತ್ತದೆ.

**ಸಭಾಪತಿಯವರು:-** ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಬೇಕು.

**ಶ್ರೀ ಲಹರ್‌ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ನಾನು ಡ್ರಗ್ಸ್ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರು ನನಗೆ ಮಾತನಾಡಲು ಹೇಳಿದ್ದಾರೆ. ನೀವು ಮಾತನಾಡುವಾಗ ಮಾನ್ಯ ಸಭಾಪತಿಯವರು ಏನು ಹೇಳುತ್ತಾರೆ ಎನ್ನುವುದರ ಬಗ್ಗೆಯೂ ಗಮನ ಕೊಡಬೇಕು. ನೀವು ನಿಮ್ಮ ಸರ್ಕಾರಕ್ಕೆ ಸಲಹೆ ಕೊಡುತ್ತಿದ್ದರೂ ನಮ್ಮ ಕಡೆ ಮುಖ ಮಾಡಿ ಹೇಳುತ್ತಿದ್ದೀರಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಮಾತನಾಡುತ್ತಾರೆ. "Looking London Talking Tokyo", ಇಂಥದ್ದು ಇರುತ್ತದೆ. ಮಾನ್ಯ ಲಹರ್‌ಸಿಂಗ್‌ರವರಿಗೆ, ನೀವು ಇಂಥ ಕಡೆ ನೋಡಿಯೇ ಮಾತನಾಡಬೇಕು ಎಂದು ನಿರ್ದೇಶನ ಕೊಟ್ಟರೆ ಹೇಗೇ?

**ಶ್ರೀ ಲಹರ್‌ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಮಂತ್ರಿಗಳು ಸದನಕ್ಕೆ ಬಂದಿದ್ದಾರೆ. ಅವರು very impartial ಆಗಿದ್ದಾರೆ. ಯಾವ ಪಕ್ಷದವರಿಗೂ ತೊಂದರೆ ಕೊಡುವುದಿಲ್ಲ, ಎಲ್ಲರನ್ನೂ ಸಮಾನತೆಯಿಂದ ನೋಡುತ್ತಾರೆ.

ಪಿಜಿಗಳಲ್ಲಿ ಅಡಿಗೆ ಮಾಡುವವರ ಮೂಲಕ ವಿದ್ಯಾರ್ಥಿಗಳಿಗೆ ಡ್ರಗ್ಸ್ ಸಪ್ಲೈ ಮಾಡುವ ದಂಧೆ ನಡೆಯುತ್ತಿದೆ. ಇಂಥದ್ದನ್ನು ತಡೆಯಲು ಕಠಿಣ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. Everyday it is

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

happening in some or other places. ಈ ನಿಟ್ಟಿನಲ್ಲಿ ಕಾನೂನು ತಿದ್ದುಪಡಿ ಮಾಡುವುದಿದ್ದರೆ ಮಾಡಬೇಕಾಗುತ್ತದೆ. **Drugs is very disastrous for our State.** ಪಂಜಾಬ್ ರಾಜ್ಯದ ಹಾಗೆ ನಮ್ಮ ರಾಜ್ಯ ಆಗಬಾರದು. ಡ್ರಗ್ಸ್ ವ್ಯವಹಾರ ಮಾಡುವವರಲ್ಲಿ ಬಾಂಗ್ಲಾ ದೇಶಿಗಳು ಜಾಸ್ತಿ ಜನ ಇರುತ್ತಾರೆ. ಯಾರ ಮುಲಾಜಿಗೂ ಒಳಗಾಗದೆ ಇವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು, ಸೂಕ್ತ ರೀತಿಯಲ್ಲಿ ಹ್ಯಾಂಡಲ್ ಮಾಡಬೇಕು. With firm stand. Amendment ಮಾಡುವ ಅವಶ್ಯಕತೆ ಇದ್ದರೆ ಅದನ್ನೂ ಮಾಡಬೇಕು ಎಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**11. <u>ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆ</u>**

**ವಿಷಯ: ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–**ಮಾನ್ಯ ಸಭಾಪತಿಯವರೇ, ನಿಯಮ 59ರ ಅಡಿಯಲ್ಲಿ ಕೊಟ್ಟಂಥ ನಿಲುವಳಿ ಸೂಚನೆಯನ್ನು ನಿಯಮ 68ರ ಅಡಿಯಲ್ಲಿ ತೆಗೆದುಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಬೆಳಿಗ್ಗೆ Preliminary Submission ನಲ್ಲೂ ಕೆಲವು ವಿಚಾರಗಳನ್ನು ಹೇಳಿದೆ. ಕರ್ನಾಟಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸರಿಯಾಗಿಲ್ಲ, ಅದು ಕುಸಿದು ಬಿದ್ದಿದೆ, ರಾಜ್ಯದಲ್ಲಿ lawlessness ಆಗಿದೆ, ಇದರ ಬಗ್ಗೆ ಚರ್ಚೆ ಮಾಡುವ ಸಲುವಾಗಿ ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆವು. ಇದರಲ್ಲಿ ನಾನು ಮಂಗಳೂರು ಗೋಲಿಬಾರ್ ಪ್ರಕರಣದ ಬಗ್ಗೆ, ಮಾಜಿ ಸಚಿವರಾದ ಮಾನ್ಯ ಯು.ಟಿ.ಖಾದರ್ ಅವರ ಮೇಲೆ ದಾಖಲಿಸಿರುವಂತಹ ಕ್ರಿಮಿನಲ್ ಕೇಸ್‌ನ ವಿಚಾರವಾಗಿ, ಬೀದರ್‌ನ ಶಾಹಿನ್ ಶಾಲೆಯ ಪ್ರಕರಣದ ವಿಚಾರವಾಗಿ ಹೀಗೆ ಅನೇಕ ಘಟನೆಗಳನ್ನು ಉದಾಹರಿಸಿ ಮಾತನಾಡಿದ್ದೆ. ಮೊದಲಿಗೆ ಮಂಗಳೂರಿನ ಗೋಲಿಬಾರ್ ಪ್ರಕರಣದ ಬಗ್ಗೆ ಮಾತನಾಡುತ್ತೇನೆ. ಗೋಲಿಬಾರ್ ಆಗುವುದಕ್ಕೆ ಕಾರಣವೇನು? ಗೋಲಿಬಾರ್ ಮಾಡುವುದಕ್ಕೆ ಪೂರ್ವದಲ್ಲಿ ಯಾವ ನಿಯಮಗಳನ್ನು ಪಾಲನೆ ಮಾಡಬೇಕು, ಗೋಲಿಬಾರ್ ಮಾಡಿದ ಮೇಲೆ ಏನು ಕಾನೂನು ಪಾಲನೆ ಮಾಡಬೇಕು ಎನ್ನುವುದರ ಬಗ್ಗೆ ಕಾನೂನಿನ ಅಡಿಯಲ್ಲಿರುವ ವಿಚಾರಗಳ ಬಗ್ಗೆ ಮಾತನಾಡಿದ್ದೆ. ಅದಕ್ಕಿಂತ ಪೂರ್ವದಲ್ಲಿ ಸಿಎಎ ಮತ್ತು ಎನ್‌ಸಿಆರ್ ವಿರೋಧಿಸಿ ಎಸ್‌ಕೆಎಸ್‌ಎಸ್‌ಎಫ್ ಎನ್ನುವ ಸಂಘಟನೆಯವರು ಡಿಸೆಂಬರ್ 18, 2019ರಂದು ಪ್ರತಿಭಟನೆಗೆ ಕರೆ ನೀಡಿದ್ದರು. ಅದೇ ದಿವಸ ಸಂಜೆ 6.30 ಗಂಟೆಗೆ ನಗರದಾದ್ಯಂತ ನಿಷೇಧಾಜ್ಞೆ ಜಾರಿ ಮಾಡಲಾಯಿತು. ಈಗಾಗಲೇ ನಾನು ಹೇಳಿದ ಹಾಗೆ, ಸೆಕ್ಷನ್ 144 ನಿಷೇಧಾಜ್ಞೆ ಜಾರಿ ಮಾಡಿದ್ದರ ಬಗ್ಗೆ ನಮ್ಮ ಉಚ್ಚನ್ಯಾಯಾಲಯ, ಮುಂಬೈನ ಉಚ್ಚನ್ಯಾಯಾಲಯ ಮತ್ತು ಈ ದೇಶದ ಸರ್ವೋಚ್ಚ ನ್ಯಾಯಾಲಯಗಳು ಕೊಟ್ಟ ನಿರ್ಣಯಗಳನ್ನು ತಮ್ಮ ಗಮನಕ್ಕೆ ತಂದಿದ್ದೆ. It is a right of a citizen to protest. ಇಂತಹ ಸಂದರ್ಭದಲ್ಲಿ ಸೆಕ್ಷನ್ 144 ಡಿಡಿಂಟಣಟಂಚಿಣಜ ಮಾಡುವುದು ಅಷ್ಟು ಸಾಧುವಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಗೆ ತಮ್ಮ ವಿಚಾರಗಳನ್ನು ವ್ಯಕ್ತ ಮಾಡುವುದಕ್ಕೆ, ಪ್ರತಿಭಟನೆ ಮಾಡುವುದಕ್ಕೆ ಹಕ್ಕು ಇರುತ್ತದೆ. ಸೆಕ್ಷನ್ 144 ಜಾರಿ ಮಾಡುವುದು ಸರಿಯಲ್ಲ ಎನ್ನುವುದನ್ನು ನಾನು ಹೇಳುವುದಕ್ಕಿಂತ, ನಮ್ಮ ಹೈಕೋರ್ಟ್, ಮುಂಬೈ ಹೈಕೋರ್ಟ್ ಮತ್ತು ದೇಶದ ಸರ್ವೋಚ್ಚ ನ್ಯಾಯಾಲಯ ಕೂಡ ನಿರ್ಣಯ ನೀಡಿತು. ಆದರೂ ನಿಷೇಧಾಜ್ಞೆ ಜಾರಿ ಮಾಡಲಾಯಿತು. ಡಿಸೆಂಬರ್ 19, ಮಧ್ಯಾಹ್ನ 2 ಗಂಟೆಗೆ ಒಂದು ಸಣ್ಣ ಗುಂಪು ಡಿಸಿ ಕಚೇರಿಯ ಎದುರಿಗೆ ಹೋಗಿ, ಸಿಎಎ ಮತ್ತು ಎನ್‌ಆರ್‌ಸಿ ವಿರುದ್ಧ ಘೋಷಣೆ ಕೂಗುವುದಕ್ಕೆ ಪ್ರಾರಂಭ ಮಾಡಿತು.

**(27)18-02-2020 3.20 ಡಿಎಸ್-ಆರ್‌ಎನ್**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಈಗಾಗಲೇ ಅಲ್ಲಿ ಪೊಲೀಸರು ಜಮಾಯಿಸಿದ್ದರು. ಅಲ್ಲಿ ಗುಂಪು ಚದುರಿಸುವ ಉದ್ದೇಶದಿಂದ ಇದ್ದಕ್ಕಿದ್ದ ಹಾಗೆ ಪೊಲೀಸರು ಲಾಠಿ ಚಾರ್ಜ್ ಪ್ರಾರಂಭ ಮಾಡಿದರು. ಲಾಠಿ ಚಾರ್ಜ್‌ನಿಂದ affect ಆದವರು ಯಾರೆಂದರೆ, ಮಾರುಕಟ್ಟೆಗೆ ಬಂದವರು, ಕೆಲವರು ಶಾಪಿಂಗ್‌ಗಾಗಿ ಬಂದವರು, ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಿರುವವರು ಮತ್ತು ಪ್ರತಿಭಟನೆಯಲ್ಲಿ ಭಾಗವಹಿಸದವರು, ಶಾಲೆಯಿಂದ ಮಕ್ಕಳನ್ನು ಕರೆದುಕೊಂಡು ಹೋಗಲು ಬಂದವರು ಅದರಲ್ಲಿ ಸಿಲುಕಿಕೊಂಡಿದ್ದಾರೆ. ಬಹುತೇಕವಾಗಿ ವ್ಯಾಪಾರ ಮತ್ತು ವಹಿವಾಟು ಮಾಡುತ್ತಿದ್ದಂತಹ ಬಹಳಷ್ಟು ಅಮಾಯಕರು ಆ ಲಾಠಿ ಚಾರ್ಜ್‌ಗೆ ಬಲಿಯಾಗಿದ್ದಾರೆ. ಪತ್ರಕರ್ತರೆಂದು ಗುರುತಿನ ಚೀಟಿ ತೋರಿಸಿದವರ ಮೇಲೂ ಲಾಠಿ ಚಾರ್ಜ್ ಮಾಡಿದ್ದಾರೆ. ಕೈಯಲ್ಲಿ ಲಾಠಿ ಕೊಟ್ಟಿರುತ್ತಾರೆ, ಅವರು ಮನಸ್ಸೋಇಚ್ಛೆ ತಣಿಸುವುದಷ್ಟೇ ಕೆಲಸ. ಈ ಪ್ರಜಾಪ್ರಭುತ್ವದ 4ನೇ ಅಂಗ ಎಂದು ಹೇಳುವಂತಹ ನಾನು ಮಾಧ್ಯಮದ ಪ್ರತಿನಿಧಿ ಎಂದು ಹೇಳಿದರೂ ಕೂಡ ಯಾವ ಪ್ರತಿನಿಧಿ ಬಿಡು ಎಂದು ಮಾಡುವಂತಹ ಕೆಲಸ ಮಾಡಿದ್ದಾರೆ. ಏಕಾಏಕಿ ಪೊಲೀಸರ ಲಾಠಿ ಚಾರ್ಜ್‌ನಿಂದ ಆಕ್ರೋಶಗೊಂಡ ಪ್ರತಿಭಟನಕಾರರು ನೆಲ್ಲಿಕಾಯಿ ಎಂಬ ಪ್ರದೇಶದ ರಸ್ತೆಯಲ್ಲಿ ನೆರೆದರು. ಅಲ್ಲಿಗೆ ತೆರಳಿದ ಪೊಲೀಸರು ಮಸೀದಿಗಳ ಮೇಲೆ ಕಲ್ಲೆಸೆಯುವ ಅಶ್ರುವಾಯು ಪ್ರಯೋಗ ಮಾಡುವ ವಿಡಿಯೋಗಳಿವೆ. ಅಲ್ಲಿಂದಲೂ ತೆರಳಿದ ಗುಂಪು ಬಂದರು ಪ್ರದೇಶದಲ್ಲಿ ಜಮಾಯಿಸುತ್ತಾರೆ. ಅಲ್ಲಿಯೂ ಲಾಠಿ ಚಾರ್ಜ್ ಮಾಡುತ್ತಾರೆ. ಅಶ್ರುವಾಯು ಸಿಡಿಸುತ್ತಾರೆ. ಕೊನೆಗೆ ಗೋಲಿಬಾರ್ ಸಹ ಮಾಡುತ್ತಾರೆ. ಇಲ್ಲಿ ಇಬ್ಬರು ಅಮಾಯಕರು ಸಾಯುತ್ತಾರೆ. ಒಬ್ಬರು ಶ್ರೀ ಅಬ್ದುಲ್ ಜಲೀಲ್ ಎನ್ನುವವರು. ಅವರು ದಕ್ಕೆಯಲ್ಲಿ ಮೀನು ಹೊರುವ ಕಾಯಕ ಮಾಡುತ್ತಿದ್ದವನು ಅವರು ಕಡು ಬಡವ. ಪ್ರತಿದಿನ ಬೆಳಿಗ್ಗೆ 4 ಗಂಟೆಗೆ ಹೊರಟರೆ ವಾಪಸ್ ಸಂಜೆ 4 ಗಂಟೆಗೆ ಮನೆಗೆ ಬರುತ್ತಿದ್ದನು. ಅವರ ಮನೆ ಮುಖ್ಯ ರಸ್ತೆಯಿಂದ ಸುಮಾರು 20 ಮೀಟರ್ ಒಳಗಿದೆ. ಅವನು ಊಟ ಮುಗಿಸಿ ಹೊರಗೇನಾಗ್ತಿದೆ ನೋಡಿಕೊಂಡು ಬರುತ್ತೇನೆ ಎಂದು ಪತ್ನಿ ಬಳಿ ಹೇಳಿ ರಸ್ತೆಯತ್ತ ಬರುತ್ತಿದ್ದನು. ಪತ್ನಿ ಹೋಗಬೇಡಿ ಎಂದರೂ ಕುತೂಹಲದಿಂದ ಹೊರಟಿದ್ದರು. ಅಪಾಯದ ಮುನ್ಸೂಚನೆ ಅರಿತ ಪತ್ನಿ ಅವರನ್ನು ವಾಪಸ್ ಕರೆದುಕೊಂಡು ಬರಲು ತನ್ನ ತಮ್ಮನನ್ನು ಕಳುಹಿಸುತ್ತಾರೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅವರ ಮನೆಯ 20 ಮೀಟರ್‌ನಲ್ಲಿ ಅವರ ಪತ್ನಿಯ ಕಣ್ಣೆದುರಿಗೆ ಪೊಲೀಸ್ ಫೈರಿಂಗ್‌ನಿಂದ ಬುಲೆಟ್ ಅವನಿಗೆ ತಗಲುತ್ತದೆ. ಪತ್ನಿ ನೋಡುತ್ತಿದ್ದಂತೆಯೇ ಅವನು ಹೆಣವಾಗಿ ಬೀಳುತ್ತಾನೆ.

ಮಾನ್ಯ ಸಭಾಪತಿಯವರೇ, ಮತ್ತೊಬ್ಬರು ಮೆಕ್ಯಾನಿಕ್ ಶ್ರೀ ನೌಶೀನ್ ಎಂಬುವವನು. ಇವರು ಕೂಡ ಬಡವರು. ಕುದ್ರೋಳಿ ರಹಮತ್ ನಗರದ ನಿವಾಸಿಯಾಗಿದ್ದರು. ಇವರು ಬಂದರಿನಲ್ಲಿ ವೆಲ್ಡಿಂಗ್ ವರ್ಕ್‌ಶಾಪ್‌ನಲ್ಲಿ ಕೆಲಸ ಮಾಡುತ್ತಿದ್ದರು. ಶ್ರೀ ನೌಶೀನ್ ಕೆಲಸ ಮಾಡುತ್ತಿರುವ ಅಂಗಡಿ ಮಾಲೀಕರು ಗುರುವಾರ ಸಂಜೆ ಪ್ರತಿಭಟನೆ ಜೋರಾಗುತ್ತಿದ್ದಂತೆ ಅಂಗಡಿ ಮುಚ್ಚಿ ಶ್ರೀ ನೌಶೀನ್‌ಗೆ ಮನೆಗೆ ತೆರಳುವಂತೆ ಹೇಳಿದ್ದರು. ಅದರಂತೆ ಶ್ರೀ ನೌಶೀನ್ ಕುದ್ರೋಳಿಯ ಮನೆಗೆ ತೆರಳಲು ಅಣಿಯಾಗುತ್ತಿದ್ದಂತೆ ಹಿಂದಿನಿಂದ ಬಂದ ಗುಂಡು ಬೆನ್ನು ಸೀಳಿತ್ತು. ಅವನು ಅಲ್ಲೇ ಜೀವ ಬಿಡುತ್ತಾನೆ. ಗೋಲಿಬಾರ್‌ನಿಂದ ಶ್ರೀ ಜಲೀಲ್ ಮತ್ತು ಶ್ರೀ ನೌಶೀನ್ ಇಬ್ಬರು ಮೃತರಾಗಿದ್ದಾರೆ. ಮಂಗಳೂರಿನ ಹೈಲ್ಯಾಂಡ್ ಆಸ್ಪತ್ರೆಗೆ ಸಾಗಿಸಲಾಗುತ್ತದೆ. ತೀರ ಪ್ರಕ್ಷುಬ್ಧಗೊಂಡ ಪ್ರತಿಭಟನಕಾರರು ಹೈಲ್ಯಾಂಡ್ ಆಸ್ಪತ್ರೆಯ ಮುಂಭಾಗ ನರೆಯುತ್ತಾರೆ. ಅಲ್ಲಿಗೂ ಬೆನ್ನತ್ತಿ ಬಂದ ಪೊಲೀಸರು ಅಲ್ಲಿಯೂ ಲಾಠಿ ಚಾರ್ಜ್ ಮಾಡುತ್ತಾರೆ. ಆಸ್ಪತ್ರೆಯ ಆವರಣದಲ್ಲಿ ಅಶ್ರುವಾಯು ಸಿಡಿಸಿ ಆಸ್ಪತ್ರೆಯ ಐ.ಸಿ.ಯು ಬಾಗಿಲುಗಳನ್ನು ಒದ್ದು ಐ.ಸಿ.ಯು ಘಟಕದೊಳಗೂ ಪೊಲೀಸರು ನುಗ್ಗುತ್ತಾರೆ. ಐ.ಸಿ.ಯು. ಎಂದರೆ ಅಲ್ಲಿ hygienic maintain ಮಾಡಬೇಕು. ಪೊಲೀಸರು ಬೂಟು ಹಾಕಿಕೊಂಡು ಐ.ಸಿ.ಯು. ಗೆ ಹೋದರೆ ಅಲ್ಲಿನ ಪರಿಸ್ಥಿತಿ ಏನಾಗುತ್ತದೆ ಎನ್ನುವ ಕಲ್ಪನೆಯಾದರೂ ಕನಿಷ್ಠ ಪಕ್ಷ ಅವರಿಗೆ ಬೇಡವೇ? ಐ.ಸಿ.ಯು. ನಲ್ಲಿ ಹಾಗೆ ಎಂಟ್ರಿ ಆಗಬಹುದೇ? ಇವೆಲ್ಲವೂ ಆಸ್ಪತ್ರೆಯ ಸಿ.ಸಿ.ಟಿ.ವಿ.ಯಲ್ಲಿ ದಾಖಲಾಗಿವೆ. ಯಾವುದಾದರೂ ಸಂದರ್ಭದಲ್ಲಿ ನಮಗೆ ಬೇಕಾದ್ದಂಥವರನ್ನು ನೋಡಬೇಕಾದ ಸಂದರ್ಭದಲ್ಲಿ ನಮಗೆಲ್ಲಾ apron ಹಾಕಿ, ಅವರದ್ದೇ ಆದಂತಹ slippers ಕೊಟ್ಟು ಮುಖಕ್ಕೆ ಬಟ್ಟೆ ಹಾಕಿ ಪೇಷಂಟ್‌ಗೆ ಏನು ಆಗಬಾರದೆಂದು ಎಂದು ಇಷ್ಟು ಕಾಳಜಿ ವಹಿಸಿ ನಮ್ಮನ್ನು ಕಳುಹಿಸಿಕೊಡುತ್ತಾರೆ. ಆ hygienic ಏನು ಇಲ್ಲ. ಆ ಐ.ಸಿ.ಯು. ಬಾಗಿಲನ್ನು ಒದ್ದು Intensive Care Unit ಒಳಗೆ ಎಂಟ್ರಿಯಾಗಿ ಅಲ್ಲಿ ಯಾರು ಇದ್ದಾರೆಂದು ಹುಡುಕುತ್ತಾರೆ. ಇವೆಲ್ಲವೂ ಆಸ್ಪತ್ರೆಯ ಸಿ.ಸಿ.ಟಿ.ವಿ. ಯಲ್ಲಿ ದಾಖಲಾಗಿವೆ. ಈ ಎಲ್ಲಾ ಘಟನೆಗಳುಳ್ಳ ವಿಡಿಯೋಗಳು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗುತ್ತಿದ್ದಂತೆ 19ನೇ ಡಿಸೆಂಬರ್ 2019ರ ಮಧ್ಯರಾತ್ರಿಯಿಂದ ಇಂಟರ್‌ನೆಟ್ ಸ್ಥಗಿತಗೊಳಿಸಲಾಗುತ್ತದೆ. ಅಂದರೆ, ಇದು ಎಲ್ಲಾ ಕಡೆ ಗೊತ್ತಾಗಬಾರದೆನ್ನುವ ಉದ್ದೇಶದಿಂದ ಸ್ಥಗಿತಗೊಳಿಸುತ್ತಾರೆ. 22ನೇ ಡಿಸೆಂಬರ್, 2019 ರವರೆಗೆ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಕರ್ಫ್ಯೂ ವಿಧಿಸಲಾಗುತ್ತದೆ. 20ನೇ ಡಿಸೆಂಬರ್, 2019 ರಂದು ಗೋಲಿಬಾರ್ ಘಟನೆಗಳ ಕುರಿತು ವಿಡಿಯೋ ವೈರಲ್ ಆಗುತ್ತವೆ. ಅದರಲ್ಲಿ ಪೊಲೀಸ್ ಅಧಿಕಾರಿಗಳು ಅತ್ಯಂತ ಉಡಾಫೆಯಿಂದ ಮತ್ತು ಕ್ರೌರ್ಯದಿಂದ ಮಾತನಾಡುವ ದೃಶ್ಯಗಳಿವೆ. ಅವರು ಮಾತನಾಡಿರುವುದು ಕೂಡ ರೆಕಾರ್ಡ್ ಆಗಿದೆ. ಅದರಲ್ಲಿ ಒಬ್ಬ ಪೊಲೀಸ್ ಅಧಿಕಾರಿ ಮಾತನಾಡಿರುವುದನ್ನು ನಾನು ನೋಡಿದ್ದೇನೆ. 'ಫೈರ್ ಮಾಡಿದ್ರೂ ಒಬ್ರೂ ಸಾಯಲಿಲ್ಲ' ಎಂದು ಒಬ್ಬ ಪೊಲೀಸ್ ಅಧಿಕಾರಿ ಹೇಳುತ್ತಾರೆ. 'ಹೋಗ್ಲಿ ಸರ್, ಒಂದು ಬೀಳ್ಲಿ ಸರ್' ಎನ್ನುತ್ತಾರೆ ಪೊಲೀಸ್ ಸಿಬ್ಬಂದಿ. ಒಂದು ಬೀಳ್ಲಿ ಎಂದರೆ ಸಾಯಲಿ ಎಂದರ್ಥ. ಈ ರೀತಿಯಾಗಿ ಉಡಾಫೆಯಿಂದ ಮಾತನಾಡುತ್ತಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜನರ ಜೀವದ ಬಗ್ಗೆ ಅವರಿಗೆ ಹೆದರಿಕೆಯೇ ಇಲ್ಲ. ಇಷ್ಟು ಕಿಡಿಗೇಡಿಯಾಗಿ ಮಾತನಾಡುವುದು ಎಂದರೆ ಏನು? ಯಾರು ಸಾಯಲಿಲ್ಲ ಎಂದು ಹೇಳುತ್ತಾರೆ. ಒಂದು ಹೆಣ ಬೀಳುತ್ತದೆ ಎಂದು ಮತ್ತೊಬ್ಬರು ಹೇಳುತ್ತಾರೆ. ಮತ್ತೊಂದು ವಿಡಿಯೋದಲ್ಲಿ ಪ್ರತಿಭಟನಕಾರರ ಮರ್ಮಾಂಗಕ್ಕೆ ಗುರಿಯಿಡುವಂತೆ ಮಾತನಾಡುವ ದೃಶ್ಯಾವಳಿಗಳಿವೆ. ಇದರ ಉದ್ದೇಶ ಏನು ಎಂಬುದು ನನಗೆ ಅರ್ಥವಾಗುತ್ತಿಲ್ಲ. ನನಗನಿಸುತ್ತದೆ ಇದನ್ನೆಲ್ಲಾ ನೋಡಿದರೆ ಗುಂಡಿಕ್ಕಿ ಕೊಲ್ಲಲೆಂದೇ ಪೂರ್ವ ನಿರ್ಧಾರ ಮಾಡಿಕೊಂಡು ಬಂದ ಹಾಗೆ ಪೊಲೀಸರು ಕಾಣುತ್ತಾರೆ. ಜನರನ್ನು ಚದುರಿಸುವುದಕ್ಕೆ ಫೈರಿಂಗ್ ಮಾಡುವುದು, it will be the last resort. ಪೊಲೀಸ್ ಆಕ್ಟ್ ಪ್ರಕಾರ arrest ಮಾಡಬಹುದಾಗಿತ್ತು. ಆಮೇಲೆ tear gas burst ಮಾಡಬಹುದಾಗಿತ್ತು. ನಂತರ ಲಾಠಿ ಚಾರ್ಜ್ ಮಾಡಬೇಕಾಗಿತ್ತು. ಇವೆಲ್ಲದ್ದಕ್ಕೂ ಆಗಲಿಲ್ಲವೆಂದಾಗ ಗೋಲಿಬಾರ್ ಮಾಡಬೇಕಿತ್ತು. ಆದರೆ, ಪೊಲೀಸ್ ಕಮೀಷನರ್ ಈ ಘಟನೆಯ ಉದ್ದಕ್ಕೂ ಹಲವಾರು ತಪ್ಪು ಹೇಳಿಕೆಗಳನ್ನು ನೀಡಿದ್ದಾರೆ. 6,000 ದಿಂದ 7,000 ಪ್ರತಿಭಟನಕಾರರು ಪ್ರತಿಭಟನೆ ಮಾಡುವುದಕ್ಕೆ ಮುಂದಾಗಿದ್ದರು ಎನ್ನುತ್ತಾರೆ. ಆದರೆ ಬಂದರು ಪೊಲೀಸ್ ಠಾಣೆಯಲ್ಲಿ ದಾಖಲಾದ ಎಫ್.ಐ.ಆರ್.ನಲ್ಲಿ 1,500 ರಿಂದ 2,000 ಪ್ರತಿಭಟನಕಾರರು ಇದ್ದರು ಎಂದು ಉಲ್ಲೇಖವಿದೆ. 6,000 ದಿಂದ 7,000 ಪ್ರತಿಭಟನಕಾರರು ಎಂದು ಅವರು ಹೇಳುತ್ತಾರೆ. FIR means one will set the criminal ball into motion. It will be an authenticated in criminal cases. ಸ್ವಲ್ಪ variation ಆಗಬಹುದು. ಆದರೆ 1,500 ರಿಂದ 2,000 ಪ್ರತಿಭಟನಕಾರರು ಇದ್ದರು ಎಂದು ಉಲ್ಲೇಖವಿದೆ. ಕಮೀಷನರ್‌ರವರ ಪ್ರಕಾರ ಗಾಯಗೊಂಡಿರುವವರ ಸಂಖ್ಯೆ 5 ಎಂದರೆ ವರದಿ ಪ್ರಕಾರ 25 ಆಗಿತ್ತು. 33 ಮಂದಿ ಪೊಲೀಸರು ಗಾಯಗೊಂಡಿದ್ದಾರೆ, 5 ಮಂದಿ ನಾಗರೀಕರು ಗಾಯಗೊಂಡಿದ್ದಾರೆ. ಮಂಗಳೂರು ದಕ್ಷಿಣ ಮತ್ತು ಉತ್ತರ ಪೊಲೀಸ್ ಠಾಣೆಯಲ್ಲಿ 7 ಪ್ರಕರಣಗಳು ದಾಖಲಾಗಿದ್ದು, 14 ರಿಂದ 15 ಪೊಲೀಸರಲ್ಲಿ 8 ಮಂದಿಗೆ ಗಂಭೀರ ಗಾಯಗಳಾಗಿವೆ ಎನ್ನುತ್ತಾರೆ. ಇದರಲ್ಲಿ ಒಂದಕ್ಕೊಂದು ಸಂಬಂಧವಿಲ್ಲ. ಪೊಲೀಸ್ ಕಮೀಷನರ್ ಹೇಳುವುದಕ್ಕೆ, ಎಫ್.ಐ.ಆರ್. ಗೆ, ವಾಸ್ತವಿಕ ನೆಲಗಟ್ಟಿನಲ್ಲಿ ಇರುವಂತಹ ವಿಚಾರಕ್ಕೂ discrepancy ಇದೆ.

**(28)18–02–2020/3–30/ಬಿಕೆಪಿ–ವಿಕೆ**

**ಶ್ರೀ ಎಸ್.ಆರ್.ಪಾಟೀಲ್(ಮುಂದು)**

ಮೊದಲು ಪ್ರತಿಭಟನಾಕಾರರನ್ನು ಚದುರಿಸಿದ್ದೇವೆ. ಪರಿಸ್ಥಿತಿ ಕೈಮೀರಿ ಹೋದಮೇಲೆ ಅಶ್ರುವಾಯು ಪ್ರಯೋಗ ಮಾಡಿದ್ದೇವೆ. ಉದ್ರಿಕ್ತ ಗುಂಪು ಕಲ್ಲು, ಮಾರಕಾಸ್ತ್ರಗಳಿಂದ ಧಾಳಿ ಮಾಡಿದಂತಹ ಸಂದರ್ಭದಲ್ಲಿ ಅನಿವಾರ್ಯವಾಗಿ ನಾವು ಬಲಪ್ರಯೋಗ ಮಾಡಿದ್ದೇವೆಂದು ಅವರು ಹೇಳುತ್ತಾರೆ. ಅವರು ನಿಜವಾಗಿಯೂ ಸಹ ಶಾಂತಿಯಿಂದ ಪ್ರತಿಭಟನೆ ಮಾಡುವವರಿದ್ದರು. ಏಕಾಏಕಿ ಲಾಠಿಚಾರ್ಜ್ ಮಾಡುವುದರ ಮೂಲಕ ಅವರನ್ನು ಚದುರಿಸುವ ಪ್ರಯತ್ನ ಮಾಡಿದ್ದಾರೆ. ಈ ವಿಚಾರವಾಗಿ ಡಿ.ಸಿ.ಪಿ.ಯವರ ವರದಿ ಒಂದು ರೀತಿಯಲ್ಲಿ ಇದ್ದರೆ, ಎಫ್.ಐ.ಆರ್ ವರದಿ ಒಂದು ರೀತಿಯಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರುತ್ತದೆ. ಮತ್ತೆ ಪೊಲೀಸ್ ಅಯುಕ್ತರ ವರದಿ ಒಂದು ರೀತಿಯಲ್ಲಿ ಇರುತ್ತದೆ. ಇದರಲ್ಲಿ ಬಹಳಷ್ಟು ವ್ಯತ್ಯಾಸಗಳಿವೆ. There is no resemblance. ಎಫ್.ಐ.ಆರ್. ವರದಿ, ಪೊಲೀಸ್ ಆಯುಕ್ತರ ವರದಿ, ಡಿ.ಸಿ.ಪಿ.ಯವರ ವರದಿ ಒಂದೇ ಇರಬೇಕಲ್ಲವೇ?

**(ಈ ಹಂತದಲ್ಲಿ ಮಾನ್ಯ ಉಪಸಭಾಪತಿಯವರಾದ ಶ್ರೀ ಎಸ್.ಎಲ್. ಧರ್ಮೇಗೌಡ ರವರು ಸಭಾಪೀಠವನ್ನು ಅಲಂಕರಿಸಿದರು)**

ಈ ರೀತಿಯಲ್ಲಿ lot of discrepancy ಇರುತ್ತದೆ. ಈ ಗಲಭೆಯನ್ನು ನಿಯಂತ್ರಿಸಲು, ಶ್ರೀ ಕೆ. ಅಶ್ರಫ್, ಮಾಜಿ ಮೇಯರ್ ರವರನ್ನು ಪೊಲೀಸ್ ಕಮಿಷನರ್ ಕರೆಸಿದ್ದರು. ಶ್ರೀ ಕೆ. ಅಶ್ರಫ್ ರವರ ಹೇಳಿಕೆಯ ಪ್ರಕಾರ "ಪರಿಸ್ಥಿತಿಯನ್ನು ಸುಧಾರಿಸಲು ನನ್ನನ್ನು ಕಮಿಷನರ್ ಕರೆಸಿದ್ದರು, ನಾನು ಪ್ರತಿಭಟನೆಯಲ್ಲಿ ನಿರತರಾದ ಯುವಕರ ಜೊತೆ ಮಾತನಾಡಿ ಸಮಾಧಾನ ಪಡಿಸಿದೆ, ಯುವಕರು ಸಹ ಹಿಂದಿರುಗಿ ಹೋಗುವ ವಿಚಾರವನ್ನು ವ್ಯಕ್ತ ಮಾಡಿದರು. ಆದರೆ, ಪೊಲೀಸರು ಅಶ್ರುವಾಯು ಸಿಡಿಸುತ್ತಲೇ ಇದ್ದರು ಎಂದು ಹೇಳಿದ್ದಲ್ಲದೆ, ನನಗೂ ಸಹ ಯುವಕರ ಬಳಿಯಿಂದ ಹಿಂದಿರುಗಿ ಬರುವಾಗ ತಲೆಗೆ ಏನೋ ಬಡಿಯಿತು" ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ನನಗೆ ಅನಿಸುವುದೇನೆಂದರೆ ಮತ್ತು ಒಂದೇ ಮಾತಿನಲ್ಲಿ ಹೇಳುವುದಾದರೆ, ಇಡೀ ಹಿಂಸಾಚಾರಕ್ಕೆ ಪೊಲೀಸ್ ಕಮಿಷನರ್ ಮತ್ತು ಪೊಲೀಸರೇ ಕಾರಣ ಆಗಿದ್ದಾರೆಂದು ಹೇಳುವ ನಿರ್ಣಯಕ್ಕೆ ನಾನು ಬಂದಿದ್ದೇನೆ. ಈ ಘಟನೆಯನ್ನು ವಿಸ್ತೃತವಾಗಿ ನೋಡಿದಾಗ ಶ್ರೀ ಕೆ.ಅಶ್ರಫ್ ರವರನ್ನು ಕೊಲ್ಲುವ ಉದ್ದೇಶದಿಂದ ಅವರನ್ನು ಕರೆಸಿದ್ದರೋ ಏನೋ ಎಂದು ಕಾಣುತ್ತದೆ. ಅವರ ತಲೆಗೆ ಆ ಸಂದರ್ಭದಲ್ಲಿ ಪೆಟ್ಟು ಬಿದ್ದಿದೆ. ಇನ್ನು ಮೃತ ಜಲೀಲ್ ರವರು ಯಾವ ಒಂದು ಸಂಘಟನೆಯಲ್ಲೂ ಇರಲಿಲ್ಲ. ಪ್ರತಿಭಟನೆಗೆ ಕರೆದಂತಹ ಏನು SKSSF ಸಂಘಟನೆ ಇತ್ತು, ಆ ಸಂಘಟನೆಗೆ ಸಂಬಂಧಿಸಿದ ವ್ಯಕ್ತಿಯಾಗಿರಲಿಲ್ಲ. ಅಲ್ಲದೇ ಬೇರೆ ಯಾವುದೇ ಸಂಘಟನೆಯಲ್ಲೂ ಸಹ ಅವರು ಇದ್ದಿರಲಿಲ್ಲ. ಮತ್ತೆ, ಈ ಘಟನೆ ನಡೆಯುತ್ತಿದ್ದ ಸಂದರ್ಭದಲ್ಲಿ ಅವರು ತಮ್ಮ ಮನೆಯಲ್ಲಿದ್ದರು. ಅವರ ಮನೆಯ ಕೆಳಭಾಗದಲ್ಲಿ ಜನರು ಸೇರಿದ್ದಾರೆಂದು ಅವರನ್ನು ನೋಡಲಿಕ್ಕೆ ಹೊರಗೆ ಬಂದಿದ್ದರು. ಅಶ್ರುವಾಯು ಸಿಡಿಸುತ್ತಿದ್ದ ಕಾರಣ ಮುಖಕ್ಕೆ ಕರವಸ್ತ್ರವನ್ನು ಕಟ್ಟಿಕೊಂಡಿದ್ದರು. ಮನೆಯಿಂದ ತೆರಳಿದ 5 ನಿಮಿಷದಲ್ಲಿಯೇ ಪೊಲೀಸ್ ಗುಂಡು ತಾಗಿ ಮೃತರಾದರು. ಬೆಳಗ್ಗೆ 4 ಗಂಟೆ ಕೆಲಸ ಮಾಡಿ ಮನೆಗೆ ಬಂದು, ಊಟ ಮಾಡಿದ್ದಾನೆ. ನಂತರ ಆತ ಮನೆಯಲ್ಲಿಯೇ ಇದ್ದರೆ, ಅವನ ಜೀವವಾದರೂ ಉಳಿಯುತ್ತಿತ್ತು. ಏನೋ ಒಂದು out of curiosity ಯಿಂದ ಏನು ನಡೆಯುತ್ತಿದೆ ಎಂದು ನೋಡಲಿಕ್ಕೆ ಹೋಗಿ ಆತ ಪೊಲೀಸ್ ಗುಂಡಿಗೆ ಬಲಿಯಾಗಿದ್ದಾನೆ.

ಮತ್ತೆ ನೌಶಿನ್ ಎಂಬ ಸಣ್ಣ ವಯಸ್ಸಿನ ಯುವಕ ಬಂದರ್‌ನಲ್ಲಿನ ಒಂದು ಗ್ಯಾರೇಜ್‌ನಲ್ಲಿ ಕೆಲಸಕ್ಕೆ ಹೋದಂತಹ ಸಂದರ್ಭದಲ್ಲಿ ಮಧ್ಯಾಹ್ನ ಮನೆಗೆ ಹೋಗಿ ಊಟ ಮಾಡಿ ಮತ್ತೆ ಗ್ಯಾರೇಜ್‌ಗೆ ಕೆಲಸ ಮಾಡಲಿಕ್ಕೆ ಹೋದಂತಹ ಸಂದರ್ಭದಲ್ಲಿ ಆ ಗ್ಯಾರೇಜ್‌ನ ಮಾಲೀಕ 'ಗ್ಯಾರೇಜ್ ಬಂದ್ ಮಾಡುತ್ತೇವೆ, ನೀವು ಮನೆಗೆ ಹೋಗಿ' ಎಂದ ತಕ್ಷಣ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅವನು ಅಲ್ಲಿಂದ ಬಂದ ಕೂಡಲೇ ಅವರ ಮೇಲೂ ಸಹ ಪೊಲೀಸರು ಗುಂಡು ಹಾರಿಸಿದ್ದಾರೆ. They all are innocent peoples. ಅವರುಗಳು ಯಾವ ಒಂದು ಸಂಘಟನೆಯಲ್ಲಿ ಇದ್ದವರಲ್ಲ, ಪ್ರತಿಭಟನೆಯಲ್ಲಿ ಭಾಗವಹಿಸಿದವರಲ್ಲ. ಆದರೆ, ಅನವಶ್ಯಕವಾಗಿ ಪೊಲೀಸರ ಗುಂಡಿಗೆ ಅವರುಗಳು ಬಲಿಯಾದರು. ದುರಂತವೆಂದರೆ ಗೋಲಿಬಾರ್‌ಗೆ ಬಲಿಯಾದವರ ಮೇಲೆ ಎಫ್.ಐ.ಆರ್. ದಾಖಲಿಸಿದ್ದಾರೆ. ಎಫ್.ಐ.ಆರ್. ದಾಖಲು ಮಾಡಿದ್ದರೆ ಅವರನ್ನು ಬಂಧಿಸಬಹುದಿತ್ತು ಅಲ್ಲವೇ? If the FIR is registered against anybody, such person would have been taken to the custody. ನಂತರ ಎಫ್.ಐ.ಆರ್ ದಾಖಲು ಮಾಡಿದ್ದಾರೆ. ಇದನ್ನೆಲ್ಲಾ ನೋಡಿದರೆ ಪೊಲೀಸರ ಮೇಲೆ ಬೇರೆ ಯಾವುದೋ ಶಕ್ತಿಗಳು ಪ್ರಭಾವ ಬೀರಿರುವಂತಹ ಅನುಮಾನ ನಮಗೆ ವ್ಯಕ್ತವಾಗುತ್ತದೆ. ನಿಯಮಗಳ ಪ್ರಕಾರ ಮೊಣಕಾಲಿನ ಕೆಳಭಾಗಕ್ಕೆ ಗುಂಡು ಹಾರಿಸಬೇಕು. ಗುಂಡು ಹಾರಿಸುವುದು ಎಂದರೆ ತಲೆಗೆ, ಎದೆಗೆ, ಹೊಟ್ಟೆಗೆ ಗುಂಡು ಹಾರಿಸುವುದಲ್ಲ. ಅವರನ್ನು ಚದುರಿಸುವ ಉದ್ದೇಶದಿಂದ ಮೊಣಕಾಲಿನಿಂದ ಆದಷ್ಟು ಕೆಳಭಾಗಕ್ಕೆ ಗುಂಡು ಹಾರಿಸಬೇಕು. ಕೆಳಗಡೆ ಗುರಿಯಿಟ್ಟು ಹೊಡೆಯಬೇಕು. ಇವರು 8 ಗುಂಡುಗಳನ್ನು ಹಾರಿಸಿದ್ದಾರೆ. ಆ ಪೈಕಿ 7 ಗುಂಡುಗಳು ಸೊಂಟದಿಂದ ಮೇಲ್ಭಾಗಕ್ಕೆ ತಾಗಿವೆ. ಅಂದರೆ ಅವರುಗಳನ್ನು ಕೊಲ್ಲಲಿಕ್ಕೆ ಸಾಧ್ಯವಾಗುವಂತೆ ಗುರಿಯನ್ನಿಟ್ಟುಕೊಂಡು ಗುಂಡುಗಳನ್ನು ಹಾರಿಸಿದ್ದಾರೆ.

ಮತ್ತೆ, ಈ ವಿಚಾರವಾಗಿ ಪೊಲೀಸರುಗಳು ಪರಸ್ಪರ ಮಾತನಾಡಿಕೊಂಡಿದ್ದರ ಬಗ್ಗೆ ಟಿ.ವಿ.ಯಲ್ಲಿ ಪ್ರಸಾರಗೊಂಡಿದ್ದನ್ನು ನಾನು ವಿಸ್ತೃತವಾಗಿ ಗಮನಿಸಿದ್ದೇನೆ. ಅವರು ತಮ್ಮ ಗನ್‌ಗಳನ್ನು ನೇರವಾಗಿ ಹಿಡಿದು ಹೊಡೆದಿದ್ದಾರೆ. ಅಂದರೆ ಬಂದೂಕನ್ನು ಹಿಡಿದು ನೇರವಾಗಿ ಹೊಡೆದರೆ ಅದು ಯಾರಿಗೆ ಹೋಗುತ್ತದೆನ್ನುವುದನ್ನು ಗಮನಿಸಬಹುದಾಗಿದೆ. ಗನ್ ಪಾಯಿಂಟ್ ಅನ್ನು ಸ್ವಲ್ಪ ಕೆಳಗಡೆ ಮಾಡಿ ಹೊಡೆದರೆ ಮೊಣಕಾಲಿನಿಂದ ಕೆಳಗಡೆ ಹೊಡೆಯಬಹುದು. ಆ ಗುಂಡು ಬಂದಿದೆ ಎಂದು ಹೇಳಿ, ಜನರು ಅಂಜಿಕೊಂಡು ಅಲ್ಲಿಂದ ನಿರ್ಗಮಿಸುತ್ತಿದ್ದರು. ಈ ಗೋಲಿಬಾರ್ ಮಾಡಬೇಕಾದರೆ ಕೆಲವೊಂದು ನಿಯಮಗಳಿವೆ. ಈಗ ಗೃಹ ಸಚಿವರು ಎಲ್ಲಿ ಹೋಗಿದ್ದಾರೆಂದು ಗೊತ್ತಾಗುತ್ತಿಲ್ಲ.

**ಶ್ರೀ ಲಹರ್ ಸಿಂಗ್ ಸಿರೋಯಾ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ. . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ. Sorry, I will not yield to you. ಯೀಲ್ಡ್ ಆಗಿಲ್ಲವೆಂದರೆ, ಅವರಿಗೆ ಅರ್ಥವಾಗುತ್ತಿಲ್ಲ. ಏಕೆಂದರೆ, ಅವರಿಗೆ ಕನ್ನಡ ಸರಿಯಾಗಿ ತಿಳಿಯುವುದಿಲ್ಲ. ಕನ್ನಡವನ್ನು ಅವರು ಕೊಂದೇ ಬಿಟ್ಟರು. ಇರುವಂತಹ ಕೆಲವೊಂದು ನಿಯಮಗಳ ಬಗ್ಗೆ ಈ ಸದನದ ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಅವುಗಳು ಇಂಗ್ಲೀಷ್‌ನಲ್ಲಿದ್ದು, ಅವುಗಳನ್ನು ಉಲ್ಲೇಖಿಸ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*"The police must invariably secure the presence of a magistrate where it anticipates a breach of peace."* ಅವರನ್ನು ಆ ಸ್ಥಳದಲ್ಲಿ ಕರೆಸಿಕೊಳ್ಳಬೇಕು. ನಂತರ *"The decision to use force and the type of force to be used is to be taken by the magistrate."* It is very clear. *"Once the order for the use of force is given by the magistrate, the extent of force to be used will be determined by the senior-most police officer."* ಈ ಬಗ್ಗೆ ಯೋಚನೆ ಮಾಡಿ ಪರಿಸ್ಥಿತಿಯ ಬಗ್ಗೆ ನಿರ್ಧಾರ ಮಾಡಬೇಕಾಗುತ್ತದೆ.

*"The extent of force used must be subject to the principle of minimum use of force."*

*"Use of force should be progressive i.e. firearms must be used as a last resort if tear smoke and lathi charge fail to disperse the crowd."* ಯಾವಾಗ ಅಂದರೆ, tear gas ನಿಂದ ಏನೂ ಆಗಲಿಲ್ಲ, ಮತ್ತೆ, ಲಾಠಿ ಚಾರ್ಜ್‌ನಿಂದ ಏನೂ ಆಗಲಿಲ್ಲ. ಸಾಕಷ್ಟು ವಾರ್ನಿಂಗ್ ಕೊಟ್ಟ ಮೇಲೆಯೂ ಸಹ ಏನೂ ಆಗಲಿಲ್ಲ. ಇವುಗಳೆಲ್ಲ remedies exhaust ಆದ ಮೇಲೆ ಕೊನೆಯಲ್ಲಿ firearms ಉಪಯೋಗ ಮಾಡಬೇಕಾಗುತ್ತದೆ. *"Common tear smoke which causes no bodily injury and allows recovery of affected persons should be used."* *"When the crowd is large and the use of tear smoke is likely to serve no useful purposed, the police may resort to lathi charge."* ಅಲ್ಲಿ ದೊಡ್ಡ ಕ್ರೌಡ್ ಇರುತ್ತದೆ, smoke gas ನಿಂದ ಏನೂ ಪ್ರಯೋಜನ ಆಗುವುದಿಲ್ಲವೆಂದ ಮೇಲೆ first and foremost, tear gas burst ಮಾಡುವುದು ಮೊದಲನೆಯ ಕೆಲಸ. ಅದರಿಂದ ಏನೂ ಆಗಲಿಲ್ಲವೆಂದ ಮೇಲೆ ಲಾಠಿ ಚಾರ್ಜ್ ಮಾಡಬೇಕಾಗುತ್ತದೆ. *"Lathi charge can only begin if the crowd refuses to disperse after suitable warning."* ತಾವುಗಳು ಗಮನಿಸಬೇಕು. ಲಾಠಿ ಚಾರ್ಜ್ ಮಾಡುವ ಪೂರ್ವದಲ್ಲಿಯೂ ಸಹ ಸೂಕ್ತವಾದ ಎಚ್ಚರಿಕೆಯನ್ನು ಕೊಡಬೇಕು. "ನಾವು ಲಾಠಿಚಾರ್ಜ್ ಮಾಡುತ್ತೇವೆ, ನೀವು ಪೆಟ್ಟು ತಿನ್ನುತ್ತೀರಿ, ತೊಂದರೆಯಾಗುತ್ತದೆ ಎಂದು ಹೇಳಿ ಸೂಕ್ತ ಎಚ್ಚರಿಕೆಯನ್ನು ಅವರಿಗೆ ಕೊಡಬೇಕು. ನಂತರ ಲಾಠಿ ಚಾರ್ಜ್ ಮಾಡಬೇಕು. *"Clear warning of the intention to carry out a lathi charges should be given through a bugle or whistle call in a language understood by the crowd...."* ಕ್ರೌಡ್‌ಗೆ ಯಾವ ಭಾಷೆ ಅರ್ಥವಾಗುತ್ತದೆ, ಆ ಒಂದು ಭಾಷೆಯಲ್ಲಿ ಪ್ರಕಟ ಮಾಡಬೇಕು. *"..If*

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

*available, a riot flag must be raised.."* ಫ್ಲಾಗ್ ಹಾರಿಸುವುದರ ಮೂಲಕವೂ ತಿಳಿಸಬಹುದು. *"...If the police officer in-charge is satisfied it is not practical to give a warning, she/he may order a lathi charge without warning."* ಕೆಲವೊಂದು ಸಮಯದಲ್ಲಿ ಸೂಕ್ತ ಎಚ್ಚರಿಕೆಯಿಲ್ಲದೆ ಲಾಠಿ ಚಾರ್ಜ್ ಮಾಡಬೇಕಾಗುತ್ತದೆ.

**(029) 18.02.2020 03.40 ಎಸ್‌ವಿ–ವಿಕೆ**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):–**

ಅಂದರೆ unlawful crowd ಗೆ ನಾವು ಎಚ್ಚರಿಕೆಯನ್ನು ನೀಡಿದರೂ ಅದರಿಂದ ಯಾವುದೇ ಪ್ರತಿಫಲವಿಲ್ಲ ಎಂದಾಗ ಅವರು ನಿರ್ಧಾರ ಮಾಡಲು ಅವಕಾಶವಿದೆ. *"Lathi blows should be aimed at soft portions of the body..."* ಲಾಠಿಯನ್ನು ತೆಗೆದುಕೊಂಡು ತಲೆಗೆ ಅಥವಾ collarbone ಅಲ್ಲ. ಈ ರೀತಿ ಎಲ್ಲೆಂದರಲ್ಲಿ ಹೊಡೆಯುವಂತಿಲ್ಲ. ಮಾನವ ಶರೀರದ soft portions ಗೆ ಹೊಡೆಯಬಹುದು. ಅದರಿಂದ ಕೇವಲ ಪೆಟ್ಟಿನ ಅನುಭವವಾಗುತ್ತದೆ. *"....and contact with the head or collarbone should be avoided a far as practicable."* ಎಷ್ಟು ಸಾಧ್ಯವೋ ಅಷ್ಟು ತಡೆಯಬೇಕು. ಏಕೆಂದರೆ ತಲೆಗೆ ಅಥವಾ collarbone ಗೆ ಅಥವಾ skull ಗೆ ಹೊಡೆದರೆ ನಿಶ್ಚಿತವಾಗಿ it will be a mortal only. *"The lathi blows must not cease until the crowd is completely dispersed."* ಲಾಠಿ ಚಾರ್ಜ್ ಪೂರ್ತಿಯಾಗಿ ಜನರು ಹೋಗುವವರೆವಿಗೂ ಇರಬೇಕು. *"If the crowd fails to disperse through the lathi charge, the magistrate or the competent officer may order firing."* If it is a futile exercise by lathi charge, then finally the magistrate or the competent authority must give the firing order. *"The fullest warning in clear and distinct manner must be given to the crowd to inform them that the firing will be effective."* Firing ಮಾಡುವ ಮೊದಲು ಬಹಳ clear cut ಆಗಿ ಹೇಳಬೇಕು. ಜಲಿಯನ್‌ವಾಲಾಬಾಗ್ ಹತ್ಯಾಕಾಂಡದಲ್ಲಿ ಜನರಲ್ ಡಯರ್ ಮಾಡಿದಂತೆ ಫೈರ್ ಎಂದ ಕೂಡಲೇ ಫೈರ್ ಮಾಡುವುದು ತಪ್ಪು. *"If after warning, the crowd refuges to disperse the order to fire may be given."* After warning also the crowd did not disperse, then the last option is firing should be started. *"The police are not on any account allowed to fire, except on a command given by their officer." "A warning shot*

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

*in the air or firing over the heads of the crowd is not permitted."* ಗಾಳಿಯಲ್ಲಿ ಗುಂಡು ಹಾರಿಸಬೇಕು ಅಥವಾ ಜನರ ತಲೆಯ ಮೇಲೆ ಗುಂಡು ಹೊಡೆಯಬೇಕೆಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಅದು ನಮ್ಮ ರಾಜ್ಯದ Police Manual ನಲ್ಲಿ ಇಲ್ಲ. *"Police Manual of some states allowed the firing of warning shots in the air to caution the crowd."* It is permitted in some states.

*"An aimed force should maintain a safe distance from the dangerous crowd to prevent being overwhelmed or increasing the chances of heavy casualties."* That means a distance should be maintained from that crowd.

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೆ, ಮಾನ್ಯ ಕವಟಗಿಮಠ ಅವರು ಏನೋ ಕೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಲೆಹರ್‌ಸಿಂಗ್ ಅವರಿಗೆ ನಾನು ಮಾತನಾಡುವುದು ಬೇಡ ಎಂದು ಹೇಳಿದ್ದೆನು. ಈಗ ಅವರು ಉತ್ತರ ಕರ್ನಾಟಕದವರಿಗೆ ಮಾತ್ರ ಅವಕಾಶ ಕೊಟ್ಟರೆಂದು ನನ್ನನ್ನು ತಪ್ಪು ತಿಳಿದುಕೊಳ್ಳುತ್ತಾರೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಅಲ್ಲಿ ಆ ರೀತಿ ಮಾಡಬೇಕೆಂದರೆ ಅಲ್ಲಿನ ಪರಿಸ್ಥಿತಿ ಏನಾಗಿರಬಹುದೆಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಾನು ಸಹ ಆ ಪೊಲೀಸ್ ಅಧಿಕಾರಿಗಳನ್ನು ಭೇಟಿಯಾಗಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಯಾವ ಪೊಲೀಸ್ ಅಧಿಕಾರಿ ತಾನು ತಪ್ಪು ಮಾಡಿದ್ದೇನೆಂದು ಹೇಳಿಕೊಳ್ಳುತ್ತಾರೆ?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಯಾರೇ ತಪ್ಪು ಮಾಡಿದ್ದರೂ ಅವರಿಗೆ ಶಿಕ್ಷೆ ಆಗಬೇಕೆಂದು ನಾವು ಹೇಳುತ್ತೇವೆ. ಆದರೆ ಯಾವುದು beyond limits ಆಗುತ್ತದೆಯೋ ಅದಕ್ಕೆ ಎಲ್ಲಿಯಾದರೊಂದು ಕಟ್ಟಳೆ ಬೇಕಲ್ಲವೆ?

**ಶ್ರೀ ಎಸ್.ಆರ್.ಪಾಟೀಲ್:-** ಈ ಪ್ರಕರಣದಲ್ಲಿ ಏನಾಗಿದೆ ಎಂಬುದನ್ನು ನಾನು ಹೇಳುತ್ತಿದ್ದೇನೆ. *"Aim should be kept low and directed at the most threatening part of the crowd."*

*"Firing should cease the moment; the crowd should show the signs of dispersing."* ಫೈರಿಂಗ್ ನಡೆದು ಜನರೆಲ್ಲಾ ಓಡುತ್ತಿದ್ದಾಗ ಮತ್ತೆ ಅವರ ಬೆನ್ನಿಗೆ ಗುಂಡು ಹೊಡೆಯಬಾರದು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದ ನಮ್ಮ ಪೂರ್ವಜರು ಬ್ರಿಟಿಷರ ಗುಂಡಿಗೆ ಬೆನ್ನು ತೋರಿಸದೆ ಎದೆಯನ್ನು ತೋರಿಸುತ್ತಿದ್ದರು. ಗುಂಡು ಹಾಕುವುದಾದರೆ ಹಾಕು, ದೇಶಕ್ಕಾಗಿ ನಾನು ಪ್ರಾಣತ್ಯಾಗ ಮಾಡಲು ಸಿದ್ಧನಿದ್ದೇನೆ ಎಂದು ಹೇಳುತ್ತಿದ್ದರು. ಆದ್ದರಿಂದ ಬೆನ್ನಿಗೆ ಗುಂಡು ಹಾಕುವುದು ಸಾಧುವಲ್ಲ. *"All help should be rendered*

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

*to convey the wounded to the hospital."* ಯಾರಿಗೆ ಪೆಟ್ಟಾಗಿರುತ್ತದೆಯೋ ಅವರನ್ನು ಆಸ್ಪತ್ರೆಗೆ ದಾಖಲಿಸುವ ವ್ಯವಸ್ಥೆಯಾಗಬೇಕು. *"Police Officers must not leave the scene of disturbance before satisfying themselves beyond reasonable doubt about the restoration of tranquillity."* ಗುಂಡು ಹಾಕಿ ಎಲ್ಲಿಯೋ ಹೋಗುವಂತಿಲ್ಲ. ಅಲ್ಲಿ ಸಂಪೂರ್ಣ ಶಾಂತಿ ನೆಲೆಸುವವರೆಗೂ ಅಲ್ಲಿಯೇ ಇರಬೇಕು. *"An accurate diary of all incidents, orders and action along with the time of occurrence should be maintained by the police."* ಪೊಲೀಸ್ ಡೈರಿಯಲ್ಲಿ ಆದೇಶಗಳು, ತೆಗೆದುಕೊಂಡ ಕ್ರಮಗಳು ಎಲ್ಲವೂ ದಾಖಲಾಗಬೇಕು. *"This will include an individual report by all police officers involved in the firing."* ಫೈರಿಂಗ್ ಆದ ಸಂದರ್ಭದಲ್ಲಿ ಇದ್ದಂತಹ ಎಲ್ಲಾ ಪೊಲೀಸ್ ಅಧಿಕಾರಿಗಳು ಡೈರಿಯಲ್ಲಿ ಆದೇಶವನ್ನು ಹಾಗೂ ತೆಗೆದುಕೊಂಡ ಕ್ರಮವನ್ನು ದಾಖಲಿಸಬೇಕು. *"The number of fired cartridges and the balance of unfired cartridges should be verified to ensure ammunition is accounted for."* ಎಷ್ಟು ಗುಂಡುಗಳನ್ನು ಹಾರಿಸಲಾಯಿತು ಎಂಬ ಲೆಕ್ಕವನ್ನು ಇಡಬೇಕು.

ಮಾನ್ಯ ಸಭಾಪತಿಯವರೇ, ಈ ನಿಯಮಗಳನ್ನು ಚಾಚೂತಪ್ಪದೆ ಪಾಲನೆ ಮಾಡಬೇಕು. ಆದರೆ ಈ ಗೋಲಿಬಾರ್ ಪ್ರಕರಣದಲ್ಲಿ ಅವುಗಳನ್ನು ಪಾಲನೆ ಮಾಡಲಾಗಿಲ್ಲ. 19ನೇ ಡಿಸೆಂಬರ್ 2019ರಂದು ಮಧ್ಯಾಹ್ನ 02.00ಗಂಟೆಯ ಸುಮಾರಿಗೆ 150 ಜನರ ಗುಂಪೊಂದು ಪೌರತ್ವ ಕಾಯ್ದೆಯ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಜಿಲ್ಲಾಧಿಕಾರಿಗಳ ಕಛೇರಿಗೆ ಬರುತ್ತದೆ. ಪ್ರತಿಭಟನಾಕಾರರ ಕೈಗಳಲ್ಲಿ ಯಾವುದೇ ಮಾರಕಾಸ್ತ್ರವಿರುವುದಿಲ್ಲ. ವೀಡಿಯೊದಲ್ಲಿ it is very clear. Nobody is having a dreadful weapon in their hands. 150 ಜನ ಅಮಾಯಕರು ಬರಿಗೈಯ್ಯಲ್ಲಿ ಬಂದಿದ್ದರು. ಇದೇ ರೀತಿಯ ಪ್ರತಿಭಟನೆಗಳು ನಮ್ಮ ರಾಜಧಾನಿ ಬೆಂಗಳೂರಿನಲ್ಲಿ ಹಾಗೂ ಜಿಲ್ಲಾ ಕೇಂದ್ರ ಸ್ಥಳಗಳಲ್ಲಿ ನಡೆದಿವೆ. ಸಿ.ಆರ್.ಪಿ.ಸಿ. ಸೆಕ್ಷನ್ 144 ಜಾರಿಯಲ್ಲಿದ್ದರೂ ಸಹ ಇದೇ ರೀತಿಯ ಪ್ರತಿಭಟನೆಗಳು ನಡೆಯುತ್ತಿರುತ್ತವೆ. ಇಂತಹ ಪ್ರತಿಭಟನೆಗಳಲ್ಲಿ ಹಿಂದೆ ಬಿಜೆಪಿ ನಾಯಕರು ಸಹ ಭಾಗವಹಿಸಿದ್ದರು. ಸೆಕ್ಷನ್ 144 ಜಾರಿಯಲ್ಲಿದ್ದರೂ ಜನರಲ್ಲಿ ಆಕ್ರೋಶವಿದ್ದಾಗ ಜನ ಹೊರಗೆ ಬರುತ್ತಾರೆ. ಬಿಜೆಪಿಯವರು ಯಾವಾಗಲೂ ಸೆಕ್ಷನ್ 144 ಅನ್ನು ಉಲ್ಲಂಘಿಸುತ್ತಾ ಸರ್ವೆಸಾಮಾನ್ಯವಾಗಿ ಮುಂಚೂಣಿಯಲ್ಲಿರುತ್ತಾರೆ. ಕರ್ನಾಟಕ ಪೊಲೀಸ್ ಕಾಯ್ದೆಯ ನಿಯಮ 71ರ ಪ್ರಕಾರ ಪ್ರತಿಭಟನಾಕಾರರನ್ನು ದಸ್ತಗಿರಿ ಮಾಡಿ ಅವರಿಗೆ ಎಚ್ಚರಿಕೆಯನ್ನು ಕೊಟ್ಟು ಬಿಡಬಹುದಾಗಿತ್ತು. ಏಕೆಂದರೆ ಪ್ರತಿಭಟನಾಕಾರರು ಸೀಮಿತ ಸಂಖ್ಯೆಯಲ್ಲಿದ್ದರು. ಅದರ ಹತ್ತು ಪಟ್ಟು ಪೊಲೀಸರು ಇದ್ದರು. ನಿಯಮ 71ರ ಅಡಿಯಲ್ಲಿ ಪ್ರತಿಭಟನಾಕಾರರನ್ನು ಬಂಧಿಸಿ ನಂತರ ಬಿಡುಗಡೆಗೊಳಿಸಬಹುದಿತ್ತು. ಸೆಕ್ಷನ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

144ರ ಉಲ್ಲಂಘನೆ ಮಾಡಲಾಗಿದೆ ಎಂದು ಪೊಲೀಸ್ ವಶಕ್ಕೆ ಪಡೆಯಲು ಅವಕಾಶವಿತ್ತು. ಅವರಿಗೆ ಎಚ್ಚರಿಕೆಯನ್ನು ನೀಡುವ ಸಲುವಾಗಿ ಕೆಂಪು ಬಾವುಟವನ್ನು ಪ್ರದರ್ಶನ ಮಾಡಬೇಕಿತ್ತು.

**(30) 18.02.2020 KG.BNS 03.50**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):–** ಮಾನ್ಯ ಸಭಾಪತಿಯವರೇ, ಪೊಲೀಸರ ಡ್ರಿಲ್ ಮ್ಯಾನುಯಲ್ ಪ್ರಕಾರ, ಲಾಠಿ ಪ್ರಹಾರ ಮಾಡುವ ಮೊದಲು ಎರಡು ಹಂತಗಳು ಇವೆ. ಮೊದಲನೆಯದಾಗಿ, ಲಾಠಿ ಪ್ರಹಾರ ಮಾಡುವ ಪೂರ್ವದಲ್ಲಿ ಎಚ್ಚರಿಕೆ ನೀಡುವುದು..

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ,.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ಅವರು yield ಆಗುವುದಾದರೆ ನೀವು ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಯಾರಿಗೂ yield ಆಗುವುದಿಲ್ಲ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ಅವರು yield ಆಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಮೊದಲು ಮಾತನಾಡಿ ಮುಗಿಸುತ್ತೇನೆ. ಆ ನಂತರ ಮಾನ್ಯ ಸದಸ್ಯರು ಮಾತನಾಡಲಿ. ನಿಯಮ 68 ರ ಕೆಳಗೆ convert ಆಗಿದೆ. I have not yielded.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಿಯಮಗಳನ್ನು ಓದುವುದು ಬೇಡ. ಮಂಗಳೂರಿನಲ್ಲಿ ಗಲಭೆಯನ್ನು ನಿಯಂತ್ರಣ ಮಾಡುವುದು ಪೊಲೀಸರ intention ಆಗಿತ್ತು. ಅವಕಾಶ ಕೊಟ್ಟಿದ್ದರೆ, ಪೊಲೀಸರು ಕ್ರಮ ಜರುಗಿಸದ್ದರೆ ನೂರಾರು ಜನ ಅಮಾಯಕರು ಸಾಯುತ್ತಿದ್ದರು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಪೊಲೀಸರ ಡ್ರಿಲ್ ಮ್ಯಾನುಯಲ್ ಪ್ರಕಾರ ಲಾಠಿ ಪ್ರಹಾರ ಮಾಡುವ ಮೊದಲು ಎರಡು ಹಂತಗಳಿವೆ. 1) ಎಚ್ಚರಿಕೆ ನೀಡುವುದು. 2) ಅಶ್ರುವಾಯು ಪ್ರಯೋಗದ ಮೂಲಕ ಗುಂಪನ್ನು ಚದುರಿಸುವ ಪ್ರಯತ್ನ ಮಾಡಬೇಕು. ಈ ಎರಡೂ ಹಂತಗಳನ್ನು ಬಿಟ್ಟು ಅಥವಾ ಕರ್ನಾಟಕ ಪೊಲೀಸ್ ಕಾಯಿದೆ ಕಲಂ.71 ರ ಪ್ರಕಾರ ದಸ್ತಗಿರಿ ಮಾಡಬೇಕು. ಇವರು warning ಕೊಟ್ಟಿಲ್ಲ. ಅಶ್ರುವಾಯು ಪ್ರಯೋಗ ಮಾಡಿಲ್ಲ. ಕರ್ನಾಟಕ ಪೊಲೀಸ್ ಕಾಯಿದೆ ಕಲಂ.71 ರ ಪ್ರಕಾರ ದಸ್ತಗಿರಿ ಮಾಡಿಲ್ಲ. ಒಮ್ಮೆಲೆ ಏಕಾಏಕಿ ಲಾಠಿಚಾರ್ಜ್ ಮಾಡಿದ್ದಾರೆ. ಆಗ ಜನರು ಆಕ್ರೋಶಗೊಂಡಿದ್ದಾರೆ. ಶಾಂತ ರೀತಿಯಿಂದ ನಡೆಯುತ್ತಿದ್ದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರತಿಭಟನೆಯಲ್ಲಿ ಪೊಲೀಸರು ಲಾಠಿಚಾರ್ಜ್ ಮಾಡಿದ್ದಾರೆ, ಆ ಮೂಲಕ ಹಿಂಸಾಚಾರಕ್ಕೆ ಪೊಲೀಸರು ತಿರುಗಿಸಿದ್ದಾರೆ. ಅದು ಪ್ರಾರಂಭ. ಅದು ಅವರನ್ನು provoke ಮಾಡಿದ ರೀತಿ. ಅವರಿಗೆ ಪ್ರತಿಭಟನೆ ಮಾಡಿ ಎಂದು ಪೊಲೀಸರೆ ಒಂದು ರೀತಿಯಲ್ಲಿ ಸಹಾಯ ಮಾಡಿದಂತೆ ಆಗಿದೆ. ಅವರಿಗೆ warning ಕೊಡಬಹುದು, tear gas ಪ್ರಯೋಗ ಮಾಡಬಹುದು. ಲಾಠಿಚಾರ್ಜ್ ಮಾಡಬಹುದು, ಆಮೇಲೆ ಕಲಂ.71 ರಡಿ ಅರೆಸ್ಟ್ ಮಾಡಬಹುದು. ಇಷ್ಟೆಲ್ಲಾ means ಇವೆ. ಪರಿಸ್ಥಿತಿ ಕೈಮೀರಿ ಹೋದಮೇಲೆ ಅತ್ಯಂತ ಬೇಜವಾಬ್ದಾರಿಯಿಂದ ಗೋಲಿಬಾರ್ ನಡೆಸಲಾಗಿದೆ. ಪೊಲೀಸ್ ಠಾಣೆಯನ್ನು ಸುಡುವುದಕ್ಕೆ ಬಂದಿದ್ದರು ಎಂದು ಒಂದು ಎಫ್.ಐ.ಆರ್., ಹಾಕಿದ್ದಾರೆ. ಬಹಳಷ್ಟು firing incident ಗಳಲ್ಲಿ ವಾಹನಗಳಿಗೆ ಡ್ಯಾಮೇಜ್ ಮಾಡುತ್ತಾರೆ. ಪೊಲೀಸರು ತಮ್ಮ ಜೀಪನ್ನು ತಾವೇ ... ಅಂದರೆ, in order to create evidence such acts are done.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.,

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಇವತ್ತು ಮಾತನಾಡಿ ಮುಗಿಸುತ್ತೇನೆ. ನನಗೆ ಇವತ್ತು ಆರೋಗ್ಯ ಸರಿ ಇಲ್ಲ. Today, I am not feeling well.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು yield ಆಗುತ್ತಾರೆಂದರೆ, ಒಂದು ನಿಮಿಷ ಮಾತನಾಡುತ್ತೇನೆ..

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿ ಮುಗಿಸುತ್ತೇನೆ. ಆ ನಂತರ ಅವರು ಮಾತನಾಡಲಿ. ಮಂಗಳೂರು ಪೊಲೀಸ್ ಆಯುಕ್ತರು ಪೊಲೀಸರ ಡ್ರಿಲ್ ಮ್ಯಾನುಯಲ್ ಓದಿಲ್ಲವೆಂದು ನನಗೆ ಅನಿಸುತ್ತದೆ. ಇದು ನನ್ನ feeling. ಇಂತಹ ಬೇಜಬ್ದಾರಿ, ದುರಹಂಕಾರಿ ಅಧಿಕಾರಿಗಳಿಗೆ ಅಧಿಕಾರ ನೀಡಿದರೆ ಇಂತಹ ಅನಾಹುತ ಆಗಿರುವುದು ಸರಿ. ಇದಕ್ಕೆ ಮಂಗಳೂರಿನ ಗೋಲಿಬಾರ್ ಘಟನೆಯೇ ಸಾಕ್ಷಿ. ಗೋಲಿಬಾರ್‌ನಲ್ಲಿ ಇಬ್ಬರು ಸತ್ತಿದ್ದಾರೆ. ಈ ಘಟನೆಯಲ್ಲಿ 7 ಜನರು ಗಾಯಗೊಂಡಿದ್ದಾರೆ. ಅದರಲ್ಲಿ ಒಬ್ಬನ ಸ್ಥಿತಿ ಚಿಂತಾಜನಕವಾಗಿದೆ. ಪೊಲೀಸ್ ಆಯುಕ್ತರು, Police Drill Manual and before firing ಏನೇನು ನಿಯಮಗಳಿವೆ, ಈ ನಿಯಮಗಳನ್ನು ಸರಿಯಾಗಿ ಅಧ್ಯಯನ ಮಾಡಿದ್ದರೆ, ಈ ರೀತಿ ಆಗುತ್ತಿರಲಿಲ್ಲ. ‘Minimum Force’ ಅಂದರೆ, ಯಾವುದೇ ಗುಂಪನ್ನು ಚದುರಿಸಲು, ಗುಂಪಿನಿಂದ ಜನರ ಪ್ರಾಣ ಹಾಗೂ ಆಸ್ತಿಪಾಸ್ತಿಗೆ ಅಪಾಯವಿದ್ದಲ್ಲಿ ಕನಿಷ್ಠ ಬಲ ಪ್ರಯೋಗ ಬಳಸಬೇಕು. ಗುಂಡು ಹಾರಿಸಿದರೂ ಕೆಳಮಟ್ಟದಲ್ಲಿ ಅಂದರೆ ಕಾಲನ್ನು ಗುರಿಯಾಗಿಸಿ ಹಾರಿಸಬೇಕು.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಎದೆಯ ಭಾಗಕ್ಕೆ ಅಥವಾ ತಲೆಗೆ ಗುಂಡು ಹಾರಿಸಿ ಕೊಲ್ಲುವುದಲ್ಲ. ಗೋಲಿಬಾರ್ ಆದ ನಂತರ ಪೊಲೀಸರು ಏನು ಮಾಡಬೇಕು ಎನ್ನುವ ಕೆಲವು ನಿಯಮಗಳು ಇವೆ. ಅವು ಈ ಕೆಳಗಿನಂತೆ ಇವೆ:

*1) Tip-offs about criminal activities must be recorded either in writing or in electronic form.*

*2) If pursuant to a tip-off the police uses firearms and this results in death of a person, then an FIR initiating proper criminal investigation must be registered.*

*3) Investigation into such death will be done by an independent CID team which has to fulfill eight minimum investigation requirements.*

*4) Mandatory magisterial inquiry into all cases of encounter deaths.*

*5) The NHRC or State Commission must be immediately informed of the encounter death.*

*6) Medical aid to injured victim/criminal and a magistrate should record his statement.*

*7) Ensure forwarding FIR and police diary entries to court without delay.*

*8) Expeditious and proper trial.*

*9) Informing next of kin of the dead alleged criminal.*

*10) Bi-annual statements of all encounter killings to be sent to the NHRC and State Commissions by a set date in a set format."*

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ಅವರಿಂದ ಪೊಲೀಸ್ ನಿಯಮಗಳ ಬಗ್ಗೆ ಎಷ್ಟು ಹೊತ್ತು ಪಾಠವನ್ನು ಕೇಳಬೇಕು. ಅವರು ಘಟನೆಯ ಬಗ್ಗೆ ಹೇಳಲಿ. ಮಾನ್ಯ ಸದಸ್ಯರು ಏನು ತಪ್ಪಾಗಿದೆ, ಏನು ಉಲ್ಲಂಘನೆಯಾಗಿದೆ ಎಂದು ಹೇಳಲಿ..

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ನಾನು ಘಟನೆಯ ಬಗ್ಗೆ ಹೇಳುತ್ತಿದ್ದೇನೆ.,

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರು ವಿವರವಾಗಿ ಹೇಳುವಂತಹ ಉದ್ದೇಶ ಏನೆಂದರೆ, ಇಂತಹ ಘಟನೆಗಳಲ್ಲಿ ಪೊಲೀಸರು ಏನು ಕ್ರಮ ತೆಗೆದುಕೊಳ್ಳಬೇಕಾಗಿತ್ತು, ಏನು ಕ್ರಮ ತೆಗೆದುಕೊಂಡಿಲ್ಲ. ಆ ಕಾರಣಕ್ಕೆ ಏನಾಗಿದೆ ಎನ್ನುವಂತಹ ವಿಚಾರವನ್ನು ವಿವರವಾಗಿ ವಿಶ್ಲೇಷಣೆ ಮಾಡಿ ಅದಕ್ಕೆ ಕಾನೂನನ್ನು ರೆಫರ್ ಮಾಡಿ ಹೇಳುತ್ತಿದ್ದಾರೆ..

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ:–** ಮಾನ್ಯ ಸಭಾಪತಿಯವರೇ, ಅವರು ಘಟನೆಯ ಬಗ್ಗೆ ಮಾತ್ರ ಹೇಳಲಿ..

**(ಗೊಂದಲ)**

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಹಿರಿಯರು. ಅವರಿಗೂ ಸಹ ಸದನದ ಸಮಯವನ್ನು ಹಾಳು ಮಾಡಬಾರದು ಎಂಬುದರ ಬಗ್ಗೆ ಅರಿವಿದೆ..

**(ಗೊಂದಲ)**

**Sri S.R.PATIL**:- "*Disciplinary action against and suspension of a police officer found guilty of wrongful encounter; Compensation scheme under the CrPC to be followed for awarding it to kin of dead victim.*" This is very important; "*Police Officers must surrender their weapons for investigation, subject to rights under Article 20 of the Constitution. Also intimate family of accused police officer and offer services of lawyer/counsellor.*"

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಅವರ ಸರ್ಕಾರ ಇದ್ದಾಗ 26 ಜನರು ಸತ್ತಿದ್ದಾರೆ. ಆಗ ಈ ನಿಯಮಗಳು ಎಲ್ಲಿ ಇದ್ದವು? ಈಗ ಪೊಲೀಸ್ ನಿಯಮಗಳು ಬಂದಿವೆ.,

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನನ್ನ ಮಾತುಗಳು ಅವರಿಗೆ ಬಹಳ ಕರ್ಕಶ ಎನಿಸಿವೆಯೇ? ಬಿಜೆಪಿಯವರ ಹತ್ತಿರ ಹೇಳಿಕೊಳ್ಳುವುದಕ್ಕೆ ಏನೂ ಉಳಿದಿಲ್ಲ. ಅವರಿಗೆ defend ಮಾಡಿಕೊಳ್ಳಲು ಏನೂ ಇಲ್ಲ. ಅದೇ ದಿವಸ ಗುಲ್ಬರ್ಗಾದಲ್ಲಿ ಸಾವಿರಾರು ಜನರು ಸೇರಿ ಪ್ರತಿಭಟನೆ ಮಾಡಿದ್ದಾರೆ. ಅಲ್ಲಿ ಯಾವುದೇ ರೀತಿಯ ಅವಘಡ ನಡೆದಿಲ್ಲ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರಿ ಬಸವರಾಜ ಬೊಮ್ಮಾಯಿ(ಗೃಹ ಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್. ಪಾಟೀಲ್‌ರವರು ಬಹಳ ಹಿರಿಯ ಸದಸ್ಯರು ಮತ್ತು ನುರಿತ ವಕೀಲರು ಎಂದು ನಮಗೆ ಗೊತ್ತು. ಹಾಗಾಗಿ, ಅವರು ಕಾನೂನಿನ ಬಗ್ಗೆ ನಮಗೆ ತಿಳುವಳಿಕೆ ಹೇಳುವುದಕ್ಕೆ ಬಹಳಷ್ಟು ಪ್ರಯತ್ನ ಪಡುತ್ತಿದ್ದಾರೆ. ನಾವು ಅದನ್ನು ಸ್ವಾಗತ ಮಾಡುತ್ತೇವೆ. ಕಾನೂನು ಸುವ್ಯವಸ್ಥೆ ಕಾನೂನಿನ ಅಡಿಯಲ್ಲಿ ಆಗಬೇಕು. ಉಲ್ಲಂಘನೆ ಆಗಿರುವ ಬಗ್ಗೆ ಅವರು ಪ್ರಸ್ತಾಪವನ್ನು ಮಾಡಿದ್ದಾರೆ.

**(31)18-02-2020(4-00)ಎಂವಿ-ಬಿಎನ್‌ಎಸ್**

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು...):-**

ನಾನು ಪ್ರತಿಯೊಂದು ವಿಚಾರಕ್ಕೂ ಉತ್ತರವನ್ನು ಕೊಡುತ್ತೇನೆ. ಈ ಸರ್ಕಾರದಲ್ಲಿ ಪೊಲೀಸ್ ಇಲಾಖೆ ಬಹಳ ಸಮರ್ಥವಾಗಿದೆ ಮತ್ತು ನಿಭಾಯಿಸುವ ಶಕ್ತಿ ಕೂಡ ಇದೆ. ನಾವು ಕಾನೂನು ಪ್ರಕಾರವೇ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಅದು ಆಗಲೇಬೇಕು. It is your duty.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಇದನ್ನು ಮುಗಿಸುತ್ತೇನೆ. ರಾಜ್ಯದಲ್ಲಿ ಗೋಲಿಬಾರ್ ಬಗ್ಗೆ ತನ್ನದೇ ಆದ ಇತಿಹಾಸವಿದೆ. ಆದುದರಿಂದ ಪ್ರತಿಯೊಂದು ಘಟನೆಯಿಂದ ನಾವು ಕಲಿಯಬೇಕಾಗಿರುವಂತಹ ಪಾಠವೂ ಕೂಡ ಇದೆ. ಇದೇನು ಮೊದಲನೇ ಬಾರಿಗೆ ಆಗಿರುವಂಥದ್ದಲ್ಲ. ಪ್ರತಿಯೊಂದು ಗೋಲಿಬಾರಿನಲ್ಲೂ ಅದರದೇ ಆದಂತಹ ಕಥೆ ಮತ್ತು ಹಿನ್ನೆಲೆ ಹಾಗೂ ಸನ್ನಿವೇಶ ಮತ್ತು ಆ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ground level ನಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿರುವುದು ಇದೆ. ಹೀಗಾಗಿ ಹಲವಾರು ಘಟನೆಗಳು ನಡೆದಿರುವಂಥದ್ದಕ್ಕೆ ತದ್ವಿರುದ್ಧವಾದಂತಹ ನಿಲುವುಗಳನ್ನು ನಾವು ತೆಗೆದುಕೊಳ್ಳಬಾರದು. ಇವತ್ತು ಯಾರು ಹಿಂಸಚಾರದಲ್ಲಿ ತೊಡಗಿದ್ದಾರೆ ಮತ್ತು ಯಾರು ಆಸ್ತಿ-ಪಾಸ್ತಿಗಳನ್ನು ಹಾನಿ ಮಾಡುತ್ತಾರೆ, ಅಂತಹವರಿಗೆ ಯಾವ ರೀತಿ ನಿಯಂತ್ರಣ ಮಾಡಬೇಕು ಎನ್ನುವಂಥದ್ದು, ನೀವು ಯಾವ ಕಾನೂನಿನಲ್ಲಿ ಹೇಳಿದ್ದೀರಿ, ಅದೇ ಕಾನೂನಿನಲ್ಲಿ ಕೂಡ ಎಲ್ಲರೂ ಇದ್ದರು. Sedition Clause ನಿಂದ ಹಿಡಿದು Preventive Clause of Section 144 ವರೆಗೂ ಆ ಕಾನೂನನ್ನು ಯಾವಾಗ ಜಾರಿ ಮಾಡಬೇಕು ಮತ್ತು ಹೇಗೆ ಜಾರಿ ಮಾಡಬೇಕು ಎಂದು ಬಹಳ ಸ್ಪಷ್ಟವಾಗಿದೆ. ಯಾವ್ಯಾವ ಸರ್ಕಾರ ಯಾವ್ಯಾವ ರೀತಿಯಲ್ಲಿ ಇದನ್ನು ಉಪಯೋಗ ಮಾಡಿದೆ ಎಂಬುದು ಸಹ ನಮಗೆ ಗೊತ್ತಿದೆ. ಯಾವ ರೀತಿಯಾಗಿ ಕಾನೂನುಗಳು ಇವೆ. ನಾವು ಆ ಕಾನೂನುಗಳನ್ನು ಸರಿಯಾಗಿ ಉಪಯೋಗ ಮಾಡಿದ್ದೇವೆಯೇ ಎನ್ನುವಂಥದ್ದಕ್ಕೆ ವಿರೋಧ ಪಕ್ಷದವರು ಬೆಳಕು ಚೆಲ್ಲಿದರೆ, ಅದಕ್ಕೆ ನಾವು ಉತ್ತರ ಕೊಡುವುದಕ್ಕೆ ಸಾಧ್ಯವಿದೆ. ದಯವಿಟ್ಟು ಅದನ್ನು ಮಾಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದು ಏನೆಂದರೆ, before firing and after firing ಬಗ್ಗೆ ಏಕೆ ಹೇಳಿದೆ ಎಂದರೆ, ಇಲಾಖೆಯವರು ಈ ನಿಯಮಗಳನ್ನು ಪಾಲನೆ ಮಾಡಿಲ್ಲ ಎನ್ನುವ ಸಲುವಾಗಿ ಇದನ್ನು ನಾನು ಮಾತನಾಡಿದ್ದೇನೆ. ನನಗೆ ಗೃಹಮಂತ್ರಿಗಳ ಮೇಲೆ ಗೌರವವಿದೆ. ನಾನು ಅವರ efficiency ಯನ್ನು question ಮಾಡುವುದಿಲ್ಲ.

**ಶ್ರೀ ಎಸ್.ಸುರೇಶ್ ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ವಿಷಯ ಪೊಲೀಸ್‌ನವರಿಗೆ ಸಂಬಂಧಪಟ್ಟಿದ್ದು ಹಿರಿಯರಾದ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಏಕೆ ಮಾತನಾಡುತ್ತಾರೆ?

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ವಿವರವಾಗಿ ಹೇಳುತ್ತಿದ್ದಾರೆ. We fully agree with it. ಆದರೆ, ಒಂದು ಎ.ಸಿ. ರೂಮ್‌ನಲ್ಲಿ ಕುಳಿತುಕೊಂಡು ರೂಲ್ಸ್‌ಗಳನ್ನು ಮಾತನಾಡುವುದು ಮತ್ತು 400 ಕಿಲೋಮೀಟರ್ ದೂರದಲ್ಲಿರುವ ಈ ವಿಷಯವನ್ನು ಮಾತನಾಡುವುದು ಬಹಳ ಸುಲಭ. ಆ ಸಮಯದಲ್ಲಿ ರೂಲ್ಸ್ ಅನ್ನು ನೋಡಿಕೊಂಡು ಹೋದರೆ, ಈಗ ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರು ಹೇಳಿದರು, ಆಕಸ್ಮಾತ್ ಏನಾದರೂ ಒಂದು ಕ್ಷಣ ವಿಳಂಬವಾಗಿದ್ದರೆ, ಅದೆಷ್ಟು ಅನಾಹುತವಾಗುತ್ತಿತ್ತೋ ಎಷ್ಟು ಹೆಣಗಳು ಬೀಳುತ್ತಿತ್ತೋ ಗೊತ್ತಿಲ್ಲ.  ಪ್ರತಿಪಕ್ಷದ ನಾಯಕರಾದ ತಾವು ಸಹ ಸರ್ಕಾರ ನಡೆಸಿದ್ದೀರಿ.  ನಾವು ಯಾರೂ ಕೂಡ Police Force morale down ಮಾಡುವುದಕ್ಕೆ ಮತ್ತು ಅದನ್ನು ಕೆಳಗಡೆ ತರುವುದಕ್ಕೆ ನಮಗ್ಯಾರಿಗೂ ಕೂಡ ಹಕ್ಕಿಲ್ಲ.  ನಾವೆಲ್ಲರೂ ಸಹ ಅವರ ಪರಿಸ್ಥಿತಿಯನ್ನು ನೋಡಬೇಕು. On the spot ಪರಿಸ್ಥಿತಿ ಏನು ಎಂದು ನೋಡಬೇಕು.  ಕ್ರಿಕೆಟ್‌ನ ಗ್ಯಾಲರಿನಲ್ಲಿ ಕುಳಿತುಕೊಂಡು ನೋಡುವುದು ಸುಲಭ. ಅವರು ಹಾಗೆ ಹೊಡೆಯಬೇಕಾಗಿತ್ತು, ಹೀಗೆ ಹೊಡೆಯಬೇಕಾಗಿತ್ತು ಎಂದು ಮತ್ತು ಅವರು ಆ ರೀತಿ ಏಕೆ ಹೊಡೆಯಲಿಲ್ಲವೆಂದು ಹೇಳುತ್ತೇವೆ. ಆದರೆ, ಅಲ್ಲಿನ ಪಿಚ್ ಹೇಗೆ ಇದೆ ಎಂದು ಅಲ್ಲಿದ್ದವರಿಗೆ ಮಾತ್ರ ಗೊತ್ತಿರುತ್ತದೆ. ಅದಕ್ಕೋಸ್ಕರ ನಿಮಗೆ ಗೌರವ ಕೊಟ್ಟು ಕೇಳಿಕೊಳ್ಳುತ್ತೇನೆ. ನೀವು ಏನಾದರೂ ಮಾತನಾಡಿ. ಆದರೆ, ನಮ್ಮ ಪೊಲೀಸ್ ಪಡೆ ಏನಿದೆ, ಅದರ ನೈತಿಕ ಶಕ್ತಿಯನ್ನು ಕುಂದಿಸುವಂತಹ ಕೆಲಸವನ್ನು ನಾವು ಯಾರು ಮಾಡುವುದು ಬೇಡ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದು ಇನ್ನು ಇದೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ,...

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಉಪ ಸಭಾಪತಿಯವರು:-** ಮಾನ್ಯ ಡಿ'ಸೋಜಾರವರೇ, ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ನೀವು ಮಾತನಾಡುವುದು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ ಮಾತನಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಐವನ್ ಡಿ'ಸೋಜಾರವರೇ ಈಗ ನೀವು ಮಾತನಾಡಬೇಡಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಏನು ಹೇಳಿದರು ಎಂದರೆ, ಆ ಸಂದರ್ಭಕ್ಕೆ ತಕ್ಕಂತೆ ಪೊಲೀಸರು act ಮಾಡಬೇಕೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ನೀವು ಏನು ಹೇಳುವುದಕ್ಕೆ ಹೊರಟ್ಟಿದ್ದೀರಿ. ಅವರೆಲ್ಲರೂ ಕಲ್ಲು ಬೀಸಾಡಿದರು. There was a fight between the protestors and the police, not anybody else. Third party ಯಾರೂ ಇರಲಿಲ್ಲ. ಅದು ಕೋಮುಗಲಭೆ ಅಲ್ಲ ಮತ್ತು ಸಂಘರ್ಷ ಅಲ್ಲ. ಅವರು protest ಮಾಡುವುದಕ್ಕೆ ಬಂದಂತಹವರು, ಅವರು protest ಮಾಡುವುದಕ್ಕೆ ಬಂದಾಗ ಕಲ್ಲು, ಬಾಟಲಿ, ಸೋಡಾ ಬಾಟಲಿ ಹಿಡಿದುಕೊಂಡು ಬರುತ್ತಾರೆಯೇ?

**ಉಪ ಸಭಾಪತಿಯವರು:-** ಮಾನ್ಯ ಡಿ'ಸೋಜಾರವರೇ ನಿಮಗೆ ಅವಕಾಶ ಬಂದಾಗ ನೀವು ಇದನ್ನೆಲ್ಲಾ ಮಾತನಾಡುವುದು.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ತಮ್ಮ ಸ್ಥಾನದಲ್ಲಿಯೇ ನಿಂತುಕೊಂಡು ಗಲಭೆಗೆ ಸಂಬಂಧಪಟ್ಟ ಕೆಲವು ಛಾಯಾಚಿತ್ರಗಳನ್ನು ಪ್ರದರ್ಶಿಸಿದರು)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಚಿತ್ರದಲ್ಲಿ ಪೊಲೀಸ್‌ನವರು ಬಾಟಲಿ ಮತ್ತು ಕಲ್ಲನ್ನು ಹಿಡಿದುಕೊಂಡಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಂ.ನಾರಾಯಣ ಸ್ವಾಮಿಯವರು ತಮ್ಮ ಸ್ಥಾನದಲ್ಲಿಯೇ ನಿಂತುಕೊಂಡು ಗಲಭೆಗೆ ಸಂಬಂಧಪಟ್ಟ ಕೆಲವು ಛಾಯಾಚಿತ್ರಗಳನ್ನು ಪ್ರದರ್ಶಿಸಿದರು)**

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸಭಾನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ತಮ್ಮ ಸ್ಥಾನದಲ್ಲಿಯೇ ನಿಂತುಕೊಂಡು ಗಲಭೆಗೆ ಸಂಬಂಧಪಟ್ಟ ಕೆಲವು ಛಾಯಾಚಿತ್ರಗಳನ್ನು ಪ್ರದರ್ಶಿಸಿದರು)**

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ,...

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ,...

**ಉಪ ಸಭಾಪತಿಯವರು:-** ಮಾನ್ಯ ಡಿ'ಸೋಜಾರವರೇ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ತಾವು ಮಾತನಾಡಿ ಈಗ ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಚಿತ್ರದಲ್ಲಿ ಆರ್.ಎಸ್.ಎಸ್.ನ ನಾಯಕರು ಮತ್ತು ಬಿ.ಜೆ.ಪಿ. ಕಾರ್ಯಕರ್ತರು ಪೊಲೀಸ್ ವೇಷ ಹಾಕಿಕೊಂಡಿದ್ದಾರೆ.

**(ಗೊಂದಲ)**

**ಉಪ ಸಭಾಪತಿಯವರು:–** ಈಗ ಮಾನ್ಯ ಸಭಾ ನಾಯಕರು ಎದ್ದು ನಿಂತಿದ್ದಾರೆ, ಮಾನ್ಯ ಸದಸ್ಯರುಗಳು ಕುಳಿತುಕೊಳ್ಳುವುದು.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರಿಗೆ ನಾಚಿಕೆಯಾಗಬೇಕು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಅಲ್ಲಿ ಗಲಾಟೆ ಮಾಡುವುದಕ್ಕೆ ಬಂದಿದ್ದಾರೆ, ಪೂರ್ವ ನಿಯೋಜಿತವಾದಂತಹ ಉದ್ದೇಶವಿದೆ. ಆಗ ಪೊಲೀಸರು ಅವರ ಮೊಣಕಾಲಿಗೆ ಹೊಡೆಯಬೇಕೋ ಅಥವಾ ಅವರ ಪಾದಕ್ಕೆ ಹೊಡೆಯಬೇಕೋ ಎಂದು ರೂಲ್ ಪುಸ್ತಕವನ್ನು ನೋಡಿಕೊಂಡು ಹೊಡೆಯಬೇಕೆ?

**(ಗೊಂದಲ)**

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೇ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಈಗ ಅಲ್ಲಿ ಯಾರೇ ಇದ್ದರೂ ಸಹ ಅದನ್ನೇ ಮಾಡುತ್ತಿದ್ದರು.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರಾದ ಡಿ'ಸೋಜಾರವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ ಮಾತನಾಡುವುದು. ಇನ್ನು ಸಮಯವಿದೆ. ತಾವು ದಯವಿಟ್ಟು ಕುಳಿತುಕೊಳ್ಳುವುದು.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಮ್ಮ ವಿರೋಧ ಪಕ್ಷದ ನಾಯಕರು ಅಲ್ಲಿ ಏನು ಗೋಲಿಬಾರ್ ನಡೆದಂತ ಸಂದರ್ಭದಲ್ಲಿ ತೆಗೆದ ಛಾಯ ಚಿತ್ರವನ್ನು ನೀಡಿದ್ದಾರೆ ಮತ್ತು ಸಭಾ ನಾಯಕರು ಸಹ ಅದರ ಚಿತ್ರವನ್ನು ನೀಡಿದ್ದಾರೆ. ಆ ಎರಡು ಚಿತ್ರಗಳನ್ನು ತೆಗೆದುಕೊಂಡು, ತಾವು ಇದಕ್ಕೆ ಒಂದು ಸದನ ಸಮಿತಿ ಮಾಡಿ. ಯಾವುದು ಸರಿಯಿದೆ ಮತ್ತು ಯಾವುದು ತಪ್ಪಿದೆ ಎಂದು ಅದನ್ನು enquiry ಮಾಡಿಸಿ. ಸರ್ಕಾರ ಸರಿಯಾಗಿ ಹೇಳುತ್ತಿದೆಯೋ ಇಲ್ಲವೋ, ಆ ಫೋಟೋ ಸರಿ ಇದೆಯೋ ಇಲ್ಲವೋ ಅಥವಾ ನಾವು ಕೊಟ್ಟ ಫೋಟೋ ಸರಿ ಇದೆಯೋ ಇಲ್ಲವೋ ಎಂದು ಅದರ ಬಗ್ಗೆ ತನಿಖೆಯಾಗಲಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(32) 18.02.2020 04.10 LL-KS**

**ಉಪ ಸಭಾಪತಿಯವರ ಉಪಸ್ಥಿತಿ**

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಈ ಪ್ರಕರಣದ ಬಗ್ಗೆ ರಾಜ್ಯ ಸರ್ಕಾರವೇ ತನಿಖೆ ಮಾಡಲಿ.

**(ಗೊಂದಲ)**

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರನ್ನು ಆಡಳಿತ ಪಕ್ಷದವರು ಮಂತ್ರಿಯನ್ನಾಗಿ ಮಾಡಲಿ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರು ಬುದ್ಧಿವಂತರಾಗಿದ್ದು, ನಮ್ಮಂತಹ ದಡ್ಡರ ಮಾತನ್ನು ಸಹ ಸ್ವಲ್ಪ ಕೇಳಬೇಕು.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಲ್ಪ ವೇಗವಾಗಿ ಮಾತನಾಡಿದ್ದರೆ, ಈ ವಿಷಯದ ಬಗ್ಗೆ ತಮ್ಮ ಮಾತುಗಳನ್ನು ಮುಗಿಸಬಹುದಾಗಿತ್ತು. **(ಗೊಂದಲ)** ಮಾನ್ಯ ಗೃಹ ಸಚಿವರು ವಿರೋಧ ಪಕ್ಷದ ನಾಯಕರ ಪ್ರಶ್ನೆಗಳಿಗೆ ಉತ್ತರ ಹೇಳುವುದಕ್ಕೆ ಸಮರ್ಥರಾಗಿದ್ದಾರೆ. ಆದರೂ, ಆಡಳಿತ ಪಕ್ಷದವರಾದ ತಾವುಗಳು ಏತಕ್ಕೆ ತಲೆಬಿಸಿ ಮಾಡುತ್ತಿದ್ದೀರಿ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಏನು ಉತ್ತರವನ್ನು ಹೇಳುತ್ತಾರೋ ಅದನ್ನು ಹೇಳಲಿ. ಹಾಗೆಯೇ, ಆಡಳಿತ ಪಕ್ಷದ ನಾಯಕರುಗಳು ಮಾತನಾಡದೇ, ಮಾನ್ಯ ಸಚಿವರು ಒಬ್ಬರೇ ಉತ್ತರ ನೀಡಲಿ.

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್. ಪಾಟೀಲರು ಮಾತನಾಡುವಾಗ ಗಲಾಟೆ ಇರುವುದಿಲ್ಲ. ಅದಕ್ಕಾಗಿ, ಅವರು ಮಾತನಾಡುವುದರಲ್ಲಿ ನಮಗೆ ಅಭ್ಯಂತರವಿಲ್ಲ. ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರಿಗೆ ನಾನು ಹೇಳುವುದೇನೆಂದರೆ, ಅವರ ಪಕ್ಷದವರು ಕೂಡ ಹಲವಾರು ಸರ್ಕಾರ ನಡೆಸಿದ್ದಾರೆ. ಅದೇ ರೀತಿ ನಾವು ಕೂಡ ಸರ್ಕಾರ ನಡೆಸಿದ್ದೇವೆ. ಅದರಂತೆ, ಯಾವ್ಯಾವ ಗೋಲಿಬಾರ್ ಪ್ರಕರಣದಲ್ಲಿ ಯಾವ್ಯಾವ ಸದನ ಸಮಿತಿ ಆಗುತ್ತದೆ? **(ಗೊಂದಲ)** ಗೋಲಿಬಾರ್ ಆದಂತಹ ಸಂದರ್ಭದಲ್ಲಿ ಅದರದ್ದೇ ಆದಂತಹ procedures ಇರುತ್ತದೆ, such as Magisterial Inquiry, CID (Criminal Investigation Department) inquiry and as per NHRC (National Human Rights Commission) procedures ಏನಿದೆ ಅದನ್ನೆಲ್ಲಾ ಕಾನೂನು ಪ್ರಕಾರ ಮಾಡಬೇಕಾಗುತ್ತದೆ. ಆದುದರಿಂದ, ಇಲ್ಲಿರುವಂತಹ ಎರಡೂ ಕಡೆಯ ಚಿತ್ರಗಳು, is already under the Magisterial Inquiry. ಅಲ್ಲಿ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸತ್ಯಾಂಶಗಳು ಹೊರಬರುತ್ತವೆ. ಏತಕ್ಕೆ ಆತುರಪಡುತ್ತಿದ್ದಾರೆ? ಪ್ರತಿಪಕ್ಷದವರು ಇನ್ನೂ ಯಾವುದೇ ಸಾಕ್ಷಿಗಳನ್ನು ನೀಡಿದರೂ ಸಹ ನಾವು ಅದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಇದರಲ್ಲಿ ಯಾರನ್ನೂ ಮುಚ್ಚಿಡುವಂತಹ ಪರಿಸ್ಥಿತಿ ಇರುವುದಿಲ್ಲ. ಆದುದರಿಂದ, ಇದರಲ್ಲಿ ರಾಜಕಾರಣ ಬೆರಸಬೇಡಿ.

**Sri S.R. PATIL:-** No, we will never mix Politics. I can assure you that.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾವು ಇದರಲ್ಲಿ ಯಾವುದೇ ರಾಜಕಾರಣ ಮಾಡುತ್ತಿಲ್ಲ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದಂತಹ ಮಾತುಗಳನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ, ನಮ್ಮ ಆಸೆ ಏನೆಂದರೆ, ಇದರಲ್ಲಿ ನ್ಯಾಯಯುತವಾದಂತಹ ತನಿಖೆ ಆಗಬೇಕು ಮತ್ತು ಈ ಪ್ರಕರಣದಲ್ಲಿ ಯಾರು ಅಪರಾಧಿಗಳಿದ್ದಾರೆ ಅಥವಾ ಪೊಲೀಸರು ಯಾರೇ ಆಗಿದ್ದರೂ ಸಹ ಅವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕೆಂಬುದು ನಮ್ಮ ಕಾಳಜಿಯಾಗಿದೆ. ಏಕೆಂದರೆ, ಇದರಲ್ಲಿ ಪಾಪ ಅಮಾಯಕರು ಸತ್ತಿದ್ದಾರೆ, ಅವರಿಗೆ ಸರ್ಕಾರದಿಂದ ಬಿಡುಗಡೆಯಾದಂತಹ ಪರಿಹಾರ ಹಣವನ್ನೂ ಸಹ ವಾಪಸ್ಸು ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ನಮ್ಮ ಕಾಳಜಿ ಇದೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಉತ್ತರ ಕೊಡುವಂತಹ ಸಂದರ್ಭದಲ್ಲಿ ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇನೆ. ನಾನು ಪದೇ ಪದೇ ಎದ್ದು ನಿಲ್ಲುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ, ಯಾರು ಅಮಾಯಕರು ಅಥವಾ ಯಾರು ಅಮಾಯಕರಲ್ಲ ಎನ್ನುವುದು ಕೂಡ ತನಿಖೆಯಲ್ಲಿ ಗೊತ್ತಾಗುತ್ತದೆ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸಚಿವರು ಈ ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯ ವಿರೋಧ ಪಕ್ಷದ ನಾಯಕರು ಈ ಸಭೆಗೆ ತುಂಬಾ ವಿವರವಾದಂತಹ ವಿಚಾರವನ್ನು ಹೇಳುತ್ತಿದ್ದೀರಿ. ಅದನ್ನು ಸಭಾ ನಾಯಕರಾದಿಯಾಗಿ ಮಾನ್ಯ ಗೃಹ ಸಚಿವರು ಕೇಳುತ್ತಿದ್ದಾರೆ. ಅಲ್ಲದೇ, ಗೃಹ ಸಚಿವರು ತಾವು ಕೇಳಿದಂತಹ ಪ್ರಶ್ನೆಗಳಿಗೆ ಸವಿಸ್ತಾರವಾದಂತಹ ಉತ್ತರ ಕೊಡುತ್ತಾರೆಂದು ಮುಕ್ತವಾಗಿ ಈ ಸದನದಲ್ಲಿ ಹೇಳಿದ್ದಾರೆ. ಆದುದರಿಂದ, ತಾವು ಏತಕ್ಕೆ ಗಡಿಬಿಡಿ ಮಾಡುತ್ತಿದ್ದೀರಿ? ಜೊತೆಗೆ, ವಿರೋಧ ಪಕ್ಷದವರ ಪ್ರಶ್ನೆಗಳಿಗೆ ಉತ್ತರ ಹೇಳಲು ಆಡಳಿತ ಪಕ್ಷದಲ್ಲಿ ಮಾನ್ಯ ಸಚಿವರು ಸಮರ್ಥರಾಗಿದ್ದಾರೆ. ತಾವೆಲ್ಲರೂ ದಯಮಾಡಿ ಅವರಿಗೆ ಸಹಕರಿಸಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, I feel that the Hon'ble Home Minister is competent. ಮಾನ್ಯ ಗೃಹ ಮಂತ್ರಿಗಳ ಮೇಲೆ ನನಗೆ ವಿಶ್ವಾಸವಿದೆ. ಆದರೆ, ಹಿಂದೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕುಳಿತಿರುವವರು ಅವರಿಗೆ ಸಹಾಯ ಮಾಡುವುದಕ್ಕೆ ಈ ರೀತಿ ಮಾಡುತ್ತಿದ್ದಾರೋ ಅಥವಾ ಏತಕ್ಕೆ ಮಾಡುತ್ತಿದ್ದಾರೋ ಅದು ನನಗೆ ಅರ್ಥವಾಗುತ್ತಿಲ್ಲ. ಮುಂದುವರೆದು, ಅದೇ ದಿವಸ ಗುಲ್ಬರ್ಗಾ ಮತ್ತು ಬೆಂಗಳೂರಿನಲ್ಲಿ ಸಾವಿರಾರು ಜನ ಸೇರಿ ಪ್ರತಿಭಟನೆ ಮಾಡಿದರೆ, ಅಲ್ಲಿ ಒಂದು ಸಣ್ಣ ಅವಘಡ ಕೂಡ ಆಗಲಿಲ್ಲ. ಆದರೆ, ಮಂಗಳೂರಿನಲ್ಲಿ ಆಯಿತು. ಸ್ವತಃ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು ಯಾವುದೇ ಬಲ ಪ್ರಯೋಗಿಸದೇ ಪ್ರತಿಭಟನೆಗಳನ್ನು ನಿಭಾಯಿಸಲು ಸೂಚನೆ ನೀಡಲಾಗಿದೆ ಎಂದು ಹೇಳಿದ್ದಾರೆ. ಅದೆಲ್ಲವೂ ಕೂಡ ಮಾಧ್ಯಮದಲ್ಲಿ ವರದಿಯಾಗಿದೆ. ಹಾಗಿದ್ದರೆ, ಮಂಗಳೂರಿನಲ್ಲಿ ನಡೆದಿದ್ದು ಏನು? ಮಂಗಳೂರು ಮಾನ್ಯ ಮುಖ್ಯಮಂತ್ರಿಗಳ ಆಡಳಿತ ವ್ಯಾಪ್ತಿಯಲ್ಲಿ ಇದೆಯೋ ಅಥವಾ ಇಲ್ಲವೋ? ಯಾವುದೇ ಬಲ ಪ್ರಯೋಗ ಮಾಡದೇ ಪ್ರತಿಭಟನೆಯನ್ನು ತಹಬಂದಿಗೆ ತೆಗೆದುಕೊಂಡು ಬನ್ನಿ ಎಂದು ಅವರು ಹೇಳಿದ್ದಾರೆ. ಮುಖ್ಯಮಂತ್ರಿಯವರನ್ನೂ ಮೀರಿದಂತಹ ಶಕ್ತಿ ಮಂಗಳೂರನ್ನು ನಿಯಂತ್ರಿಸುತ್ತಿದೆಯೇ ಅಥವಾ ಆಡಳಿತದ ಮೇಲೆ ಮಾನ್ಯ ಮುಖ್ಯಮಂತ್ರಿಗಳ ಹಿಡಿತ ಇಲ್ಲ ಎಂದು ನಾವು ಭಾವಿಸಬೇಕೇ? ಅಥವಾ ಮಾನ್ಯ ಮುಖ್ಯಮಂತ್ರಿಗಳು, ಗೃಹ ಮಂತ್ರಿಗಳ ನಿರ್ದೇಶನಗಳನ್ನು ಮೀರಿ ಅಧಿಕಾರಿಗಳು ವರ್ತಿಸುತ್ತಿದ್ದಾರೆಯೇ? ಅಲ್ಲಿ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ಅಸಮರ್ಥರೆಂಬ ಭಾವನೆ ಬರುತ್ತದೆ ಅಲ್ಲವೇ? In fact, I am helping them. ಇಂತಹ ವಿಷಯಗಳಲ್ಲಿ ಮುಖ್ಯಮಂತ್ರಿಗಳಿಗೆ ಪರಮಾಧಿಕಾರ ಇರುತ್ತದೆ. ಅವರು ಈ ನಾಡಿನ ದೊರೆ ಇದ್ದ ಹಾಗೆ. ಗೃಹ ಸಚಿವರಿಗೂ ಕೂಡ ಅಷ್ಟೇ ಅಧಿಕಾರ ಇರುತ್ತದೆ. ಇವರುಗಳು ಯಾವುದೇ ಬಲ ಪ್ರಯೋಗ ಮಾಡಬಾರದೆಂದು ಪೊಲೀಸರಿಗೆ ಸೂಚನೆ ನೀಡಿದ್ದೇನೆಂದು ಹೇಳುತ್ತಾರೆ. ಆದರೆ, ಇವೆಲ್ಲವನ್ನೂ ಮೀರಿದಂತಹ ಸ್ಥಿತ್ಯಂತರಗಳು ಅಲ್ಲಿ ನಡೆಯುತ್ತಿವೆ. I feel that some external force is controlling the Police Department. The inference that I have drawn from this is, that some external force may be in the helm of affairs in Police Department. ಹಾಗಾಗಿ, ಇದೆಲ್ಲವನ್ನೂ ನಿಯಂತ್ರಣ ಮಾಡುವ ಶಕ್ತಿ ಅಲ್ಲಿದೆಯೆಂದು ನನಗನ್ನಿಸುತ್ತಿದೆ.

ಮಾನ್ಯ ಸಭಾಪತಿಯವರೇ, ಒಂದು ಮಾತನ್ನು ಹೇಳುವುದಕ್ಕೆ ನನಗೆ ಬಹಳ ನೋವು ಆಗುತ್ತಿದೆ. ಅದೇನೆಂದರೆ, ಮಂಗಳೂರಿನಲ್ಲಿ ಈ ಘಟನೆ ಆದ ನಂತರ, 20ನೇ ತಾರೀಖಿನಂದು ನಾನು ಮಂಗಳೂರಿಗೆ ಭೇಟಿ ನೀಡಿದ್ದೆ. ನಾನೊಬ್ಬನೇ ಅಲ್ಲವೇ, ಕೆಳಮನೆಯ ಮಾಜಿ ಸ್ಪೀಕರ್‌ರವರಾದಂತಹ ಶ್ರೀ ರಮೇಶ್ ಕುಮಾರ್‌ರವರು; ಈ ರಾಜ್ಯದ ಹಿಂದಿನ ಗೃಹ ಮಂತ್ರಿಗಳಾದ ಶ್ರೀ ಎಂ.ಬಿ. ಪಾಟೀಲ್, ಅವರು ಮಾನ್ಯ ಬಸವರಾಜ ಬೊಮ್ಮಾಯಿಯವರಿಗೆ ಸ್ನೇಹಿತರೆಂದು ನಾನು ಭಾವಿಸುತ್ತೇನೆ. ಜೊತೆಗೆ, ಶ್ರೀ ವಿ.ಎಸ್. ಉಗ್ರಪ್ಪನವರು ಮಾಜಿ ಲೋಕಸಭಾ ಸದಸ್ಯರು ಮತ್ತು ಈ ಸದನದ ಹಿಂದಿನ ಸದಸ್ಯರು ಕೂಡ ಆಗಿದ್ದರು; ಹಿಂದಿನ ಸಚಿವರಾದಂತಹ ಶ್ರೀ ಬಸವರಾಜ ರಾಯರೆಡ್ಡಿಯವರು ನಾವೆಲ್ಲರೂ ಕೂಡಿ 20ನೇ ತಾರೀಖಿನಂದು ಮಂಗಳೂರಿಗೆ ಹೋದೆವು. ಮಂಗಳೂರಿಗೆ ಹೋಗುವ ಪೂರ್ವದಲ್ಲಿ, I am the Leader of Opposition in the Upper House. I am holding a Constitutional Post. ರಾಜ್ಯದಲ್ಲಿ ಎಲ್ಲಿಯಾದರೂ ಅಹಿತಕರವಾದಂತಹ ಘಟನೆಗಳು ನಡೆದಾಗ, ನಾವು

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅಲ್ಲಿಗೆ ಭೇಟಿ ನೀಡಬೇಕಾಗುತ್ತದೆ; ಏನಾಗಿದೆ ಎಂದು ಕೇಳಬೇಕಾಗುತ್ತದೆ. ನಾವು ಅಲ್ಲಿಗೆ ಹೋಗುವ ಉದ್ದೇಶವೇನೆಂದರೆ, ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಿ, ಅವರ ನೋವು ಆಲಿಸುವಂತಹ ಕೆಲಸ ಮಾಡಬೇಕಾಗಿದೆ. ಆದಾಗ್ಯೂ, ಹೋದ ಜೀವಗಳನ್ನು ಮತ್ತೆ ಕರೆಸುವುದಕ್ಕೆ ನಮಗೆ ಸಾಧ್ಯವಾಗುವುದಿಲ್ಲ. ಅಲ್ಲದೇ, ಗಾಯಾಳುಗಳನ್ನು ಭೇಟಿಯಾಗಿ ಅವರಿಗೆ ಸಾಂತ್ವನ ಹೇಳುವುದರ ಜೊತೆಗೆ, ನಮ್ಮ ಉದ್ದೇಶ ಏನಿತ್ತೆಂದರೆ, 'Do not take Law in your hands. You should be a Law abiding citizens', ಎಂದು ಅವರಿಗೆ ಹೇಳಬೇಕಾಗಿತ್ತು. ಜೊತೆಗೆ, ಆ ಘಟನೆಯಲ್ಲಿ ಜೀವ ಕಳೆದುಕೊಂಡವರ ಕುಟುಂಬಗಳ ಜೊತೆ ನಾವಿದ್ದೇವೆ ಅಥವಾ ಯಾರು ಗಾಯಾಳುಗಳಾಗಿದ್ದಾರೆ ಯಾರು ಅಮಾಯಕರಿದ್ದಾರೆ ಅವರ ಜೊತೆ ನಾವು ಇದ್ದೇವೆ ಎಂದು ಸಹಾನುಭೂತಿ ಹೇಳುವುದಕ್ಕೆ ಹೋಗಿದ್ದೆವು. ಶಾಂತಿ–ಸುವ್ಯವಸ್ಥೆ ಕಾಪಾಡಿಕೊಂಡು ಬನ್ನಿ ಎಂದು ಹೇಳುವುದಕ್ಕೆ ಹೋಗಿದ್ದೆವು.

ಮಾನ್ಯ ಸಭಾಪತಿಯವರೇ, ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ನನಗೆ ಬಹಳ ಅಭಿಮಾನ ಮತ್ತು ಗೌರವವಿದೆ. ಏಕೆಂದರೆ, ಅವರು ಇಡೀ ದೇಶದಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ದೊಡ್ಡ ಸಾಧನೆ ಮಾಡಿದ್ದಾರೆ. ಕಾರ್ಪೋರೇಷನ್ ಬ್ಯಾಂಕ್, ವಿಜಯ ಬ್ಯಾಂಕ್, ಕೆನರಾ ಬ್ಯಾಂಕ್ ಮತ್ತು ಸಿಂಡಿಕೇಟ್ ಈ ನಾಲ್ಕು ರಾಷ್ಟ್ರೀಕೃತ ಬ್ಯಾಂಕುಗಳು ಅಲ್ಲಿ ಹುಟ್ಟಿರುತ್ತವೆ. I feel that, Dakshina Kannada District is in the first place in the entire Country and may be in the whole world in the field of Banking. ಆ ನಂತರ ಈಗ ಶಿಕ್ಷಣ ಕ್ಷೇತ್ರದಲ್ಲಿ ಅದ್ಭುತವಾದಂತಹ ಸಾಧನೆ ಮಾಡುತ್ತಿದ್ದಾರೆ. ನಮ್ಮ ಉತ್ತರ ಕರ್ನಾಟಕ ಭಾಗದಿಂದ ಸಾವಿರಾರು ಮಕ್ಕಳು ಶಿಕ್ಷಣಕ್ಕಾಗಿ ಅಲ್ಲಿಗೆ ಹೋಗುತ್ತಿದ್ದಾರೆ. ಹೋಟೆಲ್ ಉದ್ಯಮದಲ್ಲಿ ಪ್ರಖ್ಯಾತಿ ಪಡೆದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯವರು ಹೋಟೆಲ್, ಬ್ಯಾಂಕಿಂಗ್ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಎಷ್ಟು ಪ್ರತಿಭಾವಂತರಿದ್ದಾರೆ ಎಂದರೆ, they are doing a wonderful job, ಅವರನ್ನು ನೋಡಿ ನಾವು ಕಲಿಯಬೇಕೆಂದು ಬಹಳಷ್ಟು ಭಾಷಣದಲ್ಲಿ ನಾನು ಮೇಲಿಂದ–ಮೇಲೆ ಮಾತನಾಡುತ್ತೇನೆ. ಅಲ್ಲದೇ, ನಮ್ಮ ಜಿಲ್ಲೆಗಳು ಸಹ ವಿವಿಧ ಕ್ಷೇತ್ರದಲ್ಲಿ ಆ ರೀತಿ ಬೆನ್ನು ಹತ್ತಿ ಹೋಗಬೇಕೆಂಬ ಅಭಿಮಾನ ಕೂಡ ಇತ್ತು. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಅದರ ಜೊತೆಗೆ, ಮೇಲ್ಮನೆಯ ಪ್ರತಿಪಕ್ಷದ ನಾಯಕನಾಗಿ ಅಲ್ಲಿಗೆ ಹೋಗಿ ಗಾಯಾಳುಗಳನ್ನು ವಿಚಾರಿಸಿಕೊಂಡು, ಸತ್ತವರ ಕುಟುಂಬಗಳ ಸದಸ್ಯರಿಗೆ ಸ್ವಲ್ಪ ಸಾಂತ್ವನ ಹೇಳಬೇಕೆಂದು ಅಲ್ಲಿಗೆ ಹೋಗಿದ್ದೆವು. ನಾವು ಅಲ್ಲಿಗೆ ಹಾಗೆಯೇ ಹೋಗಿರುವುದಿಲ್ಲ. ವಿರೋಧ ಪಕ್ಷದ ನಾಯಕರ ಕಛೇರಿಯಿಂದ, ನಮ್ಮ ಅಧಿಕಾರಿಗಳು well in advance intimation ಕೊಟ್ಟಿದ್ದಾರೆ. ಅವರು ಆ ದಿನವೇ, "ಇಲ್ಲ ಪಾಟೀಲರೇ, Sorry, ನೀವು ಇಲ್ಲಿಗೆ ಬರಬೇಡಿ ಎಂದು" ಆ ದಿನವೇ ಹೇಳಬಹುದಾಗಿತ್ತು. ಆದರೆ, ನಾವು ಮಂಗಳೂರಿಗೆ ಬರುವವರೆಗೂ ಸುಮ್ಮನೆ ಇದ್ದರು. ನಾವು ವಿಮಾನದಿಂದ ಇಳಿದ ಕೂಡಲೇ ಪೋಲೀಸ್ ಆಫೀಸರ್ ಬಂದರು...(**ಗೊಂದಲ**) ಈ ಬಗ್ಗೆ ನಮಗೆ ಮೊದಲೇ ಹೇಳಿದ್ದರೆ ನಾವು ಏತಕ್ಕೆ ಅಲ್ಲಿಗೆ ಹೋಗುತ್ತಿದ್ದೆವು? 'It is displeasure to inform you that, your visit at this juncture may not be

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

fruitful, because curfew is clamped'... I am an advocate. I am well aware of the provisions of IPC (Indian Penal Code) and Cr.PC. (Criminal Procedure Code) ನಾನು ವಕೀಲಿ ವೃತ್ತಿಯಲ್ಲಿ 15 ವರ್ಷ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳ ಬಗ್ಗೆ ಪ್ರಾಕ್ಟೀಸ್ ಮಾಡಿದ್ದೇನೆ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಮಂಗಳೂರಿನಲ್ಲಿ ಕರ್ಫ್ಯೂ ಜಾರಿಯಲ್ಲಿರಲಿಲ್ಲ. ಆದರೆ, ಅಲ್ಲಿ 144 ಸೆಕ್ಷನ್ ಮಾತ್ರ ಜಾರಿಯಲ್ಲಿತ್ತು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯರೇ, I know each and every inch of Law. ನಾನು ಅಲ್ಲಿಗೆ ಹೇಳಲಾರದೇ, ಕೇಳಲಾರದೇ ಸುಮ್ಮನೆ ಫ್ಲೈಟ್ ಟಿಕೆಟ್ ತೆಗೆದುಕೊಂಡು ಹೋಗಿರುವುದಿಲ್ಲ. We had intimated the Police Commissioner well in advance that, I am coming over there along with the ಮಾಜಿ ಸ್ಪೀಕರ್, ಮಾಜಿ ಗೃಹಮಂತ್ರಿಗಳು, ಮಾಜಿ ಲೋಕಸಭಾ ಸದಸ್ಯರು, ಮಾಜಿ ಮಂತ್ರಿಗಳ ಹೆಸರುಗಳನ್ನು ಹಾಕಿ ನನ್ನ ಲೆಟರ್ ಹೆಡ್‌ನಲ್ಲಿ ಲೆಟರ್ ಕೊಟ್ಟಿದ್ದೇನೆ. ಆದರೆ, ನಾವು ಅಲ್ಲಿಗೆ ಹೋಗಿ ನಮ್ಮ ಫ್ಲೈಟ್ ಲ್ಯಾಂಡ್ ಆದ ಕೂಡಲೇ ಪೊಲೀಸರು ಬಂದು, and said that you are not allowed to go inside ಎಂದು ಹೇಳಿದರು. ಇದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಅಲ್ಲಿಗೆ ಹೋದ ನಂತರ ನನಗೆ ನೋಟಿಸ್ ಕೊಟ್ಟಿದ್ದಾರೆ. ಈ ರೀತಿ ನೋಟಿಸ್ ಕೊಟ್ಟು ಮಂಗಳೂರು ಸಿಟಿಯೊಳಗೆ ಹೋಗಬಾರದೆಂದು ಹೇಳುವುದಕ್ಕಿಂತ ಮೊದಲೇ, they could have informed me and I would have not gone there. ಅವರು ನೋಟಿಸ್ ಕೊಟ್ಟು ನೀವು ಬರಬಾರದೆಂದು ಹೇಳಿದ ನಂತರ ನಾನು ಅಲ್ಲಿಗೆ ಹೋಗಿದ್ದರೆ, ಅದು ನನ್ನ ಉದ್ಧಟತನ ಅಥವಾ ನನ್ನ ತಪ್ಪು ಎಂದು ಹೇಳಬಹುದು. ಆ ರೀತಿ ಏನೂ ಇರುವುದಿಲ್ಲ.

**(33)18.02.2020/4.20/ವೈಎಲ್–ಕೆಎಸ್**

**ಶ್ರೀ ಎಸ್.ಆರ್.ಪಾಟೀಲ್(ಮುಂದು):–**

Cr.PC (Criminal Procedure Code) ಯ ಕಲಂ 144 ರಡಿ ಶ್ರೀ ಎಸ್.ಆರ್.ಪಾಟೀಲ್ ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ತು ಎಂದು ನಮೂದಿಸಿ ವಿಮಾನ ನಿಲ್ದಾಣದಲ್ಲಿ ವಿಮಾನದಿಂದ ಇಳಿದು ಸಿಟಿಯ ಒಳಗೆ ಹೋಗುವಂತಹ ಸಂದರ್ಭದಲ್ಲಿ ನೋಟೀಸ್ ಪ್ರತಿಯನ್ನು ನೀಡಿದ್ದಾರೆ. ನಮಗೆ ಯಾವುದೇ ವಿಚಾರ ಗೊತ್ತಿಯೇ ಇಲ್ಲ. We were not intimated in advance by the Police Department. Is it fair on your part and the Department? Well in advance I had intimated the Police Commissioner that, 'I am coming to Mangalore'. I will provide all authenticated documents in this regard. ಈ ವಿಷಯದ ಬಗ್ಗೆ ನಮ್ಮ ಪಿ.ಎಸ್. ಸಹ ಮಾತನಾಡಿದ್ದಾರೆ. ಮಾನ್ಯ ಗೃಹ ಸಚಿವರು ನಮ್ಮ ಸ್ನೇಹಿತರಾಗಿದ್ದು, ಅವರು ಇಲಾಖೆಯವರಿಗೆ ಸರಿಯಾಗಿ ಹೇಳಬೇಕು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜೊತೆಗೆ ನಮ್ಮ ಜೊತೆ ಯಾವ್ಯಾವ ನಾಯಕರು ಬರುತ್ತಾರೆ ಎಂಬುದನ್ನು ಸಹ ಮೊದಲೇ ತಿಳಿಸಲಾಗಿದೆ. 'ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಪೌರತ್ವ ತಿದ್ದುಪಡಿ ಕಾಯ್ದೆಯನ್ನು ವಿರೋದಿಸಿ ದಿನಾಂಕ: 19.12.2019 ರಂದು ನಡೆದ ಪ್ರತಿಭಟನೆಯಲ್ಲಿ ಕೆಲವು ಹಿಂಸಾತ್ಮಕ ಕೃತ್ಯಗಳು ನಡೆದಿರುವುದರಿಂದ ಕಾನೂನು ಸುವ್ಯವಸ್ಥೆ ಶಾಂತಿಯನ್ನು ಕಾಪಾಡಬೇಕಾಗಿರುವ ಉದ್ದೇಶದಿಂದ ನಿನ್ನೆ ಅಂದರೆ ದಿನಾಂಕ: 22.12.2019 ರವರೆಗೆ ರಾತ್ರಿ 24 ಗಂಟೆಗಳ ಕಾಲ ಮಂಗಳೂರಿನ ನಗರದೊಳಗೆ ಕಮೀಷನರೇಟ್ ವ್ಯಾಪ್ತಿಯಲ್ಲಿ ಕರ್ಪೂ ಜಾರಿಗೊಳಿಸಲಾಗಿದೆ. ಈ ಸಂಬಂಧ ತಾವು ಮಂಗಳೂರು ನಗರಕ್ಕೆ ಪ್ರವೇಶ ಹೊಂದಿರುವುದರಿಂದ ಕಾನೂನು ವ್ಯವಸ್ಥೆ ಶಾಂತಿಗೆ ಭಂಗ ಉಂಟಾಗುವ ಸಾಧ್ಯತೆ ಇರುವುದರಿಂದ ತಾವುಗಳು ದಿನಾಂಕ: 22.12.2019 ರಂದು ರಾತ್ರಿ 24 ಗಂಟೆವರೆಗೂ ಮಂಗಳೂರು ನಗರ ಕಮೀಷನರೇಟ್ ವ್ಯಾಪ್ತಿಗೆ ಪ್ರವೇಶ ಹೊಂದಿರುವುದರಿಂದ ಭಾರತೀಯ ದಂಡಾ ಪ್ರಕ್ರಿಯಾ ಸಮಿತಿ ಕಲಂ 144(2) ರಂತೆ ನಿಷೇಧಿಸುತ್ತೇವೆ ಎಂದು ಪೊಲೀಸ್ ಕಮೀಷನರೇಟ್, ಬೆಂಗಳೂರಿನವರು ನೋಟೀಸ್ ಹೊರಡಿಸಿದ್ದಾರೆ. Previously, I had intimated the Police Commissioner, ಆಗ ಮಂಗಳೂರು ಪೊಲೀಸ್ ಅಧಿಕಾರಿಯು ನಿದ್ದೆ ಮಾಡುತ್ತಿದ್ದರೆ? Even, my PS said that, 'Sir, We will make some arrangements', ಎಂದು ಹೇಳಿದ ಮೇಲೆಯು ಎಸ್ಕಾರ್ಟ್‌ನಲ್ಲಿಯೇ ಕರೆದುಕೊಂಡು ಹೋಗಬಹುದಾಗಿತ್ತು.

ಮಾನ್ಯ ಸಭಾಪತಿಯವರೇ, ಅಧಿಕಾರ ಶಾಶ್ವತ ಅಲ್ಲ. ಈ ಹಿಂದೆ ವಿರೋಧ ಪಕ್ಷದಲ್ಲಿದ್ದವರು ಆಡಳಿತ ಪಕ್ಷದಲ್ಲಿದ್ದಾರೆ. ನಿಶ್ಚಿತವಾಗಿ ನಾವು ವಿರೋಧ ಪಕ್ಷದಿಂದ ಆಡಳಿತ ಪಕ್ಷಕ್ಕೆ ಬರುತ್ತೇವೆ. ನಿಮ್ಮ ಹಾಗೆ ನಾವು ಆಡಳಿತ ಪಕ್ಷಕ್ಕೆ ಬರುವುದಿಲ್ಲ. ಮಾನ್ಯ ಸದಸ್ಯರಾದ ಲಹರ್ ಸಿಂಗ್ ಸಿರೋಯಾರವರು 17 ಮಂದಿ ಫೋಟೋಗೆ ಪೂಜೆ ಮಾಡಬೇಕೆಂದು ಹೇಳಿದ್ದಾರೆ ಆ ರೀತಿ ಮಾಡಿ, ನಾವು ಆಡಳಿತ ಪಕ್ಷಕ್ಕೆ ಬರುವುದಿಲ್ಲ. ಮಾನ್ಯ ಸಚಿವರಾದ ಜಗದೀಶ್ ಶೆಟ್ಟರ್‌ರವರಿಗೆ ಯಾವಾಗ ನಾವು ಫೋಟೋ ಪೂಜೆ ಮಾಡುತ್ತೇವೆ ಎಂಬುದು ಗೊತ್ತಿದೆ. ಈಗ ಅದರ ಬಗ್ಗೆ ಮಾತನಾಡುವುದು ಬೇಡ, ಇರಲ್ಲಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ಮಾತನಾಡಿರುವುದು ನಮಗೆ ಸರಿಯಾಗಿ ತಿಳಿದೆಯೇ ಇಲ್ಲ. ಮತ್ತೆ ನಾನು ಅದರ ಬಗ್ಗೆ ಏನೆಂದು ಹೇಳಲಿ.

**(ಗೊಂದಲ)**

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮರು ಆಯ್ಕೆ ಮಾಡಿ ಕಳುಹಿಸಿದ್ದಾರೆ ಎಂದು ಹೇಳಿದ್ದೇನೆ ಅಷ್ಟೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ತಮಗೆ ಆ ನೋಟೀಸ್ ಪ್ರತಿಯನ್ನು ಕಳುಹಿಸಿಕೊಡುತ್ತೇನೆ. ಇಂತಹ ವ್ಯವಸ್ಥೆಯನ್ನು ಎಲ್ಲಿಯು ನೋಡಿಲ್ಲ. ದೇಶದಲ್ಲಿ ಅಧಿಕಾರದ ಸ್ಥಾನದಲ್ಲಿದ್ದೇವೆಯೇ ಅಥವಾ ರಾಜ್ಯದಲ್ಲಿ ಅಧಿಕಾರದ ಸ್ಥಾನದಲ್ಲಿದ್ದೇವೆಯೇ ಎಂಬುದು ಗೊತ್ತಾಗುತ್ತಿಲ್ಲ. ಮಾನ್ಯ ಸಚಿವರು ತಪ್ಪು ತಿಳಿದುಕೊಳ್ಳಬಾರದು, ಒಂದು ನಾಣ್ಣುಡಿ ಏನೆಂದರೆ ‘ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿದಂತೆ’ ಎಂದು ಹೇಳುತ್ತಾರೆ. ಇದು ಒಂದು ರೀತಿಯ ಉದ್ಧಟತನವೆಂದು ಅನ್ನಿಸುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಅಧಿಕಾರದಿಂದ ಹೊರಗೆ ಇರುವುದಕ್ಕೆ ಸಾಧ್ಯವೇ ಇಲ್ಲ. ನೀರು ಬಿಟ್ಟು ಹೊರಗೆ ಬಂದ ಮೀನು...

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಶ್ರೀ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಸ್ವೀಕಾರ ಮಾಡಿದ ಮೇಲೆ ಮಂತ್ರಿಮಂಡಲವನ್ನು ರಚನೆ ಮಾಡಲು ತಡವಾಗಿದ್ದರಿಂದ one-man army ಆಗಿದ್ದರು. ತಿಂಗಳುಗಟ್ಟಲೆ ಕಳೆದ ಮೇಲೆ ಮಂತ್ರಿ ಮಂಡಲ ರಚನೆ ಮಾಡಿದರು.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನೀರಿನಿಂದ ಹೊರಗೆ ಬಂದ ಮೀನಿಗೆ...

**ಶ್ರೀ ಎಸ್.ಆರ್.ಪಾಟೀಲ್:–** ನಮಗೆ ಅದು ಬೇಡವೇ ಬೇಡ. One-man show, One-man army...

**ಶ್ರೀ ಬಸವರಾಜ ಬೊಮ್ಮಾಯಿ:–** ಯಾವ್ಯಾವ ಪಾತ್ರ ಸಿಗುತ್ತದೆಯೋ ಆ ಪಾತ್ರವನ್ನು ಮಾಡಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನೀರಿನಿಂದ ಮೀನನ್ನು ಹೊರಗೆ ತೆಗೆದ ಮೇಲೆ ಯಾವ ರೀತಿ ಚಡಪಡಿಸುತ್ತದೆ ಆ ರೀತಿ ಮಾನ್ಯ ಸಚಿವರು ವಿರೋಧ ಪಕ್ಷದಲ್ಲಿ ಕುಳಿತುಕೊಂಡಾಗ ಚಡಪಡಿಸುತ್ತಿದ್ದರು. ವಾಮ ಮಾರ್ಗದಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ವ್ಯಯ ಮಾಡಿ 17 ಮಂದಿಗಳನ್ನು ತೆಗೆದುಕೊಂಡು ಹೋಗಿ, ಬಾಂಬೆಯಲ್ಲಿ ಇಟ್ಟು...

**(ಗೊಂದಲ)**

ನಂತರ ಅವರಿಗೆ ರಾಜೀನಾಮೆ ನೀಡಿಸಿ, ವಾಮಮಾರ್ಗದಿಂದ ಅಧಿಕಾರಕ್ಕೆ ಬಂದಿದ್ದಾರೆ

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಾವು

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನೀರಿನಿಂದ ಹೊರಗೆ ಬಂದ ಮೀನು ಹೇಗೆ ಚಡಪಡಿಸುತ್ತದೆಯೋ ಆ ರೀತಿ ನಾವು ಚಡಪಡಿಸಿಲ್ಲ. By hook or by crook, ಶತಾಯಗತಾಯ ಪ್ರಯತ್ನ ಮಾಡಿಯಾದರೂ ಅಧಿಕಾರ ಹಿಡಿಯಬೇಕು ಎನ್ನುವ ಭಾವನೆ ಇತ್ತು.

**ಉಪ ಸಭಾಪತಿಯವರು:–** ನಿಜವಾದ ವಿಷಯ ವಿಷಯಾಂತರವಾಗುತ್ತಿದೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಅದು ವಾಮಮಾರ್ಗ ಅಲ್ಲ, ಅದು ರಾಮಮಾರ್ಗ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ರಾಮನ ಹೆಸರನ್ನು ಏತಕ್ಕೆ ಹೇಳುತ್ತಾರೆ? ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಅನೈತಿಕವಾದ ಸರ್ಕಾರ ರಚನೆ ಮಾಡಿದ್ದಾರೆ.

**Sri S.R. PATIL:-** ಮಾನ್ಯ ಸಭಾಪತಿಯವರೇ, ಮಾಧ್ಯಮಗಳಲ್ಲಿ ಏನೇನೋ ಬಂತು. You had been taken to the Custody. ಆದರೆ, ನಮ್ಮನ್ನು ಕಸ್ಟಡಿಗೆ ತೆಗೆದುಕೊಳ್ಳಲಿಲ್ಲ. ಆದರೆ, ನಮ್ಮನ್ನು ಹೋಗುವುದಕ್ಕೂ allow ಮಾಡಲಿಲ್ಲ. ನಾನು ತಪ್ಪು ಮಾಡಿದ್ದರೆ ಕಸ್ಟಡಿಗೆ ತೆಗೆದುಕೊಳ್ಳಿ. Forget that you are a Home Minister of the State and tell me frankly... The nobody is above Law. It may be the Prime Minister or the President of India, nobody is above law. ಅಂತಹದ್ದರಲ್ಲಿ ನಾವು–ನೀವು ಯಾವ ಲೆಕ್ಕ? It is the law of the Land.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಪ್ರಧಾನ ಮಂತ್ರಿಗಳು ಕಾನೂನಿಗಿಂತ ದೊಡ್ಡವರಲ್ಲ. ವಿರೋಧ ಪಕ್ಷದ ನಾಯಕರೂ ಕಾನೂನಿಗಿಂತ ದೊಡ್ಡವರಲ್ಲ. ನೀವು ಪೂರ್ತಿಯಾಗಿ ಹೇಳಿ.

**ಶ್ರೀ ಎಸ್.ಆರ್.ಪಾಟೀಲ್:–** ಅವರುಗಳು ಯಾರು ಇಲ್ಲವೆಂದರೆ ಗೃಹ ಸಚಿವರು ಇರುವುದಿಲ್ಲ. ರಾಜ್ಯದಲ್ಲಿ ಗೃಹ ಸಚಿವರು arrest ಆಗುವಂಥ ಸಂದರ್ಭಗಳಿತ್ತು. ರಷೀದ್ ಕೊಲೆ ಪ್ರಕರಣದಲ್ಲಿ ಗೃಹ ಮಂತ್ರಿಗಳು . . . .

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, even the Hon'ble Opposition Leader does not have any special privileges above the Law.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನನಗೆ ಗೊತ್ತಿದೆ, that I am not above Law. I am maintaining a low profile. ಅಲ್ಲ. ನಾನು ಸಹ ನಿಯಮಗಳನ್ನು ಮತ್ತು ನಿರ್ದೇಶನಗಳನ್ನು ಅನುಸರಿಸುತ್ತೇನೆ. ನಾನು ರಾಜಕೀಯ ಬಿಟ್ಟು ಬೇರೆ ಮಾತನಾಡುವುದಿಲ್ಲ. ಜನ ಸೇವೆ ಮಾಡುವುದಕ್ಕೆ ರಾಜಕೀಯಕ್ಕೆ ಬಂದಿರುವುದು. ಅದು ಬಿಟ್ಟು ಬೇರೆ ಯಾವ ಉದ್ದೇಶವು ನನಗೆ ಇಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ವಿರೋಧ ಪಕ್ಷದ ನಾಯಕರ ವೈಯಕ್ತಿಕ ವಿಚಾರದ ಬಗ್ಗೆ ಮಾತನಾಡುತ್ತಿಲ್ಲ. ಕಳೆದ 25 ವರ್ಷಗಳಿಂದ ನೋಡುತ್ತಿದ್ದೇನೆ. ಆದರೆ, position ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ವೈಯಕ್ತಿಕ ವಿಚಾರವನ್ನು ಮಾತನಾಡಿದರೂ ನಾನು ತಪ್ಪು ತಿಳಿದುಕೊಳ್ಳುವುದಿಲ್ಲ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ತಾವು ಯಾವತ್ತು ತಪ್ಪಾಗಿ ತಿಳಿದುಕೊಂಡಿರುವ ಉದಾಹರಣೆಗಳು ನೋಡುವುದಕ್ಕೆ ಸಿಕ್ಕಿಲ್ಲ.

**ಉಪ ಸಭಾಪತಿಯವರು:–** ಆಡಳಿತ ಪಕ್ಷದವರೆ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಎಲ್ಲಾ ವಿಚಾರಗಳನ್ನು ಹೇಳುತ್ತಿದ್ದಾರೆ. ತದನಂತರ ತಾವು ಸಹ ಉತ್ತರ ನೀಡುವುದಕ್ಕೆ ತಯಾರಿದ್ದೀರಿ. ಹಾಗಾಗಿ ಮಾನ್ಯ ವಿರೋಧ ಪಕ್ಷದ ನಾಯಕರು, ವಿಷಯವನ್ನು ಹೇಳುವುದಕ್ಕೆ ಬಿಡಬೇಕಲ್ಲವೇ? ಮಧ್ಯೆ–ಮಧ್ಯೆ ಮಾತನಾಡಿದರೆ ವಿಷಯಾಂತರವಾಗಿ ಸಮಯ ವ್ಯರ್ಥ ಮಾಡುತ್ತಿದ್ದೀರಿ. ದಯವಿಟ್ಟು ಸಹಕರಿಸಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, Is it a Democratic Government or a fascist Government ಎಂಬುದು ನನಗೆ ತಿಳಿಯುತ್ತಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಪಕ್ಷದ ನಾಯಕ ಕಚೇರಿಯಿಂದ intimate ಮಾಡಿ, ನಂತರ, 'Sir, You are Welcome.', ಎಂದು ಹೇಳಿ, ವಿಮಾನ ನಿಲ್ದಾಣದಲ್ಲಿ ಈ ರೀತಿ ಮಾಡಿದರೆ ಹೇಗೇ? ನನಗೆ ಏನೂ ಬೇಕಾದರೂ ಮಾಡಿ, ಆದರೆ, ನನ್ನ position ಧಕ್ಕೆ ಆಗಬಾರದು. I should up hold the dignity and decorum of the Post of Opposition Leader. I don't mind, if I am personally inflicted by any injury.

ಆದರೆ, ಮಾನ್ಯ ಸಚಿವರು ಆ ಸ್ಥಾನಕ್ಕೆ ಅಗೌರವ ತೋರಿಸುವುದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಳ್ಳೆಯದಲ್ಲ. ಮಾರಕವಾದ ವ್ಯವಸ್ಥೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಯಾವುದೇ ಸ್ಥಾನಕ್ಕೆ ಅಗೌರವ ತೋರಿಸಿಲ್ಲ. ಆ ನೋಟೀಸ್‌ನಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಉತ್ತರ ನೀಡಲಾಗಿದೆ. ತಾವು ಯಾವ ಸಂದರ್ಭದಲ್ಲಿ...

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅದನ್ನು, ಮೊದಲೇ ಹೇಳಬಹುದಾಗಿತ್ತಲ್ಲವೇ?

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೋಗುತ್ತಿರುವುದು ಮಾನ್ಯ ಸಚಿವರಿಗೆ ಗೊತ್ತಿತ್ತು. ಆ ನೋಟೀಸ್ ಪ್ರತಿಯನ್ನು ವಿಮಾನ ನಿಲ್ದಾನದಲ್ಲಿ ನೀಡುವ ಬದಲು ಇಲ್ಲಿಯೇ ನೀಡಬೇಕಾಗಿತ್ತು. ಮಾನ್ಯ ಸಚಿವರು ಸುಮ್ಮನೆ ಏನೆಂದು ಮಾತನಾಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸದಸ್ಯರೆ, ತಾವು ಸಹ ಮಂಗಳೂರಿಗೆ ಬಂದಿರುತ್ತೀರಿ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಹೌದು ನನಗೆ ಏನಾದರೂ ಹಿಡಿದಿದ್ದರೆ ಸರಿಯಾಗಿಯೇ ಹೇಳುತ್ತಿದೆ. ಆದರೆ, ನಾನು ಹೊರಗೆ ಹೋಗಿ ಬಿಟ್ಟೆ. "ಭೂತಾಕಾರ ಶರೀರ ಮಮೋ ಹರಿ ಭಕ್ತಂತೆ ಪರಿ ಪಾಹಿಮಾಂ" ಎನ್ನುವ ರೀತಿ ಮಾನ್ಯ ಸಚಿವರು ಅಲ್ಲಿ ನೋಟೀಸ್ ನೀಡುವ ಬದಲು... ಪೊಲೀಸ್‌ನವರಿಗೆ ಬುದ್ಧಿ ಇಲ್ಲ ಆ ರೀತಿ ಮಾಡಿದ್ದಾರೆ. ಮಾನ್ಯ ಸಚಿವರು ಅಲ್ಲಿ ನೋಟೀಸ್ ನೀಡುವ ಬದಲು ಇಲ್ಲಿಯೇ ನೀಡಿದಿದ್ದರೆ ಆ ಪ್ರಶ್ನೆಯೇ ಮುಗಿಯುತ್ತಿತ್ತು. ಹೋಗಲಿ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಯಾಣಿಸಿದ ವಿಮಾನದ ಭತ್ಯೆಯನ್ನಾದರೂ ಕೊಡಿ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, 'You don't come', ಎಂದರೆ ಪ್ರಶ್ನೆಯೇ ಮುಗಿದಿತ್ತು. ತಾವು ಯಾವುದೇ ಸ್ಥಾನದಲ್ಲಿರಲ್ಲಿ, ತಾವು ಸಭಾಪತಿಯವರ ಪೀಠದಲ್ಲಿದ್ದೀರಿ, ಅದೇ ರೀತಿ ಮಾನ್ಯ ಸಚಿವರು ಗೃಹ ಸಚಿವರಾಗಿದ್ದಾರೆ, ನಾನು ಸಹ ಪ್ರತಿಪಕ್ಷದ ಸ್ಥಾನದಲ್ಲಿ ಕುಳಿತಿದ್ದೇನೆ. ಹಾಗಾಗಿ ನಾನು ಹೇಳುವುದೇನೆಂದರೆ, ಆ ಸ್ಥಾನಕ್ಕೆ ಗೌರವ ನೀಡಬೇಕು. It is not the person who is sitting on the Chair but position held by him as to be respected. We are under a Democratic setup. ನಾವು ಕುರ್ಚಿಯಲ್ಲಿ ಕುಬ್ಜರಾಗಿ ಕೂರಬಾರದು. ನಮ್ಮ ವ್ಯಕ್ತಿತ್ವ ಕುರ್ಚಿಯ ಮೇಲಿರಬೇಕು. ಕುರ್ಚಿಗೂ ನಮ್ಮ ವ್ಯಕ್ತಿತ್ವದ ಮೇಲೆ ಗೌರವ ಬರಬೇಕೆಂಬ ವಿಚಾರದಲ್ಲಿ ನಂಬಿಕೆ ಇಟ್ಟಿರುವೆ. ಆ ದೃಷ್ಟಿಯಿಂದ ಮಾನ್ಯ ಬಸವರಾಜ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬೊಮ್ಮಾಯಿಯವರೇ ಗೃಹ ಸಚಿವರಾಗಿರುವಂತಹ ಸಂದರ್ಭದಲ್ಲಿ ಈ ರೀತಿ ಆಗಿರುವುದರಿಂದ ಬಹಳ ನೋವಿನ ಸಂಗತಿಯಾಗಿದೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಯಾರನ್ನು blame ಮಾಡುತ್ತಿಲ್ಲ. ನರಗುಂದ, ನವಲಗುಂದ...

**ಶ್ರೀ ಎಸ್.ಆರ್.ಪಾಟೀಲ್:–** ಹಳೆಯದನ್ನು ಏತಕ್ಕೆ ಕೆದಕುತ್ತೀರಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಯಾರನ್ನು ದೂಷಣೆ ಮಾಡುತ್ತಿಲ್ಲ. ಯಾವ ರೀತಿ ಪರಿಸ್ಥಿತಿ ಬರುತ್ತದೆ ಎಂಬುದನ್ನು ಹೇಳುತ್ತಿದ್ದೇನೆ. ನರಗುಂದ, ನವಲಗುಂದ ಗೋಲಿಬಾರ್ ಆಯಿತು.

**(34)/18.02.2020/4.30/ಎಸ್‌ಕೆ–ಜಿಆರ್**

**ಶ್ರೀ ಬಸವರಾಜ ಬೊಮ್ಮಾಯಿ(ಮುಂದು):–**

ಗೋಲಿಬಾರ್ ಆದ ಮೇಲೆ ಸುಮಾರು ಹತ್ತು ದಿವಸ ಯಾವುದೇ Leader of Oppositionಗೆ ಆಗಲೀ, ಎಂ.ಎಲ್.ಎ. ಮತ್ತು ಎಂ.ಎಲ್.ಸಿ ಹಾಗೂ ಸ್ಥಳೀಯ ಎಂ.ಎಲ್.ಎ. ಅವರಿಗಾಗಲೀ ಅಲ್ಲಿಗೆ ಹೋಗುವುದಕ್ಕೆ ಬಿಟ್ಟಿರಲಿಲ್ಲ, ಅಷ್ಟೇ ಅಲ್ಲ. ಅಲ್ಲಿರುವಂತಹ ಜನರಿಗೆ ಎಂಟು ದಿವಸಗಳ ಕಾಲ ಬಹಿರ್ದೆಸೆಗೆ ಹೋಗುವುದಕ್ಕೆ ಬಿಟ್ಟಿರಲಿಲ್ಲ. ಅವರ ಪರಿಸ್ಥಿತಿ ಏನಾಗಿರಬಹುದು?

**(ಗೊಂದಲ)**

**ಶ್ರೀ ನಸೀರ್ ಅಹಮದ್ (ವಿಧಾನಸಭಾ ಕ್ಷೇತ್ರ) :–** ಆಗ situation different ಆಗಿತ್ತು.

**ಶ್ರೀ ಬಸವರಾಜ ಬೊಮ್ಮಾಯಿ:–** ಅದೇ situation is different ಎಂದು ಮುಚ್ಚಿ ಹಾಕುವುದಕ್ಕೆ ಸಾಧ್ಯವಿಲ್ಲವಲ್ಲ. ಅದಕ್ಕೆ ...

**(ಗೊಂದಲ)**

**ಶ್ರೀ ಎಸ್.ಆರ್ ಪಾಟೀಲ್ (ವಿರೋಧ ಪಕ್ಷದ ನಾಯಕರು):–** ನೋಡಿ ಮಾನ್ಯ ಬಸವರಾಜ ಬೊಮ್ಮಾಯಿಯವರೇ,..

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:–** ಒಂದೇ ನಿಮಿಷ. ಅಲ್ಲಿರುವ ಪರಿಸ್ಥಿತಿಗೆ ಅನುಗುಣವಾಗಿ ನಿರ್ಣಯಗಳನ್ನು ತೆಗೆದುಕೊಂಡಿದ್ದೇವೆ. ಆ ದಿನ Leader of Opposition ನ್ನು ಹೋಗುವುದಕ್ಕೆ ಬಿಟ್ಟಿರಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಆಯಿತು. ಆಗ ನಮ್ಮ ಗತಿ ಏನಾಯಿತು ಮತ್ತು ನಿಮ್ಮ ಗತಿ ಏನಾಗುತ್ತದೆ ಎಂಬುದು ಇತಿಹಾಸದ ಪುನರಾವರ್ತನೆಯಾಗುತ್ತದೆ. ನರಗುಂದ firing ಆದಮೇಲೆ ಏನಾಯಿತು ಎಂಬುದು ಗೊತ್ತಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ) ಆಮೇಲೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶ್ರೀಯುತ ಗೋಪಾಲಗೌಡರ ನೇತೃತ್ವದಲ್ಲಿ ಪರಿಶೀಲನೆಗೆ ಎಂದು ಹೋದರೆ ಅವರಿಗೆ ಪತ್ರಿಕಾಗೋಷ್ಠಿ ನಡೆಸಲು ಅವಕಾಶವನ್ನೇ ಕೊಡಲಿಲ್ಲ. Justice Gopalagowda, retired Judge of Supreme Court, is not allowed to meet the Press.

**ಸಭಾಪತಿಯವರು:–** ಈಗಾಗಲೇ ಹದಿನೈದು ನಿಮಿಷವಾಯಿತು.

**Sri S.R.PATIL**:- Mr.Chairman Sir, there is no time limitation for me.

**ಸಭಾಪತಿಯವರು:–** ಅದಕ್ಕಲ್ಲ, ನಾನು ತಮ್ಮ ಗಮನಕ್ಕೆ ತಂದಿದ್ದೇನೆ ಅಷ್ಟೆ.

**Sri S.R.PATIL**:- Mr.Chairman Sir, you can't restrict the Leader of Opposition.

**ಸಭಾಪತಿಯವರು:–** ಇಲ್ಲ, ನಾನು ತಮ್ಮ ಗಮನಕ್ಕೆ ತಂದಿದ್ದೇನೆ ಅಷ್ಟೆ. I am not restricting you.

**ಶ್ರೀ ಎಸ್.ಆರ್. ಪಾಟೀಲ್:–** ಈ ವಿಷಯ ನಾಳೆಯೂ ಮುಗಿಯಬಹುದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ನಾಳೆಯೂ ಸಹ ನಿಧಾನವಾಗಿ ಮುಗಿಸಿಬಿಡಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಘಟನೆ ನಡೆದ ನಂತರ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು ದಿನಾಂಕ 21.12.2019 ರಂದು ಮೃತರ ಕುಟುಂಬಕ್ಕೆ ತಲಾ ರೂ.10.00 ಲಕ್ಷಗಳ ಪರಿಹಾರವನ್ನು ಘೋಷಣೆ ಮಾಡುತ್ತಾರೆ. ನಂತರ ಗಲಭೆಯಲ್ಲಿ ಭಾಗವಹಿಸಿದ್ದಾರೆ ಎಂದು ಹೇಳಿ ಒಂದು ರೂಪಾಯಿ ಪರಿಹಾರ ನೀಡುವುದಿಲ್ಲವೆಂದು ದಿನಾಂಕ 24.12.2019ರಂದು ಮುಖ್ಯಮಂತ್ರಿಯವರು ಹೇಳಿಕೆ ಕೊಡುತ್ತಾರೆ. ಇದು ಎಷ್ಟು ಸರಿಯೋ ಎಷ್ಟು ತಪ್ಪೋ ಗೊತ್ತಿಲ್ಲ. ದಿನಾಂಕ 21.12.2019 ರಂದು ರೂ.10.00 ಲಕ್ಷ ರೂಪಾಯಿ ಕೊಡುತ್ತೇನೆಂದು ಹೇಳಿದ್ದು, ಅದೇ ಮುಖ್ಯಮಂತ್ರಿಯವರಿಗೆ ಗೊತ್ತಿಲ್ಲವೆಂದಾಯಿತು. The Chief Minister was kept in dark.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**Sri S.R.PATIL**:- You happen to be my good friend. ತಾವು ಸುಮ್ಮನೆ ಕುಳಿತುಕೊಂಡು ಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಎಸ್.ಆರ್ ಪಾಟೀಲ್‌ರವರು ತಪ್ಪಾಗಿ ಹೇಳಬಾರದು ಎಂಬ ಕಾರಣಕ್ಕಾಗಿ ನಾನು ಹೇಳಿದೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್. ಪಾಟೀಲ್:-** ನೋಡಿ ಇಲ್ಲಿ ನನ್ನ ಆತ್ಮ ಇದೆ. ನಾನು ತಪ್ಪು ಮಾಡಿದಾಗ ಅದು ಹೇಳಿಯೇ ಬಿಡುತ್ತದೆ. ನನ್ನ conscious permit ಮಾಡಲಿಲ್ಲವೆಂದರೆ, ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ತಪ್ಪು ಮಾಡಿದರೆ, ಸದನದಲ್ಲಿ ಸಿದಾ-ಸಾದವಾಗಿ ಒಪ್ಪಿಕೊಂಡು ಬಿಡುತ್ತೇನೆ. On my own, I will agree.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಮುಖ್ಯ ಮಂತ್ರಿಗಳು ಸುಮಾರು ರೂ.10.00 ಲಕ್ಷ ರೂಪಾಯಿಗಳನ್ನು ಘೋಷಣೆ ಮಾಡಿದ್ದು ಹೌದು. ಆನಂತರ ಅದನ್ನು ತಡೆಹಿಡಿದಿದ್ದು ಹೌದು. ಆದರೆ ಅದನ್ನು ನಿರಾಕರಿಸಿಲ್ಲ. ಇದರ ಬಗ್ಗೆ ಸ್ಪಷ್ಟತೆ ಇರಲಿ. ಅವರು ಆರೋಪಿಗಳು ಅಲ್ಲದಿದ್ದರೂ...

**ಶ್ರೀ ಎಸ್.ಆರ್. ಪಾಟೀಲ್:-** ದಿನಾಂಕ 21.12.2019 ರಂದು ಮೃತರ ಕುಟುಂಬಕ್ಕೆ ತಲಾ ರೂ.10.00 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆಂದು, ನಂತರ ಗಲಭೆಯಲ್ಲಿ ಭಾಗವಹಿಸಿದ್ದಾರೆಂದು ಹೇಳಿ ಒಂದು ರೂಪಾಯಿ ಪರಿಹಾರ ನೀಡುವುದಿಲ್ಲವೆಂದು ದಿನಾಂಕ 24.12.2019 ರಂದು ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಾರೆ. ಮುಖ್ಯಮಂತ್ರಿಗಳು ಬೆಳಿಗ್ಗೆ ಆರು ಗಂಟೆಗೆ ಎದ್ದು ಕೂಡಲೇ ಅವರ ಬಳಿ ಡಿ.ಐ.ಜಿ., ಯವರು ಬರುತ್ತಾರೆ. He will feed all the information. ನಾನು ಬಹಳ ಸಮೀಪದಿಂದ ಬಹಳಷ್ಟು ಮುಖ್ಯಮಂತ್ರಿಯವರನ್ನು ನೋಡಿದ್ದೇನೆ. ಅವರು ಬೆಳಿಗ್ಗೆ ಎದ್ದ ಕೂಡಲೇ ಅವರನ್ನು ಮೊದಲು ಭೇಟಿಯಾಗುವರೇ ಡಿ.ಐ.ಜಿ., He will come and appraise the Chief Minister about the situation that has happened in the State. ಆದುದರಿಂದ hint ಯಾವಾಗಲೂ ಮಾನ್ಯ ಮುಖ್ಯಮಂತ್ರಿಯವರು ಇಟ್ಟುಕೊಂಡಿರುತ್ತಾರೆ. ದಿನಾಂಕ 21.12.2019 ರಂದು ಪರಿಹಾರವನ್ನು ಘೋಷಣೆ ಮಾಡಬಾರದಾಗಿತ್ತು. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳನ್ನು darkness ನಲ್ಲಿ ಇಟ್ಟಿದ್ದಾರೆ ಎಂಬುದಾಗುತ್ತದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಮುಖ್ಯಮಂತ್ರಿಗಳು ಪರಿಶೀಲನೆಯನ್ನು ಮಾಡಿಕೊಂಡು ಬಂದಿದ್ದಾರೆ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಅವರಿಗೆ ಮಾತನಾಡಲು ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಆಯಿತು ಅವರು ಏನು ಬೇಕಾದರೂ ಮಾತನಾಡಬಹುದಾ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಒಬ್ಬ ನಾಯಕರು ಎರಡು ಹೆಣ ಬಿದ್ದಿದ್ದರಿಂದ ಶಾಂತಿ ನೆಲೆಸಿತು ಎಂದು ಹೇಳಿಕೆ ಕೊಡುತ್ತಾರೆ. ನನಗೆ ಅನಿಸುವುದೇನೆಂದರೆ, ಎಲ್ಲಾ ವಾಸ್ತವಾಂಶಗಳನ್ನು ಹಾಗೂ ಸತ್ಯಾಸತ್ಯತೆಗಳನ್ನು ಅರಿಯುವುದಕ್ಕೆ ಹೈಕೋರ್ಟಿನ ಹಾಲಿ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆಯಾಗಬೇಕೆಂದು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಾನು ತಮ್ಮ ಮುಖಾಂತರ ಈ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಬಿಜೆಪಿ ಪಕ್ಷದವರು ಈ ಪೊಲೀಸ್ ವ್ಯವಸ್ಥೆಯನ್ನು ದುರುಪಯೋಗ ಮಾಡಿಕೊಳ್ಳುವುದು ಬಹಳ common ಆಗಿದೆ. ನಾನು ತಮಗೆ ಸತ್ಯವನ್ನು ಹೇಳುವುದಾದರೆ, ನಮ್ಮ ಪಕ್ಷ ಆಯಿತು ಮತ್ತು ನಾವು ಈ ಭಾಗದವರು. ಸಾರ್ವಜನಿಕ ಬದುಕಿನಲ್ಲಿ ಯಾರಾದರೂ ಬಂದು ವಿಚಾರ ಹೇಳಿದಾಗ ನಾವು ಅಧಿಕಾರಿಗಳಿಗೆ ದೂರವಾಣಿಯ ಮೂಲಕ ಏನಾದರೊಂದು ಹೇಳುತ್ತೇವೆ. ಆದರೆ ಮಾನ್ಯ ಪಾಟೀಲ್‌ರವರೇ ಇದು ಕಾನೂನಿನ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಅಧಿಕಾರಿಗಳು ತಿಳಿಸುತ್ತಾರೆ. ಹಾಗಾದರೆ, ಅದನ್ನು ಮಾಡಬೇಡಿ ಎಂದು ನಾವು ಅಧಿಕಾರಿಗಳಿಗೆ ಹೇಳುತ್ತೇವೆ. ಆದರೆ ಆಡಳಿತ ಪಕ್ಷದವರು ಏನು ಹೇಳುತ್ತಾರೆಂದರೆ, 'ಈ ಕೆಲಸ ಹೇಳಿದ್ದೇನೆ. ಇದು ಆಗಲೇಬೇಕು. 'It must be done, whatever I say should be carried out, it is my order, it is my instruction.' ಎನ್ನುವ ಧೋರಣೆ ಇವರದ್ದು. ಆದರೆ ನಾವು ಎಲ್ಲಾ ಸಾಧಕ–ಬಾಧಕಗಳನ್ನು ಯೋಚನೆ ಮಾಡುತ್ತೇವೆ. ಕಾನೂನು ವ್ಯಾಪ್ತಿ ಮೀರಿದ್ದು ಇದೆ ಎಂದು ಅಧಿಕಾರಿಗಳು ಹೇಳುತ್ತಾರೆ. ದಯವಿಟ್ಟು ಅದನ್ನು ಮಾಡಬೇಡಿ ಎಂದು ನಾವು ಹೇಳುತ್ತೇವೆ. 'You have to save your skin first, nobody will come to your rescue when you are in risk' ಎಂದು bureaucrats ಗಳಿಗೆ ನಾವು ಹೇಳುತ್ತೇವೆ. ಆದರೆ ಇವರು 'ಇಲ್ಲ, ಈ ಕೆಲಸ ಹೇಳಿದ್ದೇನೆ. ಇದು ಆಗಲೇಬೇಕು' ಎಂಬುದಾಗಿ ಹೇಳುವಂತಿದೆ.

ಮಾನ್ಯ ಸಭಾಪತಿಯವರೇ, ಜನವರಿ 8 ರಂದು ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ವಿವಿಧ ವಿದ್ಯಾರ್ಥಿ ಸಂಘಟನೆಗಳಾದ ದಲಿತ ವಿದ್ಯಾರ್ಥಿ ಒಕ್ಕೂಟ, ಬಹುಜನ ವಿದ್ಯಾರ್ಥಿ ಸಂಘ, ಭಾರತದ ವಿದ್ಯಾರ್ಥಿ ಒಕ್ಕೂಟ, ಅಖಿಲ ಭಾರತ ಪ್ರಜಾಪ್ರಭುತ್ವ ವಿದ್ಯಾರ್ಥಿ ಸಂಘಟನೆ, ಮೈಸೂರು ವಿಶ್ವವಿದ್ಯಾಲಯ ಸಂಶೋಧನಾ ವಿದ್ವಾಂಸರ ಸಂಘ ಮುಂತಾದವು. ಜೆ.ಎನ್.ಯು ವಿದ್ಯಾರ್ಥಿಗಳ ಮೇಲಿನ ಹಲ್ಲೆಯನ್ನು ಖಂಡಿಸಿ ಪಂಜಿನ ಮೆರವಣಿಗೆ ಹಾಗೂ ಪ್ರತಿಭಟನೆಗಳನ್ನು ಮಾಡುವ ಸಲುವಾಗಿ ಹೋದಾಗ, ಈ ಪ್ರಕ್ರರಣದಲ್ಲಿ ಯುನಿವರ್ಸಿಟಿ ರಿಸರ್ಚ್ ಸ್ಕಾಲರ್ಸ್ ಅಸೋಸಿಯೇಷನ್‌ನ ಅಧ್ಯಕ್ಷ ಶ್ರೀ ಮರಿದೇವಯ್ಯ ಅವರನ್ನು ಆರೋಪಿ–1 ಎಂದು ಮಾಡುತ್ತಾರೆ. ಈ ಪ್ರತಿಭಟನೆ ನೇತೃತ್ವ ವಹಿಸಿದ್ದ ಶ್ರೀ ಮರಿದೇವಯ್ಯ ಅವರನ್ನು ರಾಜದ್ರೋಹದಂತಹ ಕಾನೂನು ಬಾಹಿರ ಕೃತ್ಯವನ್ನು ಮಾಡಿದ್ದಾರೆಂದು, ಅವರಿಗೆ ಆರೋಪಿ–1 ಎಂದು ಮಾಡುತ್ತಾರೆ. ಈ ಪ್ರಕರಣವನ್ನು ನಿಭಾಯಿಸಲು ವಕಾಲತ್ತು ವಹಿಸಬಾರದೆಂದು ಮೈಸೂರು ಬಾರ್ ಅಸೋಸಿಯೇಷನ್‌ನ ಕೆಲವರು ನಿರ್ಧಾರ ತೆಗೆದುಕೊಳ್ಳುತ್ತಾರೆ. ನಾನು ಇದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. Basically, I am also an Advocate.

ಮಾನ್ಯ ಸಭಾಪತಿಯವರೇ, ಬೀದರ್‌ನ ಶಾಹಿನ್ ಶಾಲೆಯ ಪ್ರಕರಣ ಜನವರಿ 21 ರಂದು ಈ ಶಾಲೆಯ ವಿದ್ಯಾರ್ಥಿಗಳು ಸಿ.ಎ.ಎ., ಮತ್ತು ಎನ್.ಆರ್.ಸಿ., ವಿರುದ್ಧ ನಾಟಕ ಪ್ರದರ್ಶಿಸಿದ್ದರು. ಇದರ ವಿಡಿಯೋವನ್ನು ಮೊಹಮದ್ ಯೂಸಫ್ ರಹೀಮ್ ಎಂಬುವವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪ್ರಕಟಿಸುತ್ತಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಸಚಿವರೇ ವಿರೋಧಪಕ್ಷದ ನಾಯಕರ ಮಾತನ್ನು ಆಲಿಸುವುದು ಒಳ್ಳೆಯದು.

**(ಈ ಹಂತದಲ್ಲಿ ಮಾನ್ಯ ಗೃಹ ಸಚಿವರಾದ ಶ್ರೀ ಬಸವರಾಜು ಬೊಮ್ಮಾಯಿಯವರು ಆಡಳಿತ ಪಕ್ಷದ ಹಿಂದಿನ ಸಾಲಿನಲ್ಲಿ ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರ ಪಕ್ಕದಲ್ಲಿರುವ ಆಸನದಲ್ಲಿ ಕುಳಿತಿದ್ದರು.)**

**ಸಭಾಪತಿಯವರು:–** ನಾನು ತಮಗೆ ಹೇಳುತ್ತಿಲ್ಲ. ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಚಿವರು ಹಿಂದಿನ ಸಾಲಿನಲ್ಲಿ ಏಕೆ ಕುಳಿತರು?

**ಸಭಾಪತಿಯವರು:–** ತಾವು ಮಾತನಾಡಿದ್ದನ್ನು ಮಾನ್ಯ ಸಚಿವರು ಕೇಳಬೇಕೆಂದು ಹೇಳಿದೆ. ತಾವು ಮಾತನಾಡಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಗೃಹ ಸಚಿವರೇ ಹಿಂದಿನ ಸಾಲಿನ ಆಸನದಲ್ಲಿ ಕುಳಿತಿದ್ದೀರಿ. ನನ್ನ ಮಾತಿನ ಬಗ್ಗೆ ಗಮನವಿರಲಿ. ತಾವು ಅಲ್ಲಿಯೇ ಕುಳಿತು ಕೇಳಿ. ಇಲ್ಲಿಯೇ ಕುಳಿತುಕೊಂಡು ಕೇಳಿ ಎಂದು ನಾನು ಹೇಳುವುದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:–** ಅಲ್ಲ, ಅಲ್ಲ ಇದರ ಬಗ್ಗೆ ಏನು ಮಾತನಾಡಿದ್ದಾರೆಂಬುದು ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರು ನನಗೆ ಹೇಳುತ್ತಿದ್ದಾರೆ ಅಷ್ಟೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಪೊಲೀಸರು ಅದೇ ದಿನ ಎಫ್.ಐ.ಆರ್. ಅನ್ನು ಶಾಹಿನ್ ಶಾಲೆಯ ಅಧ್ಯಕ್ಷ ಆರೋಪಿ–1, ಆಡಳಿತ ಮಂಡಳಿಯ ಸದಸ್ಯರು ಆರೋಪಿ–2, ಫೇಸ್‌ಬುಕ್‌ನಲ್ಲಿ ಹರಿಯಬಿಟ್ಟ ಮೊಹಮದ್ ಯೂಸಫ್ ಆರೋಪಿ–3 ಎಂದು ಇವರ ಮೇಲೆ I.P.C., ಯ ಕಲಂ 504, 505(2), 124A ಅಡಿಯಲ್ಲಿ ಖಟ್ಲೆಯನ್ನು ದಾಖಲಿಸಿರುತ್ತಾರೆ. ಇದರಲ್ಲಿ ದೇಶದ್ರೋಹದ ಆರೋಪ ಮಾಡಲಾಗಿದೆ. I.P.C., ಯ ಕಲಂ 153A, 34 for Common Intention, ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿದ್ದಾರೆ.

ಜನವರಿ 31 ರಂದು ಶಾಲೆಯ ಮುಖ್ಯೋಪಾಧ್ಯಾಯಕಿ ಫರೀದಾ ಬೇಗಂ ಮತ್ತು ವಿದ್ಯಾರ್ಥಿಯ ತಾಯಿ ನಜೀಮುನ್ನಿಸಾ ಅವರನ್ನು ಅವರ ಮಗುವು ನಾಟಕದ ಪ್ರದರ್ಶನದಲ್ಲಿ ಭಾಗಿಯಾಗಿದ್ದಾರೆಂದು ಇಬ್ಬರನ್ನು ಬಂಧಿಸಿದ್ದಾರೆ. ಅವರನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಅವರಿಗೆ ಬಹುತೇಕ ಬೇಲ್ ಆಗಿರಬಹುದೆಂದು ನಾನು ಭಾವಿಸುತ್ತೇನೆ. ಶಾಹೀನ್ ಶಾಲೆಯ 60 ವಿದ್ಯಾರ್ಥಿಗಳ ಹತ್ತಿರ ಪೊಲೀಸ್ ಅಧಿಕಾರಿಗಳು ಹೋಗಿ ಮೇಲಿಂದ ಮೇಲೆ ವಿಚಾರಣೆ ಮಾಡುತ್ತಾರೆ. ಫೆಬ್ರವರಿ 4 ರಂದು ಐದನೇ ಬಾರಿ ವಿದ್ಯಾರ್ಥಿಗಳನ್ನು ಮತ್ತೆ ಪ್ರಶ್ನಿಸಿದ್ದಾರೆ. ಅಪ್ರಾಪ್ತ ಬಾಲಕರು ಅಥವಾ ಬಾಲಕಿಯರನ್ನಾಗಲೀ ವಿಚಾರಣೆ ಮಾಡಬೇಕಾದರೆ ಕೆಲವು ನಿಯಮಗಳಿವೆ. Juvenile offenders ಎನ್ನುತ್ತಾರೆ. *Doli incapax* ಎನ್ನುತ್ತಾರೆ. ಅವರನ್ನು ವಿಚಾರಣೆ ಮಾಡಬೇಕಾದರೆ, there are some rules and regulations. ಆದರೆ ಇಲ್ಲಿ ಯಾವ ನಿಯಮಗಳನ್ನು ಪಾಲಿಸಿಲ್ಲ. ಮನಸೋಇಚ್ಛೆ ವಿಚಾರಣೆ ಮಾಡುತ್ತಾರೆ.

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(35)18-2-2020/4.40/ಎಂ.ಎಂ-ಜಿ.ಆರ್

**ಶ್ರೀ ಎಸ್.ಆರ್. ಪಾಟೀಲ್ (ಮುಂದು):-**

ಆ ಮಗುವಿನ ಅಪ್ಪ ಕ್ಯಾನ್ಸರ್ ಆಗಿ ಸತ್ತು ಹೋಗಿದ್ದಾರೆ. ಈಗ ಆ ಮಗುವಿಗೆ ಅವ್ವನೂ ಇಲ್ಲ, ಅಪ್ಪನೂ ಇಲ್ಲ. ಅಂದರೆ ಅವ್ವ ಜೈಲಿನಲ್ಲಿದ್ದಾಳೆ, ಅಪ್ಪನಂತೂ ಸತ್ತು ಹೋಗಿದ್ದಾರೆ. ಆ ಮಗುವನ್ನು ನೋಡಿಕೊಳ್ಳುವವರು ಗತಿಯಿಲ್ಲದಂತಾಗಿದೆ. ಇದು ಎಷ್ಟು inhuman? ಈ ಎರಡು ಪ್ರಕರಣದಲ್ಲಿ ಅಮಾಯಕ ಹೆಣ್ಣುಮಕ್ಕಳ ಮೇಲೆ, ವಿಧವೆ ಮೇಲೆ ದೇಶದ್ರೋಹ ಪ್ರಕರಣವನ್ನು ದಾಖಲು ಮಾಡಿದ್ದಾರೆ. ನಮ್ಮನ್ನು ಬ್ರಿಟಿಷರು ಆಳುವಾಗ ಲಾರ್ಡ್ ಮೆಕಾಲೆಯವರು ಇಂಡಿಯನ್ ಪೀನಲ್ ಕೋಡ್ ಅನ್ನು ಡ್ರಾಫ್ಟ್ ಮಾಡಿದ್ದರು, ಅವರ ವಿರುದ್ಧ ಯಾರು ಧ್ವನಿ ಎತ್ತಿದರೂ ದೇಶದ್ರೋಹದ ಆರೋಪ ಮಾಡಿ ನಮ್ಮ ಪೂರ್ವಜರು ಸ್ವಾತಂತ್ರ್ಯ ಸಂಗ್ರಾಮದಲ್ಲಿದ್ದವರಿಗೆ ಕೇಸ್ ಹಾಕುತ್ತಿದ್ದರು. Now, we have got an elected Government. The Opposition has a say, people have got a say. ಅವರು ಒಂದು ಪದದ ಮುಖಾಂತರ ಹೇಳಬಹುದು, ನಾಟಕದ ಮುಖಾಂತರ ಹೇಳಬಹುದು, ಪತ್ರಿಕೆಯ ಮುಖಾಂತರ ಹೇಳಬಹುದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆಯೋ ಇಲ್ಲವೋ? It's a fundamental right of the citizen. ಈಗ ಇವರಿಗೆ ಮಾಧ್ಯಮದವರಿಗೆ the fourth organ of the democracy, ನಾವು ಇವರನ್ನೆಲ್ಲಾ ದೇಶದ್ರೋಹದ ಕೇಸ್ ಹಾಕಿ ಒಳಗೆ ಕಳುಹಿಸಿದರೆ 4ನೇ ಅಂಗ ಜೈಲಿನಲ್ಲಿರುತ್ತದೆ. ತಮ್ಮ ವಿಚಾರಗಳನ್ನು ವ್ಯಕ್ತ ಮಾಡಿದರೆ ಅವರಿಗೆ ದೇಶದ್ರೋಹ ಆರೋಪ ಮಾಡಲಾಗುತ್ತದೆ. Lawfully established Government ಅನ್ನು overthrow ಮಾಡುವಂತಹ capacity ಮಗುವಿನ ತಾಯಿಗಿದೆಯೇ? ಆ ಶಾಲೆಯ ಮುಖ್ಯೋಪಾಧ್ಯಾಪಕಿಗೆ ದೇಶದ್ರೋಹ ಆರೋಪ. ಅದು ಹೆಣ್ಣುಮಗು, ಅವರಿಗೆ ಹೃದಯ ಇದೆಯೋ ಇಲ್ಲವೋ ಎಂದನಿಸುತ್ತದೆ. ದಿನಾಂಕ 16-12-2019ರಂದು ಮಂಗಳೂರಿನ ಒಂದು ಶಾಲೆಯಲ್ಲಿ ಅಲ್ಲಿ ಉನ್ನತ ಅಧಿಕಾರಿಗಳಿದ್ದರು. ಇದು ತಮ್ಮ ಗಮನಕ್ಕೆ ಇದೆಯೆಂದು ನಾನು ಭಾವಿಸುತ್ತೇನೆ. ಅಲ್ಲಿ ರಾಜಕೀಯ ಮುಖಂಡರೂ ಇದ್ದರು. ಅಲ್ಲಿ ಬಾಬರಿ ಮಸೀದಿ ಧ್ವಂಸ ಮಾಡಿದ ಬಗ್ಗೆ...

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಗೃಹ ಸಚಿವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದರೆ ನೀವು ಅಲ್ಲಿ ಮಾತನಾಡುತ್ತಾ ಕುಳಿತಿದ್ದೀರಲ್ಲ ಬನ್ನಿ ಸ್ವಲ್ಪ ಕೇಳಿ.

**ಶ್ರೀ ಎಸ್.ಆರ್. ಪಾಟೀಲ್:-** ಅವರು Juvenile Justice ಬಗ್ಗೆ ಮಾತನಾಡಿದರು.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಆಯನೂರು ಮಂಜುನಾಥರವರು ಬೆಳಿಗ್ಗೆ ನಮಗೆಲ್ಲಾ ಪಾಠ ಹೇಳಿದರು. ಏನು ನಡೆಯುತ್ತಿದೆ ಎಂಬುದು ನಿಮಗೆ ಗೊತ್ತಾಗಬೇಕಲ್ಲವೇ?

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು):-** ಮಾನ್ಯ ರೇವಣ್ಣನವರೇ, . . .

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದರೆ ಗೃಹ ಸಚಿವರು ಅಲ್ಲಿ ಕುಳಿತುಕೊಂಡು ಮಾನ್ಯ ಸದಸ್ಯರಾದ ಆಯನೂರು ಮಂಜುನಾಥರವರ ಜೊತೆ ಮಾತನಾಡುತ್ತಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು):–** ಮಾನ್ಯ ಹೆಚ್.ಎಂ. ರೇವಣ್ಣನವರೇ, ಮಂಜಣ್ಣನವರು ಬೆಳಿಗ್ಗೆ ತಾವೆಲ್ಲಾ ಏನು ಮಾತನಾಡಿದ್ದೀರಿ ಅದರ ವಿವರ ಕೊಡುತ್ತಿದ್ದಾರೆ. ಒಟ್ಟಾರೆಯಾಗಿ ಬೆಳಿಗ್ಗೆ ಮಾತನಾಡಿದ್ದಕ್ಕೆಲ್ಲಾ ನಾವು ಉತ್ತರ ಕೊಡಬೇಕಲ್ಲವೇ? ಅದನ್ನು ತೆಗೆದುಕೊಳ್ಳುತ್ತಿದ್ದೇನೆ. ನನಗೆ ಬಹಳ ಸಂತೋಷವಾಗಿದ್ದೇನೆಂದರೆ, ನಮ್ಮ ರೇವಣ್ಣನವರು ಇಷ್ಟು ಸೀರಿಯಸ್ ಆಗಿ ಕುಳಿತುಕೊಂಡು ಕೇಳುತ್ತಿದ್ದಾರಲ್ಲ ಎಂದು.

(ಗೊಂದಲ)

**ಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ, ತಾವು ಮಾತನ್ನು ಮುಂದುವರೆಸಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದು ತಮ್ಮ ಜಿಲ್ಲೆಯ ವಿಚಾರವಾಗಿದೆ. ದಿನಾಂಕ 16–12–2019ರಂದು ಮಂಗಳೂರಿನ ಕಲ್ಲಡ್ಕ ಶಾಲೆಯೊಂದರಲ್ಲಿ ಸರ್ಕಾರದ ಉನ್ನತ ಅಧಿಕಾರಿಗಳು ಮತ್ತು ಹಲವು ರಾಜಕೀಯ ಮುಖಂಡರ ಸಮಕ್ಷಮದಲ್ಲಿ ಶಾಲಾ ಮಕ್ಕಳಿಂದ ಬಾಬರಿ ಮಸೀದಿಯನ್ನು ಧ್ವಂಸ ಮಾಡುವ ಅಣಕು ಪ್ರದರ್ಶನ ಮಾಡಲಾಯಿತು. Our Supreme Court has already observed that the demolition has affected the very secular fabric of the country. It is ruled by the Apex Court of this land that there is a damage to the secular fabric. ಬಾಬರಿ ಮಸೀದಿ ಧ್ವಂಸ ಮಾಡುವುದನ್ನು ಆ ಶಾಲೆಯಲ್ಲಿ ವಿಜೃಂಭಿಸಿದ್ದಾರೆ. ತಮ್ಮ ಮುಖಾಂತರ ಒಂದು ಪ್ರಶ್ನೆ ಕೇಳುತ್ತೇನೆ. ಇದು ದ್ವೇಷ ಹುಟ್ಟಿಸುವಂತಹ ಮತ್ತು ಕೋಮು ಸಾಮರಸ್ಯವನ್ನು ಹಾಳು ಮಾಡುವಂತಹ ವಿಚಾರವಲ್ಲ. ಇದು ಕೋಮು ಸಾಮರಸ್ಯವನ್ನು ಹಾಳು ಮಾಡುವ ವಿಚಾರ ಹೌದೋ ಅಲ್ಲವೋ? ಧರ್ಮ ಧರ್ಮಗಳ ಮಧ್ಯೆ ಗೋಡೆಗಳನ್ನು ನಿರ್ಮಾಣ ಮಾಡುವ, ಕಂದಕ ನಿರ್ಮಾಣ ಮಾಡುವ, ದ್ವೇಷ ಹುಟ್ಟಿಸುವ ಕೆಲಸವಲ್ಲವೇ ಇದು? ಹಾಗಾದರೆ ಈ ಶಾಲೆಯ ಮುಖ್ಯಸ್ಥರ ಮೇಲೆ ಏಕೆ ದೇಶದ್ರೋಹ ಪ್ರಕರಣವನ್ನು ದಾಖಲು ಮಾಡಲಿಲ್ಲ? Secular fabric damage ಆಗಿದೆ ಎಂದು ನಾನು ನೀವು ಹೇಳಿದ್ದಲ್ಲ ಈ ದೇಶದ ಸರ್ವೋಚ್ಚ ನ್ಯಾಯಾಲಯ ತೆಗೆದುಕೊಂಡಂತಹ ನಿರ್ಣಯವಾಗಿದೆ. ಜಾತ್ಯಾತೀತ ನಿಲುವನ್ನು ಭಾರತರತ್ನ, ಸಂವಿಧಾನಶಿಲ್ಪಿ ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರು Preamble of the Constitution ನಲ್ಲಿ ಪೀಠಿಕೆಯಲ್ಲಿ "India is a secular democratic sovereign country" ಎಂದು ಹೇಳಿದ್ದಾರೆ. ಭಾರತವು ಜಾತ್ಯಾತೀತ, ಪ್ರಜಾಸತ್ತಾತ್ಮಕ ಸಾರ್ವಭೌಮ ರಾಷ್ಟ್ರ ಎಂದು ಪೀಠಿಕೆಯಲ್ಲಿ ಹೇಳಿದ್ದಾರೆ. ಇದು ಪೀಠಿಕೆಯಲ್ಲಿದೆ, ಇದಕ್ಕೆ ಧಕ್ಕೆಯಾಗುವಂತಹ ರೀತಿಯಾಗಿ ಧರ್ಮ ಧರ್ಮಗಳ ಮಧ್ಯೆ ಕ್ಷೋಭೆ, ವೈಮನಸ್ಸು ಉಂಟು ಮಾಡುವಂತಹ, ಗೋಡೆಗಳನ್ನು ಉಂಟು ಮಾಡುವಂತಹ ಈ ಒಂದು ನಾಟಕವಿದೆ ಇದೇನು ಅಪ್ಸೈ ಆಗುವುದಿಲ್ಲವೇ, ಇದು ದ್ವೇಷವಲ್ಲವೇ? ಈಗ ತಾನೇ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

‘ಶಾಹಿನ್’ ಮತ್ತು ಅನೇಕ ವಿಚಾರಗಳನ್ನು ಹೇಳಿದೆ ಆ ರೀತಿ ಇಲ್ಲಿ ಏಕೆ ಕೇಸ್ ಬುಕ್ ಆಗಲಿಲ್ಲ? The police would have booked a case against the guilty persons. ಆಡಳಿತ ಮಂಡಳಿಯ ಮೇಲೆ, ಆಡಳಿತ ನಡೆಸುವ ಮುಖ್ಯೋಪಾಧ್ಯಾಯರ ಮೇಲೆ ಕೇಸ್ ಬುಕ್ ಮಾಡಬಹುದಾಗಿತ್ತಲ್ಲವೇ? Why the Government has utterly failed?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಎಲ್ಲಾ ಪ್ರಕರಣಗಳಿಗೂ ಕೇಸ್ ದಾಖಲಾಗಿದೆ, ತನಿಖೆ ನಡೆಯುತ್ತಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ಇದನ್ನು ಇಬ್ಬಂದಿತನ ಧೋರಣೆ ಎಂದು ಹೇಳುತ್ತೇನೆ. ನಾನು ಹೇಳುವುದೇನೆಂದರೆ, ಪದ್ಯ ಓದುವುದು ನಾಟಕ ಮಾಡುವುದು ಇಂತಹ ಸೃಜನಶೀಲ ಕಾರ್ಯಕ್ರಮಗಳನ್ನು ದಮನಿಸುವುದಕ್ಕೆ ಹೊರಟರೆ ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಯುತ್ತದೆಯೇ? ಪದ್ಯವನ್ನು ಓದಬಾರದು, ನಾಟಕ ಮಾಡುವ ಹಾಗಿಲ್ಲ ಇಂತಹವುಗಳನ್ನೇನೂ ಮಾಡುವ ಹಾಗಿಲ್ಲ, ಹೀಗಾದರೆ ಪ್ರಜಾಪ್ರಭುತ್ವ ನಾಶವಾಗುತ್ತದೆ. ಒಬ್ಬ ಬಹಳ ಅದ್ಭುತವಾದ ವ್ಯಂಗ್ಯಚಿತ್ರಕಾರನಿರುತ್ತಾನೆ . . .

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ...

**Sri S.R.PATIL**:- No, I am not yielding. I will not yield, please. I have come to the end.

**ಸಭಾಪತಿಯವರು:–** ಇದನ್ನು ಮುಗಿಸುತ್ತಾರೆ ಬಿಡಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ಬಹಳ ಹೊತ್ತಿನಿಂದ ಕುಳಿತುಕೊಂಡಿದ್ದರು. . . ಒಬ್ಬ ಕಾರ್ಟೂನಿಸ್ಟ್ ಕೂಡ ಚಿತ್ರಿಸಲ್ಲು ಇನ್ನು ಮುಂದೆ ಬಹಳ ವಿಚಾರ ಮಾಡಬೇಕಾಗುತ್ತದೆ. ಆ ಕಾರ್ಟೂನಿನಲ್ಲಿ ಸ್ವಲ್ಪ ಏನಾದರೂ ಬಂದರೆ ದೇಶದ್ರೋಹದ ಆರೋಪದ ಮೇಲೆ ಒಳಗೆ ಹಾಕುವುದಕ್ಕೆ ಇವರೇನು ಹಿಂದೆ ಮುಂದೆ ನೋಡುವವರಲ್ಲ. ಚಿತ್ರ ಬರೆಯುವವರು, ನಾಟಕಕಾರರು, ನಾಟಕ ಬರೆದು ಪ್ರದರ್ಶನ ಮಾಡುವವರು ಮತ್ತು ಕವಿಗಳಿಗೂ ದಾಳಿ ಬರುತ್ತದೆ. “ರವಿ ಕಾಣದ್ದನ್ನು ಕವಿ ಕಂಡ” ಅಂತಾರಲ್ಲ ಕವಿ ಏನಾದರೂ ಒಂದು ಕವಿತೆ ಬರೆದರೆ ಅದರಲ್ಲಿ ಏನಾದರೂ ಅಂತಹದ್ದು ಬಂತೆಂದರೆ ಮುಗಿಯಿತು ಅವನು ಜೈಲಿಗೆ ಹೋಗುತ್ತಾನೆ. ಇದೆಲ್ಲಾ ದೇಶದ್ರೋಹ ಎಂದರೆ ಇದು ನಾಗರೀಕ ಸಮಾಜ ಮಾಡುವಂತಹ ಕೃತ್ಯ ಎಂದು ಹೇಳುವುದು ಬಾಕಿ ಇದೆ. ಕೊನೆಯದಾಗಿ ನಿಮ್ಮ ಗಮನಕ್ಕೆ, ಕನ್ನಡದ ಹೆಮ್ಮೆಯ ಕವಿಯಾದ ‘ಕುಮಾರವ್ಯಾಸ’ರು ತಮ್ಮ “ಗದುಗಿನ ಭಾರತ” ಕೃತಿಯಲ್ಲಿ ಹೇಗೆ ಹೇಳಿದ್ದಾರೆಂದರೆ, “ಅರಸು ರಾಕ್ಷಸ, ಮಂತ್ರಿ ಮೊರೆವ ಹುಲಿ, ಪರಿವಾರ ಹದ್ದಿನ ನೆರವಿ” ಎಂದು ಬರೆದಿದ್ದಾರೆ. ಇನ್ನು ದಾಸ ಸಾಹಿತ್ಯದಲ್ಲಿಯೇ ಶ್ರೇಷ್ಠತೆಯನ್ನು ಪಡೆದಂತಹ ಪುರಂದರ ದಾಸರು “ಉತ್ತಮ ಪ್ರಭುತ್ವ ಲೊಳಲೊಟ್ಟೆ” ಎಂದು ಹೇಳಿದ್ದಾರೆ. ಅಂದ ಮೇಲೆ ಅಂದಿನ ಊಳಿಗಮಾನ್ಯ ರಾಜ ಮಹಾರಾಜರುಗಳು ಕವಿಗಳನ್ನು ದಾಸರುಗಳನ್ನು ಹಿಡಿದು ಜೈಲಿಗೆ ಹಾಕಬೇಕಾಗಿತ್ತಲ್ಲವೇ? ಮಾಜಿ ಸಚಿವರಾದ ಶ್ರೀ ಯು.ಟಿ. ಖಾದರ್‌ರವರು ಮಂತ್ರಿಯಾಗಿ ಅಲ್ಲಿ ಕೆಲಸ

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಮಾಡಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ಉತ್ತರ ಭಾರತದಲ್ಲಿ ಆದಂತಹ ಘಟನೆ ನಮ್ಮ ರಾಜ್ಯದಲ್ಲಿ ಆಗಬಾರದು ಹುಷಾರಾಗಿರಿ Government has to take steps, Government has to take action and the Government has to take adequate measures ಎಂಬ ಉದ್ದೇಶದಿಂದ ಹೇಳಿದರೆ ಅವರಿಗೆ ರಾಜ್ಯದ್ರೋಹದ ಆಪಾದನೆ ಮಾಡಿದರು. ಅವರು ಕ್ರಿಮಿನಲ್ ಅಪರಾಧ ಮಾಡಲು ಉತ್ತೇಜಿಸುವ ಮಾತನ್ನಾಡಿದ್ದಾರೆ ಎಂದು ಅವರ ಮೇಲೆ ಐ.ಪಿ.ಸಿ., ಯ ಕಲಂ 124ಎ ಹಾಕಿದ್ದಾರೆ. ಕಾಂಗ್ರೆಸ್‌ನಿಂದ ಅವರೊಬ್ಬರೇ ಶಾಸಕರಾಗಿ ಆರಿಸಿ ಬಂದಿದ್ದಾರೆ ನೋಡೋಣ ಎಂಬ ವಿಚಾರವೇ ಇವರದ್ದು. ಉಡುಪಿ ಮತ್ತು ಮಂಗಳೂರಿಗೆ ಅವರೊಬ್ಬರೇ ಏಕಮೇವ ಕಾಂಗ್ರೆಸ್ ಸದಸ್ಯರು. He is a very decent man.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಿ.ಎ.ಎ ಕರ್ನಾಟಕದಲ್ಲಿ ಜಾರಿಯಾದರೆ . . .

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾನಾಯಕರೇ, ಅವರು ಹೇಳಿದ್ದರಲ್ಲಿ ತಪ್ಪೇನಿದೆ?

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಅವರು ಪ್ರತಿಪಕ್ಷದ ಸದಸ್ಯರಾಗಿ . . .

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಬಾಬರಿ ಮಸೀದಿಯನ್ನು ಮತ್ತೊಮ್ಮೆ ಕೆಡವಿ ನಾಟಕ ಮಾಡಿದ್ದು ಸರಿಯೇ?

**ಶ್ರೀ ಐವನ್ ಡಿ'ಸೋಜಾ:-** ಇಡೀ ಕರ್ನಾಟಕದಲ್ಲಿ ಬೆಂಕಿ ಬಿದ್ದಿದೆ . . .

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಕಾನೂನು ಈ ಸರ್ಕಾರದ ಅಪ್ಪನ ಮನೆಯ ಕಾನೂನಾ?

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಅದೇನು ಪ್ರಚೋದನೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಪೌರತ್ವ ತಿದ್ದುಪಡಿ ಮಸೂದೆ ಜಾರಿಯಾದರೆ ಕರ್ನಾಟಕ ಹೊತ್ತಿ ಉರಿಯಬೇಕಾಗುತ್ತದೆ ಎಂದು ಹೇಳಬೇಕಾದರೆ ಮಂತ್ರಿಗಳಿಗೆ . . .

**(36) 18-02-2020/ 04-50/ ಕೆಹೆಚ್-ಎಂಡಿ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, 'ಕರ್ನಾಟಕ ಬೆಂಕಿ ಹೊತ್ತಿಕೊಂಡು ಉರಿಯುತ್ತಿದೆ' ಎಂದು ಹೇಳಬೇಕಾದರೆ, ಮಂತ್ರಿಗಳಿಗೆ . . .

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ವಿರೋಧ ಪಕ್ಷದ ನಾಯಕರೇ ಅವರು ಆ ರೀತಿ ಹೇಳಲಿಲ್ಲ. ಅವರು ಹೇಳಿದ್ದು . . .

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾನಾಯಕರೇ, ಉತ್ತರ ಪ್ರದೇಶದಲ್ಲಿ ಏನು ನಡೆದಿದೆ, ಆ ರೀತಿ ನಮ್ಮ ಕರ್ನಾಟಕದಲ್ಲಿ ಆಗಬಹುದು. ಅದಕ್ಕೆ ತಾವು ಹುಷಾರಾಗಿ precautions, adequate measures ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಪ್ರಕರಣ ಏಕೆ ದಾಖಲಾಯಿತು ಎಂದು ಕೇಳಿದರೆ ಬೆಳಗ್ಗೆ ಎದ್ದು ಏನು ಹೇಳಿದ್ದಾರೆ ಎಂದರೆ, . . .

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ಇದರ ಬಗ್ಗೆ ಎಲ್ಲಾ ಗೊತ್ತಾಗಿದೆ. ಇದನ್ನು ನಾನು ಹೇಳಬಾರದು. In my opinion this Government days are numbered.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ತಾವು ಏನು ಬೇಕಾದರೂ ಮಾತನಾಡಿಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ತಾವು ಈ ರೀತಿ ಮಾಡಿಕೊಳ್ಳುತ್ತಾ ಹೋದರೆ ಹೇಗೆ? ತಾವು ಮೆಚ್ಚುಗೆಯಾಗುವಂತಹ ಒಳ್ಳೆಯ ಕೆಲಸಗಳನ್ನು ಮಾಡಿ. I will be the first man to garland you and congratulate you. ಇದರ ಬಗ್ಗೆ ನಾನು ಮುಕ್ತವಾಗಿ ಹೇಳುತ್ತೇನೆ. ನೀವು ರಾಜ್ಯಕ್ಕೆ ಒಳ್ಳೆಯದನ್ನು ಮಾಡಿ. ನೀವೇ ಮೂರುವರೆ ವರ್ಷಗಳ ಕಾಲ ಇದ್ದು, ಒಳ್ಳೆಯ ಆಡಳಿತವನ್ನು ನಡೆಸಿ. ಈ ರಾಜ್ಯದ ಆರೂವರೆ ಕೋಟಿ ಜನರಿಗೆ ಅತ್ಯುತ್ತಮವಾದಂತಹ ಮತ್ತು ಪ್ರಾಮಾಣಿಕವಾದಂತಹ ಆಡಳಿತವನ್ನು ಹಾಗೂ ಭ್ರಷ್ಟಾಚಾರಮುಕ್ತವಾದಂತಹ ಆಡಳಿತವನ್ನು ಕೊಡಿ. ಅದರ ಬಗ್ಗೆ ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಅದು deviate ಆಗುತ್ತದೆ. ಆದ್ದರಿಂದ ಆ ವಿಚಾರವನ್ನು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವಾಗ ಮಾತನಾಡುತ್ತೇನೆ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾನಾಯಕರೇ, ಅವರಿಗೆ ಒಂದು ನ್ಯಾಯ, ನಮಗೆ ಒಂದು ನ್ಯಾಯ ಆ ರೀತಿಯಲ್ಲಿ ಮಾಡಬೇಡಿ.

**ಶ್ರೀ ಎಸ್.ಆರ್.ಪಾಟೀಲ್:–** ನಾನು ಸಹ ಅದನ್ನೆ ಹೇಳುತ್ತಿದ್ದೇನೆ. ಮಾನ್ಯ ಯು.ಟಿ.ಖಾದರ್‌ರವರಿಗೆ ಒಂದು ನ್ಯಾಯ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನೀವು ಅನ್ಯಾಯ ಮಾಡಿ, ಅದೇ ನ್ಯಾಯ ಎನ್ನುವುದು ಸರಿಯೇ? ಇಲ್ಲಿ ಮಾನ್ಯ ಯು.ಟಿ.ಖಾದರ್‌ರವರ ಪ್ರಶ್ನೆಯಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ತಾವು ಉಸ್ತುವಾರಿ ಮಂತ್ರಿಗಳಲ್ಲವೇ, ಎರಡು ಜೀವಗಳು ಬಿತ್ತು. ನೀವು ಅವರ ಮನೆಗೆ ಹೋಗಿದ್ದೀರಾ, ಅವರ ಮನೆಗೆ ಭೇಟಿ ಕೊಟ್ಟಿದ್ದೀರಾ? ಮಾತನಾಡುವುದಕ್ಕೆ ನಿಮಗೆ ಯಾವ ನೈತಿಕತೆ ಇದೆ. ಅವರ ಮನೆಗೆ ಭೇಟಿ ಕೊಡುವಂತಹ ಸೌಜನ್ಯ ತಮಗೆ ಇಲ್ಲ. You are in-charge minister, have you visited their home.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಬಂದಾಗ ಮಾನ್ಯ ಐವನ್ ಡಿ'ಸೋಜಾರವರು ...

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾನಾಯಕರೇ, ಏನೇನೋ ಮಾತನಾಡಬೇಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನೀವು ಮತ್ತು ನಾವು ಒಟ್ಟಿಗೆ ಮಾನ್ಯ ಮುಖ್ಯಮಂತ್ರಿಗಳ ಮನೆಗೆ ಹೋಗಿದ್ದು, ಅವರ ಮನೆಗೆ ಸಂಬಂಧಿಕರು ಬರುತ್ತಾರೆಂದು ಇವರೇ ಹೇಳಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:–** ಅವರ ಮನೆಗೆ ಭೇಟಿ ಕೊಡಬೇಕೋ ಅಥವಾ ಬೇಡವೇ. ನೀವು ಅವರ ಮನೆಗೆ ಹೋದಿರಾ? ಅವರ ಮನೆಗೆ ಹೋಗುವಂತಹ ಸೌಜನ್ಯ ಇಲ್ಲವೇ, ನಿಮ್ಮ ಶಾಸಕರು ಬಂದಿಲ್ಲ. ಇವರು ಏಕೆ ಈ ರೀತಿ ಮಾತನಾಡುತ್ತಾರೆ? ಇದರ ಬಗ್ಗೆ ತಾವು ಯಾವ ರೀತಿ ಸಂದೇಶವನ್ನು ಕೊಡುತ್ತೀರಿ?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ನಾನು ಉಸ್ತುವಾರಿ ಸಚಿವನಾಗಿ ಹೇಳುತ್ತಿದ್ದೇನೆ. ಯಾವುದೇ ಜಾತಿ, ಯಾವುದೇ ಧರ್ಮ ಅಥವಾ ಯಾವುದೇ ವರ್ಗ ಇರಲಿ, ಒಬ್ಬ ಮನುಷ್ಯನಿಗೂ ಸಹ ಕಾನೂನಿನ ಚೌಕಟ್ಟಿನಲ್ಲಿ ರಕ್ಷಣೆಯನ್ನು ಕೊಡಿ ಎಂದು ನಾನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಮಾನ್ಯ ಐವನ್ ಡಿ'ಸೋಜಾರವರು ಸಹ ನಮ್ಮ ಜೊತೆಗೆ ಬಂದಿದ್ದರು. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಅವರ ಮನೆಗೆ ಹೋಗಬೇಕು ಎನ್ನುವಂಥ ಪ್ರಶ್ನೆ ಬಂದಾಗ ಸಂದಿಗ್ಧ ಸ್ಥಿತಿಯಲ್ಲಿ ಬೇಡ, ಅವರೇ ಬರುತ್ತಾರೆಂದು ಹೇಳಿದರು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಮುಖ್ಯಮಂತ್ರಿಗಳು ಒಂದು ದಿನ ಬಂದಿದ್ದರು. 24 ಗಂಟೆ ತಾವು ಆ ಕ್ಷೇತ್ರದ ಉಸ್ತುವಾರಿ ಸಚಿವರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ನಾವು–ನೀವು ಮತ್ತು ಮಾನ್ಯ ಯು.ಟಿ.ಖಾದರ್ ರವರು ಒಟ್ಟಿಗೆ ಹೋಗಿದ್ದೆವು. ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕೇಳಿ, ಇಡೀ 8 ದಿವಸಗಳ ಕಾಲ ನಾನು ಅಲ್ಲಿಯೇ ಕುಳಿತಿದ್ದೆ.

**ಶ್ರೀ ಎಸ್.ಆರ್.ಪಾಟೀಲ್:–** ತಾವು ಅಲ್ಲಿಯೇ ಕುಳಿತಿದ್ದಕ್ಕಾಗಿ ನಾನು ಅಭಿನಂದಿಸುತ್ತೇನೆ.

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಯಾರ ಮನೆಗೆ ಹೋಗಬೇಕು, ಯಾರ ಮನೆಗೆ ಹೋಗಬಾರದು ಎಂದು ಗೊತ್ತಿದೆ. ಆ ಉದ್ದೇಶದಿಂದಲೇ ಆ ಮನೆಗೆ ಹೋಗಿಲ್ಲ. ಆ 26 ಜನರ ಹತ್ಯೆಯಾಯಿತಲ್ಲವೇ, ಅವರ ಮನೆಗೆ ನೀವು ಹೋಗಿದ್ದೀರಾ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ರವಿಕುಮಾರ್‌ರವರೇ, ಯಾವ 26 ಜನರ ಬಗ್ಗೆ ಹೇಳುತ್ತಿದ್ದೀರಿ? ತಾವು ಮಂಗಳೂರಿನ ಬಗ್ಗೆ ಮಾತ್ರ ಮಾತನಾಡಿ.

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಆ ಗೂಢಾಚಾರರ ಹತ್ಯೆಗೆ ಸಂಬಂಧಿಸಿದ **XXX** ಮನೆಗೆ ಹೋಗಬೇಕೇ? **(ಗೊಂದಲ)** ಸರ್ಕಾರ 10 ಲಕ್ಷ ರೂಪಾಯಿಗಳನ್ನು ವಾಪಸ್ಸು ತೆಗೆದುಕೊಂಡರೆ ಅವರ ಮನೆಗೆ ಇವರು 20 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಕಾಂಗ್ರೆಸ್ ಮತ್ತು ಜೆಡಿ(ಎಸ್) ಸದಸ್ಯರು “ಮಾನ್ಯ ಎನ್.ರವಿಕುಮಾರ್‌ರವರು ಬಳಸಿದ “ XXX ” ಎನ್ನುವ ಪದವನ್ನು ವಾಪಸ್ ತೆಗೆದುಕೊಳ್ಳಬೇಕು” ಎಂದು ಪ್ರತಿಭಟಿಸಿ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಯಾರು “ **XXX** ” ಯಾರು “ **XXX** ” ಅಲ್ಲವೆಂಬುದು ಸಾಬೀತಾಗುತ್ತದೆ.

**ಸಭಾಪತಿಯವರು:–** ಇದ್ಯಾವುದೂ ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)**
**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರುಗಳೇ, ಬಾವಿಯಲ್ಲಿ ನಿಂತು ಮಾತನಾಡಬೇಡಿ.

**(ಗೊಂದಲ)**

---

“ **XXX** ” **ಸಭಾಪತಿಯವರ ಅಪ್ಪಣೆ ಮೇರೆಗೆ ಕಡತದಿಂದ** ತೆಗೆಯಲಾಗಿದೆ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಬೇರೆ ಯಾರು ಮಾತನಾಡಿದ್ದು ಸಹ ರೆಕಾರ್ಡ್‌ಗೆ ಹೋಗಬಾರದು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರಾದ ಕೋಟ ಶ್ರೀನಿವಾಸ ಪೂಜಾರಿಯವರು ಆ ಜಿಲ್ಲೆಯ ಉಸ್ತುವಾರಿ ಸಚಿವರು. ಇಂತಹ ಹೃದಯ ವಿದ್ರಾವಕ ಘಟನೆ ನಡೆದು ಅಮಾಯಕರ ಸಾವು ಆದಾಗ, ದುಃಖತಪ್ತ ಘಟನೆ ನಡೆದಾಗ, ಆ ಕ್ಷೇತ್ರದ ಶಾಸಕರು ಭೇಟಿ ನೀಡಿಲ್ಲ. ಉಸ್ತುವಾರಿ ಸಚಿವರು ಭೇಟಿ ನೀಡಿಲ್ಲ.

**ಸಭಾಪತಿಯವರು:–** ಮೊದಲು ನಿಮ್ಮ ಪಕ್ಷದ ಸದಸ್ಯರನ್ನು ಬಾವಿಯಿಂದ ವಾಪಸ್ಸು ಕರೆಯಿರಿ. ನಂತರ ಚರ್ಚೆ ಮಾಡೋಣ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇವರಿಗೆ ಹೃದಯ ಇದೆಯೋ, ಇಲ್ಲವೋ ಗೊತ್ತಿಲ್ಲ. ಇವರಿಗೆ ಕಲ್ಲು ಹೃದಯ ಇದೆ. Is it not the moral duty of the in-charge minister to go and visit?

**ಸಭಾಪತಿಯವರು:–** ಈಗ ಅದರ ಬಗ್ಗೆ ಚರ್ಚೆ ಬೇಡ. ಮೊದಲು ತಮ್ಮ ಸ್ಥಾನಗಳಿಗೆ ವಾಪಸ್ಸು ಬನ್ನಿ. ಇದರ ಬಗ್ಗೆ ಆಸಕ್ತಿ ಇಲ್ಲವೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದೇ ಸದನದಲ್ಲಿ ನಾನು ಕೇಳಿದ್ದೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಒಂದು ನಿಮಿಷ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಯಾರ ಮನೆಗೆ ಹೋಗಬೇಕು, ಯಾರ ಮನೆಗೆ ಹೋಗಬಾರದು ಎಂದು ಗೊತ್ತಿದೆ.

**ಸಭಾಪತಿಯವರು:–** ತಮ್ಮ ಸ್ಥಾನವನ್ನು ಹೊರತುಪಡಿಸಿ, ಬೇರೆ ಸ್ಥಾನದಲ್ಲಿ ಮಾತನಾಡಿದರೆ ಯಾವುದೂ ಸಹ ಕಡತಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಿ. **(ಗೊಂದಲ)** ತಾವುಗಳು ಮೊದಲು ತಮ್ಮ ಸ್ಥಾನಗಳಿಗೆ ತೆರಳಿ ನಂತರ ಮಾತನಾಡಿ. ಮಾನ್ಯ ವಿರೋಧಪಕ್ಷದ ನಾಯಕರೇ, ಮೊದಲು ಸದಸ್ಯರುಗಳಿಗೆ ಅವರ ಸ್ಥಾನಗಳಿಗೆ ವಾಪಸ್ ಹೋಗಲು appeal ಮಾಡಿ, ಇಲ್ಲದಿದ್ದರೆ ಕಲಾಪವನ್ನು ಇಲ್ಲಿಗೆ ಮುಗಿಸೋಣ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, Let him express his regret. What is wrong in it?

**ಸಭಾಪತಿಯವರು:–** ಸದನವನ್ನು ಸಂಜೆ 5 ಗಂಟೆ 30 ನಿಮಿಷಗಳವರೆಗೆ ಮುಂದೂಡಲಾಗಿದೆ.

**(037)/18–2–2020/5–40/ಎಲ್ಎಂ/ಎಕೆ**

**(ಸಂಜೆ 4 ಗಂಟೆ 59 ನಿಮಿಷಕ್ಕೆ ಅರ್ಧ ಗಂಟೆ ಅವಧಿಗೆ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 5 ಗಂಟೆ 46 ನಿಮಿಷಕ್ಕೆ ಪ್ರಾರಂಭವಾಯಿತು.)**

**(ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಕಾಂಗ್ರೆಸ್ ಪಕ್ಷದ ಸದಸ್ಯರು ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಗುಂಡೇಟಿಗೆ ಬಲಿಯಾದ ಇಬ್ಬರು ವ್ಯಕ್ತಿಗಳು ಅಮಾಯಕರು. ಒಬ್ಬ ಮೀನು ಮಾರಾಟ ಮಾಡುವವರು, ಇನ್ನೊಬ್ಬರು ಗ್ಯಾರೇಜ್ ನಡೆಸಿಕೊಂಡು ಹೋಗುವವರು. ಒಬ್ಬರು ಮನೆಯಲ್ಲಿ ಇದ್ದವರು ಏನಾಗುತ್ತಿದೆ ಎಂದು ನೋಡಲು ಹೊರಗೆ ಬಂದವರಿಗೆ ಗುಂಡು ಬಿದ್ದಿದೆ, ಇನ್ನೊಬ್ಬರು ಗ್ಯಾರೇಜ್ ಬಂದ್ ಮಾಡುವಾಗ ಬೆನ್ನಿಗೆ ಗುಂಡು ಬಿದ್ದಿದೆ. ಇಂತಹ ಅಮಾಯಕರನ್ನು **XXX** ಎಂದು ಕರೆದು ಆ ಪದವನ್ನು ಬಳಕೆ ಮಾಡುವುದು ಸುತರಾಂ ಒಳ್ಳೆಯದಲ್ಲ. ಇದರ ಬಗ್ಗೆ ನಾನು ಎಳೆ–ಎಳೆಯಾಗಿ ಹಿಂಡಿ ಬಿಡಿಸಿ–ಬಿಡಿಸಿ ಹೇಳಿದ್ದೇನೆ. They are quite innocent and they don't belong to any organization. ಇಂತಹವರನ್ನು **XXX** ಎಂದು ಮಾನ್ಯ ಸಭಾನಾಯಕರು ಪಟ್ಟ ಕಟ್ಟಿರುವುದು ಅವರ ಘನತೆಗೆ ಸೂಕ್ತವಲ್ಲ. ಇನ್ನೊಂದು ಬಾವಿಯಲ್ಲಿ ಬಿದ್ದು ... ಎನ್ನುವ ಪದ ಬಂತು. ಅದನ್ನು ಕಡತ ತೆಗೆದು ನೋಡಿದ್ದಾರೆ. ಸಭಾನಾಯಕರ ಬಗ್ಗೆ ಪ್ರತಿಪಕ್ಷದವರಾದ ನಮಗೆ ಯಾವುದೇ grudge ಇಲ್ಲ. ಅವರು ಉನ್ನತವಾದ ಸ್ಥಾನದಲ್ಲಿದ್ದಾರೆ. ಸರ್ಕಾರದ ಪರವಾಗಿ ಅವರು ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಬಹುದು. ಏಕೆಂದರೆ ಆ ಸ್ಥಾನದಲ್ಲಿ ನಾನು ಮೂರು ವರ್ಷ ಕುಳಿತು ಕೆಲಸ ಮಾಡಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯವರು ಸುಸಂಸ್ಕೃತರು ಎನ್ನುವ ಪದವನ್ನು ಬಳಕೆ ಮಾಡಿದ್ದೇನೆ. ಆದರೆ ಅವರ ಬಾಯಿಯಿಂದ ಈ ಮಾತು ಹೇಗೆ ಬಂತು? Slip of the tongue ಆಗಿರಬಹುದು. ನಮ್ಮ ಸದಸ್ಯರಾದ ಮಾನ್ಯ ಸಿ.ಎಂ.ಇಬ್ರಾಹಿಂ ರವರು " **XXX** " ಎನ್ನುವ ಪದವನ್ನು ಬಳಕೆ ಮಾಡಿದಾಗ, ತಕ್ಷಣ ಆ ಪದವನ್ನು ಕಡತದಿಂದ ತೆಗೆದು ಹಾಕಲಾಯಿತು.

---

" **XXX** " **ಸಭಾಪತಿಯವರ ಅಪ್ಪಣೆ ಮೇರೆಗೆ ಕಡತದಿಂದ** ತೆಗೆಯಲಾಗಿದೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ಸಭಾನಾಯಕರು 'ಬಾವಿಯಲ್ಲಿ ಬಿದ್ದು ಸಾಯಿರಿ' ಎಂದು ಏನು ಹೇಳಿದ್ದಾರೆ ಆ ಪದವು ಕಡತದಲ್ಲಿ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ಕಡತದಲ್ಲಿ ಇಲ್ಲ ಎಂದರೆ ಸಂತೋಷ. We welcome it. **XXX** ಎನ್ನುವ ಪದವನ್ನು ಬಳಕೆ ಮಾಡಿದ್ದಾರೆ. ಘಟನೆ ನಡೆದ ಸ್ಥಳಕ್ಕೆ ಸ್ಥಳೀಯ ಶಾಸಕರು ಹೋಗಿರುವುದಿಲ್ಲ, ಉಸ್ತುವಾರಿ ಸಚಿವರು ಹೋಗಿ ನೋಡಿರುವುದಿಲ್ಲ. ಆದರೂ **XXX** ಎನ್ನುವ ಪದವನ್ನು ಬಳಕೆ ಮಾಡಿದ್ದಾರೆ. ಈ ರೀತಿ ಪದಗಳನ್ನು ಬಳಕೆ ಮಾಡಿದರೆ ಮುಂದೆ ಇದು ಎಲ್ಲಿಗೆ ಹೋಗಿ ನಿಲ್ಲುತ್ತದೆ ಗೊತ್ತಿಲ್ಲ. ನಾಳೆ ಎಸ್.ಆರ್.ಪಾಟೀಲ್ **XXX** ಎಂದೂ ಕೂಡಾ ಹೇಳಬಹುದು.

**ಶ್ರೀ ಸಿ.ಎಂ.ಇಬ್ರಾಹಿಂ:–** ಆ ಅಮಾಯಕರು ಬದುಕಿಯೂ ಇಲ್ಲ. ಸತ್ತು ಹೋಗಿದ್ದಾರೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಗಳೆ, ಮಾನ್ಯ ಎಸ್.ಆರ್.ಪಾಟೀಲ್‌ರವರ ಜೊತೆ, ಮಾನ್ಯ ರೇವಣ್ಣನವರ ಜೊತೆ, ಮಾನ್ಯ ಕೊಂಡಯ್ಯನವರ ಜೊತೆ, ಮಾನ್ಯ ಅಲ್ಲಂ ವೀರಭದ್ರಪ್ಪನವರ ಜೊತೆ ಮಾತನಾಡಿದ್ದೇನೆ. ಮೀನು ಮಾರುವ ಕುಟುಂಬ **XXX** ಎನ್ನುವ ಉದ್ದೇಶದಿಂದ ನಾನು ಮಾತನಾಡಿರುವುದಿಲ್ಲ. ಸತ್ತವರು ಅಮಾಯಕರು. ಆ ಕುಟುಂಬದವರನ್ನು ಉದ್ದೇಶಿಸಿ ನಾನು ಈ ಶಬ್ದವನ್ನು ಹೇಳಿರುವುದಿಲ್ಲ. ಇದೇ ಉದ್ದೇಶದಿಂದ ವಿರೋಧ ಪಕ್ಷದವರು ಬಾವಿಗೆ ಬಂದಿದ್ದರೆ ಮೊದಲನೆಯದಾಗಿ ನಾನು ಕ್ಷಮೆಯಾಚಿಸುತ್ತೇನೆ. ಕಡತದಿಂದ ವಾಪಸ್ ತೆಗೆದುಕೊಳ್ಳುತ್ತೇನೆ. ಎರಡನೆಯ್ದು **XXX** ಎನ್ನುವ ಪದವನ್ನು ನಾನು in general ಉಪಯೋಗಿಸಿದ್ದೇನೆ.

**Sri S.R. PATIL:** This ends the matter. I request the hon. Members protesting in the well to please return to their respective places.

**(ಈ ಹಂತದಲ್ಲಿ ಧರಣಿಯಲ್ಲಿ ನಿರತರಾಗಿದ್ದ ವಿರೋಧ ಪಕ್ಷದ ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಿದರು)**

---

" **XXX** " **ಸಭಾಪತಿಯವರ ಅಪ್ಪಣೆ ಮೇರೆಗೆ ಕಡತದಿಂದ** ತೆಗೆಯಲಾಗಿದೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**038/18–02–2020/05–50/ಬಿಎಸ್‌ಡಿ–ಎಕೆ**

(ಗೊಂದಲ)

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಅಭಿಪ್ರಾಯಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ.

**Sri S.R. PATIL:** I welcome the good gesture of the Hon. Member, Mr. Ravikumar. ಮಾನ್ಯ ಸಭಾಪತಿಯವರೇ, ಈಗಾಗಲೇ ಸಂಜೆ 6 ಗಂಟೆ ಆಗಿದ್ದು, ಇನ್ನು 5 ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ. ಜನವರಿ 9 ಮತ್ತು 10ನೇ ತಾರೀಖುಗಳಂದು ಕೊಪ್ಪಳದ ಆನೆಗೊಂದಿ ಉತ್ಸವದ ವಿದ್ಯಾರಣ್ಯ ವೇದಿಕೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ ಸಿರಾಜ್ ಬಿಸ್ರಳ್ಳಿ ಎನ್ನುವವರು CAA and NRC ಕುರಿತು ಒಂದು ಕವಿತೆಯನ್ನು ವಾಚನ ಮಾಡಿದರು. ಆ ಕವನದಲ್ಲಿ ಪ್ರಧಾನ ಮಂತ್ರಿ ಮತ್ತು ಕೇಂದ್ರ ಸಚಿವರನ್ನು ಅವಮಾನಿಸಿದ್ದಾರೆಂದು ಆರೋಪಿಸಿ ಗಂಗಾವತಿ, ಬಿಜೆಪಿ ಮುಖಂಡರು ಇವರು ದೂರು ನೀಡಿದರು. ಅದರಂತೆ ಸಿರಾಜ್ ಬಿಸ್ರಳ್ಳಿ ವಿರುದ್ಧ ಕೊಪ್ಪಳದ ಗಂಗಾವತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಒಬ್ಬ ಕವಿ ಕವಿತೆಯನ್ನು ವಾಚನ ಮಾಡಿದ್ದನ್ನು ಆರೋಪಿಸಿದರೆ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಮಾಡಿರುವ ಗಂಭೀರ ಹಲ್ಲೆ ಎಂದು ನಾನು ಭಾವಿಸಬೇಕಾಗುತ್ತದೆ. ಕವಿಗಳು, ಕಲಾವಿದರು, ಪತ್ರಕರ್ತರುಗಳ ಮೇಲೆ ಈ ರೀತಿಯಾದ restriction ಮಾಡಿ IPC Section 124A ಕೆಳಗೆ ಕೇಸ್ ಬುಕ್ ಮಾಡುತ್ತಿದ್ದರೆ ಕವಿಗಳು ಹೇಗೆ ಕವಿತೆಯನ್ನು ರಚನೆ ಮಾಡುತ್ತಾರೆ ಮತ್ತು ಕವಿತೆಯನ್ನು ಹೇಗೆ ವಾಚನ ಮಾಡುತ್ತಾರೆ? ಅದೇ ರೀತಿ ಕಲಾವಿದರು ಚಿತ್ರವನ್ನು ಬಿಡಿಸುವಂತೆ ಇಲ್ಲ. ವ್ಯಂಗ ಚಿತ್ರಕಾರರು ವ್ಯಂಗ ಚಿತ್ರಗಳನ್ನು ಬಿಡಿಸುವಂತಿಲ್ಲ. ಇನ್ನು ಪತ್ರಕರ್ತರ ಮೇಲೆ ನಾಳೆ ಖಕಅ ಖಜಛಿಣಡಿಟಿ 124ಂ ಕೆಳಗೆ ಕೇಸ್ ಬುಕ್ ಮಾಡಿದರೆ it will be a serious offence against the State. Will it come under sedition? Will it come under the offence against the State? ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವುದಿಲ್ಲವೇ? ಸಂವಿಧಾನದ Part-III ರಲ್ಲಿ ಇರುವಂತಹ Freedom of Speech and Expression ಮೇಲೆ ಹಲ್ಲೆ ಮಾಡಿದಂತೆ ಆಗುತ್ತದೆ. ಸಂವಿಧಾನದಲ್ಲಿ ಏನಾದರೂ permanent ಇದೆ ಎಂದರೆ it is Part-III. Those are the fundamental rights of a citizen. Nobody has got a right to abridge or takeaway the fundamental rights of a citizen. ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಮೊಟಕು ಮಾಡಿದಂತೆ ಆಗುವುದಿಲ್ಲವೇ? ಆ ಹಕ್ಕನ್ನು ಮೊಟಕು ಮಾಡುವ ಅಧಿಕಾರ ಯಾರಿಗೂ ಇಲ್ಲ. Even the Parliament has no power. The Parliament cannot take away or abridge the fundamental rights of a

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

citizen. It is a permanent one. ಸಂವಿಧಾನದ ಆಶಯಗಳ ಮೇಲೆ ಈ ರೀತಿ ಹಲ್ಲೆ ಮಾಡಿದರೆ ಮುಂದೆ ಎಲ್ಲಿಗೆ ಹೋಗುತ್ತದೆ? ದೂರನ್ನು ದಾಖಲು ಮಾಡುವ ಮುನ್ನ ದೇಶದ್ರೋಹದ ಪ್ರಕರಣ ಎಂದು ಪರಿಗಣಿಸಿ ಎಂದು ಹೇಳಿಬಿಡುತ್ತಾರೆ. ಅದೇ ರೀತಿ ಎಫ್.ಐ.ಆರ್, ಚಾರ್ಜ್‌ಶೀಟ್ ಹಾಕಿ ಅರೆಸ್ಟ್ ಮಾಡಿ, ಅವರಿಗೆ bail ಆಗದಂತೆ ನೋಡಿಕೊಳ್ಳಿ ಎಂದು ಹೇಳಿಬಿಡುತ್ತಾರೆ. ನಾವು ಪ್ರಜಾಪ್ರಭುತ್ವ ವಾತಾವರಣದಲ್ಲಿ ಇಲ್ಲವೇನೋ ಎಂಬ ಭಯದ ವಾತಾವರಣ ನಿರ್ಮಾಣವಾಗಿದೆ. ಸ್ವಲ್ಪ ಹೆಚ್ಚು–ಕಡಿಮೆ ಮಾತನಾಡಿದರೆ ಎಲ್ಲವನ್ನೂ ಖಕಅ ಖಜಥಿಣಉಂಟ 124೦ ಕೆಳಗೆ ಜಜುಣಉಂಟ ಥಿಭಜ ಹಾಕಿದರೆ ಪರಿಸ್ಥಿತಿ ಎಲ್ಲಿಗೆ ಹೋಗುತ್ತದೆ? ಈ ಎಲ್ಲಾ ಪ್ರಕರಣಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಪೊಲೀಸರು ವಿವೇಚನಾರಹಿತವಾಗಿ, ಕಾನೂನುಗಳನ್ನು ಗಣನೆಗೆ ತೆಗೆದುಕೊಳ್ಳದೇ, ಸರ್ವೋಚ್ಚ ನ್ಯಾಯಾಲಯದ ಆದೇಶಗಳನ್ನು ಹಾಗೂ ಮಾನವ ಹಕ್ಕುಗಳನ್ನು ಗಣನೆಗೆ ತೆಗೆದುಕೊಳ್ಳದೇ, ಸಂವಿಧಾನದ ಆಶಯಗಳ ಅರಿವಿಲ್ಲದೇ ನಡೆದುಕೊಳ್ಳುತ್ತಿದ್ದಾರೆ. ಸಂವಿಧಾನದ ಆಶಯಗಳ ಬಗ್ಗೆ ಗೌರವ ಇರಬೇಕಲ್ಲವೇ? Constitution is the mother law of the country. ಹಿಂದೂಗಳಿಗೆ ಭಗವದ್ಗೀತೆ, ಮುಸ್ಲೀಮರಿಗೆ ಕುರಾನ್ ಮತ್ತು ಕ್ರೈಸ್ತರಿಗೆ ಬೈಬಲ್ ಇದ್ದಂತೆ ಸಂವಿಧಾನವು ದೇಶದ ಗ್ರಂಥವಾಗಿದೆ. ಸಂವಿಧಾನದ ಆಶಯಗಳಿಗೆ ವ್ಯತಿರಿಕ್ತವಾಗಿ, ಸರ್ವೋಚ್ಚ ನ್ಯಾಯಾಲಯದ ruling ಗಳಿಗೆ ವ್ಯತಿರಿಕ್ತವಾಗಿ, ಮಾನವ ಹಕ್ಕುಗಳಿಗೆ ವಿರುದ್ಧವಾಗಿ, ವಿವೇಚನೆ ಇಲ್ಲದಂತೆ ಪೊಲೀಸರು ವರ್ತನೆ ಮಾಡಿದ್ದಾರೆ. ನಾನು ಒಂದು ruling ಅನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. *Kedarnath Singh vs State of Bihar* ಕೇಸ್‌ನ ಸಂವಿಧಾನಿಕ ತೀರ್ಪಿನಲ್ಲಿ Section 124A ಅನ್ನು ಕೇವಲ ರಾಜ್ಯದ ವಿರುದ್ಧ ಹಿಂಸೆಗೆ ಉತ್ತೇಜಿಸುವ ಭಾಷಣಕ್ಕೆ ಮಾತ್ರ ಬಳಸುವುದು ಸರಿಯೆಂದು ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಹೇಳಿದೆ. It is reported in All India Report, 1962, page no.955. It is very clear. ಕಾನೂನುಗಳಿಗೆ modification ಮಾಡುವ ವಿಚಾರಗಳಲ್ಲಿ ಮಾತನಾಡಬಹುದು. ಸ್ವಾಸ್ಥ್ಯ ಮತ್ತು ಆರೋಗ್ಯವಂತ ಸಮಾಜ ನಿರ್ಮಿಸಲು ಕೆಲವೊಂದು ವಿಚಾರಗಳನ್ನು ವ್ಯಕ್ತ ಮಾಡಬಹುದು. ಇದು ಪ್ರಜಾಪ್ರಭುತ್ವ ದೇಶವಾಗಿದೆ. India is a democratic country and more than that it's the biggest democratic country in the world. ನಮ್ಮ ದೇಶವು ಜಗತ್ತಿನಲ್ಲಿಯೇ ದೊಡ್ಡ ಪ್ರಜಾಸತ್ತಾತ್ಮಕ ದೇಶವಾಗಿದೆ. ಇಂತಹ ದೇಶದಲ್ಲಿ ಈ ರೀತಿ ಮಾಡಿಕೊಂಡರೆ ಹೇಗೆ? ಅದರಲ್ಲಿ discrimination ಮಾಡಿಕೊಂಡು, ಅವರಿಗೆ ಬೇಕಾದವರು ಮಾಡಿದರೆ ಏನೇನೂ ಅಲ್ಲ. It is no offence at all and there is no registration of complaint. ಯಾರು ದೂರನ್ನು ಕೊಡಲಿ ಬಿಡಲಿ, there will be an instruction. ಪೊಲೀಸರು ವಿವೇಚನಾ ರಹಿತವಾಗಿ ನಡೆದುಕೊಳ್ಳಬಾರದು. ಪೊಲೀಸ್ ಎಂದರೆ ಏನು? What is the definition of Police? It is, 'P' for Politeness, 'O' for Obedience,

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

'L' for Loyalty, 'I' for Integrity, 'C' for Courtesy and 'E' for Efficiency. ಪೊಲೀಸರು ವಿವೇಚನಾರಹಿತವಾಗಿ ವರ್ತನೆ ಮಾಡಿ, ಅವರ ಬಾಸ್ ಹೇಳುವುದನ್ನು implement ಮಾಡುತ್ತಾರೆ. ಇಂತಹವರ ಮೇಲೆ ಕೇಸ್ ಹಾಕು ಎಂದರೆ ಕೇಸ್ ಹಾಕುತ್ತಾರೆ, ಜೈಲಿಗೆ ಹಾಕು ಎಂದರೆ ಜೈಲಿಗೆ ಹಾಕುತ್ತಾರೆ. ಅದೇರೀತಿ ಬಾರಕೂನ್ ಮಾಫ್ ಮಾಡು ಎಂದರೆ ಮಾಡುತ್ತಾರೆ. Police should act independently. I don't want to demoralize the police. I am the first man to support the police officers. ಪೊಲೀಸರಿಗೆ demoralize ಮಾಡುವ ುಟಿಣಜಟಿಣುಂಟಿ ನನಗೆ ಇಲ್ಲ. I know the law of the land very well. Basically I was a practicing advocate. I have even conducted a Sessions case. ನಾನು ಐದಾರು 302 ಕೇಸ್‌ಗಳನ್ನು ನಡೆಸಿದ್ದೇನೆ. ನಾನು ವಕೀಲನಾಗಿದ್ದೆ. ರಾಜಕಾರಣಕ್ಕೆ ಬಂದು ಹೀಗಾಗಿದ್ದೇನೆ. ಆ ಮಾತು ಬೇರೆ ಬಿಡಿ. Sometimes, police officers are working under the mercy of the ruling party people and there will be lot of interference. ಪೋಸ್ಟಿಂಗ್ ಮಾಡುವಾಗ ಸಂಬಂಧಪಟ್ಟ ಎಂ.ಎಲ್.ಎ ಹೇಳಿದ ಅಕಖ ಅನ್ನೇ ಹಾಕಬೇಕು. ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಬಹಳ headache ಇದೆ, ಆದರೆ ಅವರು ಹೊರಗೆ express ಮಾಡುವುದಿಲ್ಲ. ಇದೊಂದು ರೀತಿ lawlessness ಆಗಿದೆ. ಕಾನೂನು ಒದ್ದಾಡುವ ಚೆಂಡಿನಂತಾಗಿದೆ. ನಾವು ರೂಲಿಂಗ್ ಪಾರ್ಟಿಯಲ್ಲಿದ್ದು ಹೇಳಿದ ರೀತಿ ಆಗಬೇಕು. If they tell that you have to put someone behind bars, 'Yes sir, O.K.' ಎಂದು ಅವರು ಹೇಳಿದಂತೆ ಸೆಲ್ಯೂಟ್ ಹೊಡೆದು ಒಳಗೆ ಹಾಕುವುದೇ ಕೆಲಸವಾಗಿದೆ. ಈ ರೀತಿ ಆದರೆ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ನೂರಕ್ಕೆ ನೂರು ಹದೆಗೆಡುತ್ತದೆ. ಇದರಿಂದ ಅಭಿವೃದ್ಧಿ ಕುಂಠಿತವಾಗುತ್ತದೆ. ರಾಜ್ಯದ ಹಿತದೃಷ್ಟಿಯಿಂದ ಇದು ಒಳ್ಳೆಯದಲ್ಲ. Let them act impartially. ಅವರಿಗೆ ಏನು ಮಾಡುವುದಕ್ಕೆ ಸಾಧ್ಯವಿದೆ? ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಆದಷ್ಟು ಕಾನೂನು ಸುವ್ಯವಸ್ಥೆಯನ್ನು ಸರಿಯಾಗಿಟ್ಟುಕೊಂಡು, ರಾಜ್ಯದ ಆರೂವರೆ ಕೋಟಿ ಜನರ ಯೋಗಕ್ಷೇಮದ ಬಗ್ಗೆ ಚಿಂತನೆ ಮಾಡಿ, ಕಾನೂನು ಮತ್ತು ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಬೇಕು. ಉಚ್ಚ ಹಾಗೂ ಸರ್ವೋಚ್ಚ ನ್ಯಾಯಾಲಯಗಳ ತೀರ್ಪುಗಳನ್ನು ಗಣನೆಗೆ ತೆಗೆದುಕೊಂಡು ಕೆಲಸ ಮಾಡಬೇಕೆಂದು ಸರ್ಕಾರಕ್ಕೆ ಹೇಳಬಯಸುತ್ತೇನೆ. ಮುಂದೆ ಆದರೂ ಸುಧಾರಣೆ ಆಗಬೇಕು, ಮುಂದಿನ ದಿನಮಾನಗಳಲ್ಲಿ ಬಹಳಷ್ಟು ತಿದ್ದಿಕೊಳ್ಳುವ ಅವಶ್ಯಕತೆ ಇದೆ. ಬಹಳಷ್ಟು ವಿಚಾರಗಳನ್ನು ನಾನು ಚರ್ಚೆ ಮಾಡಿದ್ದು, ಇನ್ನೂ ಲಂಬಿಸುವುದಕ್ಕೆ ಹೋಗುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(39)/18.02.2020/6.00/ಹೆಚ್‌ವಿ–ಆರ್‌ಎನ್**

**ಶ್ರೀ ಎಸ್.ಆರ್.ಪಾಟೀಲ್(ಮುಂದುವರೆದದ್ದು):–**

ಸನಾನ್ಯ ಸಭಾಪತಿಯವರೇ, ಈಗ ಬಹಳಷ್ಟು ವಿಚಾರಗಳ ಬಗ್ಗೆ ಎರಡು ಗಂಟೆಗೂ ಹೆಚ್ಚು ಚರ್ಚೆ ಮಾಡಿದ್ದೇವೆ. ನಾನು ಇನ್ನೂ ಅದನ್ನು ಲಂಭಿಸುವುದಕ್ಕೆ ಹೋಗುವುದಿಲ್ಲ. ಇಂತಹ ದುಷ್ಟಾಂತಗಳು ನೂರಾರು ಸಾವಿರಾರುಗಳಿವೆ. ಅವೆಲ್ಲವುಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. Peaceful Citizens ಹೊಂದಿರುವಂತಹ, ಇಡೀ ಭಾರತ ದೇಶದಲ್ಲಿ ಶಾಂತಿ ಸೌಹಾರ್ದತೆಗೆ ಹೆಸರುವಾಸಿಯಾಗಿರುವ ಶಾಂತಪ್ರಿಯ ರಾಜ್ಯ ಕರ್ನಾಟಕ ಎನ್ನುವ ಪ್ರತೀತಿ ಇದೆ. ಇಂತಹ ಹೆಸರನ್ನು ಉಳಿಸಿಕೊಂಡು ಬರುವುದಕ್ಕೆ ಈ ಸರ್ಕಾರ ಕಾರ್ಯನಿರತವಾಗಬೇಕೆಂದು ತಮ್ಮ ಮೂಲಕ ಕೇಳಿಕೊಂಡು, ಮಾತನಾಡಲು ನನಗೆ ಬಹಳಷ್ಟು ಸುದೀರ್ಘವಾಗಿರುವ ಸಮಯವನ್ನು ಕೊಟ್ಟಿದ್ದೀರಿ ಅದಕ್ಕಾಗಿ ತಮಗೆ ವಿಶೇಷವಾಗಿ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಕೆ.ಸಿ.ಕೊಂಡಯ್ಯನವರೇ ತಾವು ಮಾತನಾಡುತ್ತೀರಾ?

**ಶ್ರೀ ಕೆ.ಸಿ.ಕೊಂಡಯ್ಯ:–** ಸನ್ಮಾನ್ಯ ಸಭಾಪತಿಯವರೇ, ನಾಳೆಯ ದಿನ ನಾನು ಮಾತನಾಡುತ್ತೇನೆ. ಇವತ್ತು ಆಗುವುದಿಲ್ಲ.

**12.ನೂತನ ಸಚಿವರ ಪರಿಚಯ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಸಕ್ಕರೆ ಮತ್ತು ಕಾರ್ಮಿಕ ಇಲಾಖೆಯ ನೂತನ ಸಚಿವರಾದ ಮಾನ್ಯ ಆರಬೈಲು ಹೆಬ್ಬಾರ ಶಿವರಾಮ್‌ರವರನ್ನು ಈ ಸದನಕ್ಕೆ ಪರಿಚಯಿಸುತ್ತಿದ್ದೇನೆ.

**13.ನಿಯಮ 68 ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ**

**ವಿಷಯ: ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ**

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭೆಯಿಂದ ಆಯ್ಕೆಯಾದವರು):–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಬೇಡಿಕೆಗಳು ಏನಿವೆ ಎನ್ನುವುದನ್ನು ಮಾನ್ಯ ಐವನ್ ಡಿ'ಸೋಜಾರವರು ಹೇಳುತ್ತಾರೆ. ಮಂಗಳೂರು ವಿಮಾನ ನಿಲ್ದಾಣದಲ್ಲಿ ಬಾಂಬ್ ಪೌಡರ್ ಸಿಕ್ಕಿದೆ. ಮಾನ್ಯ ಗೃಹ ಸಚಿವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಈ ಪೌಡರ್ ಎಲ್ಲಿಂದ ಬಂತು, ಇದರ ಹಿಂದೆ ಯಾರಿದ್ದಾರೆ, ಅವರುಗಳು ಯಾರು ಮತ್ತು ಈ ಕೃತ್ಯ ಯಾವ ಕಾರಣದ ಹಿನ್ನೆಲೆಯಲ್ಲಿ ನಡೆದಿದೆ ಎನ್ನುವುದನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೇಳಬೇಕಾಗುತ್ತದೆ. ಈ ಘಟನೆ ಈಗ ಇತಿಹಾಸ ಸೇರಿದೆ. ಒಮ್ಮೆ ಮಾತ್ರ ಪತ್ರಿಕೆಗಳಲ್ಲಿ ವರದಿಯಾಗಿತ್ತು ಅಷ್ಟೇ. ದೂರದರ್ಶದಲ್ಲಿಯೂ ಸಹ ಈ ಬಗ್ಗೆ ಮತ್ತೊಮ್ಮೆ ಸುದ್ದಿ ಪ್ರಸಾರವಾಗಲಿಲ್ಲ. ಇದೇ ಕೃತ್ಯವನ್ನು ಯಾರಾದರು ಮುಸ್ಲಿಮರು ಎಸಗಿ ಸಿಕ್ಕಿ ಬಿದ್ದಿದ್ದರೆ ಈ ಪ್ರಕರಣ ಐ.ಎಸ್.ಎ. ತನಿಖೆಗೆ ವಹಿಸಿ ಕೊಡಲಾಗುತ್ತಿತ್ತು. ಯಾವುದೇ ಪಕ್ಷದ ಸರ್ಕಾರ ಶಾಶ್ವತವಾಗಿರುವುದಿಲ್ಲ ಎನ್ನುವುದನ್ನು ಪೊಲೀಸ್ ಅಧಿಕಾರಿಗಳು ತಿಳಿದುಕೊಳ್ಳಬೇಕಾಗುತ್ತದೆ. Almighty God is above. ಭಗವಂತ ಎಲ್ಲವನ್ನೂ ನೋಡುತ್ತಿರುತ್ತಾನೆ. "ಧರ್ಮೋಃ ರಕ್ಷತಿಃ ರಕ್ಷಿತಃ" ಎನ್ನುವ ಮಾತಿದೆ. ಅವರಿಗೂ ಹೆಂಡತಿ ಮಕ್ಕಳಿದ್ದಾರೆ. ಅಮಾಯಕರಿಗೆ ತೊಂದರೆ ಕೊಟ್ಟರೆ ಅವರ ಶಾಪ, ತೊಂದರೆ ಕೊಟ್ಟವರ ಹೆಂಡತಿ ಮಕ್ಕಳಿಗೆ ತಗಲುತ್ತದೆ. ಮಂಗಳೂರು ವಿಮಾನ ನಿಲ್ದಾಣದಲ್ಲಿ ಆ ಬಾಂಬ್ ಸ್ಫೋಟಗೊಂಡಿದ್ದರೆ ಸುಮಾರು 7–8 ಜನ CISF (Central Industrial Security Force) ಅಧಿಕಾರಿಗಳು ಸತ್ತು ಹೋಗುತ್ತಿದ್ದರು. ಇದರ ಬಗ್ಗೆ ಇವತ್ತಿನವರೆವಿಗೂ ಇಲಾಖೆಯಿಂದಾಗಲೀ, ಸರ್ಕಾರದಿಂದಾಗಲೀ ಯಾವುದೇ ತನಿಖೆಗೆ ಆದೇಶವಾಗಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ..........

**ಶ್ರೀ ಸಿ.ಎಂ.ಇಬ್ರಾಹಿಂ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಎಲ್ಲವನ್ನೂ ತಮ್ಮ ತಲೆಯ ಮೇಲೆ ಹೊತ್ತುಕೊಳ್ಳುವುದು ಬೇಡ. ನಾನು ಪ್ರಸ್ತಾಪ ಮಾಡಿದ ವಿಚಾರಕ್ಕೆ ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಕೊಡಿಸಿದರೆ ಸಾಕು. Who is that? ಈ ಪ್ರಕರಣದ ಬಗ್ಗೆ ತನಿಖೆಯಾದರೆ ಭಾರಿ ದೊಡ್ಡ ಸಂಚು ಹೊರಬರುತ್ತದೆ. ಆ ಸಂಚಿನ ಹಿನ್ನೆಲೆ ನನಗೆ ಗೊತ್ತಿದೆ. ಮಹಾಭಾರತದಲ್ಲಿ ಬರುವ ಜಯವಿಜಯರಂತೆ ನಾವು ಸತ್ಯ ಹೇಳಿದರೆ ತಲೆ ಉರುಳುತ್ತದೆ ಎನ್ನುವ ಶಾಪ ಇರುವುದರಿಂದ ನಾವು ಬಾಯಿ ಬಿಡುತ್ತಿಲ್ಲ. ನಾವು ಸತ್ಯ ಹೇಳುವುದಕ್ಕೆ ಬಾಯಿಬಿಟ್ಟರೆ ದೊಡ್ಡ ಸ್ಫೋಟವಾಗುತ್ತದೆ. ಆದ್ದರಿಂದ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖೆ ಯಾವ ಹಂತದಲ್ಲಿ ಪ್ರಗತಿಯಲ್ಲಿದೆ ಎನ್ನುವುದರ ಬಗ್ಗೆ ಸರ್ಕಾರ ಉತ್ತರವನ್ನು ಹೇಳಬೇಕಾಗುತ್ತದೆ. ಇದರ ಜೊತೆಗೆ ಸದರಿ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕೆಂದು ನಾವುಗಳು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇವೆ. ಇದರ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತಿದ್ದ ಸಂದರ್ಭದಲ್ಲಿ, ಸದರಿ ಪ್ರಕರಣವನ್ನು ಹಾಲಿ ಹೈಕೋರ್ಟ್‌ನ ನ್ಯಾಯಾಧೀಶರಿಂದ ತನಿಖೆ ಮಾಡಿಸಬೇಕೆಂದು ಒತ್ತಾಯ ಮಾಡಿದ್ದೆ, we stick-on to that demand.

**ಶ್ರೀ ಸಿ.ಎಂ.ಇಬ್ರಾಹಿಂ:–** ಸನ್ಮಾನ್ಯ ಸಭಾಪತಿಯವರೇ, ಹಾಲಿ ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆಯಾಗಬೇಕು. ಈ ಘಟನೆ ಹೇಗಾಯಿತು, ಏತಕ್ಕೋಸ್ಕರ ಆಯಿತು ಎನ್ನುವ ಸತ್ಯಾಸತ್ಯತೆ ಹೊರಬರಬೇಕಾಗಿದೆ. ಈ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಘಟನೆಗೆ ಸಂಬಂಧಪಟ್ಟಂತೆ ಅನೇಕ ವಿಡಿಯೋಗಳು ಹೊರಬಂದಿವೆ. ಅವುಗಳ ಸತ್ಯಾಸತ್ಯತೆ ಬಗ್ಗೆ ನಾನು ಮಾತನಾಡುವುದಿಲ್ಲ. ನಾಳೆ ಗೃಹ ಸಚಿವರು ಉತ್ತರ ನೀಡುವ ಸಂದರ್ಭದಲ್ಲಿ ನಾನು ಉಲ್ಲೇಖ ಮಾಡಿರುವ ಅಂಶಗಳ ಬಗ್ಗೆ ಬೆಳಕು ಚೆಲ್ಲಬೇಕಾಗುತ್ತದೆ. ಇದರ ಜೊತೆಗೆ ನ್ಯಾಯಾಂಗ ತನಿಖೆ ನಡೆಸುವಂತಹ ಸಂದರ್ಭದಲ್ಲಿ ಮಂಗಳೂರು ವಿಮಾನ ನಿಲ್ದಾಣದಲ್ಲಿ ಸಿಕ್ಕಿರುವ ಬಾಂಬ್ ಪೌಡರ್ ಸಹ ಜ್ಯುಡಿಶಿಯಲ್ ರೆಫರೆನ್ಸ್‌ನಲ್ಲಿ ಬರಬೇಕು ಎನ್ನುವುದು ನನ್ನ ಒತ್ತಾಯವಾಗಿದೆ.

**ಶ್ರೀ ಐವನ್ ಡಿ'ಸೋಜಾ(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರಾಗಿರುವ ಶ್ರೀ ಎಸ್.ಆರ್.ಪಾಟೀಲ್‌ರವರು ಹಾಗೂ ನಾವೆಲ್ಲರೂ ಸೇರಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಪೊಲೀಸರು ತಮಗೆ ಇಚ್ಛೆ ಬಂದಂತೆ ರಾಜ್ಯದ ಜನತೆಯ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ. ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವ ವಿಚಾರದ ಹಿನ್ನೆಲೆಯಲ್ಲಿ ತಂದಿರುವಂತಹ ನಿಲುವಳಿ ಸೂಚನೆಯನ್ನು ಬೆಂಬಲಿಸುತ್ತಾ, ಒಂದೆರಡು ಮಾತುಗಳನ್ನಾಡುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ನಾನು ಮಂಗಳೂರು ಭಾಗದಿಂದ ಬಂದಿರುವವನು. ಈಗ ಇರುವಂತಹ ಪೊಲೀಸ್ ಅಧಿಕಾರಿಗಳು ಹಿಂದೆ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿಯೂ ಇದ್ದರು. ನಾನು ಆ ಸಂದರ್ಭದಲ್ಲಿ ಸಂಸದೀಯ ಕಾರ್ಯದರ್ಶಿಯಾಗಿ ಕಾರ್ಯವನ್ನು ನಿರ್ವಹಿಸಿದ್ದೆ. 'ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಅವಶ್ಯಕತೆ ಪೊಲೀಸರಿಗಿದೆ' ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಅದಕ್ಕೋಸ್ಕರ ಮಂಗಳೂರಿನಲ್ಲಿ ಒಂದು ದೊಡ್ಡ ಸೀನ್ ಕ್ರಿಯೇಟ್ ಮಾಡಿದರು. ಡಿಸೆಂಬರ್ 18ನೇ ತಾರೀಖಿನಂದು ಯುವ ಮುಸ್ಲಿಂ ಸಂಘಟನೆಗೆ ಸಿ.ಎ.ಎ., ಎನ್.ಆರ್.ಸಿ. ಮತ್ತು ಎನ್.ಪಿ.ಆರ್.ಗಳ ವಿರುದ್ಧ ಪ್ರತಿಭಟನೆ ನಡೆಸಲು ಅವಕಾಶವನ್ನು ನೀಡಲಾಗಿತ್ತು. ಅವರು ಜಿಲ್ಲೆಯಲ್ಲಿ ಇರುವಂತಹ ಯುವ ಮುಸ್ಲಿಂ ಸಂಘಟನೆಯ ಸದಸ್ಯರಿಗೆ 'ಪ್ರತಿಭಟನೆಯಲ್ಲಿ ಭಾಗವಹಿಸಿ' ಎನ್ನುವ ಆಹ್ವಾನವನ್ನು ನೀಡಿದರು. ಸಿ.ಎ.ಎ., ಎನ್.ಆರ್.ಸಿ. ಮತ್ತು ಎನ್.ಪಿ.ಆರ್. ಕಾನೂನುಗಳು ಕೇಂದ್ರ ಸರ್ಕಾರ ತಂದಿರುವಂತಹ ಕಾನೂನುಗಳಾಗಿವೆ. ಈ ಕಾನೂನುಗಳಿಗೆ ನಮ್ಮ ವಿರೋಧವಿದೆ ಎನ್ನುವುದು ಈ ಪ್ರತಿಭಟನೆಯ ಉದ್ದೇಶವಾಗಿತ್ತು. ಡಿಸೆಂಬರ್ 19ರ ಬೆಳಿಗ್ಗೆ ಪ್ರತಿಭಟನೆ ನಡೆಸುವುದಕ್ಕೆ ಅಲ್ಲಿನ ಪೊಲೀಸ್ ಕಮೀಶನರ್‌ರವರು ಅನುಮತಿಯನ್ನು ನೀಡಿದ್ದರು. ನಂತರ ಡಿಸೆಂಬರ್ 18ನೇ ತಾರೀಖಿನ ರಾತ್ರಿ 8 ಗಂಟೆಗೆ ಅನುಮತಿಯನ್ನು ಹಿಂಪಡೆದುಕೊಂಡರು ಮತ್ತು ಸೆಕ್ಷನ್ 144ರನ್ನು ಜಾರಿಗೊಳಿಸಿ, 'ನಿಮಗೆ ನೀಡಿರುವ ಅನುಮತಿಯನ್ನು ಹಿಂಪಡೆದುಕೊಂಡಿದ್ದೇವೆ. ನಾಳೆ ನೀವು ಪ್ರತಿಭಟನೆ ಮಾಡಬಾರದು' ಎಂದು ಪೊಲೀಸ್‌ನವರು ಯುವ ಮುಸ್ಲಿಂ ಸಂಘಟನೆಗೆ ಹೇಳಿದರು. ಸಂಘಟನೆಯವರು ಪ್ರತಿಭಟನೆಗೆ ಕರೆ ನೀಡಿಯಾಗಿತ್ತು. ಇದೊಂದು ಬೃಹತ್ ಪ್ರಮಾಣದ ಪ್ರತಿಭಟನೆಯಾಗಿತ್ತು. ಯಾರಿಗೆ ಪ್ರತಿಭಟನೆ ರದ್ದುಪಡಿಸಲಾಗಿದೆ ಎನ್ನುವ ಸಂದೇಶ ಹೋಗಿತ್ತು ಅವರು ಪ್ರತಿಭಟನೆಗೆ

ಬರಲಿಲ್ಲ. ಯಾರಿಗೆ ಸಂದೇಶ ಮುಟ್ಟಿರಲಿಲ್ಲ. ಅವರು ಮಂಗಳೂರಿನಲ್ಲಿ ಪ್ರತಿಭಟನೆ ನಡೆಸಲು ಸೇರಿದ್ದರು. ಆ ಪ್ರತಿಭಟನೆಯಲ್ಲಿ ಸುಮಾರು 100–150 ಜನರು ಮಾತ್ರ ಸೇರಿದ್ದರು. ಇವರುಗಳು 'ಪ್ರತಿಭಟನೆ ನಡೆಸಲು ನಮಗೆ ಅನುಮತಿಯನ್ನು ಕೊಟ್ಟಿದ್ದೀರಿ, ಈಗ ಏತಕ್ಕೋಸ್ಕರ ವಿತ್‌ಡ್ರಾ ಮಾಡುತ್ತಿದ್ದೀರಿ' ಎಂದು ಹೇಳಿ ಪ್ರತಿಭಟನೆಗೆ ಕುಳಿತರು. ಇವರುಗಳನ್ನು ಹ್ಯಾಂಡಲ್ ಮಾಡುವಂತಹ ಜವಾಬ್ದಾರಿ ಸರ್ಕಾರ ಮತ್ತು ಪೊಲೀಸಿನವರ ಮೇಲಿತ್ತು. ಸುಮಾರು 150 ಸಂಖ್ಯೆಯಲ್ಲಿ ಪ್ರತಿಭಟನೆಗಾರರು ಇದ್ದರು ಪೊಲೀಸರ ಸಂಖ್ಯೆ 2500 ಇತ್ತು. There are no other parties. Only Police and protestors. What could have been done by the police? ಇವರಿಬ್ಬರ ನಡುವೆ ಮಾತುಕತೆ ನಡೆಯಿತು. What could have been done by the Police? ಪ್ರತಿಭಟನೆಕಾರರನ್ನು ಅರೆಸ್ಟ್ ಮಾಡಬಹುದಾಗಿತ್ತು, ಅವರುಗಳನ್ನು ಚದುರಿಸಬಹುದಾಗಿತ್ತು ಅಥವಾ ಬೇರೆ ರೀತಿಯಲ್ಲಿ ಅವರುಗಳನ್ನು ಸಮಾಧಾನಪಡಿಸಬಹುದಾಗಿತ್ತು. ಇದನ್ನು ಬಿಟ್ಟು ಏಕಾಏಕಿಯಾಗಿ ಲಾಠಿಪ್ರಹಾರ ಮಾಡಿದ್ದರು. ಪ್ರತಿಭಟನಾಕಾರರನ್ನು ಓಡಿಸಿಕೊಂಡು ಹೋದರು. ಮಸೀದಿಯ ಎದುರು ಹೋಗಿ ಟಿಯರ್ ಗ್ಯಾಸ್ ಬಿಟ್ಟರು. ಸಂಜೆ 4.30 ಗಂಟೆಯ ಹೊತ್ತಿಗೆ suddenly fire ಮಾಡಿದ್ದರು. ಸುಮಾರು 150 ಜನ ಪ್ರತಿಭಟನಾಕಾರರನ್ನು ನಿಯಂತ್ರಿಸುವುದಕ್ಕೆ ಪೊಲೀಸ್ ವ್ಯವಸ್ಥೆ ಮತ್ತು ಪೊಲೀಸ್ ಕಮೀಶನರ್‌ರವರಿಂದ ಆಗಲಿಲ್ಲ. ಇದು ಸರ್ಕಾರದ ವೈಫಲ್ಯ ಅಲ್ಲವೇ? 150 ಜನ ಪ್ರತಿಭಟನಾಕಾರರ ಗುಂಪನ್ನು ಪೊಲೀಸನವರಿಂದ ಚದುರಿಸುವುದಕ್ಕೆ ಆಗಲಿಲ್ಲವೆಂದು ಅವರ ಮೇಲೆ ಲಾಠಿ ಪ್ರಹಾರ ಮಾಡುತ್ತಾರೆ, ಅವರ ಮೇಲೆ ಕಲ್ಲು ಎಸೆಯುತ್ತಾರೆಂದರೆ ಈ ಸರ್ಕಾರ ಸಾಮಾನ್ಯ ಜನರನ್ನು ಯಾವ ರೀತಿಯ ನೋಡುತ್ತದೆ ಎನ್ನುವುದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. 'This is nothing but... ಇದು ಸರ್ಕಾರದಿಂದ ಪ್ರಾಯೋಜಿತವಾಗಿರುವ ಲಾಠಿ ಚಾರ್ಜ್ ಅಥವಾ ಫೈರಿಂಗ್' ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಈ ಘಟನೆಯ ನಂತರ ಪೊಲೀಸ್ ಕಮೀಶನರ್‌ರವರ ನಡತೆ ಹೇಗಿತ್ತು ಎನ್ನುವುದನ್ನು ನಾವೆಲ್ಲರೂ ನೋಡಿದ್ದೇವೆ.

**(40) 18.2.2020 6.10 ಪಿಕೆ:ಆರ್‌ಎನ್**

**ಶ್ರೀ ಐವನ್ ಡಿ'ಸೋಜಾ(ಮುಂದು)**

ಒಬ್ಬ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, 'ನಾವು ಹೊಡೆದ ಗುಂಡಿಗೆ ಒಬ್ಬನೂ ಸಾಯಲಿಲ್ಲವಲ್ಲ' ಎಂದು ಹೇಳುತ್ತಾನೆ. ಇನ್ನೊಬ್ಬರು, 'ಒಂದು ಬಿತ್ತಲ್ಲ, ಇನ್ನೊಂದು ಬೀಳಬೇಕು' ಎಂದು ಹೇಳುತ್ತಾರೆ. ಮತ್ತೊಬ್ಬ ಪೊಲೀಸ್, 'ಒಂದೆರಡು ಹೆಣ ಬಿದ್ದರೆ ಮಾತ್ರ ಇವರಿಗೆ ಬುದ್ಧಿ ಬರುತ್ತದೆ, ಈ ಸ್ಥಿತಿ ನಿಯಂತ್ರಣಕ್ಕೆ ಬರುತ್ತದೆ' ಎಂದು ಹೇಳುತ್ತಾನೆ. ಅಂದರೆ, ಘೋರವಾಗಿರುವಂತಹ ಅಪರಾಧ ಮಾಡಿದ್ದರೂ this government has not taken any steps against that police. ಇದು ನಮ್ಮ ಕಳಕ½. Is it a government in favour this

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

common citizen? It should have made enquiry to the police. ಅವರ ವಿರುದ್ಧ ಎಫ್‌ಐಆರ್ ಹಾಕಬೇಕಾಗಿತ್ತು, ವಿಚಾರಣೆಗೆ ಒಳಪಡಿಸಬೇಕಾಗಿತ್ತು. ಅದರ ಬದಲಾಗಿ, ಆ ಸಬ್‌ಇನ್ಸ್‌ಪೆಕ್ಟರ್ ಅವರನ್ನು ಆ ಸ್ಥಳದಿಂದ ವರ್ಗಾಯಿಸಿ, ಐಜಿಪಿ ಆಫೀಸ್‌ನಲ್ಲಿ ಕೂರಿಸಿ ಬಿರ್ಯಾನಿ ತಿನ್ನಿಸುವ ಕೆಲಸ ಮಾಡಿದಿರಿ. It is not fair enough to say. The government itself is involved. ಒಬ್ಬ ಕಮಿಷನರ್‌ರವರು ಸಾರ್ವಜನಿಕವಾಗಿ ಬಂದು, ಏನಾದರೂ ಫೂಟೇಜ್ ಇದ್ದರೆ ಕೊಡಿ ಎಂದು ಹೇಳುತ್ತಾರೆ; ವಿಡಿಯೋಗಳಿದ್ದರೆ ಕೊಡಿ ಎಂದು ಪೇಪರ್ ಪ್ರಕಟಣೆ ಕೊಡುತ್ತಾರೆ. ಎರಡು ಹೆಣಗಳು ಬೀಳುತ್ತವೆ. District in-charge Minister, Member of Parliament and Local MLA also belongs to BJP. ಒಬ್ಬರೂ ಕೂಡ ಅವರ ಮನೆಗೆ ಭೇಟಿ ಕೊಡುವುದಿಲ್ಲ. ಅವರ ಕುಟುಂಬದವರು ಸತ್ತಿದ್ದಾರೋ ಬದುಕಿದ್ದಾರೋ, ಅವರಿಗೆ ತಿನ್ನಲು ಅನ್ನ ಇದೆಯೇ ಇಲ್ಲವೇ ಎಂದು ಯೋಚನೆ ಮಾಡುವುದಿಲ್ಲ.

ಮುಖ್ಯಮಂತ್ರಿಗಳು ಬಂದು ಅಲ್ಲಿನ Circuit House ನಲ್ಲಿ ಕುಳಿತು, ಅವರ ಕುಟುಂಬದವರನ್ನು ಕರೆಸಿ, ಹೆದರಬೇಡಿ; ನಿಮ್ಮ ಕುಟುಂಬಕ್ಕೆ ಸಹಾಯ ಮಾಡುತ್ತೇವೆ ಎಂದು ಹೇಳುತ್ತಾರೆ. ಆ ಸಂದರ್ಭದಲ್ಲಿ ನಾನು, ಶಾಸಕ ಮಾನ್ಯ ಹರೀಶ್‌ಕುಮಾರ್ ಮತ್ತು ಮಾನ್ಯ ಕೋಟ ಶ್ರೀನಿವಾಸಪೂಜಾರಿಯವರೂ ಇದ್ದರು. ಕಾನೂನು ಪ್ರಕಾರ ಅವರಿಗೆ ಪರಿಹಾರ ಕೊಡಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿ ಹೋಗುತ್ತಾರೆ. ಮರುದಿವಸ ಆ ಮನೆಯವರನ್ನು ಡಿಸಿಯವರು, ನಿಮಗೆ ಚೆಕ್ ಕೊಡುವುದಕ್ಕೆ ಹೇಳಿದ್ದಾರೆ ಸರ್ಕಿಟ್ ಹೌಸ್‌ಗೆ ಬನ್ನಿ ಎಂದು ಕರೆಸುತ್ತಾರೆ. ಲೋಕಲ್ ಕಾರ್ಪೋರೇಟರ್ ಅವರನ್ನು ಕರೆದುಕೊಂಡು ಹೋಗುತ್ತಾನೆ. ನಂತರ, ಇದರಲ್ಲಿ ಸ್ವಲ್ಪ ಗೊಂದಲ ಇದೆ ಎಂದು ಹೇಳಿ ಪರಿಹಾರ ಕೊಡದೇ ಆ ಕುಟುಂಬದವರನ್ನು ಹಿಂದಕ್ಕೆ ಕಳುಹಿಸುತ್ತಾರೆ. ಮಾನವೀಯತೆ ಇದ್ದಿದ್ದರೆ, ಸತ್ತವರು ನಮ್ಮ ರಾಜ್ಯದ ಪ್ರಜೆಗಳು ಎಂದು ಭಾವಿಸಿದ್ದರೆ, ಅವರ ತೆರಿಗೆಯಿಂದ ನಾವು ಸರ್ಕಾರ ನಡೆಸುತ್ತಿದ್ದೇವೆ ಎನ್ನುವುದನ್ನು ಜ್ಞಾಪಿಸಿಕೊಂಡಿದ್ದರೆ ಅವರಿಗೆ ಸರ್ಕಾರ ಪರಿಹಾರ ಕೊಡುತ್ತಿತ್ತು. ಆದರೆ ಕನಿಷ್ಠ ಅಷ್ಟು ಸೌಜನ್ಯವನ್ನೂ ನಮ್ಮ ಸರ್ಕಾರ ತೋರಲಿಲ್ಲ. Even in accidental death, though he himself he is an accused, ಅವನು ಆರೋಪಿ ಆಗಿದ್ದರೂ in Motor Vehicle Act, No-fault Liability ಎಂದು ಹೇಳುತ್ತದೆ. ಅವನೇ ಆರೋಪಿ ಆಗಿ ಸತ್ತಿದ್ದರೂ ಅವನಿಗೆ ಪರಿಹಾರ ಕೊಡಿ ಎಂದು Indian Motor Vehicles Act, No-fault Liability ಎಂದು ಹೇಳುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಕರುಣೆ ತೋರಲಿಲ್ಲ. ಸರ್ಕಾರಕ್ಕೆ ಕೊಡುವ ಮನಸ್ಸು ಇಲ್ಲದೇ ಇದ್ದಿದ್ದರೆ ಅಥವಾ ಅವರು ಆರೋಪಿ ಎಂದೆನಿಸಿದ್ದರೆ ತಕ್ಷಣ ಅದನ್ನು ಹೇಳುವುದಕ್ಕೆ ಅವಕಾಶ ಇತ್ತು.

ಮಾನ್ಯ ಮುಖ್ಯಮಂತ್ರಿಗಳು 21ನೇ ದಿನಾಂಕಕ್ಕೆ ಬಂದಿದ್ದರು. 19ನೇ ದಿನಾಂಕದಂದು ಹೆಣಗಳು ಬಿದ್ದಿದ್ದವು. ಇನ್ನೂ ಕೆಲವರಿಗೆ ಏನು ಕೈಗೆ, ಹೊಟ್ಟೆಗೆ ಗುಂಡೇಟು ಬಿದ್ದಿತ್ತೋ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಊನತ್ವದಲ್ಲಿ ಇದ್ದರು. ಅಲ್ಲೂ ಕೂಡ ಭೇಟಿ ಕೊಡಲಿಲ್ಲ. ಉಸ್ತುವಾರಿ ಮಂತ್ರಿಗಳು, ಸ್ಥಳೀಯ ಶಾಸಕರು, ಗೃಹ ಮಂತ್ರಿಗಳು ಮತ್ತು ಎಂಪಿಗಳೂ ಕೂಡ ಭೇಟ ಕೊಡಲಿಲ್ಲ. ಸತ್ತವರದ್ದು ಹೆಣ ತೆಗೆದಾಯಿತು; ಆದರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದವರನ್ನಾದರೂ ಹೋಗಿ ಇವರು ಭೇಟಿ ಮಾಡಬಹುದಿತ್ತು ಅಲ್ಲವೇ? ಅವರ ಕುಟುಂಬಸ್ಥರು ಆಸ್ಪತ್ರೆಯ ಬಿಲ್ ಕಟ್ಟುವ ಪರಿಸ್ಥಿತಿಯಲ್ಲಿದ್ದಾರೋ ಇಲ್ಲವೋ ಎನ್ನುವ ವಿಚಾರವಾದರೂ ಮಾಡಬೇಕಾಗಿತ್ತು ಅಲ್ಲವೇ? ಈ ಕುರಿತು ಕೇಳಿದಾಗ ತಾವು, ಅವರು ಆರೋಪಿಗಳು ಎಂದು ಉತ್ತರ ಕೊಡುತ್ತೀರಿ. ಆರೋಪಿಗಳು ಯಾರು? ಪೊಲೀಸರು ಅವರನ್ನು ಆರೋಪಿಗಳನ್ನಾಗಿ ಮಾಡದೇ ಇದ್ದರೆ ಪೊಲೀಸರೇ ಆರೋಪಿಗಳಾಗುತ್ತಾರೆ. For their own survival, they falsely implicate somebody. ತಾನು ಬದುಕುವುದಕ್ಕೋಸ್ಕರ ಇನ್ನೊಬ್ಬನನ್ನು ಆರೋಪಿಯನ್ನಾಗಿ ಮಾಡುತ್ತಾರೆ. ಸರ್ಕಾರ ಇರುವುದು ಪೊಲೀಸರ ಪರವಾಗಿಯೋ ಅಥವಾ ತಪ್ಪು ಮಾಡಿದವರ ಮೇಲೆ ಕ್ರಮ ಕೈಗೊಳ್ಳಲು ಇದೆಯೋ ಎನ್ನುವುದನ್ನು ಕೇಳಬೇಕಾಗುತ್ತದೆ. ಪೊಲೀಸ್ ಕಮಿಷನರ್‌ರವರು, ಕೇರಳದವರು ಮಂಗಳೂರಿಗೆ ಬಂದು ಗಲಾಟೆ ಮಾಡುತ್ತಾರೆ ಎಂದು ಹೇಳಿಕೆ ಕೊಡುತ್ತಾರೆ. ಮಂಗಳೂರು-ಕೇರಳ ಗಡಿಯನ್ನು ಹೊಂದಿವೆ. ಪ್ರತಿದಿನ ಸಾವಿರಾರು ಜನ ಬರುತ್ತಾರೆ, ಹೋಗುತ್ತಾರೆ. ಕೇರಳದವರ ವ್ಯಾಪಾರ ವಹಿವಾಟು ಮಂಗಳೂರಿನಲ್ಲಿ ಇದೆ. ಮಂಗಳೂರಿನಲ್ಲಿ ಕೇರಳದವರು ಬರದೇ ಇದ್ದರೆ ನಮಗೆ ವ್ಯಾಪಾರವೇ ಆಗುವುದಿಲ್ಲ. ಕೇರಳದ ಒಂದು ಜಿಲ್ಲೆಯಂತೂ ಇಡೀಯಾಗಿ ಕನ್ನಡ ಮಾತನಾಡುವವರು ಇದ್ದಾರೆ, ಅಲ್ಲಿ ಕನ್ನಡ ಶಾಲೆಗಳಿವೆ, ಅಲ್ಲಿ ವಿದ್ಯಾರ್ಥಿಗಳಿದ್ದರೆ. ಮಂಗಳೂರಿನಲ್ಲಿ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳಿವೆ. ಕೇರಳದವರು ಇಲ್ಲಿಗೆ ಬಂದು ವಿದ್ಯಾಭ್ಯಾಸ ಮಾಡುತ್ತಾರೆ. ಆದರೆ ನೀವು, ಕೇರಳದಿಂದ ಟೆರರಿಸ್ಟ್‌ಗಳು ಮಂಗಳೂರಿಗೆ ಬಂದು ಗಲಾಟೆ ಮಾಡುತ್ತಾರೆ ಎಂದು ಹೇಳುತ್ತೀರಿ. I am challenging from this House, ಒಬ್ಬನೇ ಒಬ್ಬ ಕೇರಳದವರನ್ನು ನೀವು ಬಂಧಿಸಿದ್ದೀರಾ? ಸಾವಿರಾರು ಜನ ಅಲ್ಲಿಂದ ಬಂದಿದ್ದಾರೆ ಎಂದು ಹೇಳುವ ನಿಮಗೆ ಅವರಲ್ಲಿ ಒಬ್ಬರೂ ಸಿಗಲಿಲ್ಲವೇ? ಗೋಲಿಬಾರ್ ಮಾಡಿದಿರಿ, ಹಲವರನ್ನು ಅರೆಸ್ಟ್ ಮಾಡಿದಿರಿ; ಅವರಲ್ಲಿ ಯಾರಾದರೂ ಕೇರಳದವರು ಸಿಕ್ಕಿದ್ದಾರೆಯೇ? ಸುಳ್ಳು ಹೇಳುವ ಮೂಲಕ ಅಮಾಯಕರನ್ನು ಬಲಿ ತೆಗೆದುಕೊಂಡಿದ್ದೀರಿ. ಇವತ್ತು ಈ ರಾಜ್ಯದಲ್ಲಿ ಬೆದರಿಕೆ ಹುಟ್ಟಿಸುವಂತಹ ಕೆಲಸ ಮಾಡುತ್ತಿದ್ದೀರಿ. ಯಾರು ಸಿಎಎ, ಎನ್‌ಆರ್‌ಸಿ, ವಿರುದ್ಧವಾಗಿ ಮಾತನಾಡುತ್ತಾರೋ ಅಂಥವರನ್ನು ದೇಶದ್ರೋಹಿಗಳು ಎನ್ನುತ್ತೀರಿ. ಅವರಿಗೆ ಸಮಾಜದಲ್ಲಿ ಮಾತನಾಡುವ ಹಕ್ಕಿಲ್ಲವೇ? ಮಾನ್ಯ ಯು.ಟಿ.ಖಾದರ್‌ರವರು ಮಂಗಳೂರಿನಲ್ಲಿ ಭಾಷಣ ಮಾಡುವಾಗ ಆ ವೇದಿಕೆಯಲ್ಲಿ ನಾನೂ ಇದ್ದೆ. ಅವರು ಮಾತನಾಡುವಾಗ, ದೇಶದಲ್ಲಿ ಹಲವಾರು ಕಡೆ ಬೆಂಕಿ ಹತ್ತಿಕೊಂಡು ಉರಿಯುತ್ತಿದೆ; ನೀವು ಅದನ್ನು ಗಮನದಲ್ಲಿಟ್ಟುಕೊಂಡು, ಕರ್ನಾಟಕದಲ್ಲಿ ಅಂತಹ ಪರಿಸ್ಥಿತಿ ಬರದ ಹಾಗೆ ನೋಡಿಕೊಳ್ಳಬೇಕು ಎಂದು ಹೇಳಿದರೆ ಅವರ ಮೇಲೆ ದೇಶ ವಿರೋಧಿ ಕೇಸ್ ಹಾಕಿದಿರಿ. ಆದರೆ, ಕಲ್ಲಡ್ಕದಲ್ಲಿ ಪ್ರಭಾಕರ್‌ಭಟ್ಟರು, ಸಾವಿರಾರು ಪೊಲೀಸ್ ಅಧಿಕಾರಿಗಳು, ಲೆಫ್ಟಿನೆಂಟ್ ಜನರಲ್‌ಗಳು ಹಾಗೂ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ, ರಾಮಜನ್ಮ ಭೂಮಿಗೆ ಕರಸೇವಕರು ಹೇಗೆ ಬಂದರು; ಯಾವರೀತಿ ಬಾಬರಿ ಮಸೀದಿಯನ್ನು ಹೊಡೆದು ಹಾಕಿದರು ಎಂದು ನಾಟಕವಾಡಿಸುತ್ತಾರೆ. Their

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

act was clearly against the direction of the Supreme Court. Why the government did not take any action against them? ಇದರ ಬಗ್ಗೆ ಯಾವುದೇ ಕೇಸ್ ಹಾಕಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ಎರಡು ಪ್ರಕರಣಗಳಲ್ಲೂ ಕೇಸ್ ದಾಖಲಾಗಿದೆ. ಆದರೆ, ಒಂದೇ ಕಡೆಯಿಂದ ವಕೀಲರು ವಾದ ಮಾಡಿದರೆ ಇಂತಹ ಅಭಿಪ್ರಾಯಗಳು ಬರುತ್ತವೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಆದರೆ case register ಆಗಿಲ್ಲ. Nothing was done in this matter. ನೀವು ಡಿಸ್ಟ್ರಿಕ್ಟ್ ಇನ್‌ಚಾರ್ಜ್ ಮಿನಿಸ್ಟರ್ ಆಗಿದ್ದೀರಿ . . .

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಎರಡು ಪ್ರಕರಣಗಳಿಗೆ ಸಂಬಂಧಪಟ್ಟಂತೆ ಪ್ರಕರಣ ದಾಖಲಾಗಿದೆ ಎಂದು ಹೇಳಿದಿರಿ. ಆದರೆ **XXX** ಅವರನ್ನು ಜೈಲಿಗೆ ಕಳುಹಿಸಿದ್ದೀರಾ? ನೀವು ತಾಯಿಯನ್ನು ಮತ್ತು ಮಗುವನ್ನು ಬೇರೆ ಮಾಡಿದ್ದೀರಿ. **(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಿಮ್ಮ ಮನಸ್ಸಿಗೆ ಬಂದ ಹಾಗೆ ನೀವು ಮಾತನಾಡಿದರೆ ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕಾಗುತ್ತದೆ. ಯಾರೇ ವಿರೋಧ ಪಕ್ಷದ ಸದಸ್ಯರು ಪ್ರಖರವಾಗಿ ಮಾತನಾಡಿದರೆ ಅದಕ್ಕೆ ನಾವು ಒಂದಷ್ಟು ಅವಕಾಶ ಮಾಡಿಕೊಡುತ್ತೇವೆ. ಏಕೆಂದರೆ ಅವರ ಮನಸ್ಸಿನಲ್ಲಿ ಇದ್ದುದನ್ನು ಅವರ ಹೇಳಬೇಕಾಗುತ್ತದೆ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾತನಾಡಲು ಅವಕಾಶ ನೀವು ಕೊಡಬೇಕಾಗಿಲ್ಲ. ಮಾನ್ಯ ಸಭಾಪತಿಯವರು ಕೊಡುತ್ತಾರೆ. **(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, **XXX** ಜೈಲಿಗೆ ಹೋಗಿದ್ದಾರೆಯೇ? **(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಯು.ಟಿ.ಖಾದರ್‌ರವರು ಜೈಲಿಗೆ ಹೋಗಿದ್ದಾರೆಯೇ? ಎಲ್ಲರೂ ಮನಸ್ಸಿಗೆ ಬಂದ ಹಾಗೆ ಮಾತನಾಡಬೇಡಿ. **(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** **XXX** ರವರ ಮೇಲೆ ದೇಶದ್ರೋಹದ ಕೇಸ್ ಹಾಕಿದ್ದೀರಾ? Sedition ಕೇಸ್ ಹಾಕಿದ್ದೀರಾ?

---

**XXX ಮಾನ್ಯ ಸಭಾಪತಿಯವರ ಅಪ್ಪಣೆ ಮೇರೆಗೆ ಕಡತದಿಂದ ತೆಗೆಯಲಾಗಿದೆ**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಯಾರಾದರೂ ಸದಸ್ಯರು ಮಾತನಾಡುವಾಗ ಮಧ್ಯದಲ್ಲಿ ಸರ್ಕಾರದ ಪರವಾಗಿ ಮಾತನಾಡಬಾರದು ಎಂದು ನಿಯಮ ಇದೆಯೇ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–**ಮಾನ್ಯ ಸಭಾಪತಿಯವರೇ, ಆ ಪ್ರದೇಶದಲ್ಲಿ ಮುಖ್ಯಮಂತ್ರಿಗಳು ಅಥವಾ ಗೃಹ ಮಂತ್ರಿಗಳು ಹೇಳುವುದು ನಡೆಯುವುದಿಲ್ಲ. ಮಂಗಳೂರು ಜಿಲ್ಲೆಯಲ್ಲಿ ಬೇರೆಯದೇ ಆದ ಒಂದು ಫೋರ್ಸ್ ಇದೆ. ಅದು ಇಡೀ ಜಿಲ್ಲೆಯನ್ನು ಕಂಟ್ರೋಲ್ ಮಾಡುತ್ತದೆ. ಅವರು ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳಬೇಕು, ನಿಂತುಕೊಳ್ಳಿ ಎಂದರೆ ನಿಲ್ಲಬೇಕು. District in-charge Minister is the constitutional figure controlling all affairs of the district.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ದಯವಿಟ್ಟು ನೀವು ಕುಳಿತುಕೊಳ್ಳಿ. ಆರೋಗ್ಯಕರ ಚರ್ಚೆಗೆ ಅವಕಾಶ ಮಾಡಿ ಕೊಡೋಣ.

**(41)18–02–2020 6.20 ಡಿಎಸ್–ವಿಕೆ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ, ಅವರೇನು ಮಾತನಾಡುತ್ತಾರೆಂದು ನೋಟ್ ಮಾಡಿಕೊಳ್ಳಿ. ಮಾನ್ಯ ಸಭಾನಾಯಕರು ಮಧ್ಯೆ ಮಧ್ಯೆ ಮಾತನಾಡಿದರೆ ಏನಾಗುತ್ತದೆಂದರೆ ನಾನು ಮಾತನಾಡಬೇಕಾಗುತ್ತದೆ, ಇದರಿಂದ ಸಮಯ ವ್ಯರ್ಥವಾಗುತ್ತದೆ. ಅದಕ್ಕೆ ಅವರು ಬರೆದುಕೊಳ್ಳಬೇಕಾಗುತ್ತದೆ. ಅವರಿಗೆ ಉತ್ತರ ಹೇಳುವುದಕ್ಕೆ ಸಂಪೂರ್ಣ ಅಧಿಕಾರವಿದೆ. ಈ ಸದನದ ಘನತೆ ಗೌರವವನ್ನು ಕಾಪಾಡಬೇಕಾಗುತ್ತದೆ. ಹೊರಗಡೆ ಎಲ್ಲಾ ಬೇರೆ ಬೇರೆ ರೀತಿ ಮಾತನಾಡುವುದು ಬೇಡ. ಈ ಸದನದ ಗೌರವವನ್ನು ಎತ್ತಿಹಿಡಿಯಲು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವೆಲ್ಲಾ ಪ್ರಯತ್ನಪಡಬೇಕಾಗುತ್ತದೆ. ಮಾನ್ಯ ಸಭಾನಾಯಕರು ನಾವೆಲ್ಲಾ ಮಾತನಾಡುವುದನ್ನು ಬರೆದುಕೊಂಡು ನಂತರ ಉತ್ತರ ಹೇಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದೊಂದು ಸಲ ಸರ್ಕಾರ ಮಧ್ಯ ಪ್ರವೇಶ ಮಾಡತಕ್ಕಂಥ ಅನಿವಾರ್ಯತೆ ಎಲ್ಲಾ ಸರ್ಕಾರಕ್ಕೂ ಇದೆ. ಯಾರಿಗೂ ಕೂಡ ಪರಿಹಾರ ಕೊಟ್ಟಿಲ್ಲ ಎಂದು ಅವರು ಹೇಳಿದಾಗ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ಅದೇ ಜಿಲ್ಲೆಯಲ್ಲಿ ಶರತ್ ಮಡಿವಾಳ ಮತ್ತು ಪ್ರಶಾಂತ್ ಪೂಜಾರಿ ಕೊಲೆಯಾಗುತ್ತದೆ. ಆಗ ನಾನು ವಿರೋಧ ಪಕ್ಷದ ನಾಯಕನಾಗಿದ್ದೆ. ಉಸ್ತುವಾರಿ ಮಂತ್ರಿಯಾಗಿ ನೀವು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅಲ್ಲಿಗೆ ಹೋಗಿಲ್ಲ ಎಂದು ನಾನು ಯು.ಟಿ.ಖಾದರ್‌ಗೆ ಹೇಳಿದೆ. ಮಾನ್ಯ ಐವನ್ ಡಿ'ಸೋಜಾರವರು ಈ ಕಡೆ ಇದ್ದಾಗ ಏನು ಹೇಳಿದರೆಂದರೆ, ಅಲ್ಲಿ ಉದ್ವಿಗ್ನ ಪರಿಸ್ಥಿತಿಗಳು ಮತ್ತಷ್ಟು ಶಾಂತಿಗೆಡಿಸುವ ಪರಿಸ್ಥಿತಿ ಇದೆ, ಅದಕ್ಕೋಸ್ಕರ ನಾವು ಹೋಗಿಲ್ಲ ಎಂದು ಹೇಳಿದರು. ಅದಕ್ಕೆ ನಾನು ಅವರಿಗೆ ಒಂದು ರೂಪಾಯಿ ಪರಿಹಾರ ಕೊಟ್ಟಿಲ್ಲ ಎಂದು ಹೇಳಿದೆ. ಅವರ ಮೇಲೆ ಆರೋಪಗಳಿರುವ ಕಾರಣಕ್ಕಾಗಿ ಪರಿಹಾರ ಕೊಟ್ಟಿಲ್ಲವೆಂದು ಹೇಳಿದರು. ಈಗ ನಡೆದಿರುವಂತಹ ಪ್ರಕರಣದಲ್ಲೂ ಕೂಡ ಇದೇ ರೀತಿಯ ಚರ್ಚೆಗಳಿವೆ. ನಾವು ಏಕೆ ಹೋಗಿಲ್ಲವೆಂದರೆ ಅಲ್ಲಿರುವಂತಹ ಪರಿಸ್ಥಿತಿಯಲ್ಲಿ ಗೊಂದಲವಾಗುತ್ತದೆ ಎನ್ನುವ ಕಾರಣಕ್ಕಾಗಿ ಹೋಗಿಲ್ಲ. ಹಾಗಾಗಿ ಹಿಂದೆ ಅವರು ಕೊಟ್ಟಿಲ್ಲ ಅದಕ್ಕೋಸ್ಕರ ನಾವು ಕೊಡುವುದಿಲ್ಲವೆಂದು ನಾನು ಹೇಳುತ್ತಿಲ್ಲ. ಮತ್ತೆ ಪ್ರೋಸೆಸ್ ಸರ್ಕಾರ ಮಾಡಬೇಕಾಗುತ್ತದೆ. ಅವರೇನು ನೈಜವಾಗಿ ಮಾತನಾಡುತ್ತಿದ್ದಾರೆ ಅದು ಹೌದು ಎನ್ನುವುದಾದರೆ ನಾಳೆ ಉತ್ತರ ಕೊಡುತ್ತೇವೆ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಒಂದು ಗೊಂದಲವಾಗುತ್ತಿದೆ. ಈ ಸದನದಲ್ಲಿ ಸದಸ್ಯನಾಗಿ ನಾನು ಮಾತನಾಡುವುದಕ್ಕೆ ತಾವು ಅವಕಾಶ ಕೊಡುತ್ತೀರಾ ಅಥವಾ ಸಭಾನಾಯಕರು ಅವಕಾಶ ಕೊಡುತ್ತಾರೆಯೇ? ಸಭಾನಾಯಕರು ಏನು ಹೇಳಿದರೆಂದರೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿದರು. ನನಗೆ ಸಂವಿಧಾನ, ನಿಯಮಗಳು ಏನು ಹೇಳುತ್ತದೆಂದರೆ, ಮಾನ್ಯ ಸಭಾಪತಿಯವರ ಅನುಮತಿ ಮೇರೆಗೆ ನಾವು ಮಾತನಾಡಬೇಕೆಂದು ಇದೆ. ತಾವು ಎಷ್ಟು ಕಾಲಾವಕಾಶ ಕೊಡುತ್ತೀರಿ ಅಷ್ಟು ಮಾತನಾಡಬೇಕೆಂದು ಇದೆ. ಆದರೆ ನಾವು ನಿಮಗೆ ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಅರ್ಥ ಏನು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಆ ರೀತಿ ಹೇಳಿಲ್ಲ. ನೀವು ಮಾತನಾಡುವಾಗ ನಾನು ಮಧ್ಯ ಪ್ರವೇಶ ಮಾಡುವಂತಹ ಪರಿಸ್ಥಿತಿಗಳಿರುವುದಿಲ್ಲ ಎಂದು ನಾನು ಹೇಳಿದೆ. ಒಮ್ಮೊಮ್ಮೆ ಮಧ್ಯ ಪ್ರವೇಶ ಮಾಡಬೇಕಾಗುತ್ತದೆ ಎಂದು ಹೇಳಿದೆ. ಅವರ ಚಾಣಕ್ಷತನ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ನನಗೆ ಶಕ್ತಿ ಇಲ್ಲ. ಅವರು ದೊಡ್ಡವರು.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಅವರ ಮೇಲೂ ಕೇಸ್ ಹಾಕಿದೆ, ಇವರ ಮೇಲೂ ಕೇಸ್ ಹಾಕಿದೆ ಎಂದು ಅವರು ಹೇಳಿದರು. ಇವರ ಮೇಲೆ sedition case ಹಾಕಿದ್ದಾರೆ, ಅವರ ಮೇಲೆ ಯಾವ ಕೇಸ್ ಹಾಕಿದ್ದಾರೆ ಎಂಬುದನ್ನು ಅವರು ಹೇಳಲಿ. ಅವರ ಮೇಲೆ ಎಫ್.ಐ.ಆರ್ ಹಾಕಿದ್ದಾರೆ sedition case ಏಕೆ ಹಾಕಿಲ್ಲ? ಇಬ್ಬರು ಸತ್ತರು, ಅವರು ಗೋಲಿಬಾರ್‌ನಿಂದ ಸತ್ತಿದ್ದಾರೆಯೇ, ಇಲ್ಲ. ಇವರು ಗೋಲಿಬಾರ್‌ನಿಂದ ಸತ್ತಿದ್ದಾರೆ. ಇವರಿಗೆ ಪರಿಹಾರ ಕೊಡಬೇಕಾಗಿದೆ. ಇದು ಪೊಲೀಸರು ಮಾಡಿರತಕ್ಕಂಥ ತಪ್ಪು. ಮೂರನೆಯದು, ಇಂತಹ ಚರ್ಚೆ ನಡೆಯಬೇಕಾದರೆ ಪೊಲೀಸ್ ಅಧಿಕಾರಿಗಳು ಇರಬೇಕು. ಯಾರೋ ಒಂದಿಬ್ಬರನ್ನು ಕೂರಿಸತಕ್ಕಂಥದ್ದು ಸರಿಯಲ್ಲ. ಎಲ್ಲಾ ಅಧಿಕಾರಿಗಳು ಚರ್ಚೆಯನ್ನು ಕೇಳಬೇಕು. ಅವರಿಗೆ ಅನುಭವ ಆಗಬೇಕು. ನಾವು ಇಲ್ಲಿ ಐದು ವರ್ಷ ಇರುತ್ತೇವೆ, ಅವರು 30 ವರ್ಷ ಇರತಕ್ಕಂಥವರು. ಇದನ್ನು ಕೇಳಿದರೆ ಅವರಿಗೆ ಮಾರ್ಗಸೂಚಿ ಸಿಗುತ್ತದೆ. ಇವತ್ತು ಆಗಿದೆ,

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾಳೆ ಯಾವುದೇ ಚರ್ಚೆ ನಡೆಯಲಿ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯಬೇಕಾದರೆ ಹಿರಿಯ ಅಧಿಕಾರಿಗಳು ಕುಳಿತುಕೊಂಡಿರಬೇಕು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಆರೋಪಿಗಳು ಎಂದು ಹೇಳಿದರೆ ಯಾರು ಗೋಲಿಬಾರ್‌ನಲ್ಲಿ ಸತ್ತರು ಅವರು ತಮ್ಮ ತಮ್ಮ ಕಾಯಕ ಮಾಡುತ್ತಿರುವವರು. ಒಬ್ಬ ಗ್ಯಾರೇಜ್‌ನಲ್ಲಿದ್ದ, ಅಲ್ಲಿಗೆ ಪೊಲೀಸ್‌ನವರು ಬಂದು ಹೇಳುತ್ತಾರೆ, ನೀನು ಅಂಗಡಿ ಬಂದ್ ಮಾಡಿ ಇಲ್ಲಿಂದ ಓಡಬೇಕು, ಅಂಗಡಿಯ ಶೆಟ್ಟರ್ ಹಾಕಿ ಹೊರಗೆ ಬರಬೇಕಾದರೆ ಅವನನ್ನು ಗುಂಡಿಕ್ಕಿ ಕೊಲ್ಲುತ್ತಾರೆ. ಮತ್ತೊಬ್ಬರು ಮಗುವನ್ನು ಶಾಲೆಯಿಂದ ಮನೆಗೆ ಕರೆದುಕೊಂಡು ಹೋದಾಗ ಮನೆಯ ಎದುರಿನಲ್ಲಿ ಹೆಂಡತಿಯ ಎದುರಿಗೆ ಕೊಲ್ಲುತ್ತಾರ್ವೆದು ಹೇಗೆಂದರೆ, ಒಬ್ಬನಿಗೆ ಬೆನ್ನಿಗೆ, ಮತ್ತೊಬ್ಬನಿಗೆ ನೇರವಾಗಿ ತಲೆಗೆ ಗುಂಡಿಕ್ಕಿ ಕೊಲ್ಲುತ್ತಾರೆ. ಈ ರೀತಿ ಏಕೆ ಮಾಡುತ್ತಾರೆ, ಇದರಿಂದ ಏನು ಸಾಧನೆ ಮಾಡಿದಂತಾಗುತ್ತದೆ?

**(ಈ ಹಂತದಲ್ಲಿ ಮಾನ್ಯ ಸದಸ್ಯರು ಕೆಲವೊಂದು ಫೋಟೋಗಳನ್ನು ಸದನದಲ್ಲಿ ಪ್ರದರ್ಶಿಸಿದರು)**

ಮಾನ್ಯ ಸಭಾಪತಿಯವರೇ, ಅವರ ಮಕ್ಕಳು ಹೆಂಡತಿಯ ಎದುರಲ್ಲೇ ಪೊಲೀಸರು ಗುಂಡನ್ನು ಹೊಡೆಯುತ್ತಾರೆ. ಅದು ಒಂದು ಓಣಿಯಲ್ಲಿ ಹೊಡೆಯುತ್ತಾರೆ. ಇದರ ಅವಶ್ಯಕತೆ ಏನಿತ್ತು? ಅವರು ಪೊಲೀಸರಿಗೆ ಬೆಂಬಲ ಕೊಡುತ್ತಿದ್ದಾರಲ್ಲವೇ? You should have inquired the police, after knowing the facts. But you have not done it. ಅವರು ಉದ್ದೇಶ ಪೂರ್ವಕವಾಗಿಯೇ ಪೊಲೀಸರಿಗೆ ಬೆಂಬಲ ಕೊಡುತ್ತಿದ್ದಾರೆಂದು ನಾನು ಹೇಳಬಯಸುತ್ತೇನೆ. ಈ ಸರ್ಕಾರ ನಮಗೆ ರಕ್ಷಣೆ ಕೊಡುವುದಿಲ್ಲವೆಂದು ಜನರು ಬೀದಿ ಬೀದಿಯಲ್ಲಿ ಮಾತನಾಡುತ್ತಿದ್ದಾರೆ. Because they all belong to one particular community. ಬೇರೆಯವರು ಸತ್ತಿದ್ದರೆ ಸುಮ್ಮನಿರುತ್ತಿದ್ದಾರೆಯೇ? ಎಂ.ಎಲ್.ಎ. ಯವರು ಅವರ ಮನೆಗೆ ಹೋಗದೆ ಇರುತ್ತಿದ್ದರೆ? ಸ್ಥಳೀಯ ಎಂ.ಎಲ್.ಎ. ಗೆ ಅವರ ಮನೆಯಿಂದ ಒಂದು ಕಿ.ಮೀ. ಇಲ್ಲ. ಅವರು ಹೇಗೆ ಸತ್ತರು ಎಂದು ಕೇಳುವುದಕ್ಕೆ ಹೋಗುವುದಿಲ್ಲ. ಉಸ್ತುವಾರಿ ಮಂತ್ರಿಗಳು ಅಲ್ಲಿಗೆ ಹೋಗುವುದಿಲ್ಲ. ಎಂ.ಪಿ ಯವರು ಹೋಗುವುದಿಲ್ಲ. ಒಬ್ಬ ಅಧಿಕಾರಿಯೂ ಅಲ್ಲಿಗೆ ಹೋಗುವುದಿಲ್ಲ. ಅವರ ಶಿಕ್ಷಣದ ವ್ಯವಸ್ಥೆ ಏನು, ಅವರಿಗೆ ಏನು ಸಹಾಯ ಮಾಡಬೇಕು ಎಂದು ಕೇಳುವುದಿಲ್ಲ. ಈ ಸರ್ಕಾರ ಮಾನವೀಯತೆ ಇಲ್ಲದಿರುವಂತಹ ಸರ್ಕಾರ, ಪ್ರತಿಭಟನೆಯಲ್ಲಿ ನಿರತರಾದವರನ್ನು ಗುಂಡಿಕ್ಕಿ ಕೊಲ್ಲುವಂತಹ ಸರ್ಕಾರ, ಈ ರಾಜ್ಯದಲ್ಲಿ ಇರಬೇಕೇ ಎಂಬದು ಜನರ ಮತ್ತು ನಮ್ಮೆಲ್ಲರ ಪ್ರಶ್ನೆ. ಇಂತಹ ಸರ್ಕಾರವನ್ನು ನಾವೆಂದೂ ನೋಡಿಲ್ಲ. ನಮ್ಮ ಊರಿನಲ್ಲಿ ಐದಾರು ಗಲಾಟೆಗಳಾಗಿದ್ದವು. ಹಿಂದೂ, ಮುಸ್ಲಿಮ್ ಗಲಾಟೆ ಆಗಿರುವುದನ್ನು ನಾವು ಕಂಡಿದ್ದೇವೆ. ಶ್ರೀ ಬಿ.ಎ.ಮೊಹಿದ್ದೀನ್‌ರವರು ಉಸ್ತುವಾರಿ ಸಚಿವರಾಗಿದ್ದಾಗ ಗಲಾಟೆಯಾಗಿತ್ತು. ಶ್ರೀ ನಾಗರಾಜಶೆಟ್ಟಿಯವರು ಇದ್ದಾಗ ಆಗಿತ್ತು. ನಾವು ಅವರಿಗೆ ಸಹಾಯ ಮಾಡಿದ್ದೇವೆ, ಮನೆಗೆ ಹೋಗಿ ಮಾತನಾಡಿದ್ದೇವೆ. ನಮ್ಮಿಂದ ಆದ ಸಹಾಯವನ್ನು ಮಾಡಿದ್ದೇವೆ. ಆದರೆ, ಈ ಸರ್ಕಾರ ಕಲ್ಲು ಬಿಸಾಕಿದರು,

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಟೆಂಪೋಗಳಲ್ಲಿ ಕಲ್ಲು ತಂದು ಬಿಸಾಡಿರುವುದನ್ನು ನೋಡಿದರೆ ಇದೆಲ್ಲಾ ಪೂರ್ವ ನಿಯೋಜಿತವಾಗಿ ಮಾಡಿರುವಂಥದ್ದು ಎಂದು ಗೊತ್ತಾಗುತ್ತದೆ. ಪೊಲೀಸ್ ಕಮೀಷನರ್‌ರವರಿಂದ video footages ಗಳನ್ನು ತಂದು ಟಿ.ವಿ. ಗಳಿಗೆ ಬಿಡುಗಡೆ ಮಾಡಿದರು. ಆ ಸಮುದಾಯವನ್ನು, protesters ಗಳನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸುವ ಕೆಲಸ ಮಾಡಿದ್ದಾರೆ. ಕೊನೆಗೆ ಗೊತ್ತಾಯಿತು, ಯಾವುದೋ ಬಿಲ್ಡಿಂಗ್ ಒಡೆದು ಹಾಕಿರುವ ಕಲ್ಲುಗಳನ್ನು ನಾಲ್ಕೈದು ದಿನಗಳಿಂದ ಸಾಗಿಸುತ್ತಿದ್ದವನನ್ನು ಪೊಲೀಸರು ತಡೆದು ನಿಲ್ಲಿಸಿದರು. ಆ ಕಲ್ಲುಗಳು ಎಂದು ಮತ್ತೆ ಗೊತ್ತಾಯಿತು. ಅಂದರೆ ತಪ್ಪು ಮಾಡಿ ಆ ತಪ್ಪನ್ನು ಸರಿ ಮಾಡುವುದಕ್ಕೆ ಪೊಲೀಸರನ್ನು ಉಪಯೋಗ ಮಾಡಿಕೊಂಡಿದ್ದಾರೆ. ಇವತ್ತು 30 ಪ್ರಕರಣಗಳು ರಿಜಿಸ್ಟರ್ ಆಗಿವೆ. 30 ಪ್ರಕರಣಗಳಲ್ಲಿ 29 ಪ್ರಕರಣಗಳಲ್ಲಿ the complainants are police only. ಪೊಲೀಸ್ ಕಮೀಷನರ್‌ರವರು ಹೇಳುತ್ತಾರೆ, 5000 ದಿಂದ 6000 ಜನರು ಇದ್ದರು ಎಂದು. ಯಾರು ಕಣ್ಣಿದ್ದು ಕುರುಡರಲ್ಲ. 100 ರಿಂದ 150 ಜನರು ಸೇರಿದ್ದರು. ಹೆಣ ಬಿದ್ದ ಮೇಲೆ ಒಬ್ಬ ಮನುಷ್ಯನು ಇರಲಿಲ್ಲ. 45 ನಿಮಿಷದೊಳಗೆ ಇಬ್ಬರನ್ನು ಪೊಲೀಸರು ಬಲಿ ತೆಗೆದುಕೊಂಡಾಗಿತ್ತು. ಯಾವ ಎಫ್.ಐ.ಆರ್. ನೋಡಿದರೂ ಕೂಡ 100 ರಿಂದ 150 ಜನ ಸೇರಿದ್ದರು ಎಂದು ಹೇಳುತ್ತದೆ. If they want, I will give the FIR copy. ನಾನು ಗೃಹ ಮಂತ್ರಿಗಳ ಮುಖಾಂತರ ಪೊಲೀಸ್ ಕಮೀಷನರ್‌ರವರಿಗೆ ಕೇಳಬಯಸುತ್ತೇನೆ. 6000 ದಿಂದ 7000 ಜನರು ಎಲ್ಲಿ ಇದ್ದರು? ಏಕೆ ಸುಳ್ಳು ಹೇಳಿದ್ದೀರಾ? ಇಂತಹ ಸರ್ಕಾರ ಬೇಕೇ, ಇಂತಹ ಆಡಳಿತ ಬೇಕೇ ಎಂದು ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಇವತ್ತು ಪೊಲೀಸರು ಏನು ಮಾಡುವುದಿಲ್ಲ. ಪೊಲೀಸರು ಮಾಡುತ್ತಿರುವ ವ್ಯವಸ್ಥೆಯನ್ನು ನೋಡಿ? ಪೊಲೀಸರು **XXX** ಒಬ್ಬೊಬ್ಬ ಪೊಲೀಸರ ಕೈಯಲ್ಲಿ **XXX** ಇದೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರು ಕೆಲವೊಂದು ಫೋಟೋಗಳನ್ನು ಸದನದಲ್ಲಿ ಪ್ರದರ್ಶಿಸಿದರು)**

ಮಾನ್ಯ ಸಭಾಪತಿಯವರೇ, ಪೊಲೀಸರು ಯಾವ ರೀತಿ **XXX** ಎಂದರೆ ಭಾರತ ಕ್ರಿಕೆಟ್ ತಂಡದ ವೇಗದ ಬೌಲರ್ ಆದ ಜಸ್ಪ್ರೀತ್ ಬುಮ್ರಾ ಅವರು ಯಾವ ರೀತಿ ಚೆಂಡನ್ನು ಎಸೆಯುತ್ತಾರೆ, ಆ ರೀತಿಯಲ್ಲಿ ಪೋಲಿಸರು **XXX** ಈ ಫೋಟೋದಲ್ಲಿ ನೋಡಿ? ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ ಗಲಭೆ ಉದ್ದೇಶ ಪೂರ್ವಕವಾಗಿಯೇ ನಡೆದಿದೆ.

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಇವರು ಯಾರು ಎಂಬುದನ್ನು ಹೇಳಿ?

---

**XXX ಮಾನ್ಯ ಸಭಾಪತಿಯವರ ಅಪ್ಪಣೆ ಮೇರೆಗೆ ಕಡತದಿಂದ ತೆಗೆಯಲಾಗಿದೆ**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಈ ಹಂತದಲ್ಲಿ ಸರ್ಕಾರಿ ಮುಖ್ಯ ಸಚೇತಕರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ಕೆಲವು ಫೋಟೋಗಳನ್ನು ಸದನದಲ್ಲಿ ಪ್ರದರ್ಶಿಸಿದರು)**

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಇವರು ಯಾರು ಎಂಬುದನ್ನು ಮಾನ್ಯ ಸದಸ್ಯರು ಮೊದಲು ಹೇಳಬೇಕಲ್ಲವೇ? ಇದನ್ನು ಮಾಡಿದವರು ಯಾರು ಎಂಬುದನ್ನು ಹೇಳಬೇಕಲ್ಲವೇ? ಬರೀ ಅಧಿಕಾರಿಗಳ ಬಗ್ಗೆ ಮಾತನಾಡುವುದಲ್ಲ, ಇವರು ಯಾರು? ಇದರ ಬಗ್ಗೆಯೂ ಉಲ್ಲೇಖ ಆಗಲಿ. ಬರೀ ಅವರು ಅಧಿಕಾರಿಗಳ ಬಗ್ಗೆ ಹೇಳುವುದಷ್ಟೇ ಅಲ್ಲ. ಇದರ ಬಗ್ಗೆಯೂ ಉಲ್ಲೇಖ ಆಗಲಿ.

**ಸಭಾಪತಿಯವರು:–** ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರೇ, ತಮಗೂ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ನಾವು ಬೆಳಿಗ್ಗೆಯಿಂದ ಕೇಳುತ್ತಿದ್ದೇವೆ, ವಾದವು ಒಂದು ಕಡೆಯಾಗಬಾರದು. ಅವರು ಎಲ್ಲಾ ಹೇಳುವುದನ್ನು ಕೇಳಿಕೊಂಡು ಕುಳಿತುಕೊಳ್ಳುವುದಕ್ಕೆ ಬಂದಿದ್ದೇವೆಯೇ? ಅವರು ಹೇಳಿದ್ದಕ್ಕೆಲ್ಲಾ ನಾವು ಹೌದು ಎನ್ನಬೇಕೇ? ಸರ್ಕಾರ ಏಕೆ ಇರಬೇಕು? ಈ ರೀತಿ ಕಾನೂನು ಕೈಯಲ್ಲಿಟ್ಟುಕೊಂಡು ಏನು ಬೇಕಾದರೂ ಮಾಡುತ್ತಿದ್ದರೆ ಅದನ್ನು ನಾವು ನೋಡಬೇಕೇ?

**(42) 18–02–2020/6–30 ಬಿಕೆಪಿ–ವಿಕೆ**

**ಶ್ರೀ ಐವನ್ ಡಿಸೋಜಾ:–** ಇದರ ಬಗ್ಗೆಯೂ ಉಲ್ಲೇಖ ಆಗಬೇಕು. ಬರಿ ನೀವು ಹೇಳುವುದು ಅಷ್ಟೇ ಅಲ್ಲ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಾವು ಬೆಳಿಗ್ಗೆಯಿಂದ ಕುಳಿತುಕೊಂಡು ಅವರು ಹೇಳುತ್ತಿರುವುದನ್ನು ಕೇಳುತ್ತಿದ್ದೇವೆ. ಆದರೆ, ಅವರು ಹೇಳುವುದನ್ನೆಲ್ಲಾ ಸುಮ್ಮನೆ ಕುಳಿತುಕೊಂಡು ಕೇಳಲಿಕ್ಕೆ ಸಾಧ್ಯವೇ? ಮಾನ್ಯ ಸದಸ್ಯರು ಹೇಳುವುದು ಸತ್ಯ ಅಲ್ಲ, ನಾವು ಇದನ್ನು ಒಪ್ಪುವುದಿಲ್ಲ.

**ಶ್ರೀ ಐವನ್ ಡಿಸೋಜಾ:–** ಕಾನೂನನ್ನು ಕೈಯಲ್ಲಿಟ್ಟುಕೊಂಡು ಈ ರೀತಿ ಮಾಡುತ್ತಿರುವುದನ್ನು ನೋಡಿಕೊಂಡು ಕುಳಿತುಕೊಳ್ಳಬೇಕೇ?

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ತಾವು ಹೇಳಿ. ಮಾನ್ಯ ಸದಸ್ಯರು ಮಾತನಾಡುವಾಗ ಲಿಮಿಟ್‌ನಲ್ಲಿ ಮಾತನಾಡಬೇಕು. ಸುಮ್ಮನೆ ಆರೋಪ ಮಾಡುವುದಲ್ಲ. ಈ ಕೆಲಸವನ್ನು ಯಾರು ಮಾಡಿದರು, ಪೊಲೀಸ್‌ನವರು ಮಾಡಿದರಾ?

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ಇದರ ಬಗ್ಗೆ judicial inquiry ಆಗದಿದ್ದರೆ ಏನೂ ಆಗುವುದಿಲ್ಲ. No need of further discussion on this. ಸರ್ಕಾರದಿಂದ ಇದರ ಬಗ್ಗೆ judicial inquiry ಆಗಬೇಕು.

**(ಗೊಂದಲ)**

**ಸಭಾಪತಿಯವರು:–** ಮಾತನಾಡಲಿಕ್ಕೆ ಎಲ್ಲರಿಗೂ ಅವಕಾಶ ಕೊಡೋಣ, ಕುಳಿತುಕೊಳ್ಳಿ. ಯಾರೇ ಮಾತನಾಡಿದರೂ ಸಹ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

**(ಈ ಹಂತದಲ್ಲಿ ಯಾರೇ ಸದಸ್ಯರುಗಳು ಮಾತನಾಡಿದರು ಕಡತಕ್ಕೆ ಹೋಗಬಾರದೆಂದು ಮಾನ್ಯ ಸಭಾಪತಿಯವರು ಹೇಳಿದರು)**

**(ಗೊಂದಲ)**

ಒಂದು ಬಾರಿ ಎಲ್ಲರೂ ಕುಳಿತುಕೊಳ್ಳಿ. ತಾಳ್ಮೆಯಿಂದ ಎಲ್ಲರೂ ಕೇಳಿ. ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆ. ಈ ರೀತಿಯಲ್ಲಿ ಮಾತನಾಡಿದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

**Sri C.M. IBRAHIM:-** I have a point of order.

**ಶ್ರೀ ಐವನ್ ಡಿ'ಸೋಜಾ:–** ನನ್ನ ಪ್ರಶ್ನೆ ಏನೆಂದರೆ ಪರಿಹಾರವನ್ನು ಕೊಡಲಿಕ್ಕೆ ಯಾರಿಗೆ ನಿರಾಕರಣೆ ಮಾಡಿದಿರಿ, on the ground that they are accused ಎಂದು ನೀವು ಏನು ಹೇಳುತ್ತೀರಿ, ಅವರು ನೀವು ಹೇಳಿದ ಹಾಗೆ ದೇಶಭಕ್ತರೋ ಅಥವಾ ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್ ರವರು ಇನ್ನೊಂದು ಶಬ್ಧವನ್ನು ಬಳಕೆ ಮಾಡಿದ್ದನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಅವರು ದೇಶದಲ್ಲಿ ತಂದಿರತಕ್ಕಂತಹ ಕಾನೂನು ನಮಗೆ ತೊಂದರೆಯಾಗುತ್ತದೆ ಎಂದು ವಿರೋಧ ವ್ಯಕ್ತಪಡಿಸಲಿಕ್ಕೆ ಬಂದವರು ಎಂದು ನೀವು ತೆಗೆದುಕೊಂಡರೆ ಅವರು ಅಪರಾಧಿಗಳಾಗುತ್ತಾರೆಯೇ? ಈಗ ನಾನು ಒಂದು ಪ್ರತಿಭಟನೆಗೆ ಹೋಗಿ ಈ ಕಾನೂನು ಸರಿಯಲ್ಲ, ಇದನ್ನು ತೆಗೆದು ಹಾಕಿ ಎಂದು ಹೇಳುತ್ತೇನೆ. ಆಗ ನನಗೆ ಗುಂಡಿಟ್ಟು ಕೊಂದರೆ ನಾನು ಅಪರಾಧಿ ಆಗುತ್ತೇನೆಯೇ? ನಾನು ದೇಶದ್ರೋಹಿ ಆಗುತ್ತೇನೆಯೇ? ಇಷ್ಟು common-sense ಇಲ್ಲದ ಸರ್ಕಾರ ಇದಾಗಿದೆ. ಉದ್ದೇಶಪೂರ್ವಕವಾಗಿ ಈ ಒಂದು ಸಮುದಾಯವನ್ನು ಗುರಿಯಿಟ್ಟುಕೊಂಡು ಅವರು ನಮ್ಮವರಲ್ಲ ಎನ್ನುವ ದೃಷ್ಟಿಯಿಂದ ಪರಿಹಾರವನ್ನು ನಿರಾಕರಣೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲಾಗಿದೆ. ನನಗೆ ಅನಿಸಿದ ಮಟ್ಟಿಗೆ ಆ ಪೊಲೀಸ್‌ನವರಿಗೆ ಎಲ್ಲೋ ಒಂದು ಕಡೆ ಜಾಗ ಬೇಕಾಗಿತ್ತು. ಈ ಸಂಬಂಧ ಜನರು ಮಾತನಾಡುತ್ತಾರೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಪೊಲೀಸರ ಬಗ್ಗೆ ನೀವು ಏತಕ್ಕೆ ಈ ರೀತಿ ಮಾತನಾಡುತ್ತಿದ್ದೀರಿ?

**ಶ್ರೀ ಐವನ್ ಡಿ'ಸೋಜಾ:–** ಅವರಿಗೆ ಒಂದು ಗಿಫ್ಟ್ ಕೊಟ್ಟು they wanted to show their loyalty and that is why they have done this crime ಎಂದು ನಾನು ನೇರವಾಗಿ ಹೇಳುತ್ತೇನೆ. It is my right to speak. ನಾನು ಮಾತನಾಡುವುದನ್ನು ಯಾರು ತಡೆಯುವಂತಿಲ್ಲ. ನನಗೆ ಮಾತನಾಡಲಿಕ್ಕೆ ಅವಕಾಶ ಇದೆ. ಕಲ್ಲು ಹೊಡೆದರು, ಟೈರ್‌ಗೆ ಬೆಂಕಿ ಇಟ್ಟರು ಎಂದು ಹೇಳುತ್ತಾರೆ. ಈ ವಿಚಾರದಲ್ಲಿ ನಾನು ಚಾಲೆಂಜ್ ಮಾಡುತ್ತೇನೆ. ಈ ಒಂದು ಗಲಭೆಯಲ್ಲಿ ಒಂದೇ ಒಂದು ಸರ್ಕಾರಿ ಆಸ್ತಿಗೆ, ಸಾರ್ವಜನಿಕ ಆಸ್ತಿಗೆ ಹಾನಿಯಾಗಿರುವುದರ ಬಗ್ಗೆ ಸಾಕ್ಷಿಯನ್ನು ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಈ ಸದನದ ಮುಂದೆ ಇಡಲಿ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸಭಾನಾಯಕರು ಆ ಗಲಭೆಯ ಸಂಬಂಧದ ಭಾವಚಿತ್ರವೊಂದನ್ನು ಸದನದಲ್ಲಿ ಪ್ರದರ್ಶಿಸಿದರು)**

ಒಂದು ವೇಳೆ ಕಲ್ಲು ಎಸೆದಿದ್ದರೆ, ಅದನ್ನು **XXX** ಎಸೆದಿದ್ದಾರೆಯೇ ಹೊರತು, ಬೇರೆ ಯಾರೂ ಅಲ್ಲ. ಈ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅಲ್ಲಿ ಸೆಕ್ಷನ್ 144 ಹಾಕಿದ್ದರು. ಏತಕ್ಕಾಗಿ ಹಾಕಿದ್ದರು, ಯಾವ ಕಾರಣ ಇತ್ತು?

**ಸಭಾಪತಿಯವರು:–** ಸ್ವಲ್ಪ cool ಆಗಿ ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:–** ನಾನು ಆ ರೀತಿ ಮಾತನಾಡಿದರೆ ಅವರಿಗೆ ಅರ್ಥವಾಗುತ್ತದೆ. ನಾನು ಕೋರ್ಟ್‌ನಲ್ಲಿ ಈ ರೀತಿ ಮಾತನಾಡುವುದಿಲ್ಲ. ಮೆಲ್ಲಗೆ ಮಾತನಾಡುತ್ತೇನೆ.

**(ಗೊಂದಲ)**

**(043) 18.02.2020 06.40 ಎಸ್‌ವಿ–ಬಿಎನ್‌ಎಸ್**

**ಶ್ರೀ ಐವನ್ ಡಿಸೋಜ (ಮುಂದು):–** ನನ್ನ ಭಾಷೆ ಅವರಿಗೆ ಅರ್ಥವಾಗುವುದಿಲ್ಲ. ಉಚ್ಚ ನ್ಯಾಯಾಲಯ ಸರ್ಕಾರ ಮಾಡಿದ್ದು ತಪ್ಪು ಎಂದು ಹೇಳಿದುದರಿಂದ ಸರ್ಕಾರಕ್ಕೆ ಮುಖಭಂಗವಾಗಿದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿಗಳು):–** ಮಾನ್ಯ ಐವನ್ ಡಿಸೋಜ ಅವರೆ, ಒಂದು ನಿಮಿಷದ ಮಟ್ಟಿಗೆ yield ಆಗಿ. ಇನ್ನು ಮೇಲೆ ನಿಮ್ಮನ್ನು ಐವನ್ ಎಂದು ಕರೆಯುವುದನ್ನು ಬಿಟ್ಟು ಪೈಲ್ವಾನ್ ಎಂದು ಕರೆಯಬೇಕಾಗುತ್ತದೆ.

---

**XXX ಮಾನ್ಯ ಸಭಾಪತಿಯವರ ಅಪ್ಪಣೆ ಮೇರೆಗೆ ಕಡತದಿಂದ ತೆಗೆಯಲಾಗಿದೆ**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿಸೋಜ ಅವರಲ್ಲಿ ತಮ್ಮ ಮೂಲಕ ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಅವರು ಯಾವ ವಿಷಯವನ್ನು ಹೇಳಬೇಕೆಂದಿದ್ದಾರೆಯೋ ಹೇಳಲಿ. ನಾವೆಲ್ಲರೂ ಅತ್ಯಂತ ಶಾಂತಚಿತ್ತರಾಗಿ ಕೇಳಲು ಸಿದ್ಧರಿದ್ದೇವೆ. ಅದನ್ನು ಸದನದಲ್ಲಿ ಚರ್ಚೆ ಮಾಡಿ ಆಗಿರುವ ಲೋಪದೋಷಗಳನ್ನು ಸರಿಮಾಡಬೇಕಾದುದು ಆಡಳಿತ ಹಾಗೂ ವಿರೋಧ ಪಕ್ಷಗಳ ಕರ್ತವ್ಯವಾಗಿದೆ. ಆದರೆ ಅವರು ಮಾತನಾಡುವಾಗ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ವಿಷಯವನ್ನು ತೆಗೆದುಕೊಂಡು ಇಲ್ಲಿ ಅಶಾಂತಿಯ ವಾತಾವರಣವನ್ನು ಸೃಷ್ಟಿ ಮಾಡುತ್ತಿದ್ದಾರೆ. ಅವರು ಶಾಂತರೀತಿಯಲ್ಲಿ ಮಾತನಾಡಿದರೆ ನಾವೆಲ್ಲರೂ ಕೇಳುವುದಕ್ಕೆ ಸಿದ್ಧರಿದ್ದೇವೆ. ಆದ್ದರಿಂದ ದಯಮಾಡಿ ಶಾಂತಿಯಿಂದ ಸರ್ಕಾರದ ಮೇಲೆ ಬೆಳಕು ಚೆಲ್ಲತಕ್ಕಂತಹ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದರೆ ನಾವು ಲೋಪವುಂಟಾಗಿದ್ದರೆ ತಿದ್ದಿಕೊಳ್ಳಲು ಸಿದ್ಧರಿದ್ದೇವೆ. ಅವರು ಪದೇ ಪದೇ ಪೊಲೀಸರ ವಿರುದ್ಧ ಆರೋಪಗಳನ್ನು ಮಾಡುತ್ತಿದ್ದಾರೆ.

ಇದನ್ನು ಮಾನ್ಯ ವಿರೋಧಪಕ್ಷದ ನಾಯಕರು ಆಗಲೇ ಹೇಳಿದರು. ಅವರೂ ಸಹ ಕೆಲವು ತಪ್ಪು ಕಲ್ಪನೆಗಳಿಂದ ಆರೋಪಗಳನ್ನು ಮಾಡಿದರು. ಉದಾಹರಣೆಗೆ 20ನೇ ತಾರೀಖಿನಂದು ನಾವು ಅಲ್ಲಿಗೆ ಹೋಗುತ್ತೇವೆಂದು 19ನೇ ತಾರೀಖಿನಂದೇ ನಮ್ಮ ಪ್ರವಾಸ ಕಾರ್ಯಕ್ರಮವನ್ನು ಕಳುಹಿಸಿದ್ದೆವು. ನಾವು ವಿಮಾನ ನಿಲ್ದಾಣ ತಲುಪಿದ ನಂತರ ಅಲ್ಲಿ ನಮ್ಮನ್ನು ತಡೆಯಲಾಯಿತು ಎಂಬ ಆರೋಪವನ್ನು ಮಾಡಿದರು. ನನ್ನ ಬಳಿ ಮಾನ್ಯ ವಿರೋಧ ಪಕ್ಷದ ನಾಯಕರ ಅಂದಿನ ಪ್ರವಾಸ ಕಾರ್ಯಕ್ರಮದ ಪಟ್ಟಿ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನಿತರ ಹಿರಿಯ ಮುಖಂಡರ ಜೊತೆಯಲ್ಲಿ ಕೈಗೊಳ್ಳಲಿದ್ದ ಪ್ರವಾಸ ಕಾರ್ಯಕ್ರಮದ ಪಟ್ಟಿಯನ್ನು 20ನೇ ತಾರೀಖಿನಂದು ಕಳುಹಿಸಲಾಗಿತ್ತು. 19ನೇ ತಾರೀಖಿನಿಂದ 21ನೇ ತಾರೀಖಿನವರೆಗೂ ಅಲ್ಲಿ ನಿಷೇಧಾಜ್ಞೆ ಜಾರಿಯಲ್ಲಿರುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಇತರ ನಾಯಕರು ಅಲ್ಲಿಗೆ ಬರುವುದರಿಂದ ಪುನಃ ಅಶಾಂತಿಯುಂಟಾಗಬಹುದೆಂದು ದಯಮಾಡಿ ವಾಪಸ್ ಹೋಗಿ ಎಂದು ಪೊಲೀಸ್ ಅಧಿಕಾರಿಗಳು ವಿಮಾನ ನಿಲ್ದಾಣದಲ್ಲಿ ಮನವರಿಕೆಯನ್ನು ಮಾಡಿಕೊಟ್ಟಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರಲ್ಲಿರುವ ಕಲ್ಪನೆಯೇನೆಂದರೆ ನಾವು 19ನೇ ತಾರೀಖಿನಂದೇ ಪ್ರವಾಸ ಕಾರ್ಯಕ್ರಮವನ್ನು ಕಳುಹಿಸಿದ್ದು, ನಾವು ಹೊರಡುವುದಕ್ಕೂ ಮುನ್ನ ನಮಗೆ intimate ಮಾಡಬಹುದಿತ್ತಲ್ಲವೆ ಎಂದು. ಅವರ ಆಪ್ತ ಕಾರ್ಯದರ್ಶಿಯವರು 20ನೇ ತಾರೀಖಿನಂದು ಬೆಳಿಗ್ಗೆ ಪ್ರವಾಸ ಕಾರ್ಯಕ್ರಮ ಕಳುಹಿಸಿದ್ದಾರೆ. ಅಂದು ಮಧ್ಯಾಹ್ನ 12–00 ಗಂಟೆಗೆ ಅವರು ಮಂಗಳೂರು ವಿಮಾನ ನಿಲ್ದಾಣವನ್ನು ತಲುಪಿದ್ದಾರೆ. ಅಲ್ಲಿ ಪೊಲೀಸ್ ಅಧಿಕಾರಿಗಳು ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಹಾಗೂ ಹಿರಿಯ ನಾಯಕರ ಹಿತದೃಷ್ಟಿಯಿಂದ ಸಹಕಾರ ನೀಡಿ ಹಿಂತಿರುಗಬೇಕೆಂದು ಹಾಗೂ ಮತ್ತೊಮ್ಮೆ ಭೇಟಿ ನೀಡಿ ಪರಿಶೀಲನೆ ಮಾಡುವಂತೆ ಮನವರಿಕೆಯನ್ನು ಮಾಡಿದ್ದರು ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, 19ನೇ ತಾರೀಖಿನಂದೇ ನನ್ನ ಆಪ್ತ ಕಾರ್ಯದರ್ಶಿಯವರು ದೂರವಾಣಿ ಮೂಲಕ ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕರು 20ನೇ ತಾರೀಖಿನಂದು ಅಲ್ಲಿಗೆ ಬರುವವರಿದ್ದಾರೆ ಎಂದು ಅಲ್ಲಿನ ಪೊಲೀಸ್ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ. ಆದರೆ ಅಂದು ತಡರಾತ್ರಿಯಾದುದರಿಂದ ಪ್ರವಾಸ ಕಾರ್ಯಕ್ರಮವನ್ನು ಅಧಿಕೃತವಾಗಿ ಮರುದಿನ ಬೆಳಿಗ್ಗೆ ಕಳುಹಿಸಲಾಗಿತ್ತು. But, intimation was sent to the concerned Officers. ಅಷ್ಟೇ ಅಲ್ಲದೆ ವಾಸ್ತವ್ಯದ ಬಗ್ಗೆಯೂ ಕೂಡ ಮಾತನಾಡಲಾಗಿತ್ತು. Intimation regarding making arrangements for stay was given telephonically. ದೂರವಾಣಿ ಮೂಲಕ ನನ್ನ ಆಪ್ತ ಸಿಬ್ಬಂದಿ ಶಾಖೆಯಿಂದ, 'the opposition leader along with certain other people are coming to Mangalore', ಎಂಬುದಾಗಿ ಮೊದಲೇ ತಿಳಿಸಲಾಗಿತ್ತು. ಅದನ್ನು ದೃಢೀಕರಿಸಲು ಮಾರನೇ ದಿನ ಬೆಳಿಗ್ಗೆ ಪ್ರವಾಸ ಕಾರ್ಯಕ್ರಮವನ್ನು ಅಧಿಕೃತವಾಗಿ ಕಳುಹಿಸಲಾಗಿತ್ತು. ಇದಕ್ಕೆ, they could have immediately replied, ಅಲ್ಲವೆ? ನಾವು ವಿಮಾನವನ್ನು ಏರುವ ಪೂರ್ವದಲ್ಲಿಯೇ ನಮಗೆ ತಿಳಿಸಬಹುದಿತ್ತಲ್ಲವೆ? ಹಾಗಿದ್ದಲ್ಲಿ ನಾವು ಏಕೆ ಅಲ್ಲಿಗೆ ಹೋಗುವ ದುಸ್ಸಾಹಸವನ್ನು ಮಾಡುತ್ತಿದ್ದೆವು? ಮಾನ್ಯ ಉಪಮುಖ್ಯಮಂತ್ರಿಗಳು ಆ ಪ್ರವಾಸ ಕಾರ್ಯಕ್ರಮ 20ನೇ ತಾರೀಖಿನಂದು ಹೋಗಿದೆ ಎಂದು ಹೇಳುತ್ತಿದ್ದಾರೆ. ಆದರೆ, we have intimated well in advance. ಅಲ್ಲಿ ಇನ್ನೂ ಕರ್ಫ್ಯೂ ಜಾರಿಯಲ್ಲಿರುವಾಗಲೇ ಮಾನ್ಯ ಮುಖ್ಯಮಂತ್ರಿಯವರು ಅಲ್ಲಿಗೆ ಭೇಟಿ ನೀಡುತ್ತಾರೆ. ಅವರು ಸಂವಿಧಾನಾತ್ಮಕ ಹುದ್ದೆಯನ್ನು ಹೊಂದಿದವರಾಗಿದ್ದಾರೆ. ಅವರ ಜೊತೆಯಲ್ಲಿದ್ದವರ ಹೆಸರನ್ನು ನಾನು ಹೇಳಲೇ? ಆ ಜಿಲ್ಲೆಗೆ ಸಂಬಂಧಿಸಿದವರಲ್ಲದೆ ಬೇರೆ ಬೇರೆ ಜನ ಪ್ರತಿನಿಧಿಗಳು ಅವರ ಜೊತೆಯಲ್ಲಿ ಹೋಗಿದ್ದಾರೆ. ಅವರಿಗೆಲ್ಲಾ ಪೊಲೀಸರು ಎಸ್ಕಾರ್ಟ್ ಮಾಡಿದ್ದಾರೆ. ಪ್ರತಿಪಕ್ಷದ ನಾಯಕರಿಗೆ, ಮಾಜಿ ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್ ಅವರಿಗೆ, ಹಿಂದಿನ ಗೃಹ ಮಂತ್ರಿಗಳಿಗೆ, ಮಾಜಿ ಸಂಸದರಿಗೆ ಹೋಗಲು ಅನುಮತಿಯನ್ನು ನಿರಾಕರಿಸಲಾಯಿತು. ಆದರೆ ಒಂದು ದಿನ ಬಿಟ್ಟು ಇವರೆಲ್ಲರೂ ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಹೋಗಿದ್ದಾರೆ. ಮುಖ್ಯಮಂತ್ರಿಯವರು ಭೇಟಿ ನೀಡಲಿ, it is fine. ಅವರ ಜೊತೆಯಲ್ಲಿದ್ದವರನ್ನು ತಡೆಯಬಹುದಿತ್ತಲ್ಲವೆ? ಇವರಿಗೆ ತಾರು ಇತ್ಯಾದಿಗಳ ಬಗ್ಗೆ ಕಲ್ಪನೆಯೇ ಇಲ್ಲವೆ?

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ನಿಮ್ಮ ಆಪ್ತ ಕಾರ್ಯದರ್ಶಿಯವರು ದೂರವಾಣಿ ಮೂಲಕ ತಮ್ಮ ಬರುವಿಕೆಯನ್ನು ತಿಳಿಸಿದಾಗ ಪೊಲೀಸ್ ಅಧಿಕಾರಿಗಳು ಬರುವುದು ಬೇಡ ಎಂದು ಹೇಳಿರಬಹುದು. ನಿಮ್ಮ ದಾಖಲಾತಿಗಳಲ್ಲಿ 20ನೇ ತಾರೀಖಿನಂದು ನೀವು ಅಲ್ಲಿಗೆ ಬರುವ ಮಾಹಿತಿಯನ್ನು ತೋರಿಸುತ್ತಿದೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ಆಪ್ತ ಕಾರ್ಯದರ್ಶಿಯವರು ಮಾತನಾಡಿದಾಗ ಬರಲಿ, welcome, ಅವರಿಗೆ ಬೇಕಾದ ಅಗತ್ಯ ವ್ಯವಸ್ಥೆಯನ್ನು ಮಾಡೋಣ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಆ ಕ್ಷೇತ್ರದವರಲ್ಲದ ಅನ್ಯ ಲೋಕಸಭಾ ಕ್ಷೇತ್ರದ ಸಂಸದರು ಇದ್ದರು. ಅವರಿಗೆ ಮಾತ್ರ ಹೇಗೆ ಅನುಮತಿಸಲಾಯಿತು? ಇದು ದಪ್ಪ ಚರ್ಮದ ಸರ್ಕಾರ. ದಿವಂಗತ ಶ್ರೀ ಎಸ್.ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಶ್ರೀ ರಾಮರಾವ್ ಎನ್ನುವವರು ಗೃಹಮಂತ್ರಿಯಾಗಿದ್ದರು. ಆ ಸಂದರ್ಭದಲ್ಲಿ ಒಬ್ಬ ಮಹಿಳೆಯ ಮಾನಭಂಗದ ಪ್ರಕರಣ ಚರ್ಚೆಗೆ ಬಂದಿದ್ದು, ಆಡಳಿತ ಹಾಗೂ ಪ್ರತಿಪಕ್ಷಗಳ ನಡುವೆ ಬಹಳ ವಿಸ್ತೃತವಾದ ಚರ್ಚೆಯಾಗುತ್ತದೆ. ನಂತರ ಗೃಹಸಚಿವರಾಗಿದ್ದ ಶ್ರೀ ರಾಮರಾವ್ ಅವರು ಅದಕ್ಕೆ ಉತ್ತರಿಸುತ್ತಾರೆ. ಉತ್ತರ ನೀಡಿದ ನಂತರ ಪ್ರತಿಪಕ್ಷದವರು ಶ್ರೀ ರಾಮರಾವ್ ಅವರಿಗೆ "ಗೃಹಮಂತ್ರಿಗಳೇ, ಅತ್ಯಾಚಾರಕ್ಕೊಳಗಾದ ಸಂತ್ರಸ್ತೆಯು ನಿಮ್ಮ ಕುಟುಂಬದ ಸದಸ್ಯರಾಗಿದ್ದರೆ ಏನು ಮಾಡುತ್ತಿದ್ದಿರಿ?" ಎಂದು ಪ್ರಶ್ನೆಯನ್ನು ಮಾಡುತ್ತಾರೆ. ತಕ್ಷಣವೇ ಗೃಹ ಸಚಿವರು ಅಲ್ಲಿಯೇ ಒಂದು ಕಾಗದವನ್ನು ತೆಗೆದುಕೊಂಡು, 'Owing to the moral responsibility, I am unfit to be the Home Minister of the State. I hereby resign to my Home Ministership' ಎಂದು ರಾಜೀನಾಮೆಯನ್ನು ಬರೆದು ಮುಖ್ಯಮಂತ್ರಿಯವರಿಗೆ ಕೊಟ್ಟು ಹೊರನಡೆಯುತ್ತಾರೆ. ಆದರೆ ಇವರನ್ನು ನೋಡಿ. ಸಮರ್ಥನೆ ಮಾಡಿಕೊಳ್ಳುತ್ತಾರೆ.

**ಶ್ರೀ ಸಿ.ಸಿ.ಪಾಟೀಲ್:-** ನೀವು ನಮಗಿಂತಲೂ ಹೆಚ್ಚಿಗೆ ಮಾಡಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವರು ಒಂದು ರೀತಿಯಲ್ಲಿ ದಪ್ಪಚರ್ಮದವರು. ಬಂಗಾಳಿ ಚೀಲ ಹೊಲಿಯಲು ಬಳಸುವ ದಬ್ಬಳದಿಂದ ಚುಚ್ಚಿದರೂ ಇವರ ಚರ್ಮದೊಳಗೆ ಇಳಿಯುವುದಿಲ್ಲ. ಅಷ್ಟು ದಪ್ಪ ಚರ್ಮದ ಸರ್ಕಾರ. There is no sensitiveness at all.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ. ಮಾನ್ಯ ಸಿ.ಎಂ.ಇಬ್ರಾಹಿಂ ಅವರು ಆಗಲಿಂದಲೂ ಮಾತನಾಡಲು ಅವಕಾಶ ಕೇಳುತ್ತಿದ್ದಾರೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಈಗ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರು ಭಾವಚಿತ್ರಗಳನ್ನು ಪ್ರದರ್ಶಿಸಿದ್ದಾರೆ. ಒಬ್ಬರ ಭಾವಚಿತ್ರ ಸತ್ಯ ಮತ್ತೊಬ್ಬರ ಭಾವಚಿತ್ರ ಸುಳ್ಳು ಎಂದು ನಾನು ಹೇಳುವುದಿಲ್ಲ. ಇದರ ಸತ್ಯಾಸತ್ಯತೆಯನ್ನು ತಿಳಿಯಬೇಕಾಗಿದೆ. ಪೊಲೀಸರ ಮೇಲೆ ನಮಗೆ ವಿಶ್ವಾಸವಿಲ್ಲ. ಅವರು ನಮ್ಮ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಮಾನ್ಯ ರಾಮರಾವ್ ಕೈಯಲ್ಲಿ ರಾಜೀನಾಮೆ ಕೊಡಿಸಿದಂತೆ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಕೈಯಿಂದಲೂ ರಾಜೀನಾಮೆ ಕೊಡಿಸಬೇಕೆಂದು ಕೆಲವು ಕಡೆ ನಡೆಯುತ್ತಿದೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿರಬೇಕೆನ್ನುವವರು ನಾವು.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರಿಗೆ ನೀವು ಮಾಡಿದ್ದು ಇಡೀ ರಾಜ್ಯಕ್ಕೆ ತಿಳಿದಿದೆ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಏಕೆ ಗಲಾಟೆಗಳಾಗಲಿಲ್ಲ? ಕೇವಲ ಮಂಗಳೂರಿನಲ್ಲಿ ಮಾತ್ರ ಏಕೆ ಗಲಭೆಗಳಾಯಿತು? ಇದರ ಹಿಂದೆ ಷಡ್ಯಂತ್ರ ಅಡಗಿದೆ. ಅದಕ್ಕಾಗಿ ಈ ಎರಡೂ ಪಕ್ಷದವರು ಪ್ರದರ್ಶಿಸಿದ ಭಾವಚಿತ್ರಗಳನ್ನು ಕೂಡಲೇ ಜಪ್ತಿ ಮಾಡಬೇಕು. ಅದು ಸದನದಲ್ಲಿ ಪ್ರದರ್ಶನವಾಗಿದೆ. It is the property of the House.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಶ್ರೀ ರಾಮರಾವ್ ಅವರ ಭಾವಚಿತ್ರವನ್ನು ಆಡಳಿತಪಕ್ಷದ ನಾಯಕರಿಗೆ ಕಳುಹಿಸುತ್ತಿದ್ದೇನೆ. ಕನಿಷ್ಠ ಪಕ್ಷ ಅವರ ಭಾವಚಿತ್ರವನ್ನು ನೋಡಿಯಾದರೂ ಆಡಳಿತ ಪಕ್ಷದವರು ಸುಧಾರಣೆ ಆಗಲಿ.

**ಶ್ರೀ ಸಿ.ಸಿ.ಪಾಟೀಲ್:–** ಆ ಭಾವಚಿತ್ರವನ್ನು ಇಷ್ಟು ದಿನ ತಮ್ಮ ಬಳಿಯಲ್ಲಿ ಇಟ್ಟುಕೊಂಡಿದ್ದಿರಲ್ಲವೆ? ಕನಿಷ್ಠ ಒಂದು ರೋಮದಷ್ಟಾದರೂ ಅದರ ಪ್ರಭಾವ ನಿಮ್ಮ ಮೇಲೆ ಆಗಿದೆಯೇ? ನಿಮ್ಮ ಹೃದಯನ್ನು ಮುಟ್ಟಿಕೊಂಡು ಸತ್ಯ ಹೇಳಿ.

**Sri S.R.PATIL** :– We challenge that we are above Board. ಮತ್ತೊಂದು ವಿಷಯವೆಂದರೆ ನಲಪ್ಪಾಡ್ ಮಾಧ್ಯಮಗಳ ಮುಂದೆ ಅತ್ತರು. ಅಲ್ಲಿ ಏನೂ ಆಗಿರಲಿಲ್ಲ. ಇನ್ನೊಂದು ಪ್ರಕರಣದಲ್ಲಿ ಇಬ್ಬರು ಸತ್ತು ಹೋಗಿದ್ದಾರೆ.

**(44) 18.02.2020 KG.BNS 06.50**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):–** ಇನ್ನೊಂದು ಕೇಸ್‌ನಲ್ಲಿ ಇಬ್ಬರು ಸತ್ತು ಹೋಗಿದ್ದಾರೆ. ಒಬ್ಬ ಮಂತ್ರಿ ಮಗ involve ಆಗಿ ಇಬ್ಬರು ಸತ್ತಿದ್ದಾರೆಂದು ಎಲ್ಲಾ ಮಾಧ್ಯಮಗಳಲ್ಲಿ ಬಿತ್ತರಿಸಿದ್ದಾರೆ. ಅಲ್ಲಿ ಕೇಸ್ ನೋಂದಣಿ ಆಗಿಲ್ಲ. ಇಲ್ಲಿ ಏನು ಆಗಿಲ್ಲ. ನಲಪ್ಪಾಡ್ ಎಂದ ಕೂಡಲೇ ಇದನ್ನು ಎಷ್ಟೊಂದು ವಿಜೃಂಭಿಸಿದರು. ಅವರು ಮಾಧ್ಯಮಗಳ ಮುಂದೆ ಕಣ್ಣೀರು ಹಾಕಿದರು. ಇಲ್ಲಿ ಮಂತ್ರಿ ಮಗ involve ಆಗಿ ಇಬ್ಬರು ಸತ್ತಿದ್ದಾರೆ. ಅದನ್ನು ಅನೇಕ ಮಾಧ್ಯಮಗಳಲ್ಲಿ ಮೂರ್ನಾಲ್ಕು ದಿವಸಗಳ ಕಾಲ ಬಿತ್ತರಿಸಿದರು. ಆದರೆ, ಏನು ಮಾಡಿದರು? ಅದನ್ನು ಮುಚ್ಚಿ ಹಾಕಿದರು. ಇಂತಹ ಭಂಡ ಸರ್ಕಾರವನ್ನು ನನ್ನ 45 ವರ್ಷಗಳ ರಾಜಕೀಯದ ಬದುಕಿನಲ್ಲಿ ನೋಡಿಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಲ್ಲಿ ಉಳಿದಿರುವುದು ಎರಡೇ ಮಾರ್ಗ. ಒಂದು, sitting Judge of High Court or ಸದನ ಸಮಿತಿಯಿಂದ ತನಿಖೆ ಮಾಡಿಸುವುದು. ಈ ಎರಡಕ್ಕೂ ಅವರು ಒಪ್ಪಿಕೊಂಡರೆ ಸರ್ಕಾರ ಬಹಳ ಪವಿತ್ರವಾಗಿದೆ, ಅವರು ಆದರ್ಶಗಳನ್ನು ಎತ್ತಿಹಿಡಿಯುವಂತಹವರು,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವರಿಗೆ ಯಾವುದೇ ಭಯ ಇಲ್ಲ; Judicial Enquiry ಯಲ್ಲಿ ಏನು ಬರುತ್ತದೆ, ಅದಕ್ಕೆ ನಾವು ತಲೆ ಬಾಗಿ ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ. ನಾವು ಇನ್ನು ಮುಂದಕ್ಕೆ ಯಾವುದಕ್ಕೂ ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ನಮ್ಮೆಲ್ಲರ ಅಭಿಪ್ರಾಯ ಇದು. ಏಕೆಂದರೆ, ಅವರು ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ಫೋಟೋವನ್ನು ತೋರಿಸಿರಬೇಕಾದರೆ, ಸತ್ಯವಾದುದನ್ನೇ ತೋರಿಸುತ್ತಾರೆ, ಸುಳ್ಳು ತೋರಿಸಿರುವುದಿಲ್ಲ; ಅವರು ತೋರಿಸಬೇಕಾದರೂ ಸಹ ಸತ್ಯವಾದದನ್ನೇ ತೋರಿಸುತ್ತಾರೆ. ಸುಳ್ಳು ತೋರಿಸಿರುವುದಿಲ್ಲ. ನೀವು ಫೋಟೋವನ್ನು ತರುವುದಕ್ಕೆ ಅಲ್ಲಿಗೆ ಹೋಗಿಲ್ಲ. ನೀವು ಅಲ್ಲಿ ಇರುವಂಥವರು ಅಲ್ಲ. ಇವರು ಅಲ್ಲಿ ಇರುವಂಥವರು. ಆ ಪೋಟೋವನ್ನು ಅವರಿಗೆ ಕೊಟ್ಟವರು ಯಾರು? ಇದೆಲ್ಲಾ Judicial Enquiry ಯಲ್ಲಿ complete ಆಗಿ ಬಂದ ನಂತರ ತಿಳಿಯುತ್ತದೆ. ಈಗ ಮಾನ್ಯ ಮುಖ್ಯ ಮಂತ್ರಿಯವರು ಸದನದಲ್ಲಿ ಇಲ್ಲ. ಅವರಿಗೆ ಕೈಮುಗಿದು ಕೇಳಿಕೊಳ್ಳುತ್ತೇನೆ. ಇದನ್ನು ಅವರು Judicial Enquiry ಗೆ order ಮಾಡಿದರೆ, ಅವರ ವ್ಯಕ್ತಿತ್ವ ಗಗನಕ್ಕೆ ಹೋಗುತ್ತದೆ. ಅದನ್ನು ಅವರು ಮಾಡಲಿ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇದರ ಮಧ್ಯೆ ಮಂಗಳೂರಿನಲ್ಲಿ ಇನ್ನೊಂದು ದುರಂತ ನಡೆಯಿತು. ಮಂಗಳೂರು ವಿಮಾನ ನಿಲ್ದಾಣದಲ್ಲಿ ಯಾರೋ ಬಾಂಬ್ ಇಟ್ಟಿದ್ದಾರೆಂದು ಸುದ್ದಿ ಹಬ್ಬಿತ್ತು. ಅಲ್ಲಿನ ಪೊಲೀಸರ ಪ್ರತಿಕ್ರಿಯೆ ನೋಡಿದರೆ, ಕೇರಳದ ಗಡಿಯಲ್ಲಿ ನಿಲ್ಲುವುದು, ಆ ಗಡಿಯಲ್ಲಿ ನಿಲ್ಲುವುದು, ಈ ಗಡಿಯಲ್ಲಿ ನಿಲ್ಲುವುದು, ಅಲ್ಪಸಂಖ್ಯಾತರು ಇರುವ ಕಡೆ raid ಮಾಡುವುದು ಆಯಿತು. ಕೊನೆಗೆ ಆದಿತ್ಯರಾವ್ ಎಂಬಾತ ಬಾಂಬ್ ಇಟ್ಟಿದ್ದಾನೆಂದು ತಿಳಿಯಿತು. The first reaction of the Government is, ಅವನಿಗೆ ತಲೆ ಸರಿ ಇಲ್ಲ. ಅವನು ಮಾನಸಿಕ ಅಸ್ವಸ್ಥ ಎಂದು ಹೇಳಿದರು. ಅಷ್ಟು ಮಾನಸಿಕ ಅಸ್ವಸ್ಥನಾಗಿದ್ದವನು ಹಾಗೂ ಇಂಜಿನಿಯರ್ ವಿದ್ಯಾರ್ಥಿಯಾಗಿದ್ದವನು ಅಷ್ಟು ದೊಡ್ಡ ಬಾಂಬ್‌ನ್ನು ಇಡಲು ಸಾಧ್ಯವೇ? ಮಾನ್ಯ ಪ್ರಧಾನ ಮಂತ್ರಿಯವರಾದ ಶ್ರೀ ನರೇಂದ್ರ ಮೋದಿಯವರು 'ಸಬ್ ಕಾ ಸಾತ್, ಸಬ್ ಕಾ ವಿಕಾಸ್' ಎಂದು ಹೇಳುತ್ತಾರೆ. ನಮ್ಮ ಹೊನ್ನಾಳಿಯ ಶಾಸಕರಾದ ಶ್ರೀ ರೇಣುಕಾಚಾರ್ಯರವರು ಮುಸಲ್ಮಾನರು ನನಗೆ ಮತ ಹಾಕುವುದಿಲ್ಲ. ಆದ್ದರಿಂದ, ನಾನು ಅವರ ಏರಿಯಾವನ್ನು ಅಭಿವೃದ್ಧಿ ಮಾಡುವುದಿಲ್ಲವೆಂದು ಹೇಳುತ್ತಾರೆ. ಸನ್ಮಾನ್ಯ ಮೋದಿಯವರಿಗೆ ಮತ ಬಂದಿರುವುದು ಕೇವಲ 38% ಮಾತ್ರ. 62% ಮತ ಬೇರೆ ಪಕ್ಷಗಳಿಗೆ ಬಂದಿದೆ. But, we have accepted Sri Narendra Modi as Prime Minister and Sri Renukacharya says, ಮುಸಲ್ಮಾನರು ಮತ ಹಾಕುವುದಿಲ್ಲ. ಆದ್ದರಿಂದ, ನಾನು ಅವರ ಏರಿಯಾವನ್ನು ಅಭಿವೃದ್ಧಿ ಮಾಡುವುದಿಲ್ಲ. 'This is my choice' ಎಂದು ಒಬ್ಬ ಶಾಸಕರು ಹೇಳುತ್ತಾರೆ. 'ನಾನು ಕೇಸರಿಕರಣ ಮಾಡುತ್ತೇನೆ, ನೀವು ಯಾರು ಕೇಳುವುದಕ್ಕೆ' ಎಂದು ಹೇಳುತ್ತಾರೆ. ಸಬ್ ಕಾ ಸಾತ್, ಸಬ್ ಕಾ ವಿಕಾಸ್ ಎಂದರೆ ಇದೇನಾ? ಇದರಿಂದ ದೇಶ ಕಟ್ಟುವುದಕ್ಕೆ ಆಗುತ್ತದೆಯೇ? ಇಂತಹದ್ದು ಸಾವಿರಾರು ಉದಾಹರಣೆಗಳು ಇವೆ. ನಾನು ಒಂದು ಉದಾರಣೆಯನ್ನು ಮಾತ್ರ ಇಲ್ಲಿ ಹೇಳುತ್ತಿದ್ದೇನೆ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿದ್ದಾರೆ. ಅವರು ಇವತ್ತೇ ಒಂದು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೀರ್ಮಾನವನ್ನು ತೆಗೆದುಕೊಳ್ಳಬೇಕು. ಸೆಕ್ಷನ್ 144 ವಿಧಿಸಿದ್ದಕ್ಕೆ ಗೋಲಿಬಾರ್‌ನಿಂದ ಎರಡು ಸಾವುಗಳು ಆಗಿವೆ. Hon'ble High Court said CAA (Citizenship (Amendment) Act) ವಿರುದ್ಧ ಪ್ರತಿಭಟನೆ ಮಾಡಿದಕ್ಕೆ ನಿಷೇದಾಜ್ಞೆ ವಿಧಿಸಿರುವುದು ಅಕ್ರಮ, ಪ್ರತಿಭಟನೆ ಮೂಲಭೂತ ಹಕ್ಕು ಎಂದು ಪ್ರಜಾವಾಣಿ ಪೇಪರ್‌ನಲ್ಲಿ ವರದಿ ಬಂದಿದೆ. ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪು ಇದೆ. ಈ ನಿಯಮಗಳಿಂದ ಏನು ತಿಳಿಯುತ್ತದೆ ಎಂದರೆ, ಸೆಕ್ಷನ್ 144 ವಿಧಿಸಿದ್ದರಿಂದ ಆ ಸಾವು ಆಗಿದೆ. That means, the persons who are dead are innocent. ಅವರು ಇದಕ್ಕೆ ಈಗಲೇ ಪರಿಹಾರ ಘೋಷಣೆ ಮಾಡಲಿ, ಇಲ್ಲದಿದ್ದರೆ ನಾನು ಮತ್ತು ಮಾನ್ಯ ಸದಸ್ಯರಾದ ಹರೀಶ್‌ಕುಮಾರ್‌ರವರು ಬಾವಿಗೆ ಇಳಿದು ಧರಣಿ ಮಾಡಬೇಕಾಗುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಗೋಪಾಲಗೌಡರು ಮಂಗಳೂರಿನ ಪರಿಸ್ಥಿತಿಯನ್ನು ತಿಳಿಯುವುದಕ್ಕೆ ಮಂಗಳೂರಿಗೆ ಬಂದಿದ್ದರು. ಅವರು ಬಂದಾಗ ಅವರು Press Conference ಮಾಡುವುದಕ್ಕೆ ಅವರು ತಂಗಿದ್ದ ಹೋಟೆಲ್‌ನಲ್ಲಿ ಕೊಠಡಿ ಬುಕ್ ಮಾಡುತ್ತಾರೆ. ಆಗ ಪೊಲೀಸರು, 'don't give him the room in the hotel' ಎಂದು ಹೇಳುತ್ತಾರೆ. ಯಾವ ಹೋಟೆಲ್‌ಗೆ ಹೋಗಿ ಕೇಳಿದರೂ ಸಹ ನಮಗೆ 'ಹೌದು' ಎಂದು ಹೇಳುತ್ತಾರೆ. ಹೊರಗಡೆ ಬಂದ ಕೂಡಲೇ, 'ನಾವು ನಿಮಗೆ ಕೊಡುವುದಕ್ಕೆ ಆಗುವುದಿಲ್ಲ, ನಿಮ್ಮದು ಇಲ್ಲಿ ನಡೆಯುವುದಿಲ್ಲ' ಎಂದು ಹೇಳುತ್ತಾರೆ. ಹೆದರಿಕೆಯನ್ನು ಹುಟ್ಟಿಸುತ್ತಾರೆ. ಭಯವನ್ನು ಹುಟ್ಟಿಸುತ್ತಾರೆ. ಒಬ್ಬ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಿಗೆ Press Conference ಮಾಡುವುದಕ್ಕೆ ಆಗುವುದಿಲ್ಲ ಎಂದಾದರೆ, ಈ ಸರ್ಕಾರ ಯಾವ ರೀತಿಯಲ್ಲಿ ಸಾಮಾಜಿಕ ವರ್ಗದ ಬಡವರ ಧ್ವನಿಯನ್ನು ಎತ್ತಿಕಟ್ಟುತ್ತದೆ ಎನ್ನುವುದನ್ನು ಹೇಳಬೇಕು, ಹಾಗಾಗಿ, ನಾನು ವಿನಂತಿ ಮಾಡುತ್ತೇನೆ. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ತಕ್ಷಣವೇ ಪರಿಹಾರವನ್ನು ಘೋಷಣೆ ಮಾಡಬೇಕು. ಇದರ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರಿಂದ ತನಿಖೆ ಮಾಡಿಸಬೇಕು. ಯಾವುದೇ ಕಾರಣಕ್ಕೂ ಪೊಲೀಸರ ತನಿಖೆಯನ್ನು ನಾವು ಒಪ್ಪುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ಗಲಭೆಗೆ ಕಾರಣರಾದಂತಹ ಪೊಲೀಸರನ್ನು ತಕ್ಷಣವೆ suspend ಮಾಡಬೇಕು ಮತ್ತು ಅವರ ವಿರುದ್ದ ಕ್ರಮ ತೆಗೆದುಕೊಂಡು ತಕ್ಷಣವೆ ಎಫ್.ಐ.ಆರ್. ದಾಖಲು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ, as a protest ನಾನು ಬಾವಿಗೆ ಹೋಗುತ್ತೇನೆ. ಈ ಪರಿಹಾರವನ್ನು ತಕ್ಷಣವೆ ಘೋಷಣೆ ಮಾಡಬೇಕು.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು, ಕೆ.ಹರೀಶ್ ಕುಮಾರ್‌ರವರು, ಹೆಚ್.ಎಂ.ರೇವಣ್ಣರವರು ಮತ್ತು ನಸೀರ್ ಅಹ್ಮದ್‌ರವರು ಬಾವಿಗೆ ಇಳಿದು ಪರಿಹಾರವನ್ನು ತಕ್ಷಣವೇ ಘೋಷಣೆ ಮಾಡಬೇಕೆಂದು ಧರಣಿ ನಿಂತರು)**

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರೇ, ಇನ್ನೂ ಮಾನ್ಯ ಸದಸ್ಯರು ಮಾತನಾಡುವವರು ಇದ್ದಾರೆ. ಅವರು ಮಾತನಾಡಿದ ನಂತರ ನೀವು ಧರಣಿ ಮಾಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಸಭಾಪತಿಯವರು:–** ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 59 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ ದಿನಾಂಕ 19ನೇ ಫೆಬ್ರವರಿ ಮಾಹೆ 2020ರ ಬುಧವಾರ ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರಲು ತೀರ್ಮಾನಿಸಿತು)**

~~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~~